ಶನಿವಾರ, ಸೆಪ್ಟೆಂಬರ್ 3, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 244 | ಪುಟ 22


www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಜಂಕ್‌ಫುಡ್ ಮೋಹಪಾಶದಿಂದ ಮಕ್ಕಳನ್ನು ಬಿಡಿಸುವುದು ದೊಡ್ಡ ಸವಾಲು. ಇಂಥ ಸಂಕಷ್ಟದಲ್ಲಿ 'ನಾವೇನು ಮಾಡಬಹುದು' – ಈ ಕುರಿತ ಮಾಹಿತಿ ಇಲ್ಲಿದೆ.



ಚರ್ಚೆ
ಕಪ್ಪತಗುಡ್ಡ ಮತ್ತು ಇತರ ವನ್ಯಜೀವಿ ಧಾಮಗಳ ಪರಿಸರಸೂಕ್ಷ್ಮ ಪ್ರದೇಶಗಳ ವ್ಯಾಪ್ತಿ ಕುಗ್ಗಿಸುವ ನಿರ್ಧಾರ ಸರಿಯೇ?

ಐಎನ್‌ಎಸ್ ವಿಕ್ರಾಂತ್ ಸೇವೆಗೆ ನಿಯೋಜನೆ 11

'ಬಸವ ಶ್ರೀ' ವಾಪಸ್: ಪಿ. ಸಾಯಿನಾಥ್ 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
58,803	17,539	₹51,950 (ಬೆಂಗಳೂರು)	₹53,800 (ಬೆಂಗಳೂರು)	79.87

ತೀಸ್ತಾಗೆ 'ಸುಪ್ರೀಂ' ಮಧ್ಯಂತರ ಜಾಮೀನು 7

ಚಿನಕುರಳಿ

ಪ್ರಕಾಶ್ ಶೆಟ್ಟಿ



ಕಡಲತಡಿಯಲ್ಲಿ ಪ್ರಧಾನಿ ಮತ ದುಂದುಭಿ: ಕಾರ್ಯಕರ್ತರ ಹರ್ಷೋದ್ಗಾರ

ತಿಂಗಳಿಗೊಮ್ಮೆ ಬರುವೆ: ಮೋದಿ

ಪ್ರಜಾವಾಣಿ ವಾರ್ತೆ

ಮಂಗಳೂರು/ ಬೆಂಗಳೂರು: ವಿಧಾನಸಭಾ ಚುನಾವಣೆಗೆ ಏಳೆಂಟು ತಿಂಗಳಿರುವಾಗ ರಾಜ್ಯಕ್ಕೆ ಎರಡನೇ ಬಾರಿ ದಾಂಗುಡಿ ಇಟ್ಟಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಮತ ಪರ್ವಕ್ಕೆ ರಾಜ್ಯದ ಜನ ಮತ್ತು ಬಿಜೆಪಿ ಕಾರ್ಯಕರ್ತರನ್ನು ಹುರಿಗೊಳಿಸಿ, ಬಿಜೆಪಿ ಪರ ಅಲೆ ಎಬ್ಬಿಸಲು ಮಂಗಳೂರಿನಲ್ಲಿ ಶುಕ್ರವಾರ ನಡೆದ ಬೃಹತ್ ಸಮಾವೇಶವನ್ನು ಬಳಸಿಕೊಂಡರು.

ಮಂಗಳೂರಿನ ಗೋಲ್ಡ್ ಫಿಂಚ್ ಮೈದಾನದಲ್ಲಿ ನೆರೆದಿದ್ದ ಅಪಾರ ಜನಸ್ತೋಮದ ಜೈಕಾರ, 'ಹೋ' ಎಂಬ ಮುಗಿಲುಮುಟ್ಟುವ ಘೋಷಣೆಗಳಿಂದ ಪುಳಕಿತರಾದ ಮೋದಿ ಅವರು, ಕೇಂದ್ರ ಮತ್ತು ರಾಜ್ಯದಲ್ಲಿನ ಬಿಜೆಪಿ ಸರ್ಕಾರಗಳ ಸಾಧನೆಗಳ ಪಟ್ಟಿಯನ್ನೇ ಮುಂದಿಟ್ಟರು. ₹3,800 ಕೋಟಿ ಮೊತ್ತದ 8 ಯೋಜನೆಗಳಿಗೆ ಚಾಲನೆ ನೀಡಿದ ಅವರು, 'ಹಿಂದಿನ ಸರ್ಕಾರಗಳು ಮಾಡದಷ್ಟು ಅಭಿವೃದ್ಧಿ ಕಾರ್ಯವನ್ನು ಬಿಜೆಪಿ ಸರ್ಕಾರ ಕೇವಲ ಎಂಟು ವರ್ಷಗಳಲ್ಲಿ ಮಾಡಿದೆ' ಎಂದು ಹೇಳುವುದನ್ನು ಮರೆಯಲಿಲ್ಲ.



ಮಂಗಳೂರಿನ ಗೋಲ್ಡ್ ಫಿಂಚ್ ಮೈದಾನದಲ್ಲಿ ಶುಕ್ರವಾರ ನಡೆದ ಸಮಾವೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಜನಸ್ತೋಮದತ್ತ ಕೈ ಬೀಸಿದರು. ಶಾಸಕರಾದ ಬಿ.ಎಸ್. ಯಡಿಯೂರಪ್ಪ, ವೇದವ್ಯಾಸ ಕಾಮತ್, ರಾಜ್ಯಪಾಲ ಥಾವರಚಂದ್ ಗೆಹಲೋತ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇದ್ದಾರೆ

ಆ ಬಳಿಕ ಬಿಜೆಪಿ ಪ್ರಮುಖರ ಸಭೆಯಲ್ಲಿ ಪಾಲ್ಗೊಂಡ ಮೋದಿ ಅವರು, ' ಚುನಾವಣೆಗೆ ಸಿದ್ಧತೆ ಮಾಡಿಕೊಳ್ಳಿ, ಪ್ರತಿ ತಿಂಗಳೂ ಕರ್ನಾಟಕಕ್ಕೆ ಬರುತ್ತೇನೆ' ಎಂದು ಹೇಳಿ ವಿಶ್ವಾಸ ತುಂಬಿದರು.

'ನಿಮ್ಮ ಅರಿವಿಗೆ ಬಂದಿದೆಯೊ ಇಲ್ಲವೋ, ಇವತ್ತಿಗೂ ಕರ್ನಾಟಕದ ಜನತೆಯ ನಾಡಿಮಿಡಿತ ಬಿಜೆಪಿ ಪರವಾಗಿಯೇ ಇದೆ. ರಾಜಕೀಯ ಸಮಾವೇಶಗಳಿಗೆ ಅಪಾರ ಪ್ರಮಾಣದ ಜನ ಬರುವುದು ಸಹಜ. ಆದರೆ ಸರ್ಕಾರಿ ಕಾರ್ಯಕ್ರಮಕ್ಕೆ ಭಾರಿ ಜನ ಸೇರಿರುವುದು ವಿಶೇಷ. ನೀವು ಕೆಲವು ಕಡೆಗಳಲ್ಲಿ ಅಲ್ಲಿನ ಪರಿಸ್ಥಿತಿ ಅರಿತುಕೊಂಡು ಕೆಲಸ ಮಾಡಿ. ತಿಂಗಳಿಗೊಮ್ಮೆ ಜಿಲ್ಲಾವಾರು ಅಥವಾ ವಿಭಾಗವಾರು ಸಮಾವೇಶವನ್ನು ಹಮ್ಮಿಕೊಳ್ಳಿ, ನಾನು ಭಾಗವಹಿಸಲು ಸಿದ್ಧನಿದ್ದೇನೆ' ಎಂದರು.

4ನೇ ಪುಟ ನೋಡಿ

ನಿರೀಕ್ಷೆಗೂ ಮೀರಿ ಜನಸಾಗರ

ಸಮಾವೇಶಕ್ಕೆ ಫಲಾನುಭವಿಗಳನ್ನು ಸರ್ಕಾರವೇ ಕರೆತಂದರೆ, ಪಕ್ಷದ ಕಾರ್ಯಕರ್ತರು ನಿರೀಕ್ಷೆಗೂ ಮೀರಿ ಸೇರಿದ್ದರು. ಸಭಾಂಗಣ ಭರ್ತಿಯಾಗಿದ್ದರಿಂದ ಕಾರ್ಯಕರ್ತರನ್ನು ಪೊಲೀಸರು ಪ್ರವೇಶ ದ್ವಾರದಲ್ಲಿಯೇ ತಡೆಯಲು ಹರಸಾಹಸ ಪಟ್ಟರು. ಕಾರ್ಯಕರ್ತರ ಉತ್ಸಾಹ ಎಷ್ಟಿತ್ತೆಂದರೆ, ಕೇಂದ್ರ ಬಂದರು ಸಚಿವ ಸರ್ವಾನಂದ ಸೋನೊವಾಲ್ ಅವರು ಪ್ರಾಸ್ತಾವಿಕವಾಗಿ ಮಾತನಾಡಲು ಆರಂಭಿಸುತ್ತಿದ್ದಂತೆಯೇ, 'ಮೋದಿ... ಮೋದಿ...' ಎಂದು ಘೋಷಣೆ ಹಾಕಲಾರಂಭಿಸಿದರು. ಮೋದಿ ಅವರೇ ಕೈ ಸನ್ನೆಯ ಮೂಲಕ ಕಾರ್ಯಕರ್ತರನ್ನು ಸುಮ್ಮನಾಗಿಸಿದರು. ಮೋದಿ ಮತ್ತು ಯಡಿಯೂರಪ್ಪ ಅವರ ಹೆಸರು ಪ್ರಸ್ತಾಪವಾದಾಗಲ್ಲೆಲ್ಲ ಕಾರ್ಯಕರ್ತರು 'ಹೋ ..' ಎಂದು ಹರ್ಷೋದ್ಗಾರ ಮಾಡಿದರು.


ಇನ್ನಷ್ಟು ಸುದ್ದಿಗಳು 4

ಮುರುಘಾ ಶ್ರೀ 5ರವರೆಗೆ ಪೊಲೀಸ್ ವಶಕ್ಕೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರನ್ನು ಇಲ್ಲಿನ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಇದೇ 5ರವರೆಗೆ ಪೊಲೀಸ್ ವಶಕ್ಕೆ ನೀಡಿ ಶುಕ್ರವಾರ ಆದೇಶಿಸಿದೆ.

ನ್ಯಾಯಾಂಗ ಬಂಧನದಲ್ಲಿದ್ದ ಶರಣರನ್ನು ತಮ್ಮ ವಶಕ್ಕೆ ಒಪ್ಪಿಸುವಂತೆ ಪೊಲೀಸರು ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಧೀಶೆ



ಬಿ.ಕೆ. ಕೋಮಲಾ, ಆರೋಪಿಯನ್ನು ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರಿಗೆ ಕರೆದೊಯ್ಯಲು ಕಾರಾಗೃಹದ ಅಧೀಕ್ಷಕರು ಸಿದ್ಧತೆ ನಡೆಸಿದ್ದಕ್ಕೆ ಅಸಮಾಧಾನ ವ್ಯಕ್ತಪಡಿಸಿದರು.

ವಿಚಾರಣೆಗೆ ಹಾಜರಾದ ಕಾರಾಗೃಹದ ಅಧೀಕ್ಷಕಿ ಅಕ್ಕಮಹಾದೇವಿ, ಆರೋಪಿಯ ಆರೋಗ್ಯ ಸ್ಥಿತಿ ಹದಗೆಟ್ಟಿದ್ದಾಗಿ ಮಾಹಿತಿ ನೀಡಿದರಾದರೂ, ಪೂರಕ ದಾಖಲೆ ಹಾಜರುಪಡಿಸಲು ವಿಫಲರಾದರು. ಈ ಹಿನ್ನೆಲೆಯಲ್ಲಿ ಆರೋಪಿಯ ಖುದ್ದು ಹಾಜರಿಗೆ ತಾಕೀತು ಮಾಡಿದ ನ್ಯಾಯಾಧೀಶರು, ಬೆಂಗಳೂರಿಗೆ ಕರೆದೊಯ್ಯುವ ಕೋರಿಕೆಗೂ ಮನ್ನಣೆ ನೀಡಲಿಲ್ಲ.

ಜಿಲ್ಲಾ ಆಸ್ಪತ್ರೆಯ ತುರ್ತು ನಿಗಾ ಘಟಕದಲ್ಲಿ ದಾಖಲಾಗಿದ್ದ ಶರಣರನ್ನು ಸಂಜೆ 4.05ಕ್ಕೆ ನ್ಯಾಯಾಲಯಕ್ಕೆ ಕರೆತರಲಾಯಿತು. ಸದಾ ಧರಿಸುತ್ತಿದ್ದ ಹಾವುಗೆ ಅವರ ಕಾಲಿನಲ್ಲಿ ಕಾಣಲಿಲ್ಲ. ಕೋರ್ಟ್ ಪ್ರವೇಶಿಸುತ್ತಿದ್ದಂತೆಯೇ ಅವರು ನ್ಯಾಯಾಧೀಶರಿಗೆ ಕೈಮುಗಿದರು. ಕಟಕಟೆಯ ಪಕ್ಕದಲ್ಲಿ ನಿಂತ ಶ್ರೀಗಳು ಆಯತಪ್ಪಿ ಬೀಳುತ್ತಿದ್ದಾಗ ನೆರವಿಗೆ ಧಾವಿಸಿದ ವಕೀಲರು ಪಕ್ಕದಲ್ಲಿದ್ದ ಬೆಂಚಿನ ಮೇಲೆ ಕೂರಿಸಿದರು. ಅರ್ಧ ಗಂಟೆ ನಡೆದ ಕಲಾಪ ವೀಕ್ಷಿಸುತ್ತಿದ್ದಾಗ ಶ್ರೀಗಳ ಕಣ್ಣಾಲಿಗಳು ತುಂಬಿಕೊಂಡಿದ್ದವು.

ಆರೋಪಿಯನ್ನು 3 ದಿನ ಪೊಲೀಸ್ ವಶಕ್ಕೆ ನೀಡಿದ ನ್ಯಾಯಾಧೀಶರು, ಸೆ.5 ರಂದು ಬೆಳಿಗ್ಗೆ 11ಕ್ಕೆ ನ್ಯಾಯಾಲಯಕ್ಕೆ ಹಾಜರುಪಡಿಸುವಂತೆ ಹಾಗೂ ಆರೋಪಿಯ ಆರೋಗ್ಯದ ಬಗ್ಗೆ ನಿಗಾ ಇಡುವಂತೆ ಸೂಚಿಸಿದರು. ಬಳಿಕ ಶ್ರೀಗಳನ್ನು ಡಿವೈಎಸ್‌ಪಿ ಕಚೇರಿಗೆ ಕರೆದೊಯ್ದು ವಿಚಾರಣೆ ಮುಂದುವರಿಸಲಾಯಿತು.

ಇನ್ನಷ್ಟು ಸುದ್ದಿಗಳು 4



ಪೊಲೀಸರ ತಪಾಸಣಾ ವರದಿ ಆಧರಿಸಿ ಸ್ವಯಂಪ್ರೇರಿತ ಪ್ರಕರಣ ದಾಖಲು

ಆಸ್ಪತ್ರೆ ಅವ್ಯವಸ್ಥೆ: ವಿಚಾರಣೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಬೌರಿಂಗ್ ಮತ್ತು ಲೇಡಿ ಕರ್ಜನ್, ಕೆ.ಸಿ. ಜನರಲ್ ಹಾಗೂ ಜಯನಗರ ಜನರಲ್ ಆಸ್ಪತ್ರೆಗಳಲ್ಲಿನ ದುರಾಡಳಿತ, ಅವ್ಯವಸ್ಥೆ ಮತ್ತು ರೋಗಿಗಳಿಗೆ ಸೇವೆ ಒದಗಿಸುವಲ್ಲಿನ ವಿಳಂಬದ ಕುರಿತು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿರುವ ಲೋಕಾಯುಕ್ತ ಬಿ.ಎಸ್. ಪಾಟೀಲ ವಿಚಾರಣೆ ಆರಂಭಿಸಿದ್ದಾರೆ.

ಲೋಕಾಯುಕ್ತರ ನಿರ್ದೇಶನದಂತೆ ಸಂಸ್ಥೆಯ ನ್ಯಾಯಾಂಗ ಅಧಿಕಾರಿಗಳು ಹಾಗೂ ಪೊಲೀಸ್ ಅಧಿಕಾರಿಗಳನ್ನು ಒಳಗೊಂಡ ತಂಡಗಳು ನಗರದಲ್ಲಿನ 21 ಸರ್ಕಾರಿ ಆಸ್ಪತ್ರೆಗಳಿಗೆ ದಿಢೀರ್ ಭೇಟಿ ನೀಡಿ ತಪಾಸಣೆ ನಡೆಸಿದ್ದವು. ಈ ತಂಡಗಳು ಸಲ್ಲಿಸಿರುವ ತಪಾಸಣಾ ವರದಿಯನ್ನು ಆಧರಿಸಿ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಅಡಿಯಲ್ಲಿ ಮೂರು ಪ್ರತ್ಯೇಕ ಪ್ರಕರಣಗಳನ್ನು ದಾಖಲು ಮಾಡಲಾಗಿದೆ.

ರೋಗಿಗಳಿಗೆ ಚಿಕಿತ್ಸೆ ನೀಡಲು ವಿಳಂಬ ಮಾಡುತ್ತಿರುವುದು, ಸ್ವಚ್ಛತೆ ಕಾಯ್ದುಕೊಳ್ಳದೇ ಇರುವುದು, ಕರ್ತವ್ಯದಲ್ಲಿರುವ ವೈದ್ಯರು ಮತ್ತು ಸಿಬ್ಬಂದಿ ನಗದು ಘೋಷಣೆ ಮಾಡಿಕೊಳ್ಳದಿರುವುದು, ಶೌಚಾಲಯಗಳಲ್ಲಿ ಸ್ವಚ್ಛತೆ ಕೊರತೆ, ಬಯೋಮೆಟ್ರಿಕ್ ತಂತ್ರಜ್ಞಾನ ಆಧಾರಿತ ಹಾಜರಾತಿ ವ್ಯವಸ್ಥೆ ಬಳಸದೇ ಇರುವುದು ಈ ಎಲ್ಲ ಆಸ್ಪತ್ರೆಗಳಲ್ಲೂ ಕಂಡುಬಂದಿದೆ ಎಂದು ಪೊಲೀಸರು ವರದಿಯಲ್ಲಿ ಉಲ್ಲೇಖಿಸಿದ್ದಾರೆ.

ಹಾಜರಾತಿ ನಿರ್ವಹಣೆಯಲ್ಲಿ ಲೋಪ: ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ ಹಾಗೂ ಅಟಲ್ ಬಿಹಾರಿ ವಾಜಪೇಯಿ ಸಂಶೋಧನಾ ಆಸ್ಪತ್ರೆಗಳಲ್ಲಿ ಹಾಜರಾತಿ ನಿರ್ವಹಣೆಯಲ್ಲಿ ಲೋಪ ಇರುವುದನ್ನು ಲೋಕಾಯುಕ್ತ ಪೊಲೀಸರ ತಂಡ ಪತ್ತೆಮಾಡಿದೆ. ಕೆಲವು ವೈದ್ಯರು ಹಾಜರಿ ಪುಸ್ತಕಕ್ಕೆ ಸಹಿ ಮಾಡದೇ ಇರುವುದು ಹಾಗೂ ರಜೆಯಲ್ಲಿರುವವರ ಕುರಿತು ಯಾವುದೇ ಮಾಹಿತಿ ಉಲ್ಲೇಖಿಸದೇ ಇರುವುದು ತಪಾಸಣೆ ವೇಳೆ ಕಂಡುಬಂದಿದೆ ಎಂದು ವರದಿಯಲ್ಲಿ ತಿಳಿಸಿದ್ದಾರೆ.

'ಬೌರಿಂಗ್ ಆಸ್ಪತ್ರೆಯಲ್ಲಿ ಕಾನೂನು ವ್ಯಾಪ್ತಿಗೆ ಒಳಪಟ್ಟಿರುವ ವೈದ್ಯಕೀಯ (ಮೆಡಿಕೊ ಲೀಗಲ್) ಪ್ರಕರಣಗಳಿಗೆ ಸಂಬಂಧಿಸಿದ ಕಡತಗಳ ನಿರ್ವಹಣೆಯಲ್ಲೂ ಲೋಪ ಕಂಡುಬಂದಿದೆ. ಬೌರಿಂಗ್ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಆದ ರೋಗಿಗಳನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಿದ ಬಳಿಕ ಪಕ್ಕದ ಶೆಡ್‌ನಲ್ಲಿ ಇರಿಸಿರುವುದು ಪತ್ತೆಯಾಗಿದೆ' ಎಂದು ವರದಿ ಹೇಳಿದೆ.

ಈ ಎಲ್ಲ ಅಂಶಗಳ ಕುರಿತು ವಿಚಾರಣೆ ಆರಂಭಿಸಿರುವ ಲೋಕಾಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ, ಆಯುಕ್ತರು, ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ ಕಾರ್ಯದರ್ಶಿ, ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕರು, ಈ ಎಲ್ಲ ಆಸ್ಪತ್ರೆಗಳ ಮುಖ್ಯಸ್ಥರು, ಸ್ಥಾನಿಕ ವೈದ್ಯಾಧಿಕಾರಿಗಳ ವಿರುದ್ಧ ವಿಚಾರಣೆ ಆರಂಭಿಸಿದ್ದಾರೆ.

ಸುಳ್ಳು ಹೇಳಿ ಸಿಕ್ಕಿಬಿದ್ದ ವೈದ್ಯೆಯರು

ಜಯನಗರ ಜನರಲ್ ಆಸ್ಪತ್ರೆಯ ರೋಗಪತ್ತೆ ವಿಜ್ಞಾನ ವಿಭಾಗದಲ್ಲಿ ರೋಗಿಗಳಿಂದ ಸಂಗ್ರಹಿಸಿದ ಮಾದರಿಗಳನ್ನು ಪರೀಕ್ಷಿಸದೇ ಮೊಬೈಲ್‌ನಲ್ಲಿ ಮಾತನಾಡುತ್ತಾ ಕಾಲಹರಣ ಮಾಡುತ್ತಿದ್ದ ಆರೋಪದ ಮೇಲೆ ವೈದ್ಯರಾದ ಡಾ. ರೇಖಾ ಮತ್ತು ಡಾ. ನಿತ್ಯಶ್ರೀ ವಿರುದ್ಧ ಕ್ರಮ ಕೈಗೊಳ್ಳುವಂತೆ ಲೋಕಾಯುಕ್ತರು ಸೂಚಿಸಿದ್ದಾರೆ.

'ತನಿಖಾ ತಂಡವು ತಪಾಸಣೆಗೆ ತೆರಳಿದ್ದಾಗ 35 ಜನರು ವರದಿ ಪಡೆಯಲು ಕಾಯುತ್ತಿದ್ದರು. ಒಳಕ್ಕೆ ಹೋಗಿ ನೋಡಿದಾಗ ಡಾ. ರೇಖಾ ಮತ್ತು ಡಾ. ನಿತ್ಯಶ್ರೀ ಮೊಬೈಲ್‌ನಲ್ಲಿ ಹರಟುತ್ತಿದ್ದರು. ವರದಿ ನೀಡದೇ ಇರುವ ಕುರಿತು ಕೇಳಿದಾಗ ಸರ್ವರ್ ಸರಿ ಇಲ್ಲ ಎಂದರು. ಆದರೆ, ಪ್ರಯೋಗಾಲಯದ ತಾಂತ್ರಿಕ ಸಿಬ್ಬಂದಿಯನ್ನು ವಿಚಾರಿಸಿದಾಗ ಸರ್ವರ್‌ನಲ್ಲಿ ಸಮಸ್ಯೆ ಇಲ್ಲ ಎಂಬುದು ಖಾತರಿಯಾಯಿತು' ಎಂದು ಪೊಲೀಸರು ವರದಿಯಲ್ಲಿ ತಿಳಿಸಿದ್ದರು.

ಇದೇ ಆಸ್ಪತ್ರೆಯಲ್ಲಿ ಹೊಸ ಎಕ್ಸ್‌ರೇ ಯಂತ್ರ ಬಳಕೆ ಮಾಡದಿರುವುದು, ವೆಂಟಿಲೇಟರ್‌ಗಳನ್ನು ಬಳಸದೇ ಮೂಲೆಯಲ್ಲಿ ಇರಿಸಿರುವ ಬಗ್ಗೆಯೂ ವರದಿಯಲ್ಲಿ ಉಲ್ಲೇಖವಿದೆ.

ಮತದಾರರ ಪಟ್ಟಿ: ತಿದ್ದುಪಡಿಗೆ ಸೆ.9ರ ವರೆಗೆ ಅವಕಾಶ

ಬೆಂಗಳೂರು: ರಾಜ್ಯ ಚುನಾವಣೆ ಆಯೋಗ ಬಿಬಿಎಂಪಿ ಚುನಾವಣೆಗೆ ಸಂಬಂಧಿಸಿದಂತೆ ಮತದಾರರ ಕರಡು ಪಟ್ಟಿಗೆ ಆಕ್ಷೇಪಣೆ ಅಥವಾ ತಿದ್ದುಪಡಿ ಸಲ್ಲಿಸುವ ಅವಧಿಯನ್ನು ಸೆ.2ರಿಂದ ಇನ್ನೂ ಏಳು ದಿನ ವಿಸ್ತರಿಸಿದೆ.

ಬಿಬಿಎಂಪಿ 243 ವಾರ್ಡ್ ವ್ಯಾಪ್ತಿಯ ಮತದಾರರ ಕರಡು ಪಟ್ಟಿಯನ್ನು ಆ.25ರಂದು ಪ್ರಕಟಿಸಲಾಗಿತ್ತು. ಸೆ.9ರವರೆಗೆ ಆಕ್ಷೇಪಣೆ ಅವಧಿಯನ್ನು ವಿಸ್ತರಿಸಿದೆ. ಅಲ್ಲಿಯವರೆಗೆ ತಿದ್ದುಪಡಿಗಳನ್ನು ಪಡೆದು, ಪರಿಷ್ಕರಿಸಿ ಸೆ.22ರಂದು ಅಂತಿಮ ಪಟ್ಟಿ ಪ್ರಕಟಿಸಬೇಕು ಎಂದು ಆಯೋಗ ತಿಳಿಸಿದೆ. ಇದರಂತೆ ಬಿಬಿಎಂಪಿ ಆಡಳಿತ ವಿಭಾಗದ ವಿಶೇಷ ಆಯುಕ್ತರು ಆದೇಶ ಹೊರಡಿಸಿದ್ದಾರೆ.

ಮೆರವಣಿಗೆ: ಹಲವೆಡೆ ಮದ್ಯ ಮಾರಾಟ ನಿಷೇಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಣೇಶ ಮೂರ್ತಿ ವಿಸರ್ಜನೆ ಮೆರವಣಿಗೆ ವೇಳೆ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಭದ್ರತೆ ಕೈಗೊಂಡಿರುವ ಪೊಲೀಸರು, ಸೂಕ್ಷ್ಮ ಹಾಗೂ ಅತಿ ಸೂಕ್ಷ್ಮ ಪ್ರದೇಶಗಳಲ್ಲಿ ಮದ್ಯ ಮಾರಾಟ ನಿಷೇಧಿಸಿದ್ದಾರೆ.

ಈ ಬಗ್ಗೆ ಆದೇಶ ಹೊರಡಿಸಿರುವ ಪೊಲೀಸ್ ಕಮಿಷನರ್, 'ನಗರದ ಹಲವು ಪ್ರದೇಶಗಳಲ್ಲಿ ಸೆ. 4ರಂದು ಗಣೇಶ ಮೂರ್ತಿ ವಿಸರ್ಜನೆ ಮೆರವಣಿಗೆ ನಡೆಯಲಿದೆ. ಈ ಸಂದರ್ಭದಲ್ಲಿ ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗಬಾರದೆಂದು ಮದ್ಯ ಮಾರಾಟ ನಿಷೇಧಿಸಲಾಗುತ್ತಿದೆ' ಎಂದಿದ್ದಾರೆ.

'ಬಾರ್‌ಗಳು, ವೈನ್ ಶಾಪ್‌ಗಳು, ಪಬ್‌ಗಳು, ಎಂಎಸ್‌ಐಎಲ್ ಮಳಿಗೆ ಸೇರಿ ಎಲ್ಲ ರೀತಿಯ ಮದ್ಯ ಮಾರಾಟ ಮಳಿಗೆಗಳನ್ನು ಬಂದ್ ಮಾಡಬೇಕು. ಆಕಸ್ಮಾತ್ ನಿಯಮ ಮೀರಿದರೆ ಅಂಥ ಮಳಿಗೆ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ಎಚ್ಚರಿಸಿದ್ದಾರೆ.

ನಗರದ ಈಶಾನ್ಯ ವಿಭಾಗದ ವಿದ್ಯಾರಣ್ಯಪುರ, ಯಲಹಂಕ, ಯಲಹಂಕ ನ್ಯೂ ಟೌನ್, ಕೊಡಿಗೇಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಸೆ.3ರಂದು ಸಂಜೆ 6 ಗಂಟೆಯಿಂದ ಸೆ. 5ರ ಬೆಳಿಗ್ಗೆ 6 ಗಂಟೆಯವರೆಗೆ ಮದ್ಯ ಮಾರಾಟ ನಿಷೇಧಿಸಲಾಗಿದೆ' ಎಂದು ಆದೇಶದಲ್ಲಿ ಹೇಳಲಾಗಿದೆ.

'ಪೂರ್ವ ವಿಭಾಗದ ಕೆ.ಜಿ.ಹಳ್ಳಿ, ಡಿ.ಜೆ.ಹಳ್ಳಿ, ಗೋವಿಂದಪುರ, ಬಾಣಸವಾಡಿ, ಕಮರ್ಷಿಯಲ್ ಸ್ಟ್ರೀಟ್, ಶಿವಾಜಿನಗರ, ಭಾರತಿನಗರ, ಪುಲಿಕೇಶಿನಗರ ಹಾಗೂ ಹಲಸೂರು ಠಾಣೆ ವ್ಯಾಪ್ತಿಯಲ್ಲಿ ಸೆ. 4ರಂದು ಬೆಳಿಗ್ಗೆ 6 ಗಂಟೆಯಿಂದ ಸೆ. 5ರ ಬೆಳಿಗ್ಗೆ 6 ಗಂಟೆಯವರೆಗೆ ಮದ್ಯ ಮಾರಾಟ ನಿರ್ಬಂಧಿಸಲಾಗಿದೆ' ಎಂದು ತಿಳಿಸಲಾಗಿದೆ.

ಸ್ವರ್ಣ ಭಾರತಿ ಸಹಕಾರ ಬ್ಯಾಂಕ್ ನಿಯಮಿತ
ನಂ. 2229, 23ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–560 070.

ಪ್ರಕಟಣೆ

ಬ್ಯಾಂಕಿನ 24ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ವರ್ಚುಯಲ್ ಮೀಟಿಂಗ್ ಮುಖಾಂತರ ದಿನಾಂಕ : 18–09–2022ನೇ ಭಾನುವಾರ ಬೆಳಗ್ಗೆ 10–00 ಗಂಟೆಗೆ ನಡೆಸಲು ನಿರ್ಣಯಿಸಲಾಗಿದೆ. ಈ ಸಭೆಯಲ್ಲಿ ಭಾಗವಹಿಸಲು ಬ್ಯಾಂಕಿನ ಖಾಯಂ ಸದಸ್ಯರು ಕೆಳಗೆ ಕೊಟ್ಟಿರುವ ಯು ಆರ್ ಎಲ್ ಲಿಂಕ್‌ನಲ್ಲಿ ನಿಮ್ಮ ಹೆಸರು ಮತ್ತು ಸದಸ್ಯತ್ವದ ಸಂಖ್ಯೆ ಎಂಟ್ರಿ ಮಾಡುವ ಮುಖಾಂತರ ಲಾಗಿನ್ ಆಗಿ ಭಾಗವಹಿಸಬಹುದಾಗಿದೆ. ಹೆಚ್ಚಿನ ವಿವರಗಳಿಗೆ ದೂರವಾಣಿ ಮೂಲಕ ಸಂಪರ್ಕಿಸಬಹುದು ಎಂದು ಈ ಮೂಲಕ ಕೋರಿದೆ.

ಲಾಗಿನ್ ಆಗುವುದರ ವಿವರ: www.dreamswebinar.com/swarnabharathi ಎಂದು ಎಂಟ್ರಿ ಮಾಡಿ ಕೆಳಗಿನ ವಿವರವನ್ನು ಭರ್ತಿ ಮಾಡಬೇಕು

ಹೆಸರು

ಸದಸ್ಯತ್ವದ ಸಂಖ್ಯೆ

ದೂರವಾಣಿ: 080–26762629, 9606933950
ದಿನಾಂಕ: 01–09–2022

ಸಹಿ/–
ಮುಖ್ಯ ಕಾರ್ಯನಿರ್ವಹಣಾಧಿಕಾರಿ

PUBLIC NOTICE

Our client ('Client') is desirous of entering into sale transaction in connection with the property morefully described in the 'Schedule' hereto and hereinafter referred to as 'Schedule Property' with Mr. S. Santosh Kumar, Ms. Savitha S., and Mr. Sunil Kumar Shivalingaiah, all residing at Mysore, Karnataka ('Owners'). The Owners have represented to our Client that they are the absolute owners of the Schedule Property, with unrestricted rights of alienation over the same.

Notice is hereby given to the general public that any person/s other than the Owners mentioned above, asserting any right, title, charge, lien, claim/s or any interest whatsoever in respect of the Schedule Property are hereby called upon to submit to the undersigned, their claim/s, if any, over the Schedule Property or their objections, if any, to the proposed transaction. The said claim/s or objections must be in writing, together with documentary proof of such claim/s or objections, so as to reach us at the address given below within a period of 14 (Fourteen) days from the date of publication of this Notice. If no such claim/s or objections are received, it shall be deemed that no one else other than the Owners mentioned above has/ have any right, title, interest or claim/s whatsoever in respect of the Schedule Property and our Client would be at liberty to proceed with the said in connection with the Schedule Property.

SCHEDULE
(Description of the Schedule Property)

All that piece and parcel of immovable property bearing BBMP Municipal No. 22 (bearing Old No. 524/F) and PID No. 59-105-22, admeasuring 2,400 Square Feet, situated at 8th Cross, W.K.P. Road, 7th Block Jayanagar, Bangalore along with the building constructed thereon and bounded on the:
East by : Site bearing No. 524/E; West by : Site bearing No. 524/G; North by : Road; and South by : Site bearing No. 525/F.
Date: 03 September 2022
Place: Bengaluru

Sd/-
Mr. Srinivas B.R. & Ms. Brijita Prakash, Partners
DSK Legal,
Prestige Loka, No. 201, 2nd Floor, No. 7/1 & 7/7, Brunton Road, Bengaluru - 560025
Tel: 080-69548770

OFFICE OF THE FIELD DIRECTOR,
SATPURA TIGER RESERVE
NARMADAPURAM (M.P.)
Pipariya road, Pin Code - 461001
Phone No. 07574-254394 (O) E-mail: fdsatnp.hbd@mp.gov.in

Letter No. 7348 Dated: 30-08-22

Invitation for Short-term E-tendering notice
NOTICE INVITING E-TENDER

Online e-tender is invited by Deputy Director, Satpura Tiger Reserve, Narmadapuram, Madhya Pradesh from contractors (as per details given in tender documents) for financial year 2022-23; regarding **transportation of captive elephants in 10 Wheel trucks** from State of Karnataka to different tiger reserves of Madhya Pradesh in prescribed roads.

(a)	Date of Publication of E-tender notice and availability of tender document	Tender notice has been published over official website https://mptenders.gov.in. Tender document will be available from 01.09.2022 from 5:00 pm
(b)	Availability of tender document on website	01.09.2022 from 5:00 pm at official website https://mptenders.gov.in.
(c)	Clarification start date and time	05.09.2022 at 11:00 am
(d)	Clarification end date and time	07.09.2022 at 05:00 pm
(e)	E-bid submission end date and time	16.09.2022 up to 5:00 pm
(f)	Online technical e-bid opening date and time	20.09.2022 at 03:00 pm
(g)	Online financial e-bid opining date and time (only for technically qualified bidders)	22.09.2022 at 03:00 pm
(h)	Venue of opening of technical and financial e-bids	Office of the Field Director, Satpura Tiger Reserve, Narmadapuram, Madhya Pradesh
(i)	Contact Officer Name	Mr. Sandeep Fellows, IFS
(j)	Contact No.	Mob. +91 94247 92101, +91 91795 81949 (Mr. Sanjay Jain, Store Incharge) Phone No. (O): 07574-254394
(k)	E-mail ID	ddsatnp.hbd@mp.gov.in
(l)	Cost of E-bid document / e-Tender fee	Rs 5,000.00 (Rs. Five Thousand only) including all taxes (non-refundable)
(m)	E-bid EMD	Rs. 2,00,000.00 (Rs.Two Lakhs Only)

G-16211/22
कोरोना को मात - वैक्सीन के साथ।

Sd/- Deputy Director
Satpura Tiger Reserve
Narmadapuram
Madhya Pradesh

ಶ್ರೀ ಲಕ್ಷ್ಮೀನಾರಾಯಣ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್
ನಂ. 1627/2 ಪಾರ್ಕ್ ರಸ್ತೆ, ರಾಮಮೋಹನಪುರ ಬೆಂಗಳೂರು 560021
E-Mail:slncbank@gmail.com website:www.slncb.com.

50ನೇ ಸರ್ವ ಸದಸ್ಯರ ವರ್ಚುಯಲ್ ಸಭೆಯ ಸೂಚನಾ ಪತ್ರ

ಬ್ಯಾಂಕಿನ 2021-22 ನೇ ಸಾಲಿನ 50ನೇ ಸರ್ವಸದಸ್ಯರ ಸಭೆಯನ್ನು ಕೋವಿಡ್–19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಆದೇಶದಂತೆ ವರ್ಚುಯಲ್ ಮೀಟಿಂಗ್ ಮುಕಾಂತರ ದಿನಾಂಕ: 18–09–2022 ರ ಭಾನುವಾರದಂದು ಬೆಳಿಗ್ಗೆ 10 ಘಂಟೆಗೆ ನೆಡೆಸಲು ನಿರ್ಣಯಿಸಲಾಗಿದೆ ಈ ಸರ್ವಸದಸ್ಯರ ಸಭೆಯಲ್ಲಿ ಭಾಗವಹಿಸಲು ಇಚ್ಛಿಸುವ ಬ್ಯಾಂಕಿನ ಖಾಯಂ ಸದಸ್ಯರು ತಮ್ಮ ಸದಸ್ಯತ್ವದ ಸಂಖ್ಯೆ ಮೊಬೈಲ್ ಸಂಖ್ಯೆ ಮತ್ತು ಇ–ಮೆಲ್ ವಿಳಾಸವನ್ನು ನೋಂದಾಯಿಸುವ ಅವಶ್ಯಕತೆಇದ್ದು ತಮ್ಮ ಖಾತೆ ಇರುವ ಶಾಖೆಗಳಿಗೆ ಸಂಪರ್ಕಿಸಿ ತಪ್ಪದೆ ತಮ್ಮ ಹೆಸರು ನೋಂದಾಯಿಸಿಕೊಳ್ಳಬೇಕೆಂದು ಕೋರಿದೆ. ಖುದ್ದು ಶಾಖೆಗೆ ಭೇಟಿ ನೀಡಲು ಸಾಧ್ಯವಾಗದಿದ್ದಲ್ಲಿ ನಮ್ಮ ಇ–ಮೆಲ್: **slncbank@gmail.com** ವಿಳಾಸಕ್ಕೆ ಮಾಹಿತಿ ಕಳುಹಿಸುಹುದು. ಸದಸ್ಯತ್ವದ ಸಂಖ್ಯೆ, ಮೊಬೈಲ್ ಸಂಖ್ಯೆ ಮತ್ತು ಇ–ಮೆಲ್ ವಿಳಾಸವನ್ನು ನೋಂದಾಯಿಸಿಕೊಳ್ಳದ ಸದಸ್ಯರು ಸರ್ವಸದಸ್ಯರ ಸಭೆಯಲ್ಲಿ ಭಾಗವಹಿಸಲು ಅರ್ಹರಿರುವುದಿಲ್ಲ. ಮಾಹಿತಿಗಳನ್ನು ಒದಗಿಸಿದಂತಹ ಸದಸ್ಯರು– **https://gbm.slncb.com/ or gbm.slncb.com** ಈ ಲಿಂಕ್‌ನ್ನು ಕ್ಲಿಕ್ ಮಾಡಿಕೊಂಡು ಸರ್ವಸದಸ್ಯರ ವರ್ಚುಯಲ್ ಸಭೆಯಲ್ಲಿ (ವಿಡಿಯೋ ಕಾನ್‌ಫೆರೆನ್ಸ್ ಮುಕಾಂತರ) ಬಾಗವಹಿಸಬೇಕಾಗಿ ವಿನಂತಿ.

ಸಹಿ/– ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರ ಕಛೇರಿ, ಹೇಮಾವತಿ ನಾಲಾ ವಿಭಾಗ, ತುಮಕೂರು

ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
ಸಂ–11/22–23 ದಿನಾಂಕ: 24.08.2022 (3ನೇ ಕರೆ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು, ರವರ ಪರವಾಗಿ ಕಾರ್ಯನಿರ್ವಾಹಕ ಇಂಜಿನಿಯರ್, ಕಾ.ನೀ.ನಿ.ನಿ, ಹೇಮಾವತಿ ನಾಲಾ ವಿಭಾಗ, ತುಮಕೂರು ವ್ಯಾಪ್ತಿಯ ಈ ಕೆಳಗೆ ನಮೂದಿಸಿದ ಇಂಡೆಂಟ್ ಸಂಖ್ಯೆಯ ಮಾನವ ದಿನಗಳ ಸರಬರಾಜಿನ ನಿರ್ವಹಣಾ ಕಾಮಗಾರಿಗಳಿಗೆ ಐಟಂವಾರು ಟೆಂಡರ್‌ನ್ನು ಏಕ ಲಕೋಟೆ ಪದ್ಧತಿಯಲ್ಲಿ KW-1 ನಿಬಂಧನೆಗಳೊಂದಿಗೆ, ಇ–ಪ್ರಕ್ಯೂರ್‌ಮೆಂಟ್ ಮೂಲಕ ಮಾತ್ರ ಆಹ್ವಾನಿಸಲಾಗಿದೆ.

INDENT Numbers:- (1) 37820/Call-3 ಟೆಂಡರ್ ಮೊತ್ತ 17.94 ಲಕ್ಷಗಳು (2) 37739/Call-3 – ಟೆಂಡರ್ ಮೊತ್ತ– 1.89 ಲಕ್ಷಗಳು (3) 37741/Call-3 ಟೆಂಡರ್ ಮೊತ್ತ– 5.67 ಲಕ್ಷಗಳು (4) 37745/Call-3 ಟೆಂಡರ್ ಮೊತ್ತ– 12.50 ಲಕ್ಷಗಳು (5) 37790/Call-3 ಟೆಂಡರ್ ಮೊತ್ತ– 2.88 ಲಕ್ಷಗಳು (5) 37798/Call-3 ಟೆಂಡರ್ ಮೊತ್ತ– 12.67 ಲಕ್ಷಗಳು

ಇ–ಪೋರ್ಟಲ್‌ನಲ್ಲಿ ಆಕ್ಷೇಪಣೆಗಳಿಗೆ ಕೊನೆಯ ದಿನಾಂಕ: **03.09.2022** ಸಂಜೆ 4.00 ಗಂಟೆ ವರೆಗೆ. ಇ–ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸುವ ದಿನಾಂಕ : **01.09.2022** ರಿಂದ **08.09.2022** ಸಂಜೆ 4.00 ಗಂಟೆ ರವರೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ: **09.09.2022** ಸಂಜೆ 5.00 ಗಂಟೆಗೆ. ಇ.ಎಂ.ಡಿ ವಿವರ, ಕಾಲಾವಧಿ, ಕಾಮಗಾರಿಯ ವಿವರ, ಟೆಂಡರ್ ಅರ್ಹತಾ ಷರತ್ತುಗಳು, ಹಾಗೂ ಇನ್ನಿತರ ವಿವರಗಳನ್ನುಇ–ಪ್ರೊಕ್ಯೂರ್ ಮೆಂಟ್ ಪೋರ್ಟಲ್ ಸಿಸ್ಟಮ್ https://eproc.karnataka.gov.in ಮೂಲಕ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಹೇಮಾವತಿ ನಾಲಾ ವಿಭಾಗ, ತುಮಕೂರು

DIPR/TUM/460/MCA/2022-23

ಬಿಜಿಎಸ್‌ಇ ಫೈನಾನ್ಸ್ಯಲ್ಸ್ ಲಿಮಿಟೆಡ್
CIN: U67120KA1999PLC025860
ಸ್ಟಾಕ್ ಎಕ್ಸ್‌ಚೇಂಜ್ ಟವರ್ಸ್, 51, 4ನೇ ಕ್ರಾಸ್, ಜೆ.ಸಿ. ರಸ್ತೆ, ಬೆಂಗಳೂರು 560027
ಫೋನ್: 080–66677325; ಇಮೇಲ್: cs@bfsl.co.in; ವೆಬ್‌ಸೈಟ್: www.bfsl.co.in

23ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನೆ

ಎಜಿಎಮ್ ಸೂಚನೆ: ಬಿಜಿಎಸ್‌ಇ ಫೈನಾನ್ಸ್ಯಲ್ಸ್ ಲಿಮಿಟೆಡ್, ತನ್ನ 23ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು (AGM) **ಮಂಗಳವಾರ, 27ನೇ ಸೆಪ್ಟೆಂಬರ್, 2022ರಂದು ಬೆಳಗ್ಗೆ 09.30 ಗಂಟೆಗೆ** ಒಂದು ಸಾಮಾನ್ಯ ಸ್ಥಳದಲ್ಲಿ ಸದಸ್ಯರ ಭೌತಿಕ ಉಪಸ್ಥಿತಿ ಇಲ್ಲದೆಯೇ, ಕಂಪನಿಗಳ ಅಧಿನಿಯಮ, 2013ರ ಅನ್ವಯವಾಗುವ ನಿಬಂಧನೆಗಳನ್ನು ಕಾರ್ಪೊರೇಟ್ ಸಚಿವಾಲಯವು (MCA) 'ಕೋವಿಡ್–19 ನಿಂದ ಉಂಟಾಗುವ ಬೆದರಿಕೆಯ ಕಾರಣದಿಂದಾಗಿ ಕಂಪನಿಗಳು ಸಾಮಾನ್ಯ ಮತ್ತು ವಿಶೇಷ ನಿರ್ಣಯಗಳನ್ನು ಅಂಗೀಕರಿಸುವ ಬಗ್ಗೆ ಸ್ಪಷ್ಟೀಕರಣ ನೀಡುವ ಸಲುವಾಗಿ ಕಂಪನಿಗಳ ಕಾಯಿದೆ, 2013ರ ಅಡಿಯಲ್ಲಿ ಮತ್ತು ಅದರ ಅಡಿಯಲ್ಲಿ ಮಾಡಿದ ನಿಯಮಗಳು' ಕುರಿತಂತೆ ಹೊರಡಿಸಿರುವ ಸಂ. 14/2020 ದಿ. 08ನೇ ಏಪ್ರಿಲ್ 2020, 17/2020 ದಿ. 13ನೇ ಏಪ್ರಿಲ್ 2020, 22/2020 ದಿ. 15ನೇ ಜೂನ್, 2020, 33/2020 ದಿ. 28ನೇ ಸೆಪ್ಟೆಂಬರ್ 2020, 39/2020 ದಿ. 31ನೇ ಡಿಸೆಂಬರ್ 2020, 10/2021 ದಿ. 23ನೇ ಜೂನ್, 2021, ಮತ್ತು 19/2021 ದಿ. 08ನೇ ಡಿಸೆಂಬರ್ 2021 ಮತ್ತು 02/2022 ದಿ. 05ನೇ ಮೇ, 2022 ಸುತ್ತೋಲೆಗಳ ಜೊತೆ ಮತ್ತು ಜನವರಿ 13, 2021 ದಿನಾಂಕದ ಸಾಮಾನ್ಯ ಸುತ್ತೋಲೆ ಸಂಖ್ಯೆ 02/2021ನ್ನು (ಒಟ್ಟಾಗಿ ಇವುಗಳನ್ನು 'ಎಂಸಿಎ ಸುತ್ತೋಲೆಗಳು' ಎಂದು ಉಲ್ಲೇಖಿಸಲಾಗುತ್ತದೆ) ಓದಿಕೊಂಡ ಪ್ರಕಾರ ವಿಡಿಯೊ ಕಾನ್ಫರೆನ್ಸ್ (VC) ಅಥವಾ ಇತರೆ ಶ್ರವಣ–ದೃಶ್ಯ ಮಾಧ್ಯಮಗಳ (OAVM) ಮೂಲಕ ನಡೆಸಲು ಉದ್ದೇಶಿಸಿದೆ ಎಂದು ಈ ಮೂಲಕ ಕಂಪನಿಯ ಸದಸ್ಯರೆಲ್ಲರಿಗೂ ಸೂಚನೆಯನ್ನು ನೀಡಲಾಗುತ್ತಿದೆ.

ದಾಖಲೆಗಳ ಲಭ್ಯತೆ: ಯಾರೆಲ್ಲ ಸದಸ್ಯರು ತಮ್ಮ ಇಮೇಲ್ ವಿಳಾಸಗಳನ್ನು ಡಿಪಾಸಿಟರಿ ಪಾರ್ಟಿಸಿಪೆಂಟರು (DPs) ಮತ್ತು ಕಂಪನಿಯೊಂದಿಗೆ/ರಿಜಿಸ್ಟ್ರಾರ್ ಮತ್ತು ಟ್ರಾನ್ಸ್ಫರ್ ಏಜೆಂಟರೊಂದಿಗೆ (RTA) ನೋಂದಾಯಿಸಿಕೊಂಡಿದ್ದಾರೋ ಅಂತಹ ಸದಸ್ಯರೆಲ್ಲರಿಗೂ ಕಂಪನಿಯ 23ನೇ ಎಜಿಎಮ್ ಸೂಚನೆಯ ಮತ್ತು 2021–22 ಸಾಲಿನ ವಾರ್ಷಿಕ ವರದಿಯ ಪ್ರತಿಗಳನ್ನು ಕಳುಹಿಸಲಾಗಿದೆ. ಜೊತೆಗೆ, ಈ ದಾಖಲೆಗಳು ಕಂಪನಿಯ ವೆಬ್‌ಸೈಟ್ www.bfsl.co.in ನಲ್ಲೂ ಲಭ್ಯವಿರುವಂತೆ ವ್ಯವಸ್ಥೆ ಮಾಡಲಾಗಿದೆ.

ಇ–ಮತದಾನ: ಸದಸ್ಯರು ಶನಿವಾರ, 24ನೇ ಸೆಪ್ಟೆಂಬರ್ 2022 ಬೆಳಗ್ಗೆ 09:00 ರಿಂದ ಸೋಮವಾರ, 26ನೇ ಸೆಪ್ಟೆಂಬರ್ 2022 ಸಂಜೆ 5:00 ರವರೆಗೆ ಆನ್‌ಲೈನ್‌ನಲ್ಲಿ ಮತ ಚಲಾಯಿಸಬಹುದು; ರಿಮೋಟ್ ಇ–ವೋಟಿಂಗ್ ಅವಧಿ ಮುಗಿದೊಡನೆ ಸೌಲಭ್ಯವನ್ನು ಸ್ಥಗಿತಗೊಳಿಸಲಾಗುತ್ತದೆ. ಅಂತಿಮ ದಿನವಾದ ಸೋಮವಾರ, 19ನೇ ಸೆಪ್ಟೆಂಬರ್ 2022 ನಂತರ ಕಂಪನಿಯ ಸದಸ್ಯರಾದ ವ್ಯಕ್ತಿಗಳು ಈ ಎಜಿಎಮ್ ಸೂಚನೆಯನ್ನು ಮಾಹಿತಿಯ ಉದ್ದೇಶಕ್ಕಾಗಿ ಮಾತ್ರ ಪರಿಗಣಿಸಬೇಕು.

ಯಾವ ಸದಸ್ಯರು ಡೀಮ್ಯಾಟ್ ಅಥವಾ ಭೌತಿಕ ರೂಪದಲ್ಲಿ ತಮ್ಮ ಷೇರುಗಳನ್ನು ಹೊದಿರುವರೋ, ಅಥವಾ ಯಾರು ತಮ್ಮ ಇಮೇಲ್ ವಿಳಾಸಗಳನ್ನು ಕಂಪನಿಯೊಂದಿಗೆ ನೋಂದಾಯಿಸಿಕೊಂಡಿಲ್ಲವೋ, ಅಂತಹ ಸದಸ್ಯರು ಸಭೆಯು ನಡೆಯುವ ಅವಧಿಯಲ್ಲಿ ರಿಮೋಟ್ ಇ–ಮತದಾನ ಅಥವಾ ಇ–ಮತದಾನದ ಮೂಲಕ ತಮ್ಮ ಮತಗಳನ್ನು ಚಲಾಯಿಸಬಹುದು. ಭೌತಿಕ ರೂಪದಲ್ಲಿ ಷೇರು(ಗಳನ್ನು) ಹೊಂದಿರುವ ಸದಸ್ಯರು ಕಂಪನಿಯ enquiry@bfsl.co.in ಅಥವಾ cs@bfsl.co.in ಇಮೇಲ್ ವಿಳಾಸಕ್ಕೆ ಬರೆದು ತಾವು ಹೊಂದಿರುವ ಷೇರುಗಳ ಕುರಿತಾದ ಅಗತ್ಯ ವಿವರಗಳನ್ನು ಮತ್ತು ದಾಖಲೆಗಳನ್ನು ನೀಡಿ ತಮ್ಮ ಇಮೇಲ್ ಐಡಿಗಳನ್ನು ಕಂಪನಿಯೊಂದಿಗೆ ನೋಂದಾಯಿಸಿಕೊಳ್ಳಬಹುದು; ವಿದ್ಯುನ್ಮಾನ ರೂಪದಲ್ಲಿ ಶೇರು(ಗಳನ್ನು) ಹೊಂದಿರುವ ಸದಸ್ಯರು ಕಂಪನಿಯಿಂದ ಬರುವ ಎಲ್ಲ ಸಂವಹನವನ್ನೂ ವಿದ್ಯುನ್ಮಾನ ರೂಪದಲ್ಲಿ ಸ್ವೀಕರಿಸಲು ಸಾಧ್ಯವಾಗುವಂತೆ ತಮಗೆ ಸಂಬಂಧಪಟ್ಟ ಡಿಪಾಸಿಟರಿ ಪಾರ್ಟಿಸಿಪೆಂಟರೊಂದಿಗೆ (DPs) ತಮ್ಮ ಇಮೇಲ್ ವಿಳಾಸಗಳನ್ನು ದಾಖಲಿಸಿಕೊಳ್ಳಬೇಕಾಗಿ / ನವೀಕರಿಸಬೇಕಾಗಿ ಕೋರುತ್ತೇವೆ.

ವಿಸಿ ಮೂಲಕ ಸಭೆಯನ್ನು ಪ್ರವೇಶಿಸಲು ಮತ್ತು ಭಾಗವಹಿಸಲು ತಾಂತ್ರಿಕ ನೆರವು ಅಗತ್ಯವಿರುವ ಸದಸ್ಯರು ಇಮೇಲ್–ಐಡಿ helpdesk.evoting@cdslindia.comಗೆ ವಿನಂತಿಯನ್ನು ಕಳುಹಿಸುವ ಮೂಲಕ ಸಹಾಯವಾಣಿಯನ್ನು ಸಂಪರ್ಕಿಸಬಹುದು ಅಥವಾ 022– 23058738 ಮತ್ತು 022–23058542–43 ನಲ್ಲಿ ಮತದಾನ ಸೇವೆ ಒದಗಿಸುವ ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ (ಸಿಡಿಎಸ್‌ಎಲ್) ಅನ್ನು ಸಂಪರ್ಕಿಸಬಹುದು.

ಪುಸ್ತಕ ಮುಚ್ಚುವ ದಿನಾಂಕ: ವಾರ್ಷಿಕ ಸಾಮಾನ್ಯ ಸಭೆಯ ಉದ್ದೇಶಕ್ಕಾಗಿ ಸದಸ್ಯರ ನೋಂದಣಿ ಮತ್ತು ಷೇರು ವರ್ಗಾವಣೆ ಪುಸ್ತಕವನ್ನು 20–09–2022 ರಿಂದ 27–09–2022 ವರೆಗೆ (ಎರಡೂ ದಿನಗಳನ್ನು ಒಳಗೊಂಡಂತೆ) ಮುಚ್ಚಲಾಗುತ್ತದೆ.

ಅಂತಿಮ ದಿನಾಂಕ: ಸದಸ್ಯರ ಮತದಾನದ ಹಕ್ಕುಗಳು ಅಂತಿಮ ದಿನಾಂಕ ದಿನಾಂಕದಂದು ಅಂದರೆ ಸೋಮವಾರ, 19ನೇ ಸೆಪ್ಟೆಂಬರ್ 2022 ರಂದು ಕಂಪನಿಯ ಪಾವತಿಸಿದ ಈಕ್ವಿಟಿ ಷೇರು ಬಂಡವಾಳದಲ್ಲಿನ ಅವರ ಷೇರುಗಳ ಅನುಪಾತದಲ್ಲಿರುತ್ತದೆ.

ಸ್ಥಳ: ಬೆಂಗಳೂರು
ದಿನಾಂಕ: 03/09/2022

ನಿರ್ದೇಶಕರ ಮಂಡಲಿಯ ಆದೇಶದ ಮೇರೆಗೆ
ಸಹಿ/– (ನಿಧಿ ಶರ್ಮ),
ಕಂಪನಿ ಸೆಕ್ರೆಟರಿ ಮತ್ತು ಕಂಪ್ಲಯನ್ಸ್ ಆಫೀಸರ್

‘ಅಹವಾಲು ಹೇಳಲು ಬಂದ ಮಹಿಳೆಗೆ ನಿಂದನೆ’

ಒತ್ತುವರಿ ಪರಿಶೀಲನೆ ವೇಳೆ ಸಿಟ್ಟಾದ ಶಾಸಕ ಲಿಂಬಾವಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಹವಾಲು ಹೇಳಿಕೊಳ್ಳಲು ಬಂದ ಮಹಿಳೆಯನ್ನು ಶಾಸಕ ಅರವಿಂದ ಲಿಂಬಾವಳಿ ಅವಾಚ್ಯ ಶಬ್ದಗಳಿಂದ ನಿಂದಿಸಿದ ವಿಡಿಯೊ ಈಗ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.

ಸೋಮವಾರ ಸುರಿದ ಮಳೆಯಿಂದಾಗಿ ಮಹದೇವಪುರದ ಕ್ಷೇತ್ರ ವ್ಯಾಪ್ತಿಯ ಹಲವೆಡೆ ಪ್ರವಾಹ ಉಂಟಾಗಿ ಸಮಸ್ಯೆ ಎದುರಾಗಿದೆ. ಗುರುವಾರ ಮಧ್ಯಾಹ್ನ ನಲ್ಲೂರಹಳ್ಳಿಯ ವೈಟ್‌ಫೀಲ್ಡ್ ಕೋಡಿ ಸರ್ಕಲ್ ಬಳಿಯ ರಾಜಕಾಲುವೆ ಒತ್ತುವರಿ ಆಗಿರುವ ಸ್ಥಳಕ್ಕೆ ಶಾಸಕರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ರಾಜಕಾಲುವೆಗೆ ಹೊಂದಿಕೊಂಡಂತೆ ಇರುವ ವಾಣಿಜ್ಯ ಕಟ್ಟಡದ ಕೆಲ ಭಾಗವನ್ನು ಜೆಸಿಬಿಯಿಂದ ತೆರವುಗೊಳಿಸುವ ವೇಳೆ ಸ್ಪಷ್ಟನೆ ನೀಡಲು ಮುಂದಾದ ರುತ್ ಸಗಾಯಿ ಮೇರಿ ಅಮೀಲಾ ಎಂಬ ಮಹಿಳೆ, ದಾಖಲೆ ಪತ್ರಗಳನ್ನು ತೋರಿಸಿ ಶಾಸಕರ ಬಳಿ ಅಳಲು ತೋಡಿಕೊಳ್ಳಲು ಮುಂದಾದರು. ಮಹಿಳೆ ಕೈಯಿಂದ ದಾಖಲೆ ಕಿತ್ತುಕೊಳ್ಳಲು ಶಾಸಕರು ಯತ್ನಿಸಿದರು. ಪತ್ರಗಳನ್ನು ಕೊಡಲು ನಿರಾಕರಿಸಿದ ಮಹಿಳೆಯನ್ನು ತರಾಟೆಗೆ ತೆಗೆದುಕೊಂಡು ಏಕ ವಚನದಲ್ಲೇ ನಿಂದಿಸಿದರು.

‘ಒತ್ತುವರಿ ಮಾಡಿಕೊಂಡು ನನಗೆ ನ್ಯಾಯ ಕೇಳಲು ಬರುತ್ತಿಯಾ, ಮಾನ ಮರ್ಯಾದೆ ಇಲ್ವ ನಿನಗೆ, ನನಗೂ ಬೇರೆ ಭಾಷೆ ಬರುತ್ತೆ. ಇವಳಿಗೆ ಮರ್ಯಾದೆ ಬೇರೆ ಕೇಡು, ಒದ್ದು ಒಳಗೆ ಹಾಕಿ’ ಎಂದು ಸ್ಥಳದಲ್ಲಿದ್ದ ಪೊಲೀಸರಿಗೆ ಸೂಚನೆ ನೀಡಿದರು.

‘ಮರ್ಯಾದೆಯಿಂದ ಮಾತನಾಡಿ. ಹೆಣ್ಣುಮಕ್ಕಳು ಅನ್ನುವ ಗೌರವ ಇರಲಿ. ನೀವು ನನಗೂ ಎಂಎಲ್‌ಎ. ಎಲ್ಲರಿಗೂ ಶಾಸಕರೇ’ ಎಂದು ಮಹಿಳೆ ಹೇಳಿರುವುದು ವಿಡಿಯೊದಲ್ಲಿ ಸೆರೆಯಾಗಿದೆ.


ವೈಟ್‌ಫೀಲ್ಡ್ ಪೊಲೀಸ್ ಠಾಣೆ ಎದುರು ರುತ್ ಸಗಾಯಿ ಮೇರಿ ಅಮೀಲಾ (ಘೋಷಣೆ ಕೂಗುತ್ತಿರುವ ಮಹಿಳೆ) ಮತ್ತು ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು

ದೂರು ದಾಖಲಿಸದ ಪೊಲೀಸರು

ಘಟನೆ ಬಳಿಕ ವೈಟ್‌ಫೀಲ್ಡ್ ಪೊಲೀಸ್ ಠಾಣೆಗೆ ಮಹಿಳೆಯನ್ನು ಕರೆದೊಯ್ದ ಪೊಲೀಸರು, ಸಂಜೆ ತನಕ ಅಲ್ಲೇ ಕೂರಿಸಿದ್ದರು. ರಾತ್ರಿ 7.30ರ ವೇಳೆಗೆ ಕಾಂಗ್ರೆಸ್ ಕಾರ್ಯಕರ್ತರು ಠಾಣೆ ಮುಂದೆ ಪ್ರತಿಭಟನೆಗೆ ಮುಂದಾದರು. ಬಳಿಕ ಪೊಲೀಸರು ಮಹಿಳೆಯ ಹೇಳಿಕೆ ದಾಖಲಿಸಿಕೊಂಡು ಮನೆಗೆ ಕಳುಹಿಸಿದರು.

‘ನಾವು ರಾಜಕಾಲುವೆ ಒತ್ತುವರಿ ಮಾಡದೆ ವಾಣಿಜ್ಯ ಕಟ್ಟಡ ನಿರ್ಮಿಸಿದ್ದೇವೆ. ಕಾನೂನು ಪ್ರಕಾರ ಯೋಜನಾ ನಕ್ಷೆಗೆ ಬಿಬಿಎಂಪಿಯಿಂದ ಅನುಮೋದನೆ ಪಡೆದಿದ್ದೇವೆ. ನಕ್ಷೆ ಸೇರಿ ಇತರ ದಾಖಲೆ ತೋರಿಸಿ ಅಹವಾಲು ಹೇಳಿಕೊಳ್ಳಲು ಮುಂದಾದಾಗ ಶಾಸಕರು ಅವಾಚ್ಯ ಶಬ್ದಗಳಿಂದ ನಿಂದಿಸಿದರು. ನಮ್ಮ ಕಟ್ಟಡದ ಭಾಗದಲ್ಲಿ ಶೌಚಾಲಯ, ವಿದ್ಯುತ್ ಪರಿವರ್ತಕ ಇರುವುದರಿಂದ ಕಟ್ಟಡ ಒಡೆಯಬೇಡಿ, ಸಮಯ ಕೊಡಿ ಎಂದು ಮನವಿ ಮಾಡಿಕೊಂಡೆ. ಆದರೂ ಶಾಸಕರು ಏಕ ವಚನದಲ್ಲೇ ನಿಂದಿಸಿ ಹಲ್ಲೆ ಮಾಡಲು ಮುಂದಾದರು. ನನ್ನ ಕೈಯಿಂದ ದಾಖಲೆ ಕಸಿದುಕೊಂಡು ನೆಲಕ್ಕೆ ಎಸೆದರು. ಪೊಲೀಸರು ದೂರು ದಾಖಲಿಸಿಕೊಳ್ಳದೆ ಮನೆಗೆ ಕಳುಹಿಸಿದ್ದಾರೆ. ಶಾಸಕರ ದಬ್ಬಾಳಿಕೆ ಮಿತಿ ಮೀರಿದೆ’ ಎಂದು ರುತ್ ಸಗಾಯಿ ಮೇರಿ ಅಮೀಲಾ ಹೇಳಿದರು.

ಮೆಟ್ರೊ ರೈಲು: ಕಾಯುವ ಅವಧಿ ಅರ್ಧ ಗಂಟೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬೆಳಗಿನ ಜಾವ ಮತ್ತು ತಡರಾತ್ರಿ ಮೆಟ್ರೊ ರೈಲುಗಳ ಸಂಚಾರ ಅವಧಿಯನ್ನು ಬಿಎಂಆರ್‌ಸಿಎಲ್ ಕಡಿಮೆ ಮಾಡಿದೆ. ಇದರಿಂದ ಬೈಯಪ್ಪನಹಳ್ಳಿ ಕಡೆಯಿಂದ ಪ್ರಯಾಣ ಮಾಡಿ, ನಾಗಸಂದ್ರದ ಕಡೆಗೆ ಹೋಗುವವರಿಗೆ ಅನುಕೂಲದ ಬದಲಿಗೆ ಅನನುಕೂಲವೇ ಹೆಚ್ಚಾಗಿದೆ. ಕಾಯುವ ಅವಧಿ ಗರಿಷ್ಠ 30 ನಿಮಿಷಕ್ಕೆ ಹೆಚ್ಚಾಗಿದೆ.

‘ಬೆಳಿಗ್ಗೆ 5ರಿಂದ 6 ಗಂಟೆ ಮತ್ತು ರಾತ್ರಿ 10ರಿಂದ 11 ಗಂಟೆ ತನಕ ಪ್ರತಿ ರೈಲಿನ ಸಂಚಾರದ ನಡುವೆ ಇದ್ದ 20 ನಿಮಿಷಗಳ ಅಂತರವನ್ನು 15 ನಿಮಿಷಕ್ಕೆ ಇಳಿಸಲಾಗಿದ್ದು, ಆ.8ರಿಂದ ವೇಳಾಪಟ್ಟಿ ಬದಲಾಗಿದೆ. ಬೈಯಪ್ಪನಹಳ್ಳಿ ಮಾರ್ಗದ ನಿಲ್ದಾಣಗಳಲ್ಲಿ 15 ನಿಮಿಷ ಕಾದು ರೈಲು ಹತ್ತಿದವರು ನಾಡಪ್ರಭು ಕೆಂಪೇಗೌಡ ಮೆಟ್ರೊ ನಿಲ್ದಾಣದಲ್ಲಿ ಇಳಿದು ನಾಗಸಂದ್ರ ಮಾರ್ಗದ ರೈಲು ಹತ್ತಬೇಕೆಂದರೆ 14 ಅಥವಾ 15 ನಿಮಿಷ ಕಾಯಬೇಕಾಗುತ್ತಿದೆ.

ಬೈಯ್ಯಪ್ಪನಹಳ್ಳಿಯಿಂದ ಕೆಂಪೇಗೌಡ ಮೆಟ್ರೊ ನಿಲ್ದಾಣದ ತನಕ ಯಾವ ನಿಲ್ದಾಣದಲ್ಲಿ ಪ್ರಯಾಣಿಕರು ರಾತ್ರಿ 10 ಗಂಟೆಯ ನಂತರ ರೈಲು ಹತ್ತಿದರೂ ಎರಡೂ ಕಡೆ ಸೇರಿ ಗರಿಷ್ಠ ಅರ್ಧ ಗಂಟೆ ಕಾಯಬೇಕಾಗುತ್ತಿದೆ. ರೈಲುಗಳ ಸಂಖ್ಯೆ ಹೆಚ್ಚಿಸಿ ಅವಧಿ ಕಡಿಮೆ ಮಾಡಿದ್ದರೂ ಈ ಮಾರ್ಗದಲ್ಲಿ ಪ್ರಯಾಣಿಸುವವರಿಗೆ ಅನುಕೂಲ ಆಗಿಲ್ಲ.

ಈ ಹಿಂದೆ ಕೆಂಪೇಗೌಡ ನಿಲ್ದಾಣದಲ್ಲಿ ಗರಿಷ್ಠ 6 ನಿಮಿಷ ಕಾಯಬೇಕಾಗುತ್ತಿತ್ತು. ಈಗ ಬೈಯಪ್ಪನಹಳ್ಳಿ ಕಡೆಯಿಂದ ರೈಲು ಮೆಜೆಸ್ಟಿಕ್ ತಲುಪುವ ಒಂದು ನಿಮಿಷ ಮುನ್ನ ಒಂದು ರೈಲು ನಾಗಸಂದ್ರ ಕಡೆಗೆ ಹೋಗಿರುತ್ತದೆ. ಮುಂದಿನ ರೈಲಿಗೆ 14 ನಿಮಿಷ ಕಾಯಬೇಕಾಗಿದೆ ಎಂದು ಪ್ರಯಾಣಿಕರು ಬೇಸರ ವ್ಯಕ್ತಪಡಿಸುತ್ತಾರೆ.

ನಾಗಸಂದ್ರ ಕಡೆಗೆ ಹೋಗುವ ರೈಲಿನ ವೇಳಾಪಟ್ಟಿಯನ್ನು ಸ್ವಲ್ಪ ಬದಲಿಸಿದರೆ ಪ್ರಯಾಣಿಕರು ಕಾಯುವುದು ತಪ್ಪಲಿದೆ. ಈ ಬಗ್ಗೆ ಬಿಎಂಆರ್‌ಸಿಎಲ್ ಅಧಿಕಾರಿಗಳು ಪರಿಶೀಲಿಸಬೇಕು ಎಂಬುದು ಪ್ರಯಾಣಿಕರ ಒತ್ತಾಯ.

ಹಾಂಗ್‌ಕಾಂಗ್‌ಗೆ ನೇರ ವಿಮಾನ ಸಂಪರ್ಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಹಾಂಗ್‌ಕಾಂಗ್‌ಗೆ ನೇರ ಸಂಪರ್ಕಕ್ಕಾಗಿ ಹೊಸ ವಿಮಾನ ಹಾರಾಟ ನಡೆಸಲು ಕ್ಯಾಥೆ ಪೆಸಿಫಿಕ್ ವಿಮಾನ ಯಾನ ಕಂಪನಿ ಸಿದ್ಧತೆ ಮಾಡಿಕೊಂಡಿದೆ. ಅಕ್ಟೋಬರ್ 11ರಿಂದ ಹೊಸ ವಿಮಾನ ಹಾರಾಟ ಆರಂಭಿಸುವ ನಿರೀಕ್ಷೆ ಇದೆ.

ವಿಮಾನದ ಬಗ್ಗೆ ಮಾಹಿತಿ ನೀಡಿರುವ ನಿಲ್ದಾಣದ ಮುಖ್ಯ ಕಾರ್ಯಾಚರಣೆ ಅಧಿಕಾರಿ ಸತ್ಯಕಿ ರಘುನಾಥ್, ‘ದೇಶದ ಅತಿ ದೊಡ್ಡ ನಿಲ್ದಾಣಗಳಲ್ಲಿ ನಮ್ಮ ಬೆಂಗಳೂರು ನಿಲ್ದಾಣವೂ ಒಂದು. ಇದೀಗ ಹಾಂಗ್‌ಕಾಂಗ್‌ಗೆ ನೇರವಾಗಿ ಸಂಪರ್ಕ ಸಾಧಿಸಲು ಹೊಸ ವಿಮಾನ ಹಾರಾಟ ಆರಂಭವಾಗುತ್ತಿರುವುದು ಖುಷಿಯ ವಿಷಯ’ ಎಂದರು.

‘ಕ್ಯಾಥೆ ಪೆಸಿಫಿಕ್ ಕಂಪನಿಯ ಬೋಯಿಂಗ್ 777-300 ಎರಡು ವಿಮಾನಗಳು ತಡೆರಹಿತ ಹಾರಾಟ ನಡೆಸಲಿವೆ. ಪ್ರತಿ ವಿಮಾನದಲ್ಲಿ ಎಕನಾಮಿಕ್, ಪ್ರೀಮಿಯಂ ಎಕನಾಮಿಕ್ ಹಾಗೂ ಬ್ಯುಸಿನೆಸ್ ಕ್ಲಾಸ್ ಎಂಬ ಮೂರು ಕ್ಯಾಬಿನ್‌ಗಳಿವೆ. ಮುಂಬೈ ಹಾಗೂ ದೆಹಲಿಯಿಂದ ಮಾತ್ರ ಹಾಂಗ್‌ಕಾಂಗ್‌ಗೆ ನೇರ ಸಂಪರ್ಕವಿತ್ತು’ ಎಂದು ಹೇಳಿದರು.

ರಾಜ್ಯದಲ್ಲಿ ರೈತರ ಆತ್ಮಹತ್ಯೆ ಇಳಿಕೆ: ಕೃಷಿ ಇಲಾಖೆ

ಬೆಂಗಳೂರು: ರಾಜ್ಯದಲ್ಲಿ 2014 ರಿಂದ 2017 ರ ಅವಧಿಯಲ್ಲಿ ಏರು-ಮುಖವಾಗಿದ್ದ ರೈತರು ಮತ್ತು ಕೃಷಿ ಕಾರ್ಮಿಕರ ಆತ್ಮಹತ್ಯೆ ಪ್ರಕರಣಗಳು 2018-19 ರಿಂದ 2020-21 ರ ಅವಧಿಯಲ್ಲಿ ಇಳಿಮುಖವಾಗಿದೆ ಎಂದು ಕೃಷಿ ಇಲಾಖೆ ತಿಳಿಸಿದೆ.

ಇತ್ತೀಚೆಗೆ ಎನ್‌ಸಿಆರ್‌ಬಿ ವರದಿಯನ್ನು ಉಲ್ಲೇಖಿಸಿ 2020-21 ರಲ್ಲಿ ಕರ್ನಾಟಕದಲ್ಲಿ ರೈತರ ಆತ್ಮಹತ್ಯೆ ಪ್ರಮಾಣ ಶೇ 19.9 ರಷ್ಟಿದ್ದು ದೇಶದಲ್ಲೇ 2 ನೇ ಸ್ಥಾನದಲ್ಲಿದೆ ಎಂಬ ವರದಿ ಪ್ರಕಟವಾಗಿದೆ. ಆ ವರದಿಯ ಪ್ರಕಾರ ದೇಶದ ಒಟ್ಟು 10,881 ರೈತರ ಆತ್ಮಹತ್ಯೆ ಪ್ರಕರಣಗಳಲ್ಲಿ ಶೇ 19.9 ರಷ್ಟು ಎಂದರೆ 2,165 ಆತ್ಮಹತ್ಯೆ-ಗಳು ರಾಜ್ಯದಲ್ಲಿ ಸಂಭವಿಸಿರಬೇಕು. ವಾಸ್ತವದಲ್ಲಿ ಆ ಸಾಲಿನಲ್ಲಿ ರಾಜ್ಯದಲ್ಲಿ 719 ರೈತರ ಆತ್ಮಹತ್ಯೆ ಪ್ರಕರಣಗಳು ಮಾತ್ರ ದಾಖಲಾಗಿವೆ ಎಂದು ಹೇಳಿದೆ.

ಕಳೆದ ವರ್ಷಕ್ಕಿಂತ ಈ ವರ್ಷ ಅಂದರೆ 2022-23 ನೇ ಸಾಲಿನಲ್ಲಿ ಆತ್ಮಹತ್ಯೆ ಪ್ರಕರಣಗಳು ಕೊಂಚ ಏರುಮುಖವಾಗಿದ್ದು, ಈವರೆಗೆ 60 ಪ್ರಕರಣಗಳು ದಾಖಲಾಗಿವೆ.

ಅದೇ ರೀತಿ 2014-15 ರಲ್ಲಿ 93, 2015-16 ರಲ್ಲಿ 1062, 2016-17 ರಲ್ಲಿ 932, 2017-18 ರಲ್ಲಿ 1052, 2018-19 ರಲ್ಲಿ 868, 2019-20 ರಲ್ಲಿ 882, 2020-21 ರಲ್ಲಿ 566, 2021-22 ರಲ್ಲಿ 719 ಆತ್ಮಹತ್ಯೆ ಪ್ರಕರಣಗಳು ದಾಖಲಾಗಿವೆ ಎಂದು ತಿಳಿಸಿದೆ.

ವಿಮ್ಸ್‌ಗೆ 50 ಹೆಚ್ಚುವರಿ ಸೀಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಳ್ಳಾರಿಯ ‘ವಿಮ್ಸ್’ ನಲ್ಲಿ ಎಂಬಿಬಿಎಸ್ ಕೋರ್ಸ್‌ಗೆ ಇದೇ ಶೈಕ್ಷಣಿಕ ವರ್ಷದಿಂದ 50 ಹೆಚ್ಚುವರಿ ಸೀಟುಗಳು ಲಭ್ಯವಾಗಲಿವೆ.

ಎಂಬಿಬಿಎಸ್ ಸೀಟುಗಳನ್ನು ಹೆಚ್ಚಿಸುವಂತೆ ರಾಜ್ಯ ಸರ್ಕಾರ ಸಲ್ಲಿಸಿದ್ದ ಮನವಿಗೆ ರಾಷ್ಟ್ರೀಯ ವೈದ್ಯಕೀಯ ಆಯೋಗ ಅನುಮತಿ ನೀಡಿದೆ ಎಂದು ಆರೋಗ್ಯ ಸಚಿವ ಕೆ. ಸುಧಾಕರ್ ಟ್ವೀಟ್ ಮಾಡಿದ್ದಾರೆ.

ಕಳೆದ ಮೂರು ವರ್ಷಗಳಲ್ಲಿ ಬಿಜೆಪಿ ಸರ್ಕಾರ ನಾಲ್ಕು ಹೊಸ ವೈದ್ಯಕೀಯ ಕಾಲೇಜು ಹಾಗೂ 750 ಎಂಬಿಬಿಎಸ್ ಸೀಟುಗಳನ್ನು ಸೃಷ್ಟಿಸಿದೆ ಎಂದು ತಿಳಿಸಿದ್ದಾರೆ.


ಎಸ್‌ಬಿಐ ವತಿಯಿಂದ ಬಸವನಗುಡಿಯ ಶ್ರೀಶಂಕರ ಕ್ಯಾನ್ಸರ್ ಫೌಂಡೇಷನ್‌ಗೆ ಆಂಬುಲೆನ್ಸ್ ನೀಡಲಾಯಿತು. ಬ್ಯಾಂಕ್‌ನ ಡಿಜಿಎಂ ರಿಮ್‌ಝಿಮ್ ಛಾಬ್ರಾ ಅವರು ಶ್ರೀಶಂಕರ ಕ್ಯಾನ್ಸರ್ ಫೌಂಡೇಷನ್‌ನ ಟ್ರಸ್ಟಿ ಡಾ.ಬಿ.ಎಸ್ ಶ್ರೀನಾಥ್ ಅವರಿಗೆ ಆಂಬುಲೆನ್ಸ್ ಕೀ ಹಸ್ತಾಂತರಿಸಿದರು

‘ಕೃಷ್ಣ ಗಾರುಡಿ ಕೃತಿ ರಂಗಭೂಮಿಯ ಚರಿತ್ರೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ 60-70ರ ದಶಕದ ರಂಗಭೂಮಿಯ ಚರಿತ್ರೆಯಾಗಿ ರಂಗಕರ್ಮಿ ಎಲ್.ಕೃಷ್ಣಪ್ಪ ಅವರ ಅಭಿನಂದನಾ ಗ್ರಂಥ ದಾಖಲಾಗಿದೆ ಎಂದು ನಾಟಕಕಾರ ಕೆ.ವೈ. ನಾರಾಯಣಸ್ವಾಮಿ ಶ್ಲಾಘಿಸಿದರು.

ಪಂಪ ಸಾಂಸ್ಕೃತಿಕ ಮತ್ತು ಸಾಮಾಜಿಕ ಕೇಂದ್ರ ಶುಕ್ರವಾರ ಹಮ್ಮಿಕೊಂಡಿದ್ದ ಎಲ್.ಕೃಷ್ಣಪ್ಪ ಅವರ 75ರ ಅಭಿನಂದನಾ ಸಮಾರಂಭದಲ್ಲಿ ಅಭಿನಂದನಾ ಗ್ರಂಥ ‘ಕೃಷ್ಣಗಾರುಡಿ’ ಕುರಿತು ಮಾತನಾಡಿದರು.

ಬಾಲ್ಯದಿಂದಲೇ ರಂಗಭೂಮಿಯತ್ತ ಒಲವು ಬೆಳೆಸಿಕೊಂಡಿದ್ದ ಕೃಷ್ಣಪ್ಪ ಕಷ್ಟದ ಮಧ್ಯೆಯೂ ಶ್ರದ್ಧೆ, ಭಕ್ತಿಯಿಂದ ರಂಗಭೂಮಿಯ ಸೇವೆ ಮಾಡಿದ್ದಾರೆ. ಲಂಕೇಶ್ ಅವರಂತಹ ನಾಟಕಕಾರರು ಅವರ ಕುರಿತು ಬರೆದಿರುವುದು ಅವರ ರಂಗ ಪ್ರವೃತ್ತಿಗೆ ಹಿಡಿದ ಕನ್ನಡಿ. ಕನ್ನಡ ರಂಗಭೂಮಿಯ ಚರಿತ್ರೆಯನ್ನು ಅಧ್ಯಯನ ಮಾಡುವವರಿಗೆ ಗ್ರಂಥ ಒಳ್ಳೆಯ ಮಾಹಿತಿ ಒದಗಿಸಿದೆ ಎಂದರು.

ರಂಗಭೂಮಿಯಲ್ಲಿ ನಾಯಕನಟರಾಗಿ ಮಿಂಚುವ ಆಶಯದಿಂದ ಬಂದ ಕೃಷ್ಣಪ್ಪ ಅವರು ಸಣ್ಣಪುಟ್ಟ ಪಾತ್ರಗಳಿಗೆ ಸೀಮಿತವಾದರೂ, ಮುಂದೆ ನಾಯಕರನ್ನೇ ಹುಟ್ಟುಹಾಕುವಷ್ಟು ನಂಟು ಬೆಳೆಸಿಕೊಂಡರು. ರಂಗಭೂಮಿಗೆ ಹಲವು ಕೊಡುಗೆ ನೀಡಿದರು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಾಹಿತಿ ದೊಡ್ಡರಂಗೇಗೌಡ ಗ್ರಂಥ ಬಿಡುಗಡೆ ಮಾಡಿದರು. ಸಾಹಿತಿ ಕೆ.ಮರುಳಸಿದ್ದಪ್ಪ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ನಾಟಕ ಅಕಾಡೆಮಿ ಮಾಜಿ ಅಧ್ಯಕ್ಷ ಬಿ.ವಿ.ರಾಜಾರಾಂ, ಅಭಿನಂದನಾ ಸಮಿತಿ ಉಪಾಧ್ಯಕ್ಷ ಬಿ.ಆರ್. ಜಯರಾಮರಾಜೇ ಅರಸು, ನಟಿ ಶ್ವೇತಾ ಶ್ರೀವಾಸ್ತವ್, ರಂಗಕರ್ಮಿ ಚಂದ್ರಕುಮಾರ್ ಸಿಂಗ್, ಕಲಬುರಗಿ ರಂಗಾಯಣ ನಿರ್ದೇಶಕ ಪ್ರಭಾಕರ್ ಜೋಶಿ, ಅಭಿನಂದನಾ ಗ್ರಂಥದ ಸಂಪಾದಕ ಆರ್.ವೆಂಕಟರಾಜು, ಕಲಾವಿದ ಶಂಕರ್ ಭಟ್ ಉಪಸ್ಥಿತರಿದ್ದರು.


ಪಂಪ ಸಾಂಸ್ಕೃತಿಕ ಮತ್ತು ಸಾಮಾಜಿಕ ಕೇಂದ್ರ ಶುಕ್ರವಾರ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ರಂಗಕರ್ಮಿ ಎಲ್‌ಕೃಷ್ಣಪ್ಪ–ವಿನೋದಿನಿ ದಂಪತಿಯನ್ನು ಗಣ್ಯರು ಅಭಿನಂದಿಸಿದರು. ಬಿ.ಆರ್ ಜಯರಾಮರಾಜೇ ಅರಸು, ದೊಡ್ಡ ರಂಗೇಗೌಡ, ಬಿ.ವಿ.ರಾಜಾರಾಂ, ಕೆ.ಮರುಳಸಿದ್ದಪ್ಪ, ಶ್ವೇತಾ ಶ್ರೀವಾಸ್ತವ್, ಚಂದ್ರಕುಮಾರ್ ಸಿಂಗ್, ಪ್ರಭಾಕರ್ ಜೋಶಿ, ಆರ್.ವೆಂಕಟರಾಜು, ಶಂಕರ್ ಭಟ್ ಇದ್ದರು –ಪ್ರಜಾವಾಣಿ ಚಿತ್ರ

ವಿಪ್ರಶ್ರೀ ಪ್ರಶಸ್ತಿಗೆ ಬೇಲೂರು ರಾಮಮೂರ್ತಿ ಆಯ್ಕೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವತಿಯಿಂದ ನೀಡುವ ವಿಪ್ರಶ್ರೀ ಪ್ರಶಸ್ತಿಗೆ ಸಾಹಿತಿ ಬೇಲೂರು ರಾಮಮೂರ್ತಿ ಅವರನ್ನು ಆಯ್ಕೆ ಮಾಡಲಾಗಿದೆ.

ರಾಮಮೂರ್ತಿ ಅವರು ಸಾಹಿತ್ಯ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ಅವರನ್ನು ಆಯ್ಕೆ ಮಾಡಲಾಗಿದೆ. ಸೆಪ್ಟೆಂಬರ್ 4ರಂದು (ಭಾನುವಾರ) ಅವರನ್ನು ಸನ್ಮಾನಿಸಲಾಗುವುದು ಎಂದು ಮಹಾಸಭಾದ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೀಸಲು: ಆಕ್ಷೇಪಣೆ ಸಲ್ಲಿಸಲು ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವಾರ್ಡ್‌ವಾರು ಮೀಸಲಾತಿ ನಿಗದಿಪಡಿಸಿ ನಗರಾಭಿವೃದ್ಧಿ ಇಲಾಖೆ ಹೊರಡಿಸಿರುವ ಅಧಿಸೂಚನೆ ರದ್ದುಪಡಿಸು-ವಂತೆ ಕೋರಿ ಸಲ್ಲಿಸಲಾಗಿರುವ ರಿಟ್ ಅರ್ಜಿಗೆ ಇದೇ 12ರೊಳಗೆ ಆಕ್ಷೇಪಣೆ ಸಲ್ಲಿಸುವಂತೆ ರಾಜ್ಯ ಸರ್ಕಾರ ಹಾಗೂ ರಾಜ್ಯ ಚುನಾವಣಾ ಆಯೋಗಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

ಈ ಕುರಿತಂತೆ ಈಜಿಪುರ ನಿವಾಸಿ ಕೆ.ಮಹದೇವ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ್ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಾದವೇನು?: ‘ವಾರ್ಡ್‌ವಾರು ಮೀಸಲಾತಿ ನಿಗದಿಯಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸುವ ಸಂಬಂಧ ಭಕ್ತವತ್ಸಲ ಸಮಿತಿ ವರದಿ ಆಧರಿಸಲಾಗಿದೆ ಎಂದು ಸರ್ಕಾರ ಹೇಳಿದೆ. ಆದರೆ, ಭಕ್ತವತ್ಸಲ ಸಮಿತಿ ಮೂರು ಹಂತದ ಪರಿಶೀಲನೆಯನ್ನು (ಟ್ರಿಪಲ್ ಟೆಸ್ಟ್) ಅನ್ವಯಿಸಿಕೊಂಡಿಲ್ಲ. ಯಾವ ಜಾತಿಗಳಿಗೆ ಪ್ರಾತಿನಿಧ್ಯ ಕಲ್ಪಿಸಲಾಗಿದೆ ಎಂಬ ಪಟ್ಟಿಯನ್ನೂ ಒದಗಿಸಿಲ್ಲ. ಆದ್ದರಿಂದ, ಅಧಿಸೂಚನೆ ರದ್ದುಪಡಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

ಅರ್ಜಿದಾರರ ಪರ ಹಿರಿಯ ವಕೀಲ ಅಶೋಕ್ ಹಾರನಹಳ್ಳಿ ಹಾಗೂ ವಕೀಲ ಎಂ. ಜಯ ಮೊವಿಲ್ ವಾದ ಮಂಡಿಸಿದರು. ವಿಚಾರಣೆಯನ್ನು ಇದೇ 12ಕ್ಕೆ ಮುಂದೂಡಲಾಗಿದೆ.


ಐಮಾ ಅಗ್ರಿಮ್ಯಾಕ್ 7ನೇ ಆವೃತ್ತಿಯ ಪ್ರದರ್ಶನದಲ್ಲಿರುವ ಆಧುನಿಕ ಕೃಷಿ ಯಂತ್ರೋಪಕರಣವನ್ನು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಸಚಿವರಾದ ಮುರುಗೇಶ ನಿರಾಣಿ, ಮುನಿರತ್ನ ವೀಕ್ಷಿಸಿದರು

ಬೆರಳೆಣಿಕೆಯಷ್ಟು ರೈತರಿಗಷ್ಟೆ ಸಬ್ಸಿಡಿ ಸೌಲಭ್ಯ: ಕರಂದ್ಲಾಜೆ

ಬೆಂಗಳೂರು: ‘ಕೇಂದ್ರ ಮತ್ತು ರಾಜ್ಯ ಸರ್ಕಾರ ಕೃಷಿ ಯಂತ್ರೋಪಕರಣ ಖರೀದಿಗೆ ನೀಡುವ ಸಬ್ಸಿಡಿ ಸೌಲಭ್ಯ ಬೆರಳೆಣಿಕೆಯಷ್ಟು ರೈತರಿಗೆ ಮಾತ್ರ ದೊರೆಯುತ್ತದೆ’ ಎಂದು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯ, ಕರ್ನಾಟಕ ಸರ್ಕಾರ, ಭಾರತೀಯ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ ಒಕ್ಕೂಟ (ಎಫ್‌ಐಸಿಸಿಐ) ಮತ್ತು ಫೆಡರ್ ಅನಾಕೋಮಾ ಸಹಭಾಗಿತ್ವದಲ್ಲಿ ‘ಐಮಾ ಅಗ್ರಿಮ್ಯಾಕ್ ಇಂಡಿಯಾ 7ನೇ ಆವೃತ್ತಿಯ ಪ್ರದರ್ಶನ’ ಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ‘ದೇಶದಲ್ಲಿ ಶೇ 80ರಷ್ಟು ಸಣ್ಣ ಮತ್ತು ಮಧ್ಯಮ ರೈತರಿದ್ದಾರೆ. ಅವರಿಗೆ ಕೈಗೆಟಕುವ ದರದಲ್ಲಿ ಆಧುನಿಕ ಕೃಷಿ ಯಂತ್ರೋಪಕರಣ ಲಭ್ಯವಾಗಬೇಕು’ ಎಂದು ತಿಳಿಸಿದರು.

‘ರೈತರು ಬೆಳೆದಂತಹ ಉತ್ಪನ್ನಗಳನ್ನು ದ್ವಿಗುಣಗೊಳಿಸುವ ಯಂತ್ರೋಪಕ-ರಣಗಳನ್ನು ಬಳಸಬೇಕು. ಮಧ್ಯವರ್ತಿಗಳ ಹಾವಳಿ ತಪ್ಪಿಸಿ ನಾವೇ ಉತ್ಪನ್ನಗಳ-ನ್ನು ತಯಾರಿಸಬೇಕು’ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವ ಮುರುಗೇಶ ನಿರಾಣಿ ಹೇಳಿದರು.

20 ದೇಶಗಳ 100ಕ್ಕೂ ಹೆಚ್ಚು ಪ್ರದರ್ಶಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು, ಸೆಪ್ಟೆಂಬರ್ 3ರವರೆಗೆ ಈ ಪ್ರದರ್ಶನ ನಡೆಯಲಿದೆ.

ತೋಟಗಾರಿಕೆ ಸಚಿವ ಮುನಿರತ್ನ, ರಾಜ್ಯದ ಎಫ್‌ಐಸಿಸಿಐ ಕೌನ್ಸಿಲ್ ಅಧ್ಯಕ್ಷ ಉಲ್ಲಾಸ್ ಕಾಮತ್, ಎಫ್‌ಐಸಿಸಿಐ ಕೃಷಿ ಸಮಿತಿಯ ಅಧ್ಯಕ್ಷ ಟಿ.ಆರ್. ಕೇಶವನ್, ಕೃಷಿ ವಿ.ವಿ. ಕುಲಪತಿ ರಾಜೇಂದ್ರ ಪ್ರಸಾದ್, ಕೃಷಿ ಇಲಾಖೆ ರಾಜ್ಯ ಕಾರ್ಯದರ್ಶಿ ಶಿವಯೋಗಿ ಕಳಸದ ಇದ್ದರು.

30ಕಿ.ಮೀ ಕಾಲುವೆಯಲ್ಲಿ ಹೂಳು • 75 ಕೆರೆಗಳಿಗೆ ಏತ ನೀರಾವರಿ ಮೂಲಕ ನೀರು • ಶೇ 98ರಷ್ಟು ಹಣ ಪಾವತಿ

ರಾಜಕಾಲುವೆ ಒತ್ತುವರಿ: ನಿಂತ ಕಾಮಗಾರಿ

• ಆರ್. ಮಂಜುನಾಥ್

ಬೆಂಗಳೂರು: ನಗರ ಜಿಲ್ಲೆಯ ಪೂರ್ವ, ಆನೇಕಲ್ ತಾಲ್ಲೂಕು ಹಾಗೂ ರಾಮನಗರ ಜಿಲ್ಲೆಯ ಕನಕಪುರದಲ್ಲಿ 75 ಕೆರೆಗಳನ್ನು ಏತ ನೀರಾವರಿ ಮೂಲಕ ತುಂಬುವ ಯೋಜನೆಗೆ ಶೇ 98ರಷ್ಟು ಹಣ ಗುತ್ತಿಗೆದಾರರಿಗೆ ಪಾವತಿಯಾಗಿದ್ದರೂ ಕಾಮಗಾರಿ ಸ್ಥಗಿತಗೊಂಡಿದೆ. ಇದಕ್ಕೆ ಕಾರಣ, 30 ಕಿ.ಮೀಗೂ ಹೆಚ್ಚು ಉದ್ದದ ರಾಜಕಾಲುವೆ ಒತ್ತುವರಿ.

ಸಣ್ಣ ನೀರಾವರಿ ಇಲಾಖೆ ಯೋಜನೆಯ ಒಪ್ಪಂದದ ಪ್ರಕಾರ 15 ತಿಂಗಳಲ್ಲಿ ಕಾಮಗಾರಿ ಮುಗಿದು, ನಂತರದ ಐದು ವರ್ಷ ನಿರ್ವಹಣೆ ಮಾಡಬೇಕಿತ್ತು. ಯೋಜನೆ ಆರಂಭವಾಗಿ ಐದು ವರ್ಷ ಕಳೆದರೂ ಘಟಕ ಹಾಗೂ ಪೈಪ್‌ಲೈನ್ ಕೆಲಸ ಭಾಗಶಃ ಮಾತ್ರ ಮುಗಿದಿದೆ. ಈವರೆಗೆ ತುಂಬಿರುವುದು 27 ಕೆರೆಗಳು ಮಾತ್ರ. ಉಳಿದ ಕೆರೆಗಳಿಗೆ ನೀರು ಹರಿಯಲು ರಾಜಕಾಲುವೆ ಒತ್ತುವರಿಯಾಗಬೇಕು. ಇದಕ್ಕೆ ಅಧಿಕಾರಿಗಳು ಕ್ರಮ ಕೈಗೊಂಡಿಲ್ಲ. ಆದರೆ ಗುತ್ತಿಗೆದಾರ ಸಂಸ್ಥೆ ಮೆಘಾ ಎಂಜಿನಿಯರಿಂಗ್ ಆ್ಯಂಡ್ ಇನ್‌ಫ್ರಾಸ್ಟ್ರಕ್ಚರ್‌ಗೆ ಬಹುತೇಕ ಹಣ ಪಾವತಿ ಮಾಡಲಾಗಿದೆ.

ನಗರದ ಕೋರಮಂಗಲ–ಚಲ್ಲಘಟ್ಟ ಕಣಿವೆಯ ಒಳಚರಂಡಿ ನೀರನ್ನು ಸಂಸ್ಕರಿಸಿ ಪ್ರತಿ ದಿನ 120 ದಶಲಕ್ಷ ಲೀಟರ್ ನೀರು ಹರಿಸುವ ಯೋಜನೆಯಲ್ಲಿ ರಸ್ತೆಯಲ್ಲಿ ಪೈಪ್‌ಲೈನ್ ಕಾಮಗಾರಿ ಪೂರ್ಣಗೊಂಡಿದೆ. ಈ ಕೆರೆಗಳಿಗೆ ನೀರೂ ತಲುಪುತ್ತಿದೆ. ಆದರೆ ಅಲ್ಲಿಂದ ನೀರು ಮುಂದಿನ ಕೆರೆಗೆ ಹೋಗುತ್ತಿಲ್ಲ. ರಾಜಕಾಲುವೆ ಒತ್ತುವರಿಯಾಗಿರುವುದರಿಂದ ಜಮೀನುಗಳಿಗೆ ತುಂಬಿಕೊಳ್ಳುತ್ತಿದೆ. ಮನೆಗಳತ್ತ ಹೋಗುತ್ತಿದೆ.

ಕಲ್ಮಶವಾಗುತ್ತಿದೆ ಸಂಸ್ಕರಿತ ನೀರು

ಮುತ್ತಾನಲ್ಲೂರು ಕೆರೆಗೆ ಸಂಸ್ಕರಿತ ನೀರು ಪಂಪ್ ಆಗುತ್ತಿದೆ. ಆದರೆ, ಈ ಕೆರೆಗೆ ಚಂದಾಪುರ ಕೆರೆಯಿಂದ ಕಲ್ಮಶ ನೀರು ಬಂದು ಸೇರುತ್ತಿದೆ. ಹೀಗಾಗಿ ಈ ಸಂಸ್ಕರಿತ ನೀರು ಮತ್ತೆ ಕಲ್ಮಶವಾಗಿ ಕೆರೆಗಳಿಗೆ ಹರಿಯುತ್ತಿರುವುದು ಯೋಜನೆಯ ವೈಫಲ್ಯ ಎಂಬುದು ಸ್ಥಳೀಯರ ಆರೋಪ.

‘ಚಂದಾಪುರ ಕೆರೆ ನಮ್ಮ ಯೋಜನೆಯಲ್ಲಿಲ್ಲ. ಆದರೂ ಅದನ್ನು ಸ್ವಚ್ಛಗೊಳಿಸದ ಹೊರತು ಯೋಜನೆ ಪೂರ್ಣವಾಗುವುದಿಲ್ಲ ಎಂಬುದನ್ನು ಅರಿತು ಚಂದಾಪುರ ಕೆರೆ ಅಭಿವೃದ್ಧಿಗೆ ಯೋಜನೆ ರೂಪಿಸಲಾಗುತ್ತಿದೆ’ ಎಂದು ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳು ಹೇಳಿದರು.

ಎಲ್ಲೆಲ್ಲಿ ಎಷ್ಟು ಕೆರೆ?

ತಾಲ್ಲೂಕು	ಒಟ್ಟು ಕೆರೆ	ತುಂಬಿರುವ ಕೆರೆ
ಬೆಂಗಳೂರು ಪೂರ್ವ	4	2
ಆನೇಕಲ್	69	25
ಕನಕಪುರ	2	0
ಒಟ್ಟು	75	27




ಗಟ್ಟಹಳ್ಳಿ ಕೆರೆಯಿಂದ ಹುಸ್ಕೂರು ಕೆರೆವರೆಗಿನ ರಾಜಕಾಲುವೆ ಒತ್ತುವರಿ (2.07 ಕಿ.ಮೀ.)

- **10ನೇ ಜುಲೈ, 2017** ಯೋಜನೆ ಆರಂಭ
- **₹260.61 ಕೋಟಿ** ಯೋಜನೆ ವೆಚ್ಚ
- **₹238.64 ಕೋಟಿ** ಗುತ್ತಿಗೆದಾರರಿಗೆ ಪಾವತಿ
- **97.09 ಕಿ.ಮೀ** ರಸ್ತೆಯಲ್ಲಿ ಪೈಪ್‌ಲೈನ್

ರಾಜಕಾಲುವೆ ವಿವರ (ಕಿ.ಮೀನಲ್ಲಿ)

ಒಟ್ಟು ಉದ್ದ	ಲಭ್ಯ ಕಾಲುವೆ	ಒತ್ತುವರಿ
45.87	15.19	30.67

ಪ್ರಜಾವಾಣಿ ವಿಶೇಷ



ತೆರವು ಕಾರ್ಯ ಶೀಘ್ರ

‘ಒತ್ತುವರಿ ತೆರವಿಗೆ ತಹಶೀಲ್ದಾರ್, ಸರ್ವೆ ಇಲಾಖೆ, ಜಿಲ್ಲಾಧಿಕಾರಿಯವರಿಗೆ ಮನವಿ ಮಾಡಿದ್ದೇವೆ. ಕಾಮಗಾರಿ ಆರಂಭಿಸುವಾಗ ಸಹಕಾರ ನೀಡುವುದಾಗಿ ಹೇಳಿದ್ದಾರೆ. ಕೆರೆ ತುಂಬಿ ಹೋಗಿ, ಜಮೀನಿಗೆ ನೀರು ಹೋಗುತ್ತಿದೆ. ಕೆಲವರು ತೆರವು ಮಾಡಿ ಎಂದರೆ, ಹಲವರು ನಮ್ಮ ಜೀವನ ಹಾಳು ಮಾಡಬೇಡಿ ಎನ್ನುತ್ತಿದ್ದಾರೆ. ಆದ್ದರಿಂದ ಪೊಲೀಸರ ರಕ್ಷಣೆ ಪಡೆದು ತೆರವು ಕಾರ್ಯ ಆರಂಭಿಸಲಾಗುತ್ತದೆ’ ಎಂದು ಸಣ್ಣ ನೀರಾವರಿ ಇಲಾಖೆ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ನಾಗರಾಜ್ ತಿಳಿಸಿದರು.

‘ಟರ್ನ್‌ಕೀ ಪ್ರಾಜೆಕ್ಟ್ ಇದು. ಎಷ್ಟೇ ಕೆಲಸ ಉಳಿದರೂ ಹಣ ಹೆಚ್ಚು ಕೇಳುವಂತಿಲ್ಲ. ಗುತ್ತಿಗೆದಾರರು ಪೂರ್ಣ ಕೆಲಸ ಮಾಡಬೇಕು ಅಷ್ಟೇ. ಅಲ್ಲದೆ, ಯೋಜನೆ ಮುಗಿದ ಐದು ವರ್ಷ ಅವರದ್ದೇ ನಿರ್ವಹಣೆ ಇರುತ್ತದೆ. ಪೈಪ್‌ಲೈನ್ ಒಡೆದುಹೋದರೆ, ರಾಜಕಾಲುವೆಯಲ್ಲಿ ಮಣ್ಣು ಸುರಿದರೂ ಗುತ್ತಿಗೆದಾರರೇ ದುರಸ್ತಿಮಾಡಬೇಕು. ಬೆಳ್ಳಂದೂರಿನಿಂದ ಗಟ್ಟಹಳ್ಳಿ ಕೆರೆವರೆಗೆ ಏತ ನೀರಾವರಿ ಯೋಜನೆ 2021ರ ಆಗಸ್ಟ್‌ನಿಂದ ಆರಂಭವಾಗಿದೆ. ಮುತ್ತಾನಲ್ಲೂರಿನಿಂದ ಆನೇಕಲ್, ಜಿಗಣಿ ಕಡೆಗೆ ಜುಲೈನಲ್ಲಿ ಅನುಷ್ಠಾನ ಪೂರ್ಣಗೊಂಡಿದೆ’ ಎಂದರು.

ಹಂತ	ಒಟ್ಟು ಕೆರೆ	ತುಂಬಿರುವ ಕೆರೆ
ಲಿಫ್ಟ್–1	43	20
ಲಿಫ್ಟ್–2ಎ	13	0
ಲಿಫ್ಟ್–2ಬಿ	19	7
ಒಟ್ಟು	75	27

ಅರಣ್ಯಕ್ಕೆ ಕಲುಷಿತ ನೀರು!

ಕೆ.ಸಿ. ವ್ಯಾಲಿಯಿಂದ ರಾಮನಗರದ ಎರಡು ಕೆರೆಗಳ ಮೂಲಕ ಮುಂದಿನ ಕೆರೆಗಳನ್ನು ತುಂಬುವ ಈ ಯೋಜನೆ ಅನುಷ್ಠಾನವಾಗಲು ಅರಣ್ಯದ ಮೂಲಕ ನೀರು ಹರಿಯಬೇಕು. ಬನ್ನೇರುಘಟ್ಟ ಅರಣ್ಯ ಪ್ರದೇಶ ರಾಗಿಹಳ್ಳಿ ಗೇಟ್‌ನಲ್ಲಿ ಯೋಜನೆಯ ಪೈಪ್‌ಲೈನ್ ಅಂತ್ಯವಾಗಿ ಅಲ್ಲಿಂದ ನೀರು ಹರಿದು ಕನಕಪುರದ ರಾವುತನಹಳ್ಳ ಹಾಗೂ ಮಾವತ್ತೂರು ಕೆರೆಗಳಿಗೆ ಹರಿಯಬೇಕು. ಆದರೆ, ‘ಸಂಸ್ಕರಿತ ನೀರು ಗುಣಮಟ್ಟದಲ್ಲಿಲ್ಲ. ಇಂತಹ ನೀರನ್ನು ಅರಣ್ಯಕ್ಕೆ ಹರಿಸುವಂತಿಲ್ಲ. ಗುಣಮಟ್ಟ ಪರೀಕ್ಷೆ ಮಾಡಿಸಿಕೊಂಡು, ಅರಣ್ಯ ಇಲಾಖೆಯ ಕೇಂದ್ರ ಕಚೇರಿಯ ಸಮ್ಮತಿ ಪಡೆದು ನೀರು ಹರಿಸಿ’ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಹೇಳಿದ್ದಾರೆ. ಹೀಗಾಗಿ ರಾಜ್ಯಮಟ್ಟದ ಅರಣ್ಯ ಇಲಾಖೆ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಯುತ್ತಿದೆ ಎಂದು ನಾಗರಾಜ್ ತಿಳಿಸಿದರು.

ಸುದ್ದಿ 2 ನಿಮಿಷ

ಒತ್ತುವರಿ: ಶ್ವೇತಪತ್ರಕ್ಕೆ ಎಚ್‌ಡಿಕೆ ಆಗ್ರಹ

ಬೆಂಗಳೂರು: ರಾಜಧಾನಿ ವ್ಯಾಪ್ತಿಯಲ್ಲಿ ಕೆರೆ, ರಾಜಕಾಲುವೆಗಳನ್ನು ಒತ್ತುವರಿ ಮಾಡಿರುವವರ ಕುರಿತು ಶ್ವೇತಪತ್ರ ಪ್ರಕಟಿಸಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಆಗ್ರಹಿಸಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, ‘ನಗರದಲ್ಲಿ ಒತ್ತುವರಿ ಸಮಸ್ಯೆಗೆ ಹಿಂದಿನ ಮುಖ್ಯಮಂತ್ರಿಗಳು ಕಾರಣ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಭೂಗಳ್ಳರಿಗೆ ನನ್ನಿಂದ ಸಹಾಯ ಆಗಿದೆ ಎಂಬುದನ್ನು ತೋರಿಸಿದರೆ ರಾಜಕೀಯ ನಿವೃತ್ತಿ ಪಡೆಯುತ್ತೇನೆ’ ಎಂದರು.



‘ಕಾಂಗ್ರೆಸ್ ಬಗ್ಗೆ ಅವರು ಏನು ಬೇಕಾದರೂ ಮಾತನಾಡಲಿ. ನನ್ನ ಬಗ್ಗೆ ಮಾತನಾಡುವಾಗ ಎಚ್ಚರಿಕೆಯಿಂದ ಇದ್ದರೆ ಉತ್ತಮ. ರಾಜಕಾಲುವೆ ಅಭಿವೃದ್ಧಿಗೆ ಸಾವಿರಾರು ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇನೆ ಎಂದು ಮುಖ್ಯಮಂತ್ರಿ ಹೇಳುತ್ತಾರೆ. ಹಾಗಾದರೆ ಆ ಹಣ ಯಾರ ಮನೆಗೆ ಹೋಯಿತು? ಧೈರ್ಯ ಇದ್ದರೆ ಒತ್ತುವರಿ ಮಾಡಿಕೊಂಡವರ ಹೆಸರುಗಳನ್ನು ಬಹಿರಂಗ ಮಾಡಲಿ. ಬೆಂಗಳೂರಿನಲ್ಲಿ ಕೆರೆ, ರಾಜಕಾಲುವೆ ಒತ್ತುವರಿದಾರರು ಯಾರು ಎನ್ನುವುದು ಜನರಿಗೂ ಗೊತ್ತಾಗಲಿ’ ಎಂದು ಹೇಳಿದರು.

ಕೆಂಪೇಗೌಡರ ಹೆಸರಿನಲ್ಲಿ ಪ್ರಚಾರ ಪಡೆಯಲು ಬಿಜೆಪಿ ಯತ್ನಿಸುತ್ತಿದೆ. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಮಣ್ಣು ಸಂಗ್ರಹ ಮಾಡಿ ಥೀಮ್ ಪಾರ್ಕ್ ಮಾಡುವುದಾಗಿ ಹೇಳುತ್ತಿದ್ದಾರೆ. ಮಳೆಯಿಂದ ಸಮಸ್ಯೆಯಲ್ಲಿರುವ ಜನರಿಗೆ ಮೊದಲು ಪರಿಹಾರ ಒದಗಿಸಲಿ ಎಂದರು.

9 ಕಾರುಗಳು ಜಪ್ತಿ: ಇಬ್ಬರ ಸೆರೆ

ಬೆಂಗಳೂರು: ಹೊರ ರಾಜ್ಯಗಳಲ್ಲಿ ಕದ್ದ ಕಾರುಗಳನ್ನು ನಗರಕ್ಕೆ ತಂದು ಮಾರುತ್ತಿದ್ದ ಇಬ್ಬರು ಆರೋಪಿಗಳನ್ನು ಅಶೋಕನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಪಾದರಾಯನಪುರದ ಅಯಾಜ್ ಪಾಷಾ ಅಲಿಯಾಸ್ ಮೌಲಾ (33) ಹಾಗೂ ಕಸ್ತೂರಬಾ ನಗರದ ಮತೀನ್‌ವುದ್ದೀನ್ ಅಲಿಯಾಸ್ ಮತೀನ್ (32) ಬಂಧಿತರು. ಇವರಿಂದ ₹ 1.20 ಕೋಟಿ ಮೌಲ್ಯದ 9 ಕಾರುಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಕೃತ್ಯದಲ್ಲಿ ಭಾಗಿಯಾಗಿದ್ದ ಸೈಯದ್ ಸಮೀರ್, ಡೆಲ್ಲಿ ಇಮ್ರಾನ್, ತನ್ನು ಅಲಿಯಾಸ್ ತನ್ವೀರ್ ಹಾಗೂ ಯಾರಬ್ ಎಂಬುವರು ತಲೆಮರೆಸಿಕೊಂಡಿದ್ದಾರೆ. ಅವರ ಪತ್ತೆಗೆ ವಿಶೇಷ ತಂಡ ತನಿಖೆ ಮುಂದುವರಿಸಿದೆ’ ಎಂದೂ ತಿಳಿಸಿದರು.

‘ದೆಹಲಿ, ಪಂಜಾಬ್, ಹಿಮಾಚಲ ಪ್ರದೇಶ, ಉತ್ತರ ಪ್ರದೇಶ ಸೇರಿ ವಿವಿಧ ರಾಜ್ಯಗಳಿಗೆ ಆಗಾಗ ಆರೋಪಿಗಳು ಹೋಗುತ್ತಿದ್ದರು. ಐಷಾರಾಮಿ ಕಾರುಗಳನ್ನು ಗುರುತಿಸಿ ಕಳ್ಳತನ ಮಾಡಿಕೊಂಡು ಬೆಂಗಳೂರಿಗೆ ತರುತ್ತಿದ್ದರು. ‘ಕದ್ದ ಕಾರುಗಳ ನೋಂದಣಿ ಸಂಖ್ಯೆ ಬದಲಿಸಿ ನಕಲಿ ದಾಖಲೆಗಳನ್ನು ಸೃಷ್ಟಿಸುತ್ತಿದ್ದರು. ಅಂಥ ಕಾರುಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡಿ ಹಣ ಸಂಪಾದನೆ ಮಾಡುತ್ತಿದ್ದರು. ತನಿಖೆ ಕೈಗೊಂಡಾಗ ಆರೋಪಿಗಳು ಸಿಕ್ಕಿಬಿದ್ದರು’ ಎಂದು ಹೇಳಿದರು.

ಮೋದಿ ಜನ್ಮದಿನ: 5 ಲಕ್ಷ ಜನರಿಂದ ಯೋಗಾಥಾನ್

ಬೆಂಗಳೂರು: ರೋಗ ಮುಕ್ತ ಕರ್ನಾಟಕ ಹಾಗೂ ಪ್ರಧಾನಿ ಮೋದಿ ಅವರ ಜನ್ಮದಿನದ ಪ್ರಯುಕ್ತ ಸೆ. 17ರಂದು ಯೋಗಾಥಾನ್ ಹಮ್ಮಿಕೊಳ್ಳಲಾಗಿದ್ದು, ಏಕಕಾಲದಲ್ಲಿ ಐದು ಲಕ್ಷ ಜನರು ಭಾಗವಹಿಸುವರು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಡಾ. ನಾರಾಯಣಗೌಡ ಹೇಳಿದರು.

ರಾಜ್ಯದ ಜಿಲ್ಲಾಧಿಕಾರಿಗಳು, ಸಿಇಒಗಳ ಜತೆ ಶುಕ್ರವಾರ ವಿಡಿಯೊ ಸಂವಾದ ನಡೆಸಿದ ಅವರು, ಸೆ.17ರಂದು ನಡೆಯಲಿರುವ ಯೋಗಾಥಾನ್ ಕಾರ್ಯಕ್ರಮದ ಪೂರ್ವ ಸಿದ್ಧತೆ ಬಗ್ಗೆ ಮಾಹಿತಿ ಪಡೆದುಕೊಂಡರು. ಯೋಗಾಥಾನ್ ಗಿನ್ನೆಸ್ ದಾಖಲೆ ನಿರೀಕ್ಷೆ ಇದ್ದು, ಸಿದ್ಧತೆ ಮಾಡಿಕೊಳ್ಳುವಂತೆ ಸೂಚಿಸಿದರು.

ಸ್ವಾಮಿ ವಿವೇಕಾನಂದ ಯುವ ಸ್ವಸಹಾಯ ಸಂಘಗಳನ್ನು ಪ್ರತಿ ಗ್ರಾಮ ಪಂಚಾಯತಿಯಲ್ಲೂ ರಚಿಸಬೇಕು. ಸಂಘ ನೋಂದಣಿಯಾದ ತಕ್ಷಣ ₹ 10 ಸಾವಿರ ಬಿಡುಗಡೆ ಮಾಡಲಾಗುವುದು. ನರೇಗಾ ಮೂಲಕ ₹ 504 ಕೋಟಿ ವೆಚ್ಚದಲ್ಲಿ ಕ್ರೀಡಾ ಅಂಕಣಗಳನ್ನು ನಿರ್ಮಿಸಲು ಸೂಚಿಸಲಾಗಿದೆ. ಗ್ರಾಮೀಣ ಪ್ರತಿಭೆಗಳಿಗೆ ಸೂಕ್ತ ತರಬೇತಿ ಸಿಗಬೇಕು ಎನ್ನುವುದು ಸರ್ಕಾರದ ಆಶಯ ಎಂದರು.

ಚಿತ್ರಾವಳಿ



ಶಿಕ್ಷಣ ಇಲಾಖೆ ಹಾಗೂ ಕೊಡಿಗೆಹಳ್ಳಿಯ ನ್ಯೂ ಹಾರ್ಡ್ವಿಕ್ ಇಂಡಿಯನ್ ಸ್ಕೂಲ್ ಆಯೋಜಿಸಿದ್ದ ಉಳ್ಳಾಲ ಕ್ಲಸ್ಟರ್ ಮಟ್ಟದ ಮಕ್ಕಳ ಪ್ರತಿಭಾ ಕಾರಂಜಿ ಕಾರ್ಯಕ್ರಮವನ್ನು ಸಚಿವ ಎಸ್‌.ಟಿ. ಸೋಮಶೇಖರ್ ಉದ್ಘಾಟಿಸಿದರು. ಕಾರ್ಯದರ್ಶಿ ಕೆ.ಕೆ. ಪೂರ್ಣ ಇದ್ದರು.



ನಗರದ ಸೆಂಟ್ರಲ್ ಕಾಲೇಜಿನಲ್ಲಿ ನಡೆದ ಪದವಿ ತರಗತಿಯ ಮೊದಲ ಸೆಮಿಸ್ಟರ್ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮದಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಲಿಂಗರಾಜ ಗಾಂಧಿ, ಕುಲಸಚಿವ ಸಿ.ಎನ್. ಶ್ರೀಧರ್, ಕುಲಸಚಿವ (ಮೌಲ್ಯಮಾಪನ) ಡಾ.ವಿ. ಲೋಕೇಶ್, ಹಣಕಾಸು ಅಧಿಕಾರಿ ಜೆ.ಪಿ. ರಘು ಪಾಲ್ಗೊಂಡಿದ್ದರು



ನಗರದ ಜವಾಹರ್‌ಲಾಲ್ ನೆಹರು ತಾರಾಲಯದಲ್ಲಿ ಶುಕ್ರವಾರ ವಿದ್ಯಾರ್ಥಿಗಳು ವಿಜ್ಞಾನ ಮಾದರಿಗಳನ್ನು ಪ್ರದರ್ಶಿಸಿದರು. ಇದೇ 4ರವರೆಗೆ ಈ ಪ್ರದರ್ಶನ ನಡೆಯಲಿದೆ –ಪ್ರಜಾವಾಣಿ ಚಿತ್ರ

ರಾಜ್ಯದಾದ್ಯಂತ ರಾಜಕಾಲುವೆ ಒತ್ತುವರಿ ತೆರವು: ಬೈರತಿ

ಬೆಂಗಳೂರು: ರಾಜ್ಯದ ಎಲ್ಲ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲೂ ರಾಜಕಾಲುವೆಗಳ ಒತ್ತುವರಿ ತೆರವಿಗೆ ಕಾರ್ಯಾಚರಣೆ ನಡೆಸಲಾಗುವುದು ಎಂದು ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಹೇಳಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, ‘ಪ್ರಭಾವಿ ವ್ಯಕ್ತಿಗಳು, ಕಂಪನಿಗಳು, ಬಿಲ್ಡರ್‌ಗಳು ರಾಜಕಾಲುವೆಗಳನ್ನು ಒತ್ತುವರಿ ಮಾಡಿರುವುದರಿಂದ ನಗರಗಳಲ್ಲಿ ದೊಡ್ಡ ಸಮಸ್ಯೆ ಸೃಷ್ಟಿಯಾಗುತ್ತಿದೆ. ನಗರಗಳಲ್ಲಿ ಮಳೆ ನೀರು ತುಂಬಿಕೊಂಡು ಜನರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಒತ್ತುವರಿದಾರರು ಎಷ್ಟೇ ಪ್ರಭಾವಿಗಳಾಗಿದ್ದರೂ ಮಣಿಯದೆ ತೆರವು ಮಾಡಲಾಗುವುದು’ ಎಂದರು.

ಮಳೆಗಾಲ ಮುಗಿದ ತಕ್ಷಣವೇ ರಾಜಕಾಲುವೆ ಒತ್ತುವರಿ ತೆರವು ಕಾರ್ಯಾಚರಣೆ ಆರಂಭಿಸಲಾಗುವುದು. ಇದಕ್ಕಾಗಿ ಎಲ್ಲ ಮಹಾನಗರ ಪಾಲಿಕೆಗಳಿಗೂ ವಿಶೇಷ ಅನುದಾನ ಒದಗಿಸಲಾಗಿದೆ. ರಾಜಕಾಲುವೆಗಳ ಒತ್ತುವರಿ ಕುರಿತು ವರದಿ ಸಲ್ಲಿಸುವಂತೆ ಬಿಬಿಎಂಪಿ ಹೊರತುಪಡಿಸಿ ರಾಜ್ಯದ ಹತ್ತು ಮಹಾನಗರ ಪಾಲಿಕೆಗಳ ಆಯುಕ್ತರಿಗೆ ಪತ್ರ ಬರೆಯಲಾಗಿದೆ ಎಂದು ತಿಳಿಸಿದರು.

ಮಳೆಯಿಂದ ಯಾವ ಪ್ರದೇಶಗಳಲ್ಲಿ ಹೆಚ್ಚಿನ ಹಾನಿ ಸಂಭವಿಸಿದೆ ಎಂಬ ಮಾಹಿತಿ ಸರ್ಕಾರದ ಬಳಿ ವರದಿ ಇದೆ. ಮಹಾನಗರ ಪಾಲಿಕೆಗಳ ಆಯುಕ್ತರು ನೀಡುವ ವರದಿಯನ್ನು ಆಧರಿಸಿ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಲಾಗುವುದು. ಒತ್ತುವರಿಯಿಂದ ಸಾರ್ವಜನಿಕರಿಗೆ ತೊಂದರೆ ಆಗದಿರುವಂತಹ ಪ್ರಕರಣಗಳಲ್ಲಿ ತಕ್ಷಣವೇ ತೆರವು ಕಾರ್ಯಾಚರಣೆ ನಡೆಸುವುದಿಲ್ಲ ಎಂದರು.

‘ಬೆಂಗಳೂರನ್ನು ಕಾಪಾಡಿ’ ಎಂದು ಉದ್ಯಮಿ ಟಿ.ವಿ. ಮೋಹನದಾಸ್ ಪೈ ಮಾಡಿದ್ದ ಟ್ವೀಟ್ ಕುರಿತು ಪ್ರತಿಕ್ರಿಯಿಸಿದ ಸಚಿವರು, ‘ದೊಡ್ಡ ದೊಡ್ಡ ಕಂಪನಿಗಳೇ ರಾಜಕಾಲುವೆ ಒತ್ತುವರಿ ಮಾಡಿಕೊಂಡಿವೆ. ಒತ್ತುವರಿದಾರರೇ ಆಡಳಿತದ ವಿರುದ್ಧ ಪ್ಲೆಕಾರ್ಡ್ ಹಿಡಿದು ಪ್ರತಿಭಟನೆಯನ್ನೂ ನಡೆಸುತ್ತಾರೆ. ಇದನ್ನು ಮೋಹನ ದಾಸ್ ಪೈ ಅವರಂತಹ ಉದ್ಯಮಿಗಳು ಅರ್ಥ ಮಾಡಿಕೊಳ್ಳಬೇಕು’ ಎಂದು ಹೇಳಿದರು.

ಬ್ರಿಟನ್: ಪ್ರಧಾನಿ ಆಯ್ಕೆಗೆ ಮತದಾನ ಅಂತ್ಯ

ಲಂಡನ್ (ಪಿಟಿಐ): ಟೋರಿ ಪಕ್ಷದ ಮುಖ್ಯಸ್ಥ ಹಾಗೂ ಬ್ರಿಟನ್ ಪ್ರಧಾನಿ ಆಯ್ಕೆಗಾಗಿ ಪಕ್ಷದ ಕಾರ್ಯಕರ್ತರಿಂದ ನಡೆದ ಮತ ಚಲಾವಣೆ ಪ್ರಕ್ರಿಯೆ ಶುಕ್ರವಾರ ಮುಕ್ತಾಯಗೊಂಡಿದೆ.

ಸೆ. 5ರಂದು ಮತ ಎಣಿಕೆ ನಡೆಯಲಿದ್ದು, ಕಣದಲ್ಲಿರುವ ಮಾಜಿ ಸಚಿವ ರಿಷಿ ಸುನಕ್ ಹಾಗೂ ವಿದೇಶಾಂಗ ಕಾರ್ಯದರ್ಶಿ ಲಿಜ್ ಟ್ರಸ್ ಪೈಕಿ ಯಾರು ಅಧಿಕಾರದ ಗದ್ದುಗೆ ಏರಲಿದ್ದಾರೆ ಎಂಬುದು ಅಂದು ಬಹಿರಂಗವಾಗಲಿದೆ.

‘ಕಳೆದ ಒಂದು ತಿಂಗಳಿನಿಂದ ಮತ ಚಲಾಯಿಸುವ ಪ್ರಕ್ರಿಯೆ ನಡೆದಿದೆ. ಟೋರಿ ಪಕ್ಷದ 1.60 ಲಕ್ಷದಷ್ಟು ಸದಸ್ಯರು ತಮ್ಮ ಹಕ್ಕು ಚಲಾಯಿಸಿದ್ದಾರೆ. ಸೋಮವಾರ ಮಧ್ಯಾಹ್ನ 12.30ರ ವೇಳೆ ಫಲಿತಾಂಶವನ್ನು ಪ್ರಕಟಿಸಲಾಗುವುದು’ ಎಂದು ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿರುವ ಪಕ್ಷದ ಮುಖಂಡ ಸರ್ ಗ್ರಹಾಂ ಬ್ರ್ಯಾಡಿ ತಿಳಿಸಿದ್ದಾರೆ.

‘ಈ ಚುನಾವಣೆಗೆ ವ್ಯಾಪಕ ಪ್ರತಿಕ್ರಿಯೆ ವ್ಯಕ್ತವಾಗಿದೆ. ಪಕ್ಷದ ಬಲಪ್ರದರ್ಶನಕ್ಕೂ ಇದು ಈ ಚುನಾವಣೆ ವೇದಿಕೆಯಾಗಿತ್ತು’ ಎಂದು ಪಕ್ಷದ ಅಧ್ಯಕ್ಷ ಆ್ಯಂಡ್ರ್ಯೂ ಸ್ಟೀಫನ್‌ಸನ್ ಹೇಳಿದ್ದಾರೆ.

‘ರಿಷಿ ಸುನಕ್ ಹಾಗೂ ಲಿಜ್ ಟ್ರಸ್ ಅವರು ಬಹಳ ಉತ್ಸಾಹದಿಂದಲೇ ಈ ಚುನಾವಣೆಯಲ್ಲಿ ಪಾಲ್ಗೊಂಡಿದ್ದು, ಅವರಿಗೆ ಧನ್ಯವಾದ ಹೇಳುತ್ತೇನೆ. ಹಲವಾರು ವಿಷಯಗಳ ಬಗ್ಗೆ ಕಾರ್ಯಕರ್ತರು 600ಕ್ಕೂ ಹೆಚ್ಚು ಪ್ರಶ್ನೆಗಳನ್ನು ಕೇಳಿದ್ದರು. ಅಭ್ಯರ್ಥಿಗಳಿಬ್ಬರೂ ಈ ಪ್ರಶ್ನೆಗಳಿಗೆ ಉತ್ತರಿಸಿದರು’ ಎಂದು ಹೇಳಿದ್ದಾರೆ.

‘ಸೋಮವಾರ ಫಲಿತಾಂಶ ಪ್ರಕಟವಾಗಲಿದೆ. ನೂತನ ನಾಯಕನ ಮುಂದಾಳತ್ವದಲ್ಲಿ ನಾವು ಹೆಜ್ಜೆ ಹಾಕಲು ಸಿದ್ಧರಾಗಿದ್ದೇವೆ’ ಎಂದೂ ಸ್ಟೀಫನ್‌ಸನ್ ಹೇಳಿದ್ದಾರೆ.

ಸಾಮೂಹಿಕ ಅತ್ಯಾಚಾರ: ಇಬ್ಬರ ಬಂಧನ

ಬೆಂಗಳೂರು: 25 ವರ್ಷದ ಯುವತಿಯನ್ನು ಡ್ರಾಪ್ ನೆಪದಲ್ಲಿ ಬೈಕ್‌ನಲ್ಲಿ ಕರೆದೊಯ್ದು ಸಾಮೂಹಿಕ ಅತ್ಯಾಚಾರ ಎಸಗಿದ್ದ ಪ್ರಕರಣದಲ್ಲಿ ಇಬ್ಬರು ಆರೋಪಿಗಳನ್ನು ವಿವೇಕನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಬಳ್ಳಾರಿಯ ಜಿ. ಅಖಿಲೇಶ್ (25) ಹಾಗೂ ಹಾಸನದ ಜೆ.ಎಲ್. ದೀಪು (21) ಬಂಧಿತರು. ಕ್ಯಾಬ್ ಕಂಪನಿಯೊಂದರ ಚಾಲಕರಾಗಿದ್ದ ಇವರಿಬ್ಬರು, ಆಗಸ್ಟ್ 31ರಂದು ಯುವತಿಯನ್ನು ಈಜಿಪುರದಿಂದ ಹುಸ್ಕೂರು ಬಳಿ ಕರೆದೊಯ್ದು ಕೃತ್ಯ ಎಸಗಿ ಪರಾರಿಯಾಗಿದ್ದರು. ಯುವತಿ ನೀಡಿದ್ದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಹಿಂಬಾಲಿಸಿದ್ದ ಆರೋಪಿಗಳು: ‘ನಗರದ ನಿವಾಸಿಯಾದ ಯುವತಿ, ಈಜಿಪುರದ 10ನೇ ಅಡ್ಡರಸ್ತೆಯಲ್ಲಿ ನಿವೇಶನವೊಂದನ್ನು ನೋಡಿಕೊಂಡು ಸಂಜೆ 5 ಗಂಟೆಗೆ ಪ್ರಾರ್ಥನಾ ಮಂದಿರಕ್ಕೆ ನಡೆದುಕೊಂಡು ಹೊರಟಿದ್ದರು. ಅವರನ್ನು ಆರೋಪಿಗಳು ಹಿಂಬಾಲಿಸಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಗಾಬರಿಗೊಂಡಿದ್ದ ಯುವತಿ, ರಸ್ತೆ ಪಕ್ಕದ ಕಟ್ಟಡವೊಂದರಲ್ಲಿ ಅವಿತುಕೊಂಡಿದ್ದರು. ಆ ಸ್ಥಳಕ್ಕೂ ಹೋಗಿದ್ದ ಆರೋಪಿಗಳು ಡ್ರಾಪ್ ನೀಡುವುದಾಗಿ ಹೇಳಿ ಒತ್ತಾಯದಿಂದ ಯುವತಿಯನ್ನು ಬೈಕ್‌ನಲ್ಲಿ ಹತ್ತಿಸಿಕೊಂಡಿದ್ದರು. ಹುಸ್ಕೂರು ಬಳಿಯ ನಿರ್ಜನ ಪ್ರದೇಶವೊಂದಕ್ಕೆ ಯುವತಿಯನ್ನು ಕರೆದೊಯ್ದಿದ್ದ ಆರೋಪಿಗಳು, ನಗ್ನಗೊಳಿಸಿ ಸಾಮೂಹಿಕ ಅತ್ಯಾಚಾರ ಎಸಗಿದ್ದರು.’

‘ಆರೋಪಿಗಳಿಂದ ತಪ್ಪಿಸಿಕೊಂಡಿದ್ದ ಯುವತಿ, ರಾತ್ರಿಯಿಡೀ ಪೊದೆಯೊಂದರಲ್ಲಿ ಅವಿತುಕೊಂಡಿದ್ದರು. ಬೆಳಿಗ್ಗೆ ಪಕ್ಕದ ಮನೆಯವರ ಸಹಾಯದಿಂದ ಬಟ್ಟೆ ಬದಲಿಸಿಕೊಂಡಿದ್ದರು. ನಂತರವೇ ಠಾಣೆಗೆ ಬಂದು ದೂರು ನೀಡಿದ್ದರು. ತ್ವರಿತ ಕಾರ್ಯಾಚರಣೆ ನಡೆಸಿ ಗುರುವಾರವೇ ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಿಸಿದಾಗ ತಪ್ಪೊಪ್ಪಿಕೊಂಡರು’ ಎಂದು ಮೂಲಗಳು ಹೇಳಿವೆ.

ಮಣಿಪುರ: ಐವರು ಜೆಡಿಯು ಶಾಸಕರು ಬಿಜೆಪಿ ಸೇರ್ಪಡೆ


ಇಂಫಾಲ, ಮಣಿಪುರ (ಪಿಟಿಐ): ಜೆಡಿಯುನ ಐವರು ಶಾಸಕರು ಶುಕ್ರವಾರ ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ.

ಈ ಕುರಿತು ಮಣಿಪುರ ವಿಧಾನಸಭೆಯ ಕಾರ್ಯದರ್ಶಿ ಕೆ.ಮೇಘಜಿತ್ ಸಿಂಗ್ ಅವರು ಹೇಳಿಕೆ ಬಿಡುಗಡೆ ಮಾಡಿದ್ದು, ‘ಐವರು ಜೆಡಿಯು ಶಾಸಕರು ಬಿಜೆಪಿ ಸೇರ್ಪಡೆಯಾಗಿದ್ದನ್ನು ಸ್ಪೀಕರ್ ಅವರು ಅನುಮೋದಿಸಿದ್ದಾರೆ’ ಎಂದು ತಿಳಿಸಿದ್ದಾರೆ.

ಕಳೆದ ಮಾರ್ಚ್‌ನಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ 38 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಜೆಡಿಯು, ಆರು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿತ್ತು.

ಸಂಕ್ಷಿಪ್ತ ಸುದ್ದಿ

ಬಸವರಾಜು ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ



ನೆಲಮಂಗಲ: ತಾಲ್ಲೂಕಿನ ರಾಯರ ಪಾಳ್ಯ ಬಸವರಾಜು ಅವರನ್ನು ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷರನ್ನಾಗಿ ನೇಮಕ ಮಾಡಿ ಅಧ್ಯಕ್ಷ ಮುನಿಶಾಮಣ್ಣ ಆದೇಶಪತ್ರ ನೀಡಿದ್ದಾರೆ.

ಎಡಿಎಗೆ ನೂತನ ನಿರ್ದೇಶಕರ ನೇಮಕ



ಜಿತೇಂದ್ರ ಜಾಧವ್

ಬೆಂಗಳೂರು: ವೈಮಾನಿಕ ಅಭಿವೃದ್ಧಿ ಸಂಸ್ಥೆಯ (ಎಡಿಎ) ನಿರ್ದೇಶಕ ಮತ್ತು ಪ್ರೋಗ್ರಾಂ ನಿರ್ದೇಶಕರಾಗಿ ಜಿತೇಂದ್ರ ಜೆ. ಜಾಧವ್ ಅವರು ಗುರುವಾರ ಅಧಿಕಾರ ಸ್ವೀಕರಿಸಿದ್ದಾರೆ.

ಯುದ್ಧ ವಿಮಾನಗಳು ಮತ್ತು ಸಾರಿಗೆ ವಿಮಾಣಗಳ ವಿನ್ಯಾಸ ಮತ್ತು ಅಭಿವೃದ್ಧಿಯಲ್ಲಿ ಜಿತೇಂದ್ರ ಅವರು 33 ವರ್ಷಗಳ ಅನುಭವ ಹೊಂದಿದ್ದಾರೆ.

ಇದಕ್ಕೂ ಮುನ್ನ ಅವರು, ಸಿಎಸ್‌ಐಆರ್–ರಾಷ್ಟ್ರೀಯ ವೈಮಾನಿಕ ಪ್ರಯೋಗಾಲಯದ (ಸಿಎಸ್‌ಐಆರ್–ಎನ್‌ಎಎಲ್) ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಪುಣೆ ವಿಶ್ವವಿದ್ಯಾಲಯದಿಂದ 1987ರಲ್ಲಿ ಬಿ.ಇ. (ಎಲೆಕ್ಟ್ರಾನಿಕ್ಸ್) ಪದವಿ ಪಡೆದಿರುವ ಜಿತೇಂದ್ರ ಅವರು, ಡಿಫೆನ್ಸ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ ಟೆಕ್ನಾಲಜಿಯಲ್ಲಿ (ಡಿಐಎಟಿ) ಎಂ.ಎಸ್ ಪದವಿ ಪಡೆದಿದ್ದಾರೆ.

‘ಕೇಂದ್ರದ ಶಹಬ್ಬಾಸ್‌ಗಿರಿ ಪಡೆಯಲು ಎನ್‌ಇಪಿ ಜಾರಿ’

ಬೆಂಗಳೂರು: ‘ಕೇಂದ್ರ ಸರ್ಕಾರದ ಶಹಬ್ಬಾಸ್‌ಗಿರಿ ಪಡೆಯಲು ಅಂಗನವಾಡಿ ಕೇಂದ್ರಗಳಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ–2020 ಜಾರಿಗೊಳಿಸಲು ಮುಂದಾಗಿದೆ’ ಎಂದು ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಫೆಡರೇಷನ್ (ಎಐಟಿಯುಸಿ) ಆರೋಪಿಸಿದೆ.

‘ಅಕ್ಟೋಬರ್–ನವೆಂಬರ್ ತಿಂಗಳಲ್ಲಿ 20 ಸಾವಿರ ಅಂಗನವಾಡಿ ಕೇಂದ್ರಗಳಲ್ಲಿ ಇನ್‌ಇಪಿ ಜಾರಿಗೊಳಿಸುವುದಾಗಿ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಘೋಷಿಸಿದ್ದಾರೆ. ಈ ಮೂಲಕ 20 ಸಾವಿರ ಅಂಗನವಾಡಿ ಕಾರ್ಯಕರ್ತೆಯರನ್ನು ಶಿಕ್ಷಕಿಯರನ್ನಾಗಿಸುವ ಸರ್ಕಾರದ ನಿಲುವೇ ಗೊಂದಲದಿಂದ ಕೂಡಿದೆ.

ಇವರಿಗೆ ಯಾವುದೇ ರೀತಿಯ ತರಬೇತಿಯನ್ನು ನೀಡಿಲ್ಲ’ ಎಂದು ಫೆಡರೇಷನ್‌ನ ರಾಜ್ಯ ಘಟಕದ ಅಧ್ಯಕ್ಷ ಬಿ. ಅಮ್ಜದ್ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

‘6 ವರ್ಷದೊಳಗಿನ ಮಕ್ಕಳು, ಗರ್ಭಿಣಿ, ಬಾಣಂತಿಯರಿಗೆ ಪೂರಕ ಪೌಷ್ಟಿಕ ಆಹಾರ, ಆರೋಗ್ಯ, ಶಿಕ್ಷಣ, ಮಕ್ಕಳ ಲಾಲನೆ–ಪಾಲನೆ ಮತ್ತು ಕಲಿಕೆಯಂತಹ ಸೇವೆಗಳ ನಿರ್ವಹಣೆಗಾಗಿ ಸ್ಥಾಪಿತವಾಗಿರುವ ಸಮಗ್ರ ಶಿಶು ಅಭಿವೃದ್ಧಿ ಯೋಜನೆ(ಐಸಿಡಿಎಸ್) ಯನ್ನು ರಾಷ್ಟ್ರೀಯ ಶಿಕ್ಷಣ ನೀತಿಯ ವ್ಯಾಪ್ತಿಗೆ ಒಳಪಡಿಸಿದರೆ ಇಡೀ ಅಂಗನವಾಡಿ ವ್ಯವಸ್ಥೆಯೇ ದುರ್ಬಲಗೊಳ್ಳುತ್ತದೆ. ಅಂಗನವಾಡಿ ಕಾರ್ಯಕರ್ತೆಯರನ್ನು ಶಾಲಾ ಆವರಣಕ್ಕೆ ಸೇರಿಸಿದರೆ ಮಕ್ಕಳ ಬಾಲ್ಯಪೂರ್ವ ಶಿಕ್ಷಣ, ಆರೈಕೆ, ಆಹಾರ ಪೋಷಣೆಯಂತಹ ಸಾಂವಿಧಾನಿಕ ಹಕ್ಕುಗಳಿಗೆ ಚ್ಯುತಿ ಉಂಟಾಗುವ ಅಪಾಯವಿದೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಎನ್‌ಇಪಿಯನ್ನು ದೇಶದ ಯಾವುದೇ ರಾಜ್ಯದಲ್ಲಿ ಜಾರಿಗೊಳಿಸುತ್ತಿಲ್ಲ. ನಮ್ಮ ರಾಜ್ಯದಲ್ಲಿ ಮಾತ್ರ ಜಾರಿಗೊಳಿಸುವುದರಿಂದ ಐಸಿಡಿಎಸ್ ಯೋಜನೆಯನ್ನು ಖಾಸಗೀಕರಣಗೊಳಿಸುವ ಹುನ್ನಾರದಂತೆ ಭಾಸವಾಗುತ್ತಿದೆ. ಶಿಕ್ಷಣ ಸಚಿವರು ಹಾರಿಕೆ ಉತ್ತರಗಳನ್ನು ನೀಡಬಾರದು. ಇಲ್ಲದಿದ್ದರೆ ಅವರು ಕೂಡಲೇ ರಾಜೀನಾಮೆ ನೀಡಬೇಕು’ ಎಂದು ಫೆಡರೇಷನ್‌ನ ಪ್ರಧಾನ ಕಾರ್ಯದರ್ಶಿ ಜಯಮ್ಮ ಒತ್ತಾಯಿಸಿದರು.

ಹೈಗ್ರೌಂಡ್ಸ್ ಪೊಲೀಸರಿಂದ ಎಂಟು ಮಂದಿ ಬಂಧನ

ಶ್ರೀಗಂಧದ ಮರ ಕದ್ದು ಎಣ್ಣೆ ತಯಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀಗಂಧದ ಮರ ಕದ್ದುಕೊಂಡು ಹೋಗಿ ಎಣ್ಣೆ ತಯಾರಿಸಿ ಮಾರುತ್ತಿದ್ದ ಜಾಲವನ್ನು ಹೈಗ್ರೌಂಡ್ಸ್ ಠಾಣೆ ಪೊಲೀಸರು ಭೇದಿಸಿದ್ದು, ಎಂಟು ಆರೋಪಿಗಳನ್ನು ಬಂಧಿಸಿದ್ದಾರೆ.

ತಮಿಳುನಾಡಿನ ಗೋವಿಂದಸ್ವಾಮಿ (30), ಮಾಧು ಅಲಿಯಾಸ್ ಮಾದ (36), ವೆಂಕಟೇಶ್ (22), ಬೆಂಗಳೂರಿನ ರಾಮಚಂದ್ರ (29), ವರದರಾಜ್ (66), ಆಂಧ್ರಪ್ರದೇಶದ ನಂಜೇಗೌಡ (72), ಹೊಸಕೋಟೆ ಜಡಗೇನಹಳ್ಳಿಯ ವಾಸಿಂ ಬೇಗ್ (35) ಹಾಗೂ ಚಿಕ್ಕಬಳ್ಳಾಪುರದ ರಾಮಚಂದ್ರಪ್ಪ (54) ಬಂಧಿತರು.

‘ಕುಮಾರಕೃಪಾ ರಸ್ತೆಗೆ ಹೊಂದಿಕೊಂಡಿರುವ ಬೆಂಗಳೂರು ಗಾಲ್ಫ್ ಕ್ಲಬ್ ಆವರಣದಲ್ಲಿದ್ದ ಶ್ರೀಗಂಧದ ಮರ ಕಡಿದು ಇತ್ತೀಚೆಗೆ ಕಳ್ಳತನ ಮಾಡಲಾಗಿತ್ತು. ಈ ಪ್ರಕರಣದ ತನಿಖೆ ಕೈಗೊಂಡಾಗ ಆರೋಪಿಗಳು ಸಿಕ್ಕಿಬಿದ್ದರು. ಇವರಿಂದ ₹ 3 ಕೋಟಿ ಮೌಲ್ಯದ 147 ಕೆ.ಜಿ. ಶ್ರೀಗಂಧದ ಎಣ್ಣೆ ಹಾಗೂ 730 ಕೆ.ಜಿ. ಶ್ರೀಗಂಧದ ಮರದ ತುಂಡುಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.



ಹೈಗ್ರೌಂಡ್ಸ್ ಠಾಣೆ ಪೊಲೀಸರು ಆರೋಪಿಗಳಿಂದ ಜಪ್ತಿ ಮಾಡಿರುವ ಶ್ರೀಗಂಧ ಮರದ ತುಂಡುಗಳು ಹಾಗೂ ಶ್ರೀಗಂಧ ಎಣ್ಣೆ ಡಬ್ಬಿಗಳು

‘ಆರೋಪಿಗಳಾದ ಗೋವಿಂದ ಸ್ವಾಮಿ, ಮಾಧು, ವೆಂಕಟೇಶ್ ಹಾಗೂ ರಾಮಚಂದ್ರ ಅವರು ಶ್ರೀಗಂಧದ ಮರಗಳನ್ನು ಗುರುತಿಸಿ ಕಳ್ಳತನ ಮಾಡುತ್ತಿದ್ದರು. ಇಂಥ ಮರದ ತುಂಡುಗಳನ್ನು ವಾಸಿಂ ಬೇಗ್, ರಾಮಚಂದ್ರಪ್ಪ ಹಾಗೂ ವರದರಾಜ್ ಖರೀದಿಸುತ್ತಿದ್ದರು. ಇನ್ನೊಬ್ಬ ಆರೋಪಿ ನಂಜೇಗೌಡ, ಶ್ರೀಗಂಧ ಎಣ್ಣೆ ತಯಾರಿ ಕಾರ್ಖಾನೆ ಉಸ್ತುವಾರಿ ನೋಡಿಕೊಳ್ಳುತ್ತಿದ್ದ’ ಎಂದೂ ತಿಳಿಸಿದರು.

10 ಕಡೆ ಶ್ರೀಗಂಧದ ಕಳ್ಳತನ: ‘ತಮಿಳುನಾಡಿನ ಆರೋಪಿಗಳು ಆಗಾಗ ಬೆಂಗಳೂರಿಗೆ ಬಂದು, ಶ್ರೀಗಂಧದ ಮರಗಳನ್ನು ಗುರುತಿಸುತ್ತಿದ್ದರು. ರಾತ್ರಿ ಸಂದರ್ಭದಲ್ಲಿ ಮಚ್ಚು, ಗರಗಸ ಬಳಸಿ ಮರವನ್ನು ಕತ್ತರಿಸಿಕೊಂಡು ಪರಾರಿಯಾಗುತ್ತಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಸದಾಶಿವನಗರ, ಜಯನಗರ, ಮಡಿವಾಳ, ಕೆ.ಆರ್.ಪುರ, ಯಶವಂತಪುರ, ಕೆಂಗೇರಿ ಸೇರಿ ನಗರದ 10 ಕಡೆಗಳಲ್ಲಿ ಆರೋಪಿಗಳು ಶ್ರೀಗಂಧದ ಮರ ಕದ್ದಿರುವುದು ತನಿಖೆಯಿಂದ ಗೊತ್ತಾಗಿದೆ’ ಎಂದು ತಿಳಿಸಿವೆ.

ಶ್ರೀಗಂಧದ ಎಣ್ಣೆ ಮಾರಾಟ: ‘ಕದ್ದ ಶ್ರೀಗಂಧವನ್ನು ಆಂಧ್ರಪ್ರದೇಶಕ್ಕೆ ತೆಗೆದುಕೊಂಡು ಹೋಗಿ, ಎಣ್ಣೆ ತಯಾರಿಸಲಾಗುತ್ತಿತ್ತು. ಅದೇ ಎಣ್ಣೆಯನ್ನು ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ ಹಾಗೂ ಇತರೆ ರಾಜ್ಯಗಳಲ್ಲಿ ಮಾರಲಾಗುತ್ತಿತ್ತು. ಇದರಿಂದಾಗಿ ಜಾಲದ ಆರೋಪಿಗಳು ಲಕ್ಷಾಂತರ ರೂಪಾಯಿ ಗಳಿಸುತ್ತಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಅಪರಾಧ ಸುದ್ದಿ



ಪ್ರಗತಿಪರ ಚಿಂತಕರಿಂದ ಒತ್ತಾಯ • ಜಿಲ್ಲಾಧಿಕಾರಿಗೆ ಪತ್ರದ ಮೂಲಕ ಅಭಿಯಾನ

‘ತನಿಖೆ ಹೈಕೋರ್ಟ್‌ಗೆ ವರ್ಗಾಯಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗ ಮುರುಘಾ ಮಠದ ಬಾಲಕಿಯರ ಮೇಲೆ ನಡೆದ ಲೈಂಗಿಕ ದೌರ್ಜನ್ಯ ಪ್ರಕರಣದ ಸಮಗ್ರ ತನಿಖೆ ಹಾಗೂ ವಿಚಾರಣೆಯನ್ನು ನ್ಯಾಯ ಯುತವಾಗಿ ನಡೆಸಲು ಹೈಕೋರ್ಟ್‌ಗೆ ವರ್ಗಾಯಿಸುವಂತೆ ಪ್ರಗತಿಪರ ಚಿಂತಕರು ಒತ್ತಾಯಿಸಿದ್ದಾರೆ.

ಈ ಬಗ್ಗೆ ಚಿತ್ರದುರ್ಗ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸುವ ಅಭಿಯಾನ ನಡೆದಿದೆ.

ಆರೋಪಿಗಳು ಪ್ರಭಾವಶಾಲಿಯಾಗಿರುವುದರಿಂದ ವಿಚಾರಣೆಯ ಮೇಲೆ ಪ್ರಭಾವ ಬೀರುವ ಸಾಧ್ಯತೆ ಹೆಚ್ಚು. ಹೀಗಾಗಿ, ಈ ಪ್ರಕರಣದ ತನಿಖೆಯನ್ನು ಸ್ಥಳೀಯ ಪೊಲೀಸ್ ವ್ಯಾಪ್ತಿಯಲ್ಲಿ ನಡೆಸದೆ ನ್ಯಾಯಾಂಗದ ಸಮ್ಮುಖದಲ್ಲಿ ನಡೆಸಬೇಕು ಎಂದು ಆಗ್ರಹಿಸಿದ್ದಾರೆ.

ಜತೆಗೆ, ಪ್ರತ್ಯೇಕ ವಿಶೇಷ ತನಿಖಾ ಸಮಿತಿ ರಚಿಸಬೇಕು ಮತ್ತು ಈ ಪ್ರಕರಣವನ್ನು ನೆರೆಯ ಕೇರಳ, ತೆಲಂಗಾಣ ಅಥವಾ ತಮಿಳುನಾಡು ರಾಜ್ಯಕ್ಕೆ ವರ್ಗಾಯಿಸಬೇಕು ಎಂದು ಕೋರಿದ್ದಾರೆ.

ಮುರುಘಾಮಠದ ಪೀಠಾಧಿಕಾರಿ ಮತ್ತು ಅವರ ಸಹಚರರು ತಮ್ಮದೇ ವಸತಿ ನಿಲಯದ ಬಾಲಕಿಯರನ್ನು ನಿರಂತರವಾಗಿ ಲೈಂಗಿಕವಾಗಿ ದುರ್ಬಳಕೆ ಮಾಡಿಕೊಂಡ ಪ್ರಕರಣವು ಅತ್ಯಂತ ಅಮಾನವೀಯ ಮತ್ತು ಕ್ರೂರವಾಗಿದ್ದು, ನಾಗರಿಕ ಸಮಾಜವನ್ನು ಆಘಾತಕ್ಕೀಡುಮಾಡಿದೆ. ಆರೋಪಿಗಳ ವಿರುದ್ಧ ಪೋಕ್ಸೊ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ ಕಾಯ್ದೆಗಳ ಅಡಿ ಪ್ರಕರಣ ದಾಖಲಿಸಿದ್ದರೂ ಆರೋಪಿಗಳನ್ನು ತಕ್ಷಣವೇ ಬಂಧಿಸಲಿಲ್ಲ. ಉದ್ದೇಶಪೂರ್ವಕವಾಗಿ ವಿಳಂಬ ಮಾಡಲಾಯಿತು. ಅಸಹಾಯಕ ಸ್ಥಿತಿಯಲ್ಲಿರುವ ಸಂತ್ರಸ್ತ ಬಾಲಕಿಯರಿಗೆ ಬೆಂಬಲವಾಗಿ ನಿಲ್ಲಬೇಕಾದ ಸರ್ಕಾರಿ ವ್ಯವಸ್ಥೆಯು ಆರೋಪಿಗಳಿಗೆ ಬೆಂಬಲವಾಗಿ ನಿಂತಿರುವುದು ಸ್ಪಷ್ಟ ಸೂಚನೆಯಾಗಿದೆ ಎಂದು ತಿಳಿಸಿದ್ದಾರೆ.

ಪ್ರಕರಣದ ವಿಚಾರಣೆ ಮತ್ತು ನ್ಯಾಯದಾನ ಪ್ರಕ್ರಿಯೆ ಕಡ್ಡಾಯವಾಗಿ ಒಂದು ವಾರದೊಳಗೆ ಮುಗಿಯುವಂತೆ ಕ್ರಮಕೈಗೊಳ್ಳಬೇಕು. ಎಲ್ಲ ಸಂತ್ರಸ್ತ ಬಾಲಕಿಯರು ಮತ್ತು ಕುಟುಂಬಕ್ಕೆ ಭದ್ರತೆ ಮತ್ತು ತಕ್ಷಣದ ಪರಿಹಾರ ಒದಗಿಸಬೇಕು. ಜತೆಗೆ, ಅವರಿಗೆ ನಿರಂತರವಾಗಿ ತಜ್ಞರ ಮೂಲಕ ಆಪ್ತ ಸಲಹೆಯನ್ನೂ ಕೊಡಿಸಬೇಕು ಎಂದು ಆಗ್ರಹಿಸಿದ್ದಾರೆ

ಮಠದ ವಸತಿ ನಿಲಯಗಳನ್ನು ತಕ್ಷಣವೇ ಮಟ್ಟುಗೋಲು ಹಾಕಿಕೊಂಡು, ಅಲ್ಲಿನ ಮಕ್ಕಳ ಜವಾಬ್ದಾರಿಯನ್ನು ಜಿಲ್ಲಾಡಳಿತವೇ ವಹಿಸಿಕೊಂಡು ಸುರಕ್ಷಿತ ವಸತಿಯುತ ವಿದ್ಯಾಭ್ಯಾಸಕ್ಕೆ ಅನುಕೂಲ ಕಲ್ಪಿಸಬೇಕು ಎಂದು ಕೋರಿದ್ದಾರೆ.

ರೂಪ ಹಾಸನ, ಶ್ರೀಪಾದ ಭಟ್ ಮತ್ತಿತರರು ಈ ಬಗ್ಗೆ ಅಭಿಯಾನ ಕೈಗೊಂಡಿದ್ದಾರೆ.

‘ನಿಷ್ಪಕ್ಷಪಾತ ತನಿಖೆ ನಡೆಸಿ’

ಚಿತ್ರದುರ್ಗದ ಮುರುಘಾ ಮಠದ ಸ್ವಾಮಿಗಳ ವಿರುದ್ಧದ ಆರೋಪ ಗಂಭೀರ ಸ್ವರೂಪದ್ದಾಗಿದೆ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ. ಈ ಕುರಿತು ಟ್ವೀಟ್ ಮಾಡಿರುವ ಅವರು, ಈ ಪ್ರಕರಣದಲ್ಲಿ ಪೊಲೀಸರು ಯಾವುದೇ ಒತ್ತಡಕ್ಕೊಳಗಾಗದೆ ಸಂತ್ರಸ್ತ ವಿದ್ಯಾರ್ಥಿನಿಯರ ದೂರಿನ ಬಗ್ಗೆ ನಿಷ್ಪಕ್ಷಪಾತವಾಗಿ ತನಿಖೆ ನಡೆಸಿ ಸತ್ಯಸಂಗತಿಯನ್ನು ಬಹಿರಂಗಗೊಳಿಸಬೇಕು ಎಂದು ಒತ್ತಾಯಿಸಿದ್ದಾರೆ.

ಆಸ್ತಿ ಮಾರಾಟ: ಮುರುಘಾಶ್ರೀಗೆ ವಾರಂಟ್

ಬೆಂಗಳೂರು: ಚಿತ್ರದುರ್ಗದ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದ ಪೀಠಾಧಿಪತಿ ಶಿವಮೂರ್ತಿ ಮುರಘಾ ಶರಣರು ಮಠದ ಹೆಸರಿನಲ್ಲಿ, ‘ಅನ್‌ರಿಜಿಸ್ಟರ್ಡ್ ಸೋಲ್ಡ್ ಟ್ರಸ್ಟ್ ಡೀಡ್’ ಇಟ್ಟುಕೊಂಡು ಭಕ್ತರಿಗೆ ನಂಬಿಕೆ ದ್ರೋಹ ಮಾಡಿ ಸ್ಥಿರಾಸ್ತಿ ಮಾರಾಟ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಬೆಂಗಳೂರು 4ನೇ ಎಸಿಎಂಎಂ ನ್ಯಾಯಾಲಯ ಜಾಮೀನುರಹಿತ ಬಂಧನದ ವಾರಂಟ್ ಹೊರಡಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಮಠದ ಭಕ್ತ ತುಮಕೂರಿನ ಪಿ.ಎಸ್. ಪ್ರಕಾಶ್ ಅಲಿಯಾಸ್ ಪಂಚಿ ಸಲ್ಲಿಸಿದ್ದ ಅರ್ಜಿಯನ್ನು 4ನೇ ಹೆಚ್ಚುವರಿ ಚೀಫ್ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಶುಕ್ರವಾರ ವಿಚಾರಣೆ ನಡೆಸಿ, ಆರೋಪಿ ಮುರುಘಾ ಶರಣರಿಗೆ ಜಾಮೀನು ರಹಿತ ಬಂಧನದ ವಾರಂಟ್ ಹೊರಡಿಸಿ ಆದೇಶಿಸಿದರು.

‘ಬೃಹನ್ಮಠದ ಅಧೀನಕ್ಕೆ ಒಳಪಟ್ಟ ಬೆಂಗಳೂರಿನ ಗಾಂಧಿನಗರದಲ್ಲಿರುವ ತಿಪ್ಪಶೆಟ್ಟಿ ಮಠಕ್ಕೆ ಸೇರಿದ ಕೆಂಗೇರಿ ಹೋಬಳಿಯ ಸೂಲಿಕೆರೆ ಗ್ರಾಮದ ಸರ್ವೆ ನಂಬರ್ 34ರಲ್ಲಿ 7 ಎಕರೆ 18 ಗುಂಟೆ ಜಮೀನನ್ನು ಶರಣರು ಮಾರಾಟ ಮಾಡಿದ್ದಾರೆ’ ಎಂದು ಆರೋಪಿಸಿ ಪಂಚಿ, ಕೆಂಗೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

‘ಶರಣರು ಆಸ್ತಿ ಮಾರಾಟ ಮಾಡುವ ಮುನ್ನ ಚಾರಿಟಿ ಕಮಿಷನ್‌ನಿಂದಾಗಲೀ ಅಥವಾ ಸೆಷನ್ಸ್ ನ್ಯಾಯಾಲಯದಿಂದಾಗಲೀ ಅನುಮತಿ ಪಡೆದಿರುವುದಿಲ್ಲ. ಮಾರಾಟಕ್ಕೂ ಮುನ್ನ ಯಾವುದೇ ರೀತಿಯ ಸಾರ್ವಜನಿಕ ಪತ್ರಿಕಾ ಪ್ರಕಟಣೆ ಹೊರಡಿಸಿರುವುದಿಲ್ಲ. ಸ್ಥಿರಾಸ್ತಿ ಮಾರಾಟದಿಂದ ಮಠಕ್ಕೆ ₹ 7 ಕೋಟಿ ನಷ್ಟ ಉಂಟಾಗಿರುತ್ತದೆ ಮತ್ತು ನಂಬಿಕೆ ದ್ರೋಹವಾಗಿರುತ್ತದೆ. ಆದ್ದರಿಂದ, ಆರೋಪಿಗಳಾದ ಶಿವಮೂರ್ತಿ ಮುರುಘಾ ಶರಣರು ಮತ್ತು ಆನಂದ್ ಕುಮಾರ್ ವಿರುದ್ಧ ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕು’ ಎಂದು ಕೋರಿದ್ದಾರೆ. ಪ್ರಕರಣದ ವಿಚಾರಣೆಯನ್ನು ನವೆಂಬರ್ 10ಕ್ಕೆ ಮುಂದೂಡಲಾಗಿದೆ.



‘ಬಿಲ್ಕಿಸ್ ಬಾನುಗೆ ನ್ಯಾಯ ದೊರಕಿಸಬೇಕು. ಪೋಕ್ಸೊ ಪ್ರಕರಣದ ಆರೋಪಿ ಚಿತ್ರದುರ್ಗದ ಶಿವಮೂರ್ತಿ ಮುರುಘಾ ಶರಣರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು’ ಎಂದು ಆಗ್ರಹಿಸಿ ವಿವಿಧ ಸಂಘಟನೆಗಳ ಪದಾಧಿಕಾರಿಗಳು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು. ಲೇಖಕಿ ವಿಜಯಮ್ಮ, ಡಾ. ವಸುಂಧರಾ ಭೂಪತಿ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಮಾಜಿ ಅಧ್ಯಕ್ಷೆ ಕೃಪಾ ಆಳ್ವಾ ಹಾಗೂ ಇತರರು ಇದ್ದರು – ಪ್ರಜಾವಾಣಿ ಚಿತ್ರ

ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗುಜರಾತ್‌ನಲ್ಲಿ ಬಿಲ್ಕಿಸ್ ಬಾನು ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿ, ಅವರ ಕುಟುಂಬದವರನ್ನು ಹತ್ಯೆ ಮಾಡಿರುವ ಅಪರಾಧಿಗಳನ್ನು ಮರಳಿ ಜೈಲಿಗೆ ಕಳುಹಿಸಬೇಕು. ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಎನ್ನಲಾದ ಚಿತ್ರದುರ್ಗದ ಶಿವಮೂರ್ತಿ ಮುರುಘಾ ಶರಣರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿಸಿ ವಿವಿಧ ಸಂಘಟನೆಗಳ ಪದಾಧಿಕಾರಿಗಳು ನಗರದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ವಿದ್ಯಾರ್ಥಿ, ಮಹಿಳಾ, ಯುವಜನ, ರೈತ, ಕಾರ್ಮಿಕ, ಕೃಷಿ ಕಾರ್ಮಿಕರು, ಅಲ್ಪಸಂಖ್ಯಾತ, ದಲಿತರ ಸಂಘಟನೆಗಳ ಪದಾಧಿಕಾರಿಗಳು ಭಾಗವಹಿಸಿದ್ದರು.

‘ಬಿಲ್ಕಿಸ್ ಬಾನು ಅವರಿಗೆ ನ್ಯಾಯ ದೊರಕಿಸುವಂತೆ ಕರ್ನಾಟಕ ಆಗ್ರಹಿಸುತ್ತದೆ’ ಹಾಗೂ ‘ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರ ವಿರುದ್ಧ ದಾಖಲಾಗಿರುವ ಪ್ರಕರಣದಲ್ಲಿ ನಿಷ್ಪಕ್ಷಪಾತ ತನಿಖೆ ನಡೆಸಬೇಕು’ ಎಂಬ ಘೋಷಣಾ ಫಲಕಗಳನ್ನು ಪ್ರತಿಭಟನಾಕಾರರು ಪ್ರದರ್ಶಿಸಿದರು.

‘ಗುಜರಾತಿನ ದಾಹೋದ್ ಜಿಲ್ಲೆಯ ರಣಧೀಕ್‌ಪುರ ಹಳ್ಳಿಯಲ್ಲಿ 2002ರಲ್ಲಿ ಹಿಂಸೆ ನಡೆದಿತ್ತು. ಬಿಲ್ಕಿಸ್ ಬಾನು ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿ, ಅವರ ಕುಟುಂಬದ 7 ಜನರನ್ನು ಹತ್ಯೆ ಮಾಡಲಾಯಿತು. ಪ್ರಕರಣದ 11 ಅಪರಾಧಿಗಳಿಗೆ ಜೈಲು ಶಿಕ್ಷೆ ಆಗಿತ್ತು. ಆದರೀಗ, ಸನ್ನಡತೆ ಆಧಾರದಲ್ಲಿ ಕ್ಷಮಾದಾನ ನೀಡಿ ಅಪರಾಧಿಗಳನ್ನು ಜೈಲಿನಿಂದ ಬಿಡುಗಡೆ ಮಾಡಲಾಗಿದೆ. ಇದನ್ನು ಖಂಡಿಸಿ ರಾಷ್ಟ್ರಾದ್ಯಂತ ಪ್ರತಿಭಟನೆ ನಡೆಸಲಾಗುತ್ತಿದೆ. ಅಪರಾಧಿಗಳನ್ನು ಪುನಃ ಜೈಲಿಗೆ ಕಳುಹಿಸುವವರೆಗೂ ಹೋರಾಟ ಮುಂದುವರಿಯಲಿದೆ’ ಎಂದು ಪ್ರತಿಭಟನಾಕಾರರು ಹೇಳಿದರು.

‘ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಪ್ರಕರಣದ ಆರೋಪಿ ಶಿವಮೂರ್ತಿ ಮುರುಘಾ ಶರಣರಿಗೆ ಕಠಿಣ ಶಿಕ್ಷೆ ಆಗಬೇಕು. ಯಾವುದೇ ಒತ್ತಡಕ್ಕೆ ಮಣಿಯದೇ ತನಿಖಾಧಿಕಾರಿಗಳು ತನಿಖೆ ನಡೆಸಬೇಕು. ಸಂತ್ರಸ್ತ ಬಾಲಕಿಯರಿಗೆ ನ್ಯಾಯ ಒದಗಿಸಬೇಕು’ ಎಂದು ಅವರು ಆಗ್ರಹಿಸಿದರು.

‘ಕ್ಷೇಮವನ’ದಲ್ಲಿ ಉತ್ತರ ಪ್ರದೇಶದ ಸಿ. ಎಂ ಯೋಗಿ ಆದಿತ್ಯನಾಥ್ ಶ್ಲಾಘನೆ

ಪಾರಂಪರಿಕ ವೈದ್ಯ ಪದ್ಧತಿಯ ಹಬ್ ಬೆಂಗಳೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಖ್ಯಾತಿಯ ಬೆಂಗಳೂರನ್ನು ಭಾರತದ ಪಾರಂಪರಿಕ ವೈದ್ಯ ಪದ್ಧತಿಯ ಹಬ್ ಆಗಿಸಲು ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಶ್ರಮಿಸುತ್ತಿದ್ದಾರೆ ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಶ್ಲಾಘಿಸಿದರು.

ನೆಲಮಂಗಲ ಸಮೀಪದ ಮಹದೇವಪುರದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಪ್ರಕೃತಿ ಚಿಕಿತ್ಸಾ ಕೇಂದ್ರ ‘ಕ್ಷೇಮವನ’ ಉದ್ಘಾಟಿಸಿ ಅವರು ಮಾತನಾಡಿದರು.

ಭಾರತೀಯ ಯೋಗ ಪರಂಪರೆ ವಿಶ್ವದ ಜನರನ್ನು ಒಗ್ಗೂಡಿಸಿದೆ. ಉತ್ತರ ಪ್ರದೇಶದಲ್ಲಿ ಭಾರತದ ಪಾರಂಪರಿಕ ವೈದ್ಯಕೀಯ ಪದ್ಧತಿಗೆ ಆದ್ಯತೆ ನೀಡಲಾಗಿದೆ. ಕರ್ನಾಟಕದಲ್ಲೂ ಅಂತಹ ಪ್ರಯತ್ನಗಳು ನಿರಂತರವಾಗಿ ಸಾಗಿವೆ. ಪಾರಂಪರಿಕ ಚಿಕಿತ್ಸಾ ಕೇಂದ್ರಗಳು ತಲೆ ಎತ್ತುತ್ತಿವೆ. ಅದರಲ್ಲಿ ಧರ್ಮಸ್ಥಳದ ಪಾತ್ರ ಮಹತ್ವದ್ದಾಗಿದೆ ಎಂದರು.



ಬೆಂಗಳೂರಿನ ನೆಲಮಂಗಲದ ಬಳಿ ಗುರುವಾರ ಹಮ್ಮಿಕೊಂಡಿದ್ದ ಪ್ರಕೃತಿ ಚಿಕಿತ್ಸಾ ಕೇಂದ್ರ ‘ಕ್ಷೇಮವನ’ ಉದ್ಘಾಟನಾ ಕಾರ್ಯಕ್ರಮದಲ್ಲಿ ಧರ್ಮಸ್ಥಳ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅವರು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರನ್ನು ಸನ್ಮಾನಿಸಿದರು. ಆದಿಚುಂಚನಗಿರಿ ನಿರ್ಮಲಾನಂದನಾಥ ಸ್ವಾಮೀಜಿ ಇದ್ದರು –ಪ್ರಜಾವಾಣಿ ಚಿತ್ರ, ಎಂ.ಎಸ್.ಮಂಜುನಾಥ್

ಕರ್ನಾಟಕದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಸಮೃದ್ಧ ಮತ್ತು ಸುರಕ್ಷಿತ ಕರ್ನಾಟಕಕ್ಕಾಗಿ ಕೆಲಸ ಮಾಡುತ್ತಿದೆ. ಕರ್ನಾಟಕ ದೇಶದ ಬಲಿಷ್ಠ ಅರ್ಥ ವ್ಯವಸ್ಥೆಯ ರಾಜ್ಯವಾಗಲಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ, ‘ಲಕ್ಷಾಂತರ ಮಹಿಳೆಯರು ಸ್ವಯಂ ಉದ್ಯೋಗ ಕೈಗೊಂಡು, ಬದುಕು ನಡೆಸಲು ವೀರೇಂದ್ರ ಹೆಗ್ಗಡೆ ಅವರು ನೆರವಾಗಿದ್ದಾರೆ. ಶಿಕ್ಷಣ ಕ್ಷೇತ್ರದ ಜತೆಗೆ ಪ್ರಕೃತಿ ಚಿಕಿತ್ಸೆಯ ಮೂಲಕ ಆರೋಗ್ಯ ಕ್ಷೇತ್ರದಲ್ಲೂ ಛಾಪು ಮೂಡಿಸಿದ್ದಾರೆ. ಒತ್ತಡದ ಬದುಕಿಗೆ, ಮನಸ್ಸಿನ ನೆಮ್ಮದಿಗೆ ಕ್ಷೇಮವನ ದಾರಿ ತೋರಲಿದೆ’ ಎಂದರು.

ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ, ‘ಬದುಕಿನ ಜಂಜಡದಲ್ಲಿರುವ ಜನರು ವಿಚಲಿತರಾಗದಂತೆ ನೋಡಿಕೊಳ್ಳುವುದು ಸಂತರ ಕೆಲಸ. ಅಂತಹ ಕೆಲಸವನ್ನು ಯೋಗಿ ಆದಿತ್ಯನಾಥರು ಯಶಸ್ವಿಯಾಗಿ ಮಾಡಿಕೊಂಡು ಬಂದಿದ್ದಾರೆ. ಅದರ ಫಲವಾಗಿ ಉತ್ತರ ಪ್ರದೇಶ ಇಂದು ಭಯಮುಕ್ತ ರಾಜ್ಯವಾಗಿದೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕ್ಷೇಮವನ ರಾಜಧಾನಿಗೆ ಹತ್ತಿರದಲ್ಲಿದೆ. ಇಲ್ಲಿನ ಜನರ ಅಪೇಕ್ಷೆ ಈಡೇರಿಸಲಿದೆ. ಅಲ್ಲಿ ಔಷಧ ಮಾತ್ರೆಗಳಿರುವುದಿಲ್ಲ. ರೋಗ ಬರದಂತೆ ತಡೆಯುವ ಜೀವನ ಪದ್ಧತಿ ಹೇಳಿಕೊಡಲಾಗುತ್ತದೆ ಎಂದು ಮಾಹಿತಿ ನೀಡಿದರು.

ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಸಚಿವರಾದ ಕೆ.ಸುಧಾಕರ್, ಬೈರತಿ ಬಸವರಾಜ, ಆನಂದ್‌ಸಿಂಗ್, ಸಂಸದ ಬಚ್ಚೇಗೌಡ, ಹೇಮಾವತಿ ಹೆಗ್ಗಡೆ ಉಪಸ್ಥಿತರಿದ್ದರು.

‘ಮಾದಾರ ಚನ್ನಯ್ಯಶ್ರೀ ಪೀಠ ತ್ಯಜಿಸಲಿ’

ಮೈಸೂರು: ‘ಪೋಕ್ಸೊ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ಮುರುಘಾ ಶರಣರನ್ನು ಬೆಂಬಲಿಸಿ ಮಾತನಾಡಿದ ಆದಿಜಾಂಬವ ಪೀಠದ ಮಾದಾರ ಚನ್ನಯ್ಯ ಸ್ವಾಮೀಜಿ ಪೀಠವನ್ನು ತ್ಯಜಿಸಬೇಕು’ ಎಂದು ಸಂಘದ ಪ್ರಮುಖರು ಶುಕ್ರವಾರ ಇಲ್ಲಿ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರಾಜ್ಯ ಆದಿಜಾಂಬವ ಸಂಘದ ಅಧ್ಯಕ್ಷ ಎಡತೊರೆ ಎಂ.ನಿಂಗರಾಜ್, ‘ಸ್ವಾಮೀಜಿ ತಾವಾಗಿಯೇ ಪೀಠ ತೊರೆಯಬೇಕು. ಇಲ್ಲವಾದರೆ ಹೋರಾಟ ನಡೆಸಿ ಹೊರ ಹೋಗುವಂತೆ ಮಾಡುತ್ತೇವೆ’ ಎಂದು ಎಚ್ಚರಿಕೆ ನೀಡಿದರು.

‘ದೀಕ್ಷೆ ನೀಡಿದರೆಂದು ಮುರುಘಾ ಶರಣರ ಬಗ್ಗೆ ಸ್ವಾಮೀಜಿ ಕೃತಜ್ಞತೆ ಇರಬಹುದು. ಆದರೆ, ಬಾಲಕಿಯರ ಮೇಲಿನ ಲೈಂಗಿಕ ಕಿರುಕುಳ ಖಂಡಿಸಿ, ಅವರ ಮನೋಸ್ಥೈರ್ಯ ಹೆಚ್ಚಿಸುವ ಕೆಲಸವನ್ನು ಶ್ರೀಗಳು ಮಾಡಬೇಕಿತ್ತು’ ಎಂದು ಪ್ರತಿಪಾದಿಸಿದರು.

‘ಬಸವಾದಿ ಶಿವಶರಣರ ಪರಂಪರೆಯಲ್ಲಿ ಸಾಗುತ್ತಿದ್ದ ಸ್ವಾಮೀಜಿ ಈಚೆಗೆ ವೈದಿಕ ಪರಂಪರೆಗೆ ಶರಣಾಗಿದ್ದಾರೆ. ಆರ್‌ಎಸ್‌ಎಸ್ ಸಿದ್ಧಾಂತದವರೊಂದಿಗೆ ವ್ಯವಹರಿಸುತ್ತಿದ್ದಾರೆ. ಅದನ್ನೂ ಸಮಾಜದ ಪ್ರಮುಖರು ಆಕ್ಷೇಪಿಸುತ್ತಿದ್ದಾರೆ’ ಎಂದರು. ಸಂಘಟನೆಯ ಜಂಟಿ ಕಾರ್ಯದರ್ಶಿ ಡಿ.ಕುಮಾರ್, ಉಪಾಧ್ಯಕ್ಷ ಸಿ.ಕೆ. ಪಾಪಯ್ಯ, ಕಾರ್ಯದರ್ಶಿ ಎಂ.ಲೋಕೇಶ, ಸಹ ಕಾರ್ಯದರ್ಶಿ ನಿಟ್ರೆ ಮಹದೇವಯ್ಯ, ಗೋವಿಂದರಾಜ್ ದಾಸ್ ಇದ್ದರು.



ವೈಟ್‌ಫೀಲ್ಡ್ ಹೋಪ್ ಫಾರಂ ಬಳಿ ವಿವಿಧ ಸಂಘಟನೆಗಳ ಕಾರ್ಯಕರ್ತರು ಶುಕ್ರವಾರ ಪ್ರತಿಭಟನೆ ನಡೆಸಿದರು

‘ಶಿವಮೂರ್ತಿ ಶರಣರಿಗೆ ಕಠಿಣ ಶಿಕ್ಷೆ ವಿಧಿಸಿ’

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಪವಿತ್ರ ಕಾವಿ ಧರಿಸಿ ಹೆಣ್ಣುಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪಿ ಶಿವಮೂರ್ತಿ ಶರಣರನ್ನು ಕಠಿಣ ಶಿಕ್ಷೆಗೆ ಒಳಪಡಿಸಲು ಆಗ್ರಹಿಸಿ ಒತ್ತಾಯಿಸಿ ಕರ್ನಾಟಕ ರಿಪಬ್ಲಿಕನ್ ಪಾರ್ಟಿ, ದಲಿತ ರಕ್ಷಣಾ ವೇದಿಕೆ ಹಾಗೂ ಹೊಯ್ಸಳ ಮಹಿಳಾ ಜನಜಾಗೃತಿ ಸಮಿತಿಯ ಕಾರ್ಯಕರ್ತರು ವೈಟ್‌ಫೀಲ್ಡ್‌ನಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ಇಲ್ಲಿನ ಹೋಪ್ ಫಾರಂ ರಸ್ತೆಯಲ್ಲಿ ಸಂಚಾರ ತಡೆದು ಪ್ರತಿಭಟನೆ ನಡೆಸಿ ಸ್ವಾಮೀಜಿ ವಿರುದ್ಧ ಘೋಷಣೆ ಕೂಗಿದರು. ಕರ್ನಾಟಕ ದಲಿತ ರಕ್ಷಣಾ ವೇದಿಕೆ ಅಧಕ್ಷ ಸೋರಹುಣಸೆ ಎನ್.ವೆಂಕಟೇಶ್ ಮಾತನಾಡಿ, ‘ಮುಂದಿನ ದಿನಗಳಲ್ಲಿ ಅವರು ಯಾವುದೇ ಸಾರ್ವಜನಿಕ ಕಾರ್ಯಗಳಲ್ಲಿ ಭಾಗಿಯಾಗಬಾರದು. ಭಾಗಿಯಾದರೆ ಪ್ರತಿಭಟಿಸಲಾಗುವುದು’ ಎಂದು ಎಚ್ಚರಿಕೆ ನೀಡಿದರು.

ಬೆಂಗಳೂರು ಪೂರ್ವ ತಾಲ್ಲೂಕು ವಹ್ನಿಕುಲ ಕ್ಷತ್ರಿಯ ಸಂಘದ ಅಧ್ಯಕ್ಷ ವೇಣುಗೋಪಾಲ ಮಾತನಾಡಿ, ‘ಶಿವಮೂರ್ತಿ ಶರಣರು ಮಾಡಿರುವ ಕೃತ್ಯದಿಂದ ಮಠಗಳ ಮೇಲೆ ಗೌರವ ಇಲ್ಲದಂತಾಗಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

ಡಿಪಿಐ ರಾಜಣ್ಣ, ಮಾನವ ಹಕ್ಕುಗಳ ಹೋರಾಟ ಸಮಿತಿ ಅಧ್ಯಕ್ಷ ವೆಂಕಟರಾಜು, ಕೆ.ಆರ್.ಎಸ್. ಕಾರ್ಮಿಕ ಘಟಕ ಅಧ್ಯಕ್ಷ ಬೆಳತ್ತೂರು ವೆಂಕಟೇಶ್, ಆರ್.ಪಿ. ನಾಗೇಶ್ ಮತ್ತು ಆರುಣ್ ಕಾವೇರಪ್ಪ, ಮಹದೇವಪುರ ವರಲಕ್ಷ್ಮಿ, ಹೊಯ್ಸಳ ಜನಜಾಗೃತಿ ಸಮಿತಿ ಅಧ್ಯಕ್ಷೆ ರಮ್ಯಾ, ವಿಜಯ್ ಇದ್ದರು.

ನಿಷ್ಪಕ್ಷಪಾತ ತನಿಖೆಗೆ ಬಿಎಸ್‌ಪಿ ಆಗ್ರಹ

ಬೆಂಗಳೂರು: ಚಿತ್ರದುರ್ಗ ಮುರುಘಾಮಠದ ಶಿವಮೂರ್ತಿ ಮುರುಘಾ ಶರಣರ ಬಂಧನವನ್ನು ಸ್ವಾಗತಿಸಿರುವ ಬಿಎಸ್‌ಪಿ, ಈ ಪ್ರಕರಣದ ನಿಷ್ಪಕ್ಷಪಾತ ತನಿಖೆ ನಡೆಸಬೇಕು ಮತ್ತು ಬೇರೆ ರಾಜ್ಯಕ್ಕೆ ವರ್ಗಾಯಿಸಬೇಕು ಎಂದು ಒತ್ತಾಯಿಸಿದೆ.

‘ಗೃಹ ಸಚಿವರು ಶ್ರೀಗಳ ಪರ ವಕಾಲತ್ತು ವಹಿಸಿ ನಿರಪರಾಧಿ ಎಂಬಂತೆ ತನಿಖೆಯ ಪ್ರಾರಂಭ ಹಂತದಲ್ಲೇ ಹೇಳಿರುವುದು ತನಿಖೆಯ ದಿಕ್ಕುತಪ್ಪಿಸುವ ಕ್ರಮವಾಗಿದೆ. ಇವರ ವರ್ತನೆಯು ಸಂವಿಧಾನಕ್ಕೆ ಎಸಗಿದ ಅಪಚಾರವಾಗಿದೆ. ಕಾನೂನಿನ ಮುಂದೆ ಎಲ್ಲರೂ ಸರಿ ಸಮಾನರು ಎಂದು ಹೇಳುತ್ತಲೇ ಕೆಲವರು ಕಾನೂನಿಗಿಂತ ಮಿಗಿಲಾದವರು ಎಂಬುವಂತಹ ಪಕ್ಷಪಾತ ಧೋರಣೆಯು ಇದಾಗಿದೆ. ಗೃಹ ಸಚಿವರ ಈ ವರ್ತನೆ ಖಂಡನೀಯ’ ಎಂದು ಪಕ್ಷದ ರಾಜ್ಯ ಸಂಯೋಜಕ ಮಾರಸಂದ್ರ ಮುನಿಯಪ್ಪ ತಿಳಿಸಿದ್ದಾರೆ.

ಅಲ್ಲದೆ ಸಂತ್ರಸ್ತ ವಿದ್ಯಾರ್ಥಿನಿಯರ ಪೈಕಿ ಒಬ್ಬ ಪರಿಶಿಷ್ಟ ಜಾತಿಯ ವಿದ್ಯಾರ್ಥಿನಿಯೂ ಇರುವುದರಿಂದಾಗಿ ಶ್ರೀಗಳ ವಿರುದ್ಧ ಎಸ್. ಸಿ. ಮತ್ತು ಎಸ್. ಟಿ. ದೌರ್ಜನ್ಯ ತಡೆ ಕಾಯ್ದೆ ಅನ್ವಯ ದೂರು ದಾಖಲಾಗಿದ್ದು, ಆ ಪ್ರಕರಣದಲ್ಲೂ ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದ್ದಾರೆ.

ಸಿಎಸ್‌ಐಆರ್ ಎನ್‌ಎಎಲ್‌ಗೆ ನೇಮಕ

ಪ್ರಜಾವಾಣಿ ವಾರ್ತೆ



ಡಾ. ಅಭಯ್ ಅನಂತ್ ಪಾಶಿಲ್ಕರ್

ಬೆಂಗಳೂರು: ಸಿಎಸ್‌ಐಆರ್–ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಾಲಯದ ನಿರ್ದೇಶಕರಾಗಿ ಡಾ.ಅಭಯ್ ಅನಂತ್ ಪಾಶಿಲ್ಕರ್ ಅವರು ಶುಕ್ರವಾರ ಅಧಿಕಾರ ಸ್ವೀಕರಿಸಿದ್ದಾರೆ.

ಎನ್‌ಎಎಲ್ ಸಿಸ್ಟಮ್ಸ್ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರಾಗಿದ್ದ ಅವರು, ಸಿವಿಲ್ ಏರ್‌ಕ್ರಾಫ್ಟ್ ಪ್ರೋಗ್ರಾಮ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದರು. ಎಲ್‌ಸಿಎದಂತಹ ಮಹತ್ವದ ಯೋಜನೆಗಳಲ್ಲಿ ಅವರು ಪ್ರಮುಖವಾಗಿ ಕಾರ್ಯನಿರ್ವಹಿಸಿದ್ದಾರೆ.

‘ಸಿದ್ದರಾಮಯ್ಯ ಕ್ಷಮೆ ಕೋರಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಪಕ್ಷ ನಾಯಕ ಸಿದ್ದರಾಮಯ್ಯ, ಶಾಸಕ ಕೃಷ್ಣಪ್ಪ ಮತ್ತು ಪ್ರಿಯಾಕೃಷ್ಣ ಅವರು ವಿ.ಸೋಮಣ್ಣ ವಿರುದ್ಧ ಮಾಡಿರುವ ಆರೋಪಗಳು ನಿರಾಧಾರವಾದವು. ಕೂಡಲೇ ಅವರು ಕ್ಷಮೆಯಾಚಿಸಬೇಕು’ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ನಿರ್ದೇಶಕ ಟಿ.ಬಿ. ಬಳಗಾವಿ ಒತ್ತಾಯಿಸಿದರು.

‘ಗೋವಿಂದರಾಜನಗರ ಮತ್ತು ವಿಜಯನಗರ ವಿಧಾನಸಭಾ ಕ್ಷೇತ್ರಗಳಲ್ಲಿ ಶಾಸಕ ಕೃಷ್ಣಪ್ಪ ಮತ್ತು ಮಾಜಿ ಶಾಸಕ ಪ್ರಿಯಾಕೃಷ್ಣ ಅವರ ಸಾಧನೆ ಶೂನ್ಯ. ಸಚಿವ ವಿ.ಸೋಮಣ್ಣ ವಿರುದ್ಧ ಅನಗತ್ಯ ಆರೋಪ ಮಾಡುತ್ತಿರುವುದು ಖಂಡನೀಯ’ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಪ್ರಿಯಾಕೃಷ್ಣ 9.5 ಹಾಗೂ ಕೃಷ್ಣಪ್ಪ 15 ವರ್ಷ ಶಾಸಕರಾಗಿ ಕಾರ್ಯನಿರ್ವಹಿಸಿದ್ದು, ಯಾವುದೇ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿಲ್ಲ. ವಿ.ಸೋಮಣ್ಣ ನಿರ್ಮಿಸಿರುವ ರಸ್ತೆ, ಉದ್ಯಾನಗಳನ್ನು ಸರಿಯಾಗಿ ನಿರ್ವಹಣೆ ಮಾಡಲು ಅಪ್ಪ–ಮಗನಿಗೆ ಸಾಧ್ಯವಾಗುತ್ತಿಲ್ಲ. ಕೃಷ್ಣಪ್ಪ ಅವರು ತಾವರೆಕೆರೆ ಬಳಿ ಸೊಸೈಟಿ ಮೂಲಕ ನಿವೇಶನ ಕೊಡಿಸುವುದಾಗಿ ಹೇಳಿ, ಜನರಿಂದ ಹಣ ಪಡೆದು ವಂಚಿಸಿದ್ದಾರೆ. ಇಂತಹ ವಂಚಕರನ್ನು ಸಮರ್ಥಿಸಿಕೊಳ್ಳುವುದು ಸರಿಯಲ್ಲ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘2017ರಲ್ಲಿ ರಾಜೀವಗಾಂಧಿ ವಸತಿ ಯೋಜನೆ ಅಡಿಯಲ್ಲಿ 1 ಲಕ್ಷ ಬಹುಮಹಡಿ ವಸತಿ ನಿರ್ಮಿಸುವುದಾಗಿ ಅಂದಿನ ಸರ್ಕಾರ ಘೋಷಣೆ ಮಾಡಿತ್ತು. ಎಚ್‌.ಡಿ. ಕುಮಾರಸ್ವಾಮಿಯವರ ಸಮ್ಮಿಶ್ರ ಸರ್ಕಾರದಲ್ಲಿ ₹4,475 ಕೋಟಿ ವೆಚ್ಚದಲ್ಲಿ 46,499 ಮನೆಗಳನ್ನು ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ನೀಡಿತ್ತು. 28,754 ಮನೆಗಳಿಗೆ 2019ರ ಮಾರ್ಚ್‌ನಲ್ಲಿ ₹3,035 ಕೋಟಿ ವೆಚ್ಚದಲ್ಲಿ ಎಲ್‌ಒಸಿ ನೀಡಿ, 2019ರ ಜೂನ್‌ನಲ್ಲಿ ಗುತ್ತಿಗೆದಾರರೊಂದಿಗೆ ಕರಾರು ಮಾಡಿಕೊಂಡಿದ್ದರು. ವಿವಾದರಹಿತ ಜಮೀನನ್ನು ಗುತ್ತಿಗೆದಾರರರಿಗೆ ಹಸ್ತಾಂತರ ಮಾಡದ ಕಾರಣ ಮೂರು ವರ್ಷವಾದರೂ ಕಾಮಗಾರಿ ಪ್ರಾರಂಭವಾಗಿರಲಿಲ್ಲ. ವಿ.ಸೋಮಣ್ಣ ಸಚಿವರಾದ ಮೇಲೆ 1,040 ಎಕರೆ ಜಮೀನನ್ನು ನಿಗಮದ ವಶಕ್ಕೆ ಪಡೆದು, ಈ ಪೈಕಿ 553 ಎಕರೆ ಜಮೀನಿನಲ್ಲಿ 48,498 ಮನೆಗಳ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿದರು. ಸದ್ಯ 2000 ಮನೆಗಳು ನಿರ್ಮಾಣವಾಗಿದ್ದು, 10,000 ಮನೆಗಳು ಪೂರ್ಣಗೊಳ್ಳುವ ಹಂತದಲ್ಲಿವೆ’ ಎಂದು ಬಿಬಿಎಂಪಿ ಮಾಜಿ ಸದಸ್ಯ ಡಾ.ರಾಜು ಮಾಹಿತಿ ನೀಡಿದರು.

ಅಜ್ಜಿಗೆ ಜಮೀನು ವಾಪಸ್

ಚಿಕ್ಕಬಳ್ಳಾಪುರ: ಅಜ್ಜಿಯ ಯೋಗಕ್ಷೇಮ ನೋಡಿಕೊಳ್ಳದ ಕಾರಣ ಮೊಮ್ಮಗಳ ಹೆಸರಿನಲ್ಲಿನಲ್ಲಿದ್ದ ಜಮೀನನ್ನು ಇಲ್ಲಿನ ಉಪವಿಭಾಗಾಧಿಕಾರಿ ನ್ಯಾಯಾಲಯ ಅಜ್ಜಿಗೆ ವಾಪಸ್ ಕೊಡಿಸಿದೆ. ತಾಲ್ಲೂಕಿನ ಕೇತೇನಹಳ್ಳಿ ಗ್ರಾಮದ ಮುನಿವೆಂಕಟಮ್ಮ ಇಟ್ಟಪ್ಪನಹಳ್ಳಿ ಗ್ರಾಮದಲ್ಲಿ 2.14 ಎಕರೆ ಜಮೀನು ಹೊಂದಿದ್ದರು. ಅನಕ್ಷರಸ್ಥೆಯಾದ ಅವರಿಂದ ಮೊಮ್ಮಗಳು ಶೈಲಜಾ ದಾನಪತ್ರದ ಮೂಲಕ ಈ ಜಮೀನನ್ನು ಪಡೆದಿದ್ದರು. ತಮ್ಮ ಹೆಸರಿಗೆ ಖಾತೆಯನ್ನೂ ಮಾಡಿಸಿಕೊಂಡಿದ್ದರು. ನಂತರದ ದಿನಗಳಲ್ಲಿ ಮೊಮ್ಮಗಳು, ಮುನಿವೆಂಕಟಮ್ಮ ಅವರ ಯೋಗಕ್ಷೇಮ ನೋಡಿಕೊಳ್ಳದೆ ನಿರ್ಲಕ್ಷಿಸಿದ್ದರು.

ಅಂಬೇಡ್ಕರ್ ಹೋಲುವ ಗಣೇಶ ಮೂರ್ತಿ: ದೂರು

ಗಂಗಾವತಿ (ಕೊಪ್ಪಳ ಜಿಲ್ಲೆ): ಇಲ್ಲಿನ ಅಂಬೇಡ್ಕರ್ ನಗರದಲ್ಲಿ ವಿನಾಯಕ ಸ್ನೇಹವೃಂದ ಯುವಕ ಮಂಡಳಿಯು ಪ್ರತಿಷ್ಠಾಪಿಸಿದ ಡಾ. ಬಿ.ಆರ್. ಅಂಬೇಡ್ಕರ್ ಅವರನ್ನು ಹೋಲುವ ರೀತಿ ಗಣೇಶ ಮೂರ್ತಿಗೆ ಕೆಲ ದಲಿತ ಸಂಘಟನೆಗಳಿಂದ ವಿರೋಧ ವ್ಯಕ್ತವಾದ ಬೆನ್ನಲ್ಲೇ ಗಂಗಾವತಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಸಂವಿಧಾನ ಶಿಲ್ಪಿಗೆ ಅಪಮಾನಿಸಿದೆ’ ಎಂದು ಪರಿಶಿಷ್ಟ ಸಂಘಟನೆ ಹೋರಾಟಗಾರ ಹುಲಿಗಪ್ಪ ಮಾಗಿ ದೂರು ನೀಡಿದ್ದಾರೆ.

ನಗರದಲ್ಲಿ ಇಂದು


ವಾರ್ಷಿಕೋತ್ಸವ ಸಮಾರಂಭ: ಉದ್ಘಾಟನೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಅತಿಥಿಗಳು: ಪ್ರದೀಪ್.ಪಿ., ಪಿ ರಾಮಯ್ಯ, ಎಚ್ ಆರ್. ರಂಗನಾಥ್, ಅಧ್ಯಕ್ಷತೆ: ಡಿ ಎಸ್. ಪ್ರತಿಮಾ ಆಯೋಜನೆ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಲ್ಲೇಶ್ವರ, ಬೆಳಿಗ್ಗೆ 10

ಪ್ರಥಮ ಬಿ.ಟೆಕ್ ಮತ್ತು ಬಿ.ಡೆಸ್ 2022–23ರ ಶೈಕ್ಷಣಿಕ ತರಗತಿಗಳ ಉದ್ಘಾಟನಾ ಸಮಾರಂಭ: ಅಧ್ಯಕ್ಷತೆ: ಎಂ.ಆರ್. ದೊರೆಸ್ವಾಮಿ, ಅತಿಥಿಗಳು: ದೋಷಿ ಜಯಕುಮಾರ್, ಡಿ.ಜವಹರ್, ಆಯೋಜನೆ: ಪಿಇಎಸ್ ಯೂನಿವರ್ಸಿಟಿ, ಸ್ಥಳ: ಪಿಇಎಸ್ ಯೂನಿವರ್ಸಿಟಿ ಬನಶಂಕರಿ, ಬೆಳಿಗ್ಗೆ 10.30

ರವಿ ಎಸ್. ಕೋಟೆಗದ್ದೆ ಅವರ ‘ಮಿಸ್ಟಿಕ್ ಜರ್ನಿ’ ಚಿತ್ರಕಲಾ ಪ್ರದರ್ಶನ: ಅತಿಥಿಗಳು: ವಿಜಯ್ ರೆಡ್ಡಿ, ಸಿ.ಎಸ್. ಸುಧೀರ್, ಸುಮಂತ್ ಅಶೋಕ್, ಕೆ.ಆರ್. ಕೃಷ್ಣ, ಅಚ್ಯುತ್ ಗೌಡ, ಆಯೋಜನೆ: ಫಿಡಿಲಿಟಸ್ ಗ್ಯಾಲರಿ, ಬ್ರಿಗೇಡ್ ಸಾಫ್ಟ್‌ವೇರ್ ಪಾರ್ಕ್, ಬನಶಂಕರಿ 2ನೇ ಹಂತ, ಬೆಳಿಗ್ಗೆ 11

ಚಿತ್ರಕಲೆ ಪ್ರದರ್ಶನ: ಉದ್ಘಾಟನೆ: ಬಾದಲ್ ನಂಜುಂಡಸ್ವಾಮಿ, ಆಯೋಜನೆ: ಆರ್ಟ್ ಬೆಂಗಳೂರು ಕಲ್ಲೆಕ್ಟಿವ್, ಸ್ಥಳ: ವಿಸ್ಮಯ ಗ್ಯಾಲರಿ, ರಂಗೋಲಿ ಆರ್ಟ್ ಸೆಂಟರ್, ಎಂ ಜಿ ರಸ್ತೆ ಮೆಟ್ರೊ ನಿಲ್ದಾಣ, ಬೆಳಿಗ್ಗೆ 11

ಕಥಾಕೀರ್ತನ ವೈಭವ: ಹರಿಕಥೆ: ಶ್ರದ್ಧಾ ಗುರುದಾಸ್, ಉಪಸ್ಥಿತಿ: ಸ್ವಾಮಿ ಮಂಗಲನಾಥಾನಂದ, ಜಗ್ಗೇಶ್, ಪಿ. ವೇಣುಗೋಪಾಲ, ನಾಗಲಕ್ಷ್ಮಿ ಕೆ. ರಾವ್, ಗ್ರಂಥ ಲೋಕಾರ್ಪಣೆ: ದತ್ತಾತ್ರೇಯ ಎಲ್. ವೇಲಣಕರ್ ರಚಿಸಿದ ಆಂಗ್ಲ ಪುಸ್ತಕ ‘ದ ಸ್ಪ್ಲೆಂಡರ್ ಆಫ್ ಕಾಥಾಕೀರ್ತನ’, ಸ್ಥಳ:ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ಸಂಜೆ 4.30,



ನೃತ್ಯ ಭ್ರಮರಿ

‘ನೃತ್ಯ ಭ್ರಮರಿ’ ಬೆಂಗಳೂರು ಪದವಿಪೂರ್ವ ಮತ್ತು ಪದವಿ ಕಾಲೇಜುಗಳ ಅಂತರ ಕಾಲೇಜುಗಳ ಸಮೂಹ ನೃತ್ಯೋತ್ಸವ: ಉದ್ಘಾಟನೆ: ಸಿ. ಸೋಮಶೇಖರ್, ದಯಾನಂದ್ ಕೆ.ಎ., ಶೀಲಾ ಚಂದ್ರಶೇಖರ್, ಉಪಸ್ಥಿತಿ: ಶ್ರೀನಿವಾಸ್ ಜಿ. ಕಪ್ಪಣ್ಣ, ಬೆಳಿಗ್ಗೆ 10, ನೃತ್ಯ ಪ್ರಯೋಗ: ಸ್ನೇಹ ಕಪ್ಪಣ್ಣ ಅವರ ಶಿಷ್ಯರಾಗಿ ತರಬೇತಿ ಪಡೆದ ಕಲಾವಿದರ ನೃತ್ಯ ಪ್ರಯೋಗ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 6.30

‘ವಚನ ದರ್ಶನ’ ಧ್ವನಿ ಸುರಳಿಗಳ ಬಿಡುಗಡೆ ಸಮಾರಂಭ: ಬಿಡುಗಡೆ: ಸಿ.ಟಿ ರವಿ, ಆಶಯ ನುಡಿ: ಎಚ್.ಎಸ್. ವೆಂಕಟೇಶ್ ಮೂರ್ತಿ, ಅತಿಥಿಗಳು: ವಿಶ್ವೇಶ್ವರ ಭಟ್, ಅಧ್ಯಕ್ಷತೆ: ಎಸ್. ಷಡಕ್ಷರಿ, ಸಿ. ಸೋಮಶೇಖರ, ಆಯೋಜನೆ: ಸಿ.ಸೋಮಶೇಖರ, ಎನ್. ಸರ್ವಮಂಗಳ ಸಾಹಿತ್ಯ ಸೇವಾ ಪ್ರತಿಷ್ಠಾನ, ಸ್ಥಳ: ಗಾಂಧಿಭವನ, ಸಂಜೆ 5.30

ವೇದ ಸೌರಭ–2022: ಸಾನ್ನಿಧ್ಯ: ಶಿವಾನುಭವ ಚರಮೂರ್ತಿ ಶಿವರುದ್ರ ಸ್ವಾಮೀಜಿ, ಉಪಸ್ಥಿತಿ: ಆರ್. ಎಲ್. ಕಶ್ಯಪ, ಉಷಾರಾಣಿ ರಾವ್, ಪೋಶೆಟ್ಟಿಹಳ್ಳಿ ಗುರುರಾಜ, ಆಯೋಜನೆ: ಅರೋಬಿಂದೊ ಕಪಾಲಿಶಾಸ್ತ್ರಿ ವೇದ ಸಂಸ್ಕೃತಿ ಸಂಸ್ಥೆ, ಸ್ಥಳ: ಡಾ.ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಸಂಜೆ 5.30

ವಯಲಿನ್ ಕಛೇರಿ: ವಯಲಿನ್: ಮೈಸೂರು ಮಂಜುನಾಥ್, ಮೈಸೂರು ನಾಗರಾಜ್, ಮೃದಂಗ: ಬಿ.ಸಿ. ಮಂಜುನಾಥ, ತಬಲಾ: ರೂಪಕ್ ಕಲ್ಲೂರ್‌ಕರ್, ಆಯೋಜನೆ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಸ್ಥಳ: ವಾಡಿಯಾ ಹಾಲ್, ಸಂಜೆ 6

ಡಾ. ಮೈತ್ರಿ ಶಂಕರ್ ಅವರ ‘ಈಸ್’ ಪುಸ್ತಕ ಬಿಡುಗಡೆ ಸಮಾರಂಭ: ಬಿಡುಗಡೆ: ಸೌಮ್ಯ ರೆಡ್ಡಿ, ಸೈಯದ್ ಕಿರ್ಮಾನಿ, ಆಯೋಜನೆ: ದಿ ಗ್ರೀನ್ ಹಬ್, ಸ್ಥಳ: 3211, 1ನೇ ಮುಖ್ಯರಸ್ತೆ, ಬನಶಂಕರಿ 3ನೇ ಹಂತ, ಸಂಜೆ 6


ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಗಾಯನ: ಎಂ.ಎಸ್. ಶ್ರೀನಿವಾಸ, ವಯಲಿನ್: ಪ್ರೇಮಾ ವಿವೇಕ್, ಮೃದಂಗ: ಎಎಸ್‌ಎನ್ ಸ್ವಾಮಿ, ಘಟ: ಶ್ರೀನಿಧಿ ಕೌಂಡಿನ್ಯ, ಆಯೋಜನೆ: ಶ್ರೀಶ್ರದ್ಧಾ ಸಾಂಸ್ಕೃತಿಕ ಸಂಘ, ಸ್ಥಳ: ಎಸ್‌ಬಿಐ ಆಫೀಸರ್ಸ್ ಕಾಲೊನಿ, ಸ್ಟಾಫ್ ಕ್ಲಬ್ ಹಾಲ್, ಶ್ರದ್ಧಾ ಕಾಲೊನಿ, ಬಸವೇಶ್ವರನಗರ, ಸಂಜೆ 6.30

‘ನಮ್ಮಲ್ಲೇ ಮೊದಲು’ ನಾಟಕ ಪ್ರದರ್ಶನ: ರಚನೆ, ನಿರ್ದೇಶನ: ಚಂದನ್ ಕುಮಾರ್, ಪ್ರಸಾಧನ: ವಿಜಯ ಬೆಣಚ, ಬೆಳಕು: ರವಿಶಂಕರ್, ನಿರ್ವಹಣೆ: ಚಂದ್ರಮೋಹನ್, ಆಯೋಜನೆ: ಸ್ಟೋರಿ ಟೆಲ್ಲಿಂಗ್ ಡಿಸೀಸ್, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ಮಿಲ್ಕ್ ಕಾಲೊನಿ ಗಣೇಶ ಹಬ್ಬ ಸಂಗೀತ ಕಾರ್ಯಕ್ರಮ: ಪ್ರಸ್ತುತಿ: ರಾಜೇಶ್ ಕೃಷ್ಣನ್, ಚಂದನ್ ಶೆಟ್ಟಿ, ಆಯೋಜನೆ: ಸ್ವಸ್ತಿಕ್ ಯುವಕರ ಸಂಘ, ಸ್ಥಳ: ಮಿಲ್ಕ್‌ಕಾಲೊನಿ ರಾಜಾಜಿನಗರ, ಸಂಜೆ 7

ನಿಧನ ವಾರ್ತೆ

ಎನ್. ರಮೇಶ್ (ಸಿಂಹಣ್ಣ)



ಬೆಂಗಳೂರು: ವಿಶ್ವಶಾಂತಿ ಪ್ರಿಯ ಡಾ. ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ಹಾಗೂ ಮಾಜಿ ಕಬಡ್ಡಿ ಆಟಗಾರ ಎನ್.ರಮೇಶ್ (ಸಿಂಹಣ್ಣ) (60) ಶುಕ್ರವಾರ ನಿಧನರಾದರು. ಇವರಿಗೆ ಪತ್ನಿ ಮತ್ತು ಮಗ ಇದ್ದಾರೆ. ಶನಿವಾರ ಮಧ್ಯಾಹ್ನ 1 ಗಂಟೆಗೆ ಬನಶಂಕರಿ ವಿದ್ಯುತ್ ಚಿತಾಗಾರದಲ್ಲಿ ಅಂತ್ಯಕ್ರಿಯೆ ನಡೆಯಲಿದೆ.

ಪುಣೆ ರೇಸ್

ಎ ಸ್ಟಾರ್ ಈಸ್ ಬಾರ್ನ್ ಗೆಲ್ಲುವ ನಿರೀಕ್ಷೆ

ಇದಾರ್ ಗೋಲ್ಡ್ ಟ್ರೋಫಿ ಶನಿವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಎ ಸ್ಟಾರ್ ಈಸ್ ಬಾರ್ನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಮೈ ಟ್ರೆಷರ್ 7, ಟೈಮ್ 10, ಸಿಮ್ ಸಿಮ್ 2
2ನೇ ರೇಸ್: ಡೈಫ್ 2, ಬಿಯಾಂಡ್ ಮೆಷರ್ (6), ಲೆಟೊ (3)
3ನೇ ರೇಸ್: ಕ್ಯಾಪ್ರಿಫ್ಲಾ 10, ಜೂಸ್ಟ್ 3, ಸೋ ಸೋ ಸ್ಪೆಷಲ್ 4
4ನೇ ರೇಸ್: ಎ ಸ್ಟಾರ್ ಈಸ್ ಬಾರ್ನ್ 2, ಜುಕ್ಕರೆಲ್ಲಿ 1
5ನೇ ರೇಸ್: ಲಿಯೆಮ್ 2, ಬ್ರೇವ್ ಬ್ಯೂಟ 8, ಗೋಲ್ಡನ್ ಕಿಂಗ್ಡಮ್ 1
6ನೇ ರೇಸ್: ಸೆಲ್ಲಿನಿ 1, ಲಿಟ್ 5, ಬೇಬಿ ಬಝೂಕ 3
7ನೇ ರೇಸ್: ಹಿಲಾದ್ 10, ಹಿಲ್ಮಾ ಕ್ಲಿಂಟ್ 1, ಡಿವೈನ್ ಸೋಲ್ 9

ಉತ್ತಮ ಬೆಟ್: ಡೈಫ್

ಜಾಕ್‌ಪಾಟ್	ಟ್ರಿಬಲ್
3,4,5,6,7	4,5,6

ಎನ್‌ಎಂಪಿಎ: ₹3,800 ಕೋಟಿ ಮೌಲ್ಯದ ಯೋಜನೆಗಳಿಗೆ ಚಾಲನೆ ನೀಡಿದ ಪ್ರಧಾನಿ

ಅಭಿವೃದ್ಧಿಗೆ ಹಸಿರು ಸ್ಪರ್ಶ: ಮೋದಿ

ಪ್ರಜಾವಾಣಿ ವಾರ್ತೆ

ಮಂಗಳೂರು: 'ಪರಿಸರಕ್ಕೆ ಹೆಚ್ಚಿನ ಗಮನವನ್ನು ಕೊಟ್ಟು, ಅಭಿವೃದ್ಧಿಗೆ 'ಹಸಿರು ಸ್ಪರ್ಶ' ನೀಡುವಲ್ಲಿ ಕೇಂದ್ರ ಸರ್ಕಾರವು ಕಾರ್ಯಪ್ರವೃತ್ತವಾಗಿದೆ. ಎಂಆರ್‌ಪಿಎಲ್‌ನಲ್ಲಿ ಕೈಗೆತ್ತಿಕೊಳ್ಳಲಾಗಿರುವ ಯೋಜನೆಗಳು ಸರ್ಕಾರದ 'ಹಸಿರು ಅಭಿವೃದ್ಧಿ'ಯ ಸಂಕಲ್ಪವನ್ನು ಪ್ರತಿಫಲಿಸುತ್ತವೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ನವ ಮಂಗಳೂರು ಬಂದರು ಪ್ರಾಧಿಕಾರ (ಎನ್‌ಎಂಪಿಎ)ದ ಅಡಿ ಕೈಗೆತ್ತಿಕೊಂಡಿರುವ ₹3,800 ಮೌಲ್ಯದ ಎಂಟು ಯೋಜನೆಗಳಿಗೆ ಶುಕ್ರವಾರ ಇಲ್ಲಿನ ಗೋಲ್ಡ್ ಫಿಂಚ್ ಮೈದಾನದಲ್ಲಿ ಚಾಲನೆ/ಅಡಿಗಲ್ಲು ನೆರವೇರಿಸಿ ಅವರು ಮಾತನಾಡಿದರು.

ಎಂಆರ್‌ಪಿಎಲ್ ಘಟಕದ ಬಿಎಸ್–6ಗೆ ಉನ್ನತೀಕರಣ ಹಾಗೂ ಸಮುದ್ರದ ನೀರನ್ನು ಶುದ್ಧೀಕರಣ ಯೋಜನೆಗಳನ್ನು ಪ್ರಸ್ತಾಪಿಸಿದ ಅವರು, 'ಎಂಆರ್‌ಪಿಎಲ್ ತನ್ನ ಅಗತ್ಯಕ್ಕಾಗಿ ನದಿಯ ನೀರನ್ನು ಅವಲಂಬಿಸಿತ್ತು. ನಿರ್ಲವಣೀಕರಣ ಮಾಡಿ ಸಮುದ್ರದ ನೀರಿನ ಬಳಕೆಯಿಂದ ನದಿಯ ಮೇಲಿನ ಅವಲಂಬನೆ ಕಡಿಮೆಯಾಗಲಿದೆ' ಎಂದರು.

ಕಳೆದ ಎಂಟು ವರ್ಷಗಳಲ್ಲಿ ದೇಶದ ಬಂದರುಗಳ ಸಾಮರ್ಥ್ಯವನ್ನು ದ್ವಿಗುಣಗೊಳಿಸಲಾಗಿದೆ. ಆಧುನಿಕ ಭಾರತದ ನಿರ್ಮಾಣಕ್ಕೆ ಮೂಲಸೌಲಭ್ಯಗಳನ್ನು ಅಭಿವೃದ್ಧಿಪಡಿಸುವುದು ಅತ್ಯಗತ್ಯ. ಇಲ್ಲಿ ಕೈಗೆತ್ತಿಕೊಳ್ಳಲಾಗಿರುವ ಯೋಜನೆಗಳು ಕಾರ್ಯಗತವಾದಾಗ ಈ ಭಾಗದ ಆರ್ಥಿಕತೆ ಹಾಗೂ ಮೀನುಗಾರರ ಅಭಿವೃದ್ಧಿಗೆ ಇನ್ನಷ್ಟು ವೇಗ ಲಭಿಸಲಿದೆ ಎಂದರು.



ಮಂಗಳೂರಿನ ಗೋಲ್ಡ್ ಫಿಂಚ್ ಮೈದಾನದಲ್ಲಿ ಪ್ರಧಾನಿ ನರೇಂದ್ರ ಮೋದಿ ಸಮಾವೇಶ ಮುಗಿಸಿ ವಾಪಸ್ ತೆರಳುತ್ತಿರುವ ಜನಸ್ತೋಮ ಚಿತ್ರ: ಅಪುಲ್ ಇರಾ

ದೇಶವನ್ನು ಅಭಿವೃದ್ಧಿಹೊಂದಿದ ರಾಷ್ಟ್ರಗಳ ಸಾಲಿನಲ್ಲಿ ನಿಲ್ಲಿಸಬೇಕಾದರೆ 'ಮೇಕ್ ಇನ್ ಇಂಡಿಯಾ' ಯೋಜನೆಗೆ ಗತಿ ನೀಡುವುದು ಅನಿವಾರ್ಯ. ಜೊತೆಗೆ ರಫ್ತು ಪ್ರಮಾಣವನ್ನು ಹೆಚ್ಚಿಸಿ, ಉತ್ಪನ್ನಗಳನ್ನು ಸ್ಪರ್ಧಾತ್ಮಕ ಬೆಲೆಯಲ್ಲಿ ನೀಡುವುದು ಅಗತ್ಯ. ಮೂಲಸೌಲಭ್ಯ ವೃದ್ಧಿಯಲ್ಲಿ ಕಳೆದ ಕೆಲವು ವರ್ಷಗಳಲ್ಲಿ ಅಭೂತಪೂರ್ವ ಕೆಲಸಗಳಾಗಿವೆ. ಭಾರತಮಾಲಾ, ಸಾಗರ ಮಾಲಾ ಯೋಜನೆಗಳು 'ಒಂದು ಜಿಲ್ಲೆ ಒಂದು ಉತ್ಪನ್ನ' ಯೋಜನೆಗೆ ಪೂರಕವಾಗಿ ಕೆಲಸ ಮಾಡುತ್ತಿವೆ.

'ಸೈನ್ಯ ಮತ್ತು ಸಾಗರ ಶಕ್ತಿ'

'ದೇಶದ ಸೈನ್ಯ ಮತ್ತು ಸಾಗರ ಶಕ್ತಿಗೆ ಶುಕ್ರವಾರ ಅತ್ಯಂತ ಮಹತ್ವದ ದಿನ' ಎಂದು ಮೋದಿ ಬಣ್ಣಿಸಿದರು.

ದೇಶದಲ್ಲೇ ತಯಾರಿಸಿದ ಮೊತ್ತಮೊದಲ ಯುದ್ಧ ವಿಮಾನ ವಾಹಕ ಹಡಗು ಐಎನ್‌ಎಸ್ ವಿಕ್ರಾಂತ್ ಅನ್ನು ಕೊಚ್ಚಿಯಲ್ಲಿ ಲೋಕಾರ್ಪಣೆ ಮಾಡಿ ಬಂದಿದ್ದ ಮೋದಿ, 'ದೇಶದ ಪ್ರತಿಯೊಬ್ಬನೂ ಹೆಮ್ಮೆಪಡಬಹುದಾದ ಸಾಧನೆ ಇದು. ಮಂಗಳೂರಿನಲ್ಲಿ ಸಾಗರದ ಶಕ್ತಿಯನ್ನು ಬಳಸಿಕೊಳ್ಳುವ ನಿಟ್ಟಿನಲ್ಲಿ ₹3800 ಕೋಟಿ ಮೊತ್ತದ ವಿವಿಧ ಯೋಜನೆಗಳಿಗೆ ಶಂಕುಸ್ಥಾಪನೆ, ಲೋಕಾರ್ಪಣೆ ಆಗಿರುವುದು ಸಹ ಅಷ್ಟೇ ಮಹತ್ವದ ಬೆಳವಣಿಗೆ. ಇಡೀ ಕರಾವಳಿಯ ಅಭಿವೃದ್ಧಿ ದಿಕ್ಕಿನಲ್ಲಿ ಇದು ಮಹತ್ವದ ಹೆಜ್ಜೆ ಎಂದರು.

ಸ್ಥಳೀಯ ಉತ್ಪನ್ನಗಳಿಗೆ ಅಂತರರಾಷ್ಟ್ರೀಯ ಮಾರುಕಟ್ಟೆ ಒದಗಿಸಲು ಇವು ಸಹಕಾರಿಯಾಗಿವೆ. ಈ ಎರಡೂ ಯೋಜನೆಗಳ ಗರಿಷ್ಠ ಲಾಭ ಪಡೆದ ರಾಜ್ಯಗಳಲ್ಲಿ ಕರ್ನಾಟಕವೂ ಸೇರಿದೆ ಎಂದರು.

'ಸ್ವಾತಂತ್ರ್ಯ ನಂತರ ಏಳು ದಶಕಗಳವರೆಗೆ ಅಭಿವೃದ್ಧಿ ಯೋಜನೆಗಳ ಲಾಭವು ಉಳ್ಳವರಿಗಷ್ಟೇ ಸಿಗುತ್ತಿತ್ತು. ಈಗ ಎಲ್ಲಾ ವರ್ಗದ ಜನರಿಗೂ ಸಿಗುತ್ತಿದೆ. ಗೌರವಯುತ ಬದುಕಿಗೆ ಪಕ್ಕಾ ಮನೆ, ಕುಡಿಯಲು ಶುದ್ಧ ನೀರು, ಶೌಚಾಲಯ ಹಾಗೂ ಹೊಗೆರಹಿತ ಅಡುಗೆ ಕೋಣೆ ಅಗತ್ಯ. ದೇಶದ ಕೋಟ್ಯಂತರ ಜನರಿಗೆ ಇವುಗಳನ್ನು ಒದಗಿಸಲು ಸರ್ಕಾರಕ್ಕೆ ಸಾಧ್ಯವಾಗಿದೆ. ಜನರ ನಿರೀಕ್ಷೆಗಳನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ 'ಡಬಲ್ ಎಂಜಿನ್ ಸರ್ಕಾರ' ಕಾರ್ಯಪ್ರವೃತ್ತವಾಗಿದೆ ಎಂದರು.

ಕೇಂದ್ರದ ವಿವಿಧ ಯೋಜನೆಗಳ ಬಗ್ಗೆ ಮಾಹಿತಿ ನೀಡಿದ ಮೋದಿ, 'ಕರ್ನಾಟಕದಲ್ಲಿ ಹೆದ್ದಾರಿಗಳ ಅಭಿವೃದ್ಧಿಗಾಗಿ ಒಟ್ಟಾರೆ ₹ 70,000 ಕೋಟಿ ವೆಚ್ಚ ಮಾಡಲಾಗಿದೆ. ಇನ್ನೂ ಒಂದು ಲಕ್ಷ ಕೋಟಿ ವೆಚ್ಚದ ಪ್ರಸ್ತಾವನೆಗಳು ಅನುಮೋದನೆಯ ಹಂತದಲ್ಲಿವೆ. 2014ಕ್ಕೆ ಹೋಲಿಸಿದರೆ, ಕರ್ನಾಟಕದ ರೈಲ್ವೆ ಬಜೆಟ್‌ನಲ್ಲಿ ನಾಲ್ಕು ಪಟ್ಟು ಹೆಚ್ಚಳವಾಗಿದೆ. ಆಯುಷ್ಮಾನ್ ಯೋಜನೆಯಲ್ಲಿ ರಾಜ್ಯದಲ್ಲಿ 30 ಲಕ್ಷ ಬಡವರು ಉಚಿತವಾಗಿ ಚಿಕಿತ್ಸೆ ಪಡೆದಿದ್ದಾರೆ. ಅವರಿಗೆ ಒಟ್ಟಾರೆ ಸುಮಾರು ₹4000 ಕೋಟಿ ಉಳಿತಾಯವಾಗಿದೆ. ರಾಜ್ಯದಲ್ಲಿ 30 ಲಕ್ಷಕ್ಕೂ ಹೆಚ್ಚು ಮನೆಗಳಿಗೆ ನೀರಿನ ಸಂಪರ್ಕ ನೀಡಲಾಗಿದೆ. 8 ಲಕ್ಷ ಮನೆಗಳ ನಿರ್ಮಾಣಕ್ಕೆ ಅನುಮೋದನೆ ನೀಡಲಾಗಿದೆ' ಎಂದರು.

ಪ್ರಸ್ತಾಪವಾಗದ ತುಳು

'ತುಳು ಭಾಷೆಯನ್ನು ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ಸೇರಿಸುವ ಕುರಿತು ಪ್ರಧಾನಿ ತಮ್ಮ ನಿಲುವನ್ನು ಸ್ಪಷ್ಟಪಡಿಸಬೇಕು' ಎಂದು ತುಳು ಸಂಘಟನೆಯವರು ಒಂದು ವಾರದಿಂದ ಸಾಮಾಜಿಕ ಜಾಲತಾಣಗಳಲ್ಲಿ ಅಭಿಯಾನ ನಡೆಸಿದ್ದರು. ಈ ಬಗ್ಗೆ ಪ್ರಧಾನಿ ಯಾವುದೇ ಉಲ್ಲೇಖ ಮಾಡಲಿಲ್ಲ. ಈ ಹಿಂದೆ ಕರಾವಳಿಗೆ ಭೇಟಿ ನೀಡಿದಾಗ ಮೋದಿ ತುಳು ಭಾಷೆಯಲ್ಲೇ ಒಂದೆರಡು ವಾಕ್ಯಗಳನ್ನು ಉದ್ಧರಿಸುವ ಮೂಲಕ ಸಭಿಕರಿಂದ ಚಪ್ಪಾಳೆ ಗಿಟ್ಟಿಸಿದ್ದರು. ಆದರೆ ಈ ಸಲ ಆ ಪ್ರಯತ್ನವನ್ನೂ ಮಾಡಲಿಲ್ಲ.

ಸುದ್ದಿ 2 ನಿಮಿಷ

ಕಲುಷಿತ ನೀರು ಕುಡಿದು ಒಬ್ಬನ ಸಾವು

ಕಮಲಾಪುರ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ಗೊಬ್ಬರವಾಡಿ ಗ್ರಾಮದಲ್ಲಿ ಕಲುಷಿತ ನೀರು ಕುಡಿದು ಅಸ್ವಸ್ಥಗೊಂಡಿದ್ದ ಸಾಯಿಬಣ್ಣ ಭಜಂತ್ರಿ (58) ಶುಕ್ರವಾರ ಮೃತಪಟ್ಟಿದ್ದಾರೆ. 15 ಮಂದಿ ವಾಂತಿ, ಭೇದಿಯಿಂದ ನರಳುತ್ತಿದ್ದಾರೆ.

ಮೂರು ದಿನಗಳಿಂದ ಸಾಯಿಬಣ್ಣ, ಅವರ ಇಬ್ಬರು ಪುತ್ರಿಯರಾದ ಭೀಮಾಬಾಯಿ (25) ಮತ್ತು ಜಗದೇವಿಗೆ (22) ವಾಂತಿ ಭೇದಿ ಕಾಣಿಸಿಕೊಂಡಿತ್ತು. ಮೂವರೂ ಗುರುವಾರ ಡೊಂಗರಗಾಂವ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ದಾಖಲಾಗಿ, ಚಿಕಿತ್ಸೆ ಪಡೆದಿದ್ದರು. ಭೀಮಾಬಾಯಿ ಮತ್ತು ಜಗದೇವಿ ಚೇತರಿಸಿಕೊಂಡು ಗುರುವಾರ ಮನೆಗೆ ಮರಳಿದ್ದರು. ಆದರೆ, ಸಾಯಿಬಣ್ಣ ಆರೋಗ್ಯ ಸುಧಾರಿಸಲಿಲ್ಲ' ಎಂದು ವೈದ್ಯರು ತಿಳಿಸಿದರು.

'ಗ್ರಾಮದ 16 ಪೈಕಿ 11 ನೀರಿನ ಮೂಲಗಳು ಕಲುಷಿತವಾಗಿದ್ದು, ಆ ನೀರು ಕುಡಿಯಲು ಯೋಗ್ಯವಿಲ್ಲ. ಬಹುತೇಕ ಕಡೆ ಪೈಪ್‌ಲೈನ್ ಸೋರಿಕೆ ಆಗುತ್ತಿದ್ದು, ಕೊಳಚೆ ನೀರು ಮಿಶ್ರಣಗೊಳ್ಳುತ್ತಿದೆ. ಶುದ್ಧ ಮತ್ತು ಕಾಯಿಸಿ ಆರಿಸಿದ ನೀರನ್ನು ಕುಡಿಯುವಂತೆ ಗ್ರಾಮಸ್ಥರಿಗೆ ತಿಳಿ ಹೇಳಲಾಗಿದೆ' ಎಂದು ಜಿಲ್ಲಾ ಕಾಲರಾ ಅಧಿಕಾರಿ ವಿವೇಕಾನಂದ ರೆಡ್ಡಿ ತಿಳಿಸಿದರು.

'ಸಾಯಿಬಣ್ಣ ಅವರ ಕುಟುಂಬಕ್ಕೆ ₹ 10 ಸಾವಿರ ಸಹಾಯಧನ ನೀಡಿದ್ದೇನೆ. ಇನ್ನೂ ₹ 50 ಸಾವಿರ ವೈಯಕ್ತಿಕ ನೆರವು ನೀಡುವೆ. ಸರ್ಕಾರದಿಂದ ಪರಿಹಾರ ಒದಗಿಸಲು ಪ್ರಯತ್ನಿಸುವೆ. ಪ್ರತಿ ಮನೆಗೆ ಕ್ಯಾನ್ ಮೂಲಕ ಶುದ್ಧ ನೀರು ಪೂರೈಸಲಾಗುತ್ತಿದೆ' ಎಂದು ಶಾಸಕ ಬಸವರಾಜ ಮತ್ತಿಮೂಡ ತಿಳಿಸಿದರು.

ದೇವೇಗೌಡರ ಆರೋಗ್ಯಕ್ಕೆ ಪ್ರಾರ್ಥಿಸಲು ₹5 ಸಾವಿರ



ಕೆ.ಆರ್.ಪೇಟೆ (ಮಂಡ್ಯ ಜಿಲ್ಲೆ): 'ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರ ಆರೋಗ್ಯ ಸುಧಾರಿಸಲೆಂದು ಪ್ರಾರ್ಥಿಸಿ ಗಣೇಶ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಲು ತಾಲ್ಲೂಕಿನ 360 ಗ್ರಾಮಗಳ ಗಣೇಶೋತ್ಸವ ಪೂಜಾ ಸಮಿತಿಗಳಿಗೆ ಬಸ್ ತಿಮ್ಮೇಗೌಡ ಚಾರಿಟಬಲ್ ಟ್ರಸ್ಟ್‌ನಿಂದ ತಲಾ ₹5 ಸಾವಿರ ಧನಸಹಾಯ ನೀಡಲಾಗುವುದು' ಎಂದು ಟ್ರಸ್ಟ್ ಅಧ್ಯಕ್ಷ ಹಾಗೂ ಪುರಸಭಾ ಸದಸ್ಯ ಬಸ್ ಸಂತೋಷ್ ಕುಮಾರ್ ತಿಳಿಸಿದರು.

ಪಟ್ಟಣದ ಬಸವೇಶ್ವರ ನಗರದಲ್ಲಿ ಪ್ರತಿಷ್ಠಾಪಿಸಿರುವ ಗಣೇಶ ಮೂರ್ತಿಗೆ ಪೂಜೆ ಸಲ್ಲಿಸಿ ದೇಣಿಗೆ ವಿತರಣೆಗೆ ಚಾಲನೆ ನೀಡಿ ಅವರು ಮಾತನಾಡಿದರು.

'ಜೆಡಿಎಸ್ ಸದೃಢವಾಗಿ ಬೆಳೆದು ಅಧಿಕಾರಕ್ಕೆ ಬರಬೇಕಾದರೆ ದೇವೇಗೌಡರು ಆರೋಗ್ಯವಂತರಾಗಿರಬೇಕು. ತಾಲ್ಲೂಕಿನ ಎಲ್ಲಾ ಗ್ರಾಮಗಳಲ್ಲಿ ಪ್ರತಿಷ್ಠಾಪಿಸಿರುವ ವಿಘ್ನ ನಿವಾರಕನ ಮೂರ್ತಿಗಳಿಗೆ ದೇವೇಗೌಡರ ಹೆಸರಿನಲ್ಲಿ ಅರ್ಚನೆ, ವಿಶೇಷ ಪೂಜೆ ಸಲ್ಲಿಸುವಂತಾಗಬೇಕು' ಎಂದರು.

ಶರಣರನ್ನು ಬೆಂಗಳೂರಿಗೆ ಕಳುಹಿಸಲು ನಡೆದಿತ್ತು ಸಿದ್ಧತೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಕಾರಾಗೃಹದಲ್ಲಿ ಎದೆನೋವು ಕಾಣಿಸಿಕೊಂಡಿದ್ದರಿಂದ ಶಿವಮೂರ್ತಿ ಮುರುಘಾ ಶರಣರನ್ನು ಶುಕ್ರವಾರ ಬೆಳಿಗ್ಗೆ 9.30ಕ್ಕೆ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಯಿತು. ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರಿನ ಜಯದೇವ ಹೃದ್ರೋಗ ಆಸ್ಪತ್ರೆಗೆ ಕರೆದೊಯ್ಯಲು ಸಿದ್ಧತೆಯನ್ನೂ ಮಾಡಿಕೊಳ್ಳಲಾಗಿತ್ತು. ಆದರೆ, ಇದಕ್ಕೆ ನ್ಯಾಯಾಲಯ ಅನುಮತಿ ನೀಡಲಿಲ್ಲ.

ಹೊರರೋಗಿಗಳ ವಿಭಾಗದಲ್ಲಿನ ವೈದ್ಯರ ಸಲಹೆ ಮೇರೆಗೆ ಸಿಟಿ ಸ್ಕ್ಯಾನ್, ಅಲ್ಟ್ರಾಸೌಂಡ್, ರಕ್ತ ಪರೀಕ್ಷೆ ಸೇರಿ ಇತರ ಪರೀಕ್ಷೆಗಳನ್ನು ನಡೆಸಲಾಗಿತ್ತು. ಹೃದಯ ಸಂಬಂಧಿ ಸಮಸ್ಯೆ ಪತ್ತೆಯಾಗಿದ್ದರಿಂದ ತಜ್ಞ ವೈದ್ಯರ ತಂಡವನ್ನು ದಾವಣಗೆರೆಯಿಂದ ಕರೆತರಲಾಗಿತ್ತು.


ಚಿತ್ರದುರ್ಗದ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರನ್ನು ಜಿಲ್ಲಾ ಆಸ್ಪತ್ರೆಯಲ್ಲಿ ಶುಕ್ರವಾರ ಚಿಕಿತ್ಸೆಗೆ ಕರೆದೊಯ್ಯಲಾಯಿತು

'ದಾವಣಗೆರೆಯ ಎಸ್.ಎಸ್. ನಾರಾಯಣ ಹೃದಯಾಲಯದ ವೈದ್ಯರಾದ ಡಾ.ಮಲ್ಲೇಶ ಹಾಗೂ ಶ್ರೀನಿವಾಸ್ ಶ್ರೀಗಳ ಆರೋಗ್ಯ ಪರೀಕ್ಷೆ ಮಾಡಿದ್ದು, ಹೃದ್ರೋಗ ಸಮಸ್ಯೆ ಇರುವುದು ಖಚಿತವಾಗಿದೆ. ವೈದ್ಯರ ತಂಡ ಹೆಚ್ಚಿನ ಚಿಕಿತ್ಸೆಯ ಸಲಹೆ ನೀಡಿದೆ. ಆಂಬುಲೆನ್ಸ್ ಮೂಲಕ ಬೆಂಗಳೂರಿಗೆ ಕಳುಹಿಸಿಕೊಡಲಾಗುವುದು' ಎಂದು ಜಿಲ್ಲಾ ಆಸ್ಪತ್ರೆಯ ಸರ್ಜನ್ ಡಾ.ಬಸವರಾಜ್ ಸುದ್ದಿಗಾರರಿಗೆ ಮಾಹಿತಿ ನೀಡಿದ್ದರು.

> ಮುರುಘಾ ಶ್ರೀ ಪ್ರಕರಣದ ತನಿಖೆ ವಿಷಯದಲ್ಲಿ ಪೊಲೀಸರಿಗೆ ಮುಕ್ತ ಸ್ವಾತಂತ್ರ್ಯ ನೀಡಲಾಗಿದೆ. ಅವರು ತಮ್ಮ ಕೆಲಸ ಮಾಡುತ್ತಿದ್ದಾರೆ
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

ಇಷ್ಟಲಿಂಗ ಪೂಜೆಗೆ ಅವಕಾಶ ನಿರಾಕರಣೆ: ಗುರುವಾರ ರಾತ್ರಿ ಪೋಕ್ಸೊ ಕಾಯ್ದೆ ಅಡಿ ಬಂಧನಕ್ಕೆ ಒಳಗಾಗಿರುವ ಶಿವಮೂರ್ತಿ ಮುರುಘಾ ಶರಣರು ಶುಕ್ರವಾರ ಇಷ್ಟಲಿಂಗ ಪೂಜೆ ನೆರವೇರಿಸಲು ಸಾಧ್ಯವಾಗಲಿಲ್ಲ. ಪೂಜಾ ಸಾಮಗ್ರಿಗಳೊಂದಿಗೆ ಬಂದಿದ್ದ ಮಠದ ಸಹಾಯಕರಿಗೆ ಜಿಲ್ಲಾ ಆಸ್ಪತ್ರೆಯ ತೀವ್ರ ನಿಗಾ ಘಟಕ (ಐಸಿಯು) ಪ್ರವೇಶಕ್ಕೆ ಪೊಲೀಸರು ಅವಕಾಶ ನೀಡಲಿಲ್ಲ.

ಮಹಾಂತರುದ್ರ ಸ್ವಾಮೀಜಿ ಪ್ರಭಾರ ಪೀಠಾಧಿಪತಿ

ಶಿವಮೂರ್ತಿ ಮುರುಘಾ ಶರಣರ ಅನುಪಸ್ಥಿತಿಯಲ್ಲಿ ಮುರುಘಾ ಮಠದ ತಾತ್ಕಾಲಿಕ ಪೀಠಾಧಿಪತಿಯಾಗಿ ದಾವಣಗೆರೆ ತಾಲ್ಲೂಕಿನ ಹೆಬ್ಬಾಳು ವಿರಕ್ತ ಮಠದ ಮಹಾಂತರುದ್ರ ಸ್ವಾಮೀಜಿ ಅವರನ್ನು ನೇಮಕ ಮಾಡಲಾಗಿದೆ.

'ಮಠದಲ್ಲಿ ನಡೆದ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಮಠದ ಎಸ್‌ಜೆಎಂ ವಿದ್ಯಾಪೀಠದ ಕಾರ್ಯದರ್ಶಿ ಹುದ್ದೆಗೆ ನಿವೃತ್ತ ನ್ಯಾಯಾಧೀಶ ಎಸ್.ಬಿ. ವಸ್ತ್ರದಮಠ ಅವರನ್ನು ನೇಮಕ ಮಾಡಲಾಗಿದೆ' ಎಂದು ಮಠದ ಮೂಲಗಳು ಮಾಹಿತಿ ನೀಡಿವೆ.

ಕೈದಿ ಸಂಖ್ಯೆ 2261

ಮುರುಘಾ ಶರಣರನ್ನು ಶುಕ್ರವಾರ ನಸುಕಿನಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ನ್ಯಾಯಾಧೀಶರ ಎದುರು ಹಾಜರುಪಡಿಸಿದರು. ನ್ಯಾಯಾಧೀಶರು 14 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಆದೇಶಿಸಿದರು. ಶುಕ್ರವಾರ ನಸುಕಿನ 3 ಗಂಟೆಯ ಸುಮಾರಿಗೆ ಶರಣರು ಜೈಲು ಪ್ರವೇಶಿಸಿದರು. ಶಿವಮೂರ್ತಿ ಮುರುಘಾ ಶರಣರಿಗೆ ವಿಚಾರಣಾಧೀನ ಕೈದಿ ಸಂಖ್ಯೆ 2261 ನೀಡಲಾಗಿದೆ. ಕಾರಾಗೃಹ ಪ್ರವೇಶಿಸಿದ ಬಳಿಕ ಅವರು ತೀವ್ರ ಆಘಾತಕ್ಕೆ ಒಳಗಾಗಿದ್ದಂತೆ ಕಂಡುಬಂದರು ಎಂದು ಮೂಲಗಳು ಹೇಳಿವೆ.

ಹಾಸ್ಟೆಲ್ ವಾರ್ಡನ್ ಬಂಧನ

ಚಿತ್ರದುರ್ಗ: ಪ್ರೌಢಶಾಲಾ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ ಪ್ರಕರಣದ 2ನೇ ಅರೋಪಿಯಾಗಿರುವ ಹಾಸ್ಟೆಲ್‌ನ ಮಹಿಳಾ ವಾರ್ಡನ್ ಅನ್ನು ಪೊಲೀಸರು ಶುಕ್ರವಾರ ಮಧ್ಯಾಹ್ನ ಬಂಧಿಸಿದರು.

ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರ ವಿರುದ್ಧ ದಾಖಲಾಗಿರುವ ಪೋಕ್ಸೊ ಪ್ರಕರಣದಲ್ಲಿ ಹಾಸ್ಟೆಲ್ ವಾರ್ಡನ್ ಎರಡನೇ ಆರೋಪಿ. ಮತ್ತೊಂದು ಪ್ರಕರಣದಲ್ಲಿ ದೂರುದಾರರಾಗಿರುವ ವಾರ್ಡನ್ ಗುರುವಾರ ನ್ಯಾಯಾಲಯಕ್ಕೆ ಹೇಳಿಕೆ ದಾಖಲಿಸಲು ಬಂದಿದ್ದಾಗ ಪೊಲೀಸರು ವಶಕ್ಕೆ ಪಡೆದಿದ್ದರು. ವಿಚಾರಣೆ ನಡೆಸಿ ಸಾಂತ್ವನ ಕೇಂದ್ರದಲ್ಲಿ ಆಶ್ರಯ ಕಲ್ಪಿಸಲಾಗಿತ್ತು.

ಶುಕ್ರವಾರ ಮತ್ತೆ ಆರೋಪಿಯನ್ನು ತನಿಖಾ ತಂಡ ವಿಚಾರಣೆಗೆ ಒಳಪಡಿಸಿತು. ವಿಚಾರಣೆ ಪೂರ್ಣಗೊಂಡ ಬಳಿಕ ಬಂಧಿಸಲಾಯಿತು. ಪ್ರಕರಣದಲ್ಲಿ ಇನ್ನೂ ಮೂವರು ಆರೋಪಿಗಳಿದ್ದು, ವಿಚಾರಣೆ ಹಾಜರಾಗುವಂತೆ ಮೌಖಿಕವಾಗಿ ಸೂಚಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಪರಶುರಾಮ್ ತಿಳಿಸಿದ್ದಾರೆ.

ಬಾಲಕಿ ಮೇಲೆ ಅತ್ಯಾಚಾರ: ಆರೋಪಿ ಬಂಧನ

ಬೆಳಗಾವಿ: ಬಾಲಕಿಯನ್ನು ಮದುವೆ ಆಗುವುದಾಗಿ ನಂಬಿಸಿ ಲೈಂಗಿಕವಾಗಿ ಬಳಸಿಕೊಂಡು, ಮಗು ಹೆರಲು ಕಾರಣವಾದ ಯುವಕನನ್ನು ಖಾನಾಪುರ ಪೊಲೀಸರು ಗುರುವಾರ ಬಂಧಿಸಿದ್ದಾರೆ. ಬಾಲಕಿಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ರಕ್ಷಣೆ ನೀಡಲಾಗಿದೆ.

ಖಾನಾಪುರ ತಾಲ್ಲೂಕಿನ ಗೌಳಿವಾಡ ಗ್ರಾಮದ ಮಲ್ಲು ಅಪ್ಪು ಪಿಂಗಳೆ (19) ಬಂಧಿತ ಆರೋಪಿ. 16 ವರ್ಷದ ಬಾಲಕಿಯನ್ನು ಪುಸಲಾಯಿಸಿ, ಕೆಲವು ವರ್ಷಗಳಿಂದ ಲೈಂಗಿಕವಾಗಿ ಬಳಸಿಕೊಂಡಿದ್ದಾನೆ. ಬಾಲಕಿ ಗಂಡುಮಗುವಿಗೆ ಜನ್ಮ ನೀಡಿದ್ದಾಳೆ. ಆರೋಪಿ ವಿರುದ್ಧ 'ಪೋಕ್ಸೊ' ಕಾಯ್ದೆ ಅಡಿ ಪ್ರಕರಣ ದಾಖಲಿಸಲಾಗಿದೆ.

ತಿಂಗಳಿಗೊಮ್ಮೆ ಬರುವೆ: ಪ್ರಧಾನಿ ಮೋದಿ

ಒಂದನೇ ಪುಟದಿಂದ

'ಕೇಂದ್ರ ಮತ್ತು ರಾಜ್ಯ ಸರ್ಕಾರದ ಕಾರ್ಯಕ್ರಮಗಳನ್ನು ಮನೆ– ಮನೆಗೂ ತಲುಪುವಂತೆ ನೋಡಿಕೊಳ್ಳಿ' ಎಂದು ಸೂಚನೆ ನೀಡಿದರು.

ಸುಮಾರು 20 ನಿಮಿಷಗಳ ಕಾಲ ಪ್ರಮುಖ ನಾಯಕರೊಂದಿಗೆ ಚಹಾ ಸೇವಿಸುತ್ತಾ ಮಾತುಕತೆ ನಡೆಸಿದರು. ಈ ವೇಳೆ, ರಾಜ್ಯಕ್ಕೆ ನಿರಂತರವಾಗಿ ಭೇಟಿ ನೀಡುವಂತೆ ಪಕ್ಷದ ನಾಯಕರು ಪ್ರಧಾನಿಗೆ ಮನವಿ ಮಾಡಿದರು. ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ಚುನಾವಣೆಗಾಗಿ ರೂಪಿಸಿದ ನೀಲನಕ್ಷೆಯನ್ನು ವಿವರಿಸಿದರೆ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸರ್ಕಾರದ ಆಡಳಿತ ಮತ್ತು ಹಲವು ಕಾರ್ಯಕ್ರಮಗಳ ಬಗ್ಗೆ ಮೋದಿ ಅವರಿಗೆ ವಿವರ ನೀಡಿದರು.

'ಚುನಾವಣೆಗಾಗಿ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡೋಣ. ಯಡಿಯೂರಪ್ಪ ಅವರ ಮಾರ್ಗದರ್ಶನ ಪಡೆಯಿರಿ. ಈ ಹಿಂದೆ ಹಲವು ರಾಜ್ಯಗಳಲ್ಲಿ ನಡೆದ ಚುನಾವಣೆಗಳಲ್ಲಿ ಒಗ್ಗಟ್ಟಿನ ಶಕ್ತಿ ಪ್ರದರ್ಶಿಸಿ ಜನರ ವಿಶ್ವಾಸ ಮತ್ತು ಮನಸ್ಸು ಗೆದ್ದ ಕಾರಣವೇ ಬಿಜೆಪಿ ಆ ರಾಜ್ಯಗಳಲ್ಲಿ ಗೆಲ್ಲಲು ಸಾಧ್ಯವಾಯಿತು' ಎಂದೂ ಮೋದಿ ಕಿವಿ ಮಾತು ಹೇಳಿದರು.

ಕಾರ್ಯಕರ್ತರ ಸಂಭ್ರಮ: ದಕ್ಷಿಣ ಕನ್ನಡದ ಸುಳ್ಯ ಸಮೀಪದ ಬೆಳ್ಳಾರೆಯಲ್ಲಿ ಪಕ್ಷದ ಕಾರ್ಯಕರ್ತ ಪ್ರವೀಣ್ ನೆಟ್ಟಾರು ಅವರ ಹತ್ಯೆಯ ಬಳಿಕ ಕರಾವಳಿ ಭಾಗದ ಬಿಜೆಪಿ ಕಾರ್ಯಕರ್ತರಲ್ಲಿ ಪಕ್ಷದ ನಾಯಕರ ವಿರುದ್ಧ ಆಕ್ರೋಶ ಮಡುಗಟ್ಟಿತ್ತು. ಆದರೆ, ಶುಕ್ರವಾರದ ಸಮಾವೇಶ, ಮೋದಿ ಅವರ ಪ್ರೇರಣಾದಾಯಕ ಮಾತುಗಳು ಪಕ್ಷದ ಕಾರ್ಯಕರ್ತರ ಆಕ್ರೋಶ ತಿಳಿಗೊಳಿಸುವಲ್ಲಿ ಯಶಸ್ವಿಯಾದಂತಿತ್ತು. ಕಾರ್ಯಕರ್ತರು, ಮೋದಿ ಅಭಿಮಾನಿಗಳ ಸಂಭ್ರಮ ಎಲ್ಲೆ ಮೀರಿದಂತಿತ್ತು.

ಕೇರಳದಲ್ಲಿ ಗುರುವಾರ ಮಾತನಾಡಿದ್ದ ಮೋದಿ, ಭ್ರಷ್ಟಾಚಾರದ ಬಗ್ಗೆ ಪ್ರಸ್ತಾಪಿಸಿ, ಪ್ರತಿಪಕ್ಷಗಳ ವಿರುದ್ಧ ಹರಿಹಾಯ್ದಿದ್ದರು. ಆದರೆ, ಮಂಗಳೂರಿನ ಕಾರ್ಯಕ್ರಮದಲ್ಲಿ 27 ನಿಮಿಷಗಳ ತಮ್ಮ ಭಾಷಣವನ್ನು ಕೇಂದ್ರ–ರಾಜ್ಯ ಸರ್ಕಾರಗಳ ಸಾಧನೆಗಳನ್ನು ವಿವರಿಸಲು ಮೀಸಲಾಗಿಟ್ಟರು. 'ಡಬಲ್ ಎಂಜಿನ್ ಸರ್ಕಾರಗಳು ರಾಜ್ಯ– ಕೇಂದ್ರದ ಅಭಿವೃದ್ಧಿಯ ಗತಿಯನ್ನೇ ಬದಲಿಸಿವೆ' ಎಂದು ಹೇಳಿ ಯೋಜನೆಗಳ ಪಟ್ಟಿ ಮಾಡಿದರು.

'ರಾಜ್ಯದಲ್ಲೂ ಭ್ರಷ್ಟಾಚಾರ ಮುಕ್ತ, ಅಭಿವೃದ್ಧಿ ಪರ ಸರ್ಕಾರದ ಅಗತ್ಯ ಇದೆ' ಎಂದು ಟ್ವೀಟ್ ಮಾಡಿದ್ದ ಉದ್ಯಮಿ ಟಿ.ವಿ. ಮೋಹನ್‌ದಾಸ್ ಪೈ ಅವರಿಗೆ ಪ್ರತ್ಯುತ್ತರ ಎಂಬಂತೆ, 'ಕರ್ನಾಟಕದಲ್ಲಿ ದೊಡ್ಡ ದೊಡ್ಡ ಉದ್ಯಮಿಗಳಿದ್ದಾರೆ, ಅವರಲ್ಲಿಯೂ ಬಹುಪಾಲು ಕರಾವಳಿ ಭಾಗದವರೇ ಆಗಿದ್ದಾರೆ' ಎಂದರು. ಕರಾವಳಿಯ ಸ್ವಾತಂತ್ರ್ಯ ಹೋರಾಟಗಾರ್ತಿಯರಾದ ಉಳ್ಳಾಲದ ವೀರರಾಣಿ ಅಬ್ಬಕ್ಕ ಮತ್ತು ರಾಣಿ ಚೆನ್ನಭೈರಾದೇವಿ ಅವರನ್ನು ಮೋದಿ ಸ್ಮರಿಸಿದರು.

ಬಿಎಸ್‌ವೈಗೆ ಮೋದಿ ಗೌರವ

ಬಿಜೆಪಿ ಪ್ರಮುಖರ ಸಭೆಯಲ್ಲಿ ಭಾಗವಹಿಸಲು ಬಂದಿದ್ದ ಪಕ್ಷದ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಅವರನ್ನು ಸರ್ಕಾರಿ ಕಾರ್ಯಕ್ರಮದಲ್ಲಿ ತಮ್ಮ ಜತೆ ಪಾಲ್ಗೊಳ್ಳಲು ಸ್ವತಃ ಪ್ರಧಾನಿ ಮೋದಿಯವರೇ ವೇದಿಕೆಗೆ ಆಹ್ವಾನಿಸಿದರು. ಅಲ್ಲದೇ, ವೇದಿಕೆಯಲ್ಲಿ ರಾಜ್ಯಪಾಲರ ಪಕ್ಕದಲ್ಲಿಯೇ ಅವರಿಗೆ ಆಸನ ಕಲ್ಪಿಸಲಾಯಿತು.

ಸರ್ಕಾರಿ ಕಾರ್ಯಕ್ರಮವಾಗಿದ್ದರಿಂದ ಪಟ್ಟಿಯಲ್ಲಿ ಯಡಿಯೂರಪ್ಪ ಅವರ ಹೆಸರು ಇರಲಿಲ್ಲ. ಚುನಾವಣೆಗೆ ಅವರ ಬಲವನ್ನು ಬಳಸಿಕೊಳ್ಳಲು ಮುಂದಾಗಿರುವ ಮೋದಿ, ಅವರಿಗೆ ಆದ್ಯತೆ ಕೊಟ್ಟರು. ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ವೇದಿಕೆಗೆ ಕರೆಯದೇ ಇದ್ದುದಕ್ಕೆ ಯಡಿಯೂರಪ್ಪ ಅಸಮಾಧಾನಗೊಂಡಿದ್ದರು ಎಂದೂ ಹೇಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಅವರನ್ನು ಸಮಾಧಾನಪಡಿಸುವ ಕೆಲಸವನ್ನು ಪ್ರಧಾನಿ ಮಾಡಿದರು.

ನಿಧನ ವಾರ್ತೆ

ಡಾ. ನ.ವಜ್ರಕುಮಾರ



ಧಾರವಾಡ: ಜನತಾ ಶಿಕ್ಷಣ ಸಮಿತಿಯ (ಜೆಎಸ್‌ಎಸ್) ಕಾರ್ಯದರ್ಶಿ ಹಾಗೂ ಎಸ್‌ಡಿಎಂ ಸಂಸ್ಥೆಯ ಉಪಾಧ್ಯಕ್ಷ ಪ್ರೊ.ನ.ವಜ್ರ ಕುಮಾರ (82) ಶುಕ್ರವಾರ ನಸುಕಿನಲ್ಲಿ ನಿಧನರಾದರು.

ಅವರಿಗೆ ಪತ್ನಿ ಸುಮನಾ ವಜ್ರಕುಮಾರ ಇದ್ದಾರೆ. ಉಡುಪಿ ಜಿಲ್ಲೆಯ ನಂದಿಕೂರಿನವರಾದ ವಜ್ರಕುಮಾರ ಅವರು ಕೊಕ್ಕರ್ಣೆ ಅರಮನೆಯ ಭೋಜರಾಜಯ್ಯ ಹಾಗೂ ಕುತ್ಯಾರು ಅರಮನೆಯ ಚಂದ್ರಮತಿ ಅಮ್ಮನವರ ದ್ವಿತೀಯ ಪುತ್ರ.

ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದ ಅವರು, ಎಂಜಿಎಂ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ವೃತ್ತಿ ಜೀವನ ಆರಂಭಿಸಿದರು. 1973ರಲ್ಲಿ ಜನತಾ ಶಿಕ್ಷಣ ಸಮಿತಿಯನ್ನು ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅವರು ವಹಿಸಿಕೊಂಡ ಬಳಿಕ, ವಜ್ರಕುಮಾರ ಅವರು ಅದರ ಕಾರ್ಯದರ್ಶಿಯಾಗಿ ನೇಮಕಗೊಂಡರು.

ಎಸ್‌ಡಿಎಂ ಎಂಜಿನಿಯರಿಂಗ್ ಕಾಲೇಜು, ದಂತ ವೈದ್ಯಕೀಯ ಹಾಗೂ ವೈದ್ಯಕೀಯ ಕಾಲೇಜು ಸ್ಥಾಪನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿ, ನವೋದಯ ಶಾಲೆಯ ಆಡಳಿತ ಮಂಡಳಿ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಜತೆಗೆ ಹಲವು ಕೃತಿಗಳನ್ನು ಸಂಪಾದಿಸಿದ್ದಾರೆ.

ಶಿಕ್ಷಣದೊಂದಿಗೆ ಧಾರ್ಮಿಕ ಕಾರ್ಯಗಳಲ್ಲೂ ಮುಂಚೂಣಿಯಲ್ಲಿದ್ದ ಅವರು, ಜೈನ ಸಮಾಜದ ಮಾರ್ಗದರ್ಶಕರೂ ಆಗಿದ್ದರು. ಧಾರವಾಡ ಜೈನ್ ಮಿಲನ್‌ನ ಸ್ಥಾಪಕರು ಹಾಗೂ ಮಹಾಪೋಷಕರಾಗಿ ಸಮಾಜಕ್ಕಾಗಿ ದುಡಿದಿದ್ದಾರೆ.

ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಬೆಳಿಗ್ಗೆ 10ರವರೆಗೆ ಮೃತರ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಬಳಿಕ ಅವರ ಹುಟ್ಟೂರಾದ ಉಡುಪಿ ಜಿಲ್ಲೆಯ ಎರ್ಮಾಳದಲ್ಲಿ ಶುಕ್ರವಾರ ಸಂಜೆ ಅಂತ್ಯಕ್ರಿಯೆ ನೆರವೇರಿತು.

ಟ್ವಿಟರ್‌ನಲ್ಲಿ ಟ್ರೆಂಡಿಂಗ್ ಆದ 'ModiMosa' ಹ್ಯಾಷ್‌ಟ್ಯಾಗ್

ಕಾಂಗ್ರೆಸ್‌ನಿಂದ ದಿನವಿಡೀ ಪ್ರಶ್ನೆಗಳ ಸುರಿಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿಯವರ ಮಂಗಳೂರು ಭೇಟಿಯ ವೇಳೆಯಲ್ಲೇ ಶುಕ್ರವಾರ ಇಡೀ ದಿನ ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಶ್ನೆಗಳ ಸುರಿಮಳೆಗರೆದ ಕೆಪಿಸಿಸಿ, ಕರ್ನಾಟಕದ ಜನರಿಗೆ ಬಿಜೆಪಿ ನೀಡಿದ್ದ ಭರವಸೆಗಳು, ಸರಕು ಮತ್ತು ಸೇವಾ ತೆರಿಗೆಯ ಪಾಲು ಬಿಡುಗಡೆ, ರಾಜ್ಯ ಸರ್ಕಾರದ ವಿರುದ್ಧದ ಶೇಕಡ 40ರ ಕಮಿಷನ್ ಆರೋಪ ಸೇರಿದಂತೆ ಹಲವು ವಿಷಯಗಳನ್ನು ಮುಂದಿಟ್ಟುಕೊಂಡು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿತು.

'ModiMosa' ಮತ್ತು 'ನಿಮ್ಮ ಹತ್ತಿರ ಉತ್ತರ ಇದೆಯಾ' ಎಂಬ ಹ್ಯಾಷ್ ಟ್ಯಾಗ್ ಬಳಸಿ ಕೆಪಿಸಿಸಿ ಅಧಿಕೃತ ಖಾತೆಯಿಂದ ಇಡೀ ದಿನ ಅಭಿಯಾನ ನಡೆಯಿತು. ಲೋಕಸಭೆ ಮತ್ತು ವಿಧಾನಸಭಾ ಚುನಾವಣೆಯ ಸಮಯದಲ್ಲಿ ಬಿಜೆಪಿಯ ಪ್ರಣಾಳಿಕೆಗಳಲ್ಲಿ ನೀಡಿದ್ದ ಭರವಸೆಗಳ ಅನುಷ್ಠಾನದ ಕುರಿತು ಕಾಂಗ್ರೆಸ್ ಪ್ರಶ್ನಿಸಿತು.

'ಕರ್ನಾಟಕದಲ್ಲಿ ಎರಡು ಬಾರಿ ಪ್ರವಾಹ ಬಂದರೂ ಪ್ರಧಾನಿ ತಿರುಗಿ ನೋಡಲಿಲ್ಲ. ರಾಜ್ಯಕ್ಕೆ ಬರಬೇಕಿದ್ದ ಜಿಎಸ್‌ಟಿ ಪಾಲು ನೀಡಲಿಲ್ಲ. ರಾಜ್ಯದ ಬಿಜೆಪಿ ಸರ್ಕಾರ ಕಮಿಷನ್ ದಂಧೆಯಲ್ಲಿ ತೊಡಗಿರುವಾಗಲೂ ಧ್ವನಿ ಎತ್ತಲಿಲ್ಲ. ಎಂಟು ವರ್ಷಗಳಿಂದ ಮೋದಿಯವರು ರಾಜ್ಯದ ಜನರಿಗೆ ನೀಡಿದ ಎಲ್ಲ ಭರವಸೆಗಳೂ ಹಾಗೆಯೇ ಉಳಿದಿವೆ. ಈಗ ಚುನಾವಣೆ ನೆನಪಾಗಿ ಮತ್ತೆ ಬಂದಿದ್ದಾರೆ' ಎಂದು ಕಾಂಗ್ರೆಸ್ ಟೀಕಿಸಿತು.

'ಮತ್ತೆ ಅದೇ ಹಳೆಯ ಕ್ಯಾಸೆಟ್, ಸುಳ್ಳು ಅಂಕಿಅಂಶಗಳು, ಆತ್ಮವಂಚನೆಯ ಮಾತುಗಳು. ಪ್ರಧಾನಿಯವರೇ ಶೇಕಡ 40ರಷ್ಟು ಕಮಿಷನ್ ಲೂಟಿಯ ಬಗ್ಗೆ ಮಾತನಾಡದಿರುವುದು ಆತ್ಮವಂಚನೆ ಅಲ್ಲವೆ' ಎಂದು ಕೆಪಿಸಿಸಿ ಕೇಳಿದೆ.

ವಿಕಾಸವೊ? ವಿನಾಶವೊ?: ಸಿದ್ದರಾಮಯ್ಯ ಪ್ರಶ್ನೆ


ಬೆಂಗಳೂರು: ಕರಾವಳಿಯಲ್ಲಿನ ಸಾರ್ವಜನಿಕ ವಲಯದ ಬ್ಯಾಂಕ್‌ಗಳ ವಿಲೀನ, ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಖಾಸಗೀಕರಣ ಸೇರಿದಂತೆ ಆ ಭಾಗದ ಹಲವು ವಿಷಯಗಳನ್ನು ಉಲ್ಲೇಖಿಸಿ ಟ್ವೀಟ್ ಮಾಡಿರುವ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, 'ಪ್ರಧಾನಿಯವರೇ ಕರಾವಳಿಯಲ್ಲಿನ ವಿಕಾಸ ನೋಡಲು ಬಂದಿದ್ದೀರೊ ಅಥವಾ ವಿನಾಶ ನೋಡಲು ಬಂದಿರುವಿರೊ' ಎಂದು ಪ್ರಶ್ನಿಸಿದ್ದಾರೆ.

ನವ ಮಂಗಳೂರು ಬಂದರು ಚಟುವಟಿಕೆಯನ್ನು ಅದಾನಿ ಒಡೆತನದ ಕಂಪನಿಗೆ ಹಂತ ಹಂತವಾಗಿ ಒಪ್ಪಿಸುತ್ತಿರುವುದು, ಕೆಲವೇ ಕಿಲೋಮೀಟರ್‌ಗಳ ಅಂತರದಲ್ಲಿ ನಾಲ್ಕು ಟೋಲ್ ಗೇಟ್‌ಗಳನ್ನು ಅಳವಡಿಸಿರುವುದು ಸೇರಿದಂತೆ ಹಲವು ವಿಷಯಗಳನ್ನು ಪ್ರಸ್ತಾಪಿಸಿ ಮೋದಿ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಪ್ರಧಾನಿ ಭೇಟಿಯನ್ನುದ್ದೇಶಿಸಿ ಪ್ರತ್ಯೇಕ ಪತ್ರಿಕಾ ಹೇಳಿಕೆಯೊಂದನ್ನು ಬಿಡುಗಡೆ ಮಾಡಿರುವ ಸಿದ್ದರಾಮಯ್ಯ, 'ಹಿಂದಿನ ಚುನಾವಣೆಯಲ್ಲಿ ನೀಡಿದ್ದ ಭರವಸೆಗಳು ಏನಾದವು' ಎಂದು ಪ್ರಶ್ನಿಸಿದ್ದಾರೆ. 25 ಭರವಸೆಗಳ ಪಟ್ಟಿಯನ್ನೂ ಅದರೊಂದಿಗೆ ನೀಡಿದ್ದಾರೆ.

'ಬಸವ ಶ್ರೀ' ವಾಪಸ್: ಸಾಯಿನಾಥ್

ಪ್ರಜಾವಾಣಿ ವಾರ್ತೆ



ಬೆಂಗಳೂರು: ಚಿತ್ರದುರ್ಗದ ಮುರುಘಾ ಮಠವು ನೀಡಿದ್ದ 'ಬಸವ ಶ್ರೀ' ಪ್ರಶಸ್ತಿಯನ್ನು ವಾಪಸ್ ನೀಡುವುದಾಗಿ ಹೆಸರಾಂತ ಪತ್ರಕರ್ತ ಪಿ. ಸಾಯಿನಾಥ್ ತಿಳಿಸಿದ್ದಾರೆ.

'ಮುರುಘಾಮಠದ ಶಿವಮೂರ್ತಿ ಮುರುಘಾ ಶರಣರ ವಿರುದ್ಧದ ಆರೋಪಗಳ ಕುರಿತು ಮಾಧ್ಯಮಗಳ ವರದಿಗಳನ್ನು ಓದಿ ವಿಚಲಿತನಾಗಿದ್ದೇನೆ ಮತ್ತು ಮನಸ್ಸಿಗೆ ನೋವಾಯಿತು. ಪೋಕ್ಸೊ ಮತ್ತು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ದೌರ್ಜನ್ಯದ ಅಡಿಯಲ್ಲಿ ಶರಣರ ವಿರುದ್ಧ ಪ್ರಕರಣಗಳು ದಾಖಲಾಗಿವೆ. ಮಕ್ಕಳ ಮೇಲೆ ದೌರ್ಜನ್ಯವೆಸಗಿರುವ ಕೃತ್ಯವನ್ನು ಖಂಡಿಸಲು ಶಬ್ದಗಳು ಸಾಕಾಗುವುದಿಲ್ಲ' ಎಂದು ಅವರು ಬೇಸರ ವ್ಯಕ್ತಪಡಿಸಿದ್ದಾರೆ.

'ಈ ಪ್ರಕರಣದ ಸಂತ್ರಸ್ತ ಬಾಲಕಿಯರ ಜತೆ ನಾವಿದ್ದೇವೆ. ಇವರಿಗೆ ನ್ಯಾಯ ದೊರೆಯಬೇಕು ಎನ್ನುವ ಆಶಯದಿಂದ ಬಸವಶ್ರೀ ಪ್ರಶಸ್ತಿ ಮತ್ತು ಚೆಕ್ ಮೂಲಕ ನೀಡಲಾದ ₹5 ಲಕ್ಷ ಬಹುಮಾನವನ್ನು ಹಿಂತಿರುಗಿಸುತ್ತಿದ್ದೇನೆ' ಎಂದು ತಿಳಿಸಿದ್ದಾರೆ.

'ಈ ಪ್ರಕರಣವನ್ನು ಬಹಿರಂಗಪಡಿಸಲು ಶ್ರಮಿಸಿದ ಮೈಸೂರಿನ ಸರ್ಕಾರೇತರ ಸಂಸ್ಥೆಯಾದ ಒಡನಾಡಿ ಕಾರ್ಯ ಶ್ಲಾಘನೀಯ. ಕರ್ನಾಟಕ ಸರ್ಕಾರ ಯಾವುದೇ ಹಂತದಲ್ಲೂ ರಾಜಿಯಾಗದೆಯೇ ಈ ಪ್ರಕರಣದ ಕುರಿತು ಸಮಗ್ರ ತನಿಖೆ ನಡೆಸಬೇಕು' ಎಂದು ಒತ್ತಾಯಿಸಿದ್ದಾರೆ.

2016ರಲ್ಲಿ ಸಾಯಿನಾಥ್ ಅವರಿಗೆ ಬಸವ ಶ್ರೀ ಪ್ರಶಸ್ತಿ ಪ್ರದಾನ ಮಾಡಲಾಗಿತ್ತು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.75	31,711	30,098
ಹಾರಂಗಿ	2,859	2,856.02	4,320	1,500
ಕಬಿನಿ	2284	2,283	4,000	4,000
ಹೇಮಾವತಿ	2,922	2921.90	17,996	16,260
ಲಿಂಗನಮಕ್ಕಿ	1,819	1,814	15,985	5,358
ಸೂಪಾ (ಮೀ)	564	550.57	5,099	-
ಮಾಣಿ	594	588	1,396	675
ತುಂಗಭದ್ರಾ	1,633	1,632.38	95,388	83,936
ಮಲಪ್ರಭಾ	2079.5	2,079.50	3,482	4,044
ಘಟಪ್ರಭಾ	2175	2,175	3,800	3,800
ಭದ್ರಾ	186	185	11,759	12,060
ಆಲಮಟ್ಟಿ (ಮೀ)	519.60	519.60	25,000	25,000
ನಾರಾಯಣಪುರ (ಮೀ)	492.25	492.15	40,000	40,800

*ನೆಲಮಟ್ಟದಿಂದ

ಮಳೆ: ಸವದತ್ತಿಯಲ್ಲಿ 27 ಮನೆಗೆ ಹಾನಿ

ಹುಬ್ಬಳ್ಳಿ: ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಹಿರೇಕುಂಬಿ ಗ್ರಾಮದಲ್ಲಿ ಗುರುವಾರ ರಾತ್ರಿ ಸುರಿದ ಧಾರಾಕಾರ ಮಳೆಯಿಂದ 27 ಮನೆಗಳಿಗೆ ಹಾನಿಯಾಗಿದ್ದು, ಎರಡು ಮನೆಗಳು ಭಾಗಶಃ ಕುಸಿದಿವೆ. ಜೀವಾಪುರದಲ್ಲಿ ಮನೆಯ ಗೋಡೆ ಕುಸಿದು ಹಸು ಮೃತಪಟ್ಟಿದೆ.

ನವಲಗುಂದ ತಾಲ್ಲೂಕಿನ ತಡಹಾಳ ಗ್ರಾಮದ ಬೆಣ್ಣೆಹಳ್ಳದ ಸೇತುವೆ ಮೇಲಿಂದ ಬೈಕ್ ಆಯತಪ್ಪಿ ಹಳ್ಳಕ್ಕೆ ಬಿದ್ದು ಸವಾರರೊಬ್ಬರು ನಾಪತ್ತೆಯಾಗಿದ್ದಾರೆ. ಬೈಕ್‌ನಲ್ಲಿ ಸವಾರಿ ಮಾಡುತ್ತಿದ್ದ ಸದಾನಂದ ಮಾದರ, ಮತ್ತು ಶರಣಯ್ಯ ಹಿರೇಮಠ ಸೇತುವೆ ಮೇಲೆ ಸಾಗುವಾಗ ಆಯತಪ್ಪಿ ಬಿದ್ದಿದ್ದಾರೆ. ಸದಾನಂದ ಈಜು ಬಾರದೇ ನೀರಿನಲ್ಲಿ ಕೊಚ್ಚಿಹೋಗಿದ್ದಾರೆ. ಶರಣಯ್ಯ ಈಜಿ ದಡ ಸೇರಿದ್ದಾರೆ.

ಗದಗ ಜಿಲ್ಲೆಯ ಲಕ್ಷ್ಮೇಶ್ವರ ತಾಲ್ಲೂಕಿನ ಶೆಟ್ಟಿಕೇರಿಯ ದೊಡ್ಡ ಕೆರೆಗೆ ಕೋಡಿ ಬಿದ್ದಿದ್ದು, ಶುಕ್ರವಾರ ನಸುಕಿನ ಜಾವ ಶೆಟ್ಟಿಕೇರಿ-ಶಿರಹಟ್ಟಿ ನಡುವಿನ ಸಂಪರ್ಕ ರಸ್ತೆ ಕೊಚ್ಚಿ ಹೋಗಿದೆ. ನೀರು ಸಮೀಪದ ಹೊಲಗಳಿಗೆ ನುಗ್ಗಿದೆ. ಇಟ್ಟಿಗೇರಿ ಕೆರೆಯ ಹಿನ್ನೀರಿನಿಂದ ಮನೆಗಳು ಜಲಾವೃತಗೊಂಡಿವೆ. ಸಮೀಪದ ಬಾಬಾ ಮಂದಿರಕ್ಕೂ ನೀರು ನುಗ್ಗಿದೆ.

ಇದೇ ತಾಲ್ಲೂಕಿನ ಬಟ್ಟೂರಿನ ದೊಡ್ಡ ಹಳ್ಳ ಉಕ್ಕಿ ಹರಿದು ರಸ್ತೆ ಹಾಳಾಗಿದೆ. ಅಡರಕಟ್ಟಿ- ಪುಟಗಾವ್‌ಬಡ್ನಿ ರಸ್ತೆಯಲ್ಲಿ ಶುಕ್ರವಾರ ಕೋಳಿಗಳನ್ನು ಸಾಗಿಸುತ್ತಿದ್ದ ವಾಹನ ರಸ್ತೆಪಕ್ಕ ವಾಲಿದ್ದರಿಂದ ಕೋಳಿ ತುಂಬಿದ್ದ ಟ್ರೇಗಳು ಚೆಲ್ಲಾಪಿಲ್ಲಿಯಾದವು. ನರಗುಂದ ತಾಲ್ಲೂಕಿನಲ್ಲಿ ಮಳೆ ಕಡಿಮೆಯಾದರೂ ಯಾವಗಲ್ ಬಳಿ ಬೆಣ್ಣೆಹಳ್ಳದ ಸೇತುವೆ ಮೇಲೆ ನೀರು ಹರಿಯುತ್ತಿದೆ.

ಹೈಕೋರ್ಟ್ ಆದೇಶದಂತೆ ಎಸಿಬಿಯಲ್ಲಿನ ಕಡತಗಳನ್ನು ವರ್ಗಾಯಿಸಲು ಕೋರಿಕೆ

ಪ್ರಕರಣ ಹಸ್ತಾಂತರಕ್ಕೆ ಲೋಕಾಯುಕ್ತ ಪತ್ರ

ವಿ.ಎಸ್.ಸುಬ್ರಹ್ಮಣ್ಯ

ಬೆಂಗಳೂರು: ಭ್ರಷ್ಟಾಚಾರ ನಿಗ್ರಹ ದಳದಲ್ಲಿ(ಎಸಿಬಿ) ತನಿಖಾ ಹಂತದಲ್ಲಿರುವ ಮತ್ತು ತನಿಖೆ ಪೂರ್ಣಗೊಂಡು ವಿಚಾರಣಾ ಹಂತದಲ್ಲಿರುವ ಎಲ್ಲ ಪ್ರಕರಣಗಳ ಕಡತಗಳನ್ನು ಲೋಕಾಯುಕ್ತ ಪೊಲೀಸ್ ವಿಭಾಗಕ್ಕೆ ತ್ವರಿತವಾಗಿ ಹಸ್ತಾಂತರಿಸಲು ಕ್ರಮ ಕೈಗೊಳ್ಳುವಂತೆ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಅವರು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ.

ಎಸಿಬಿ ರಚಿಸುವ ಆದೇಶವನ್ನು ರದ್ದುಗೊಳಿಸಿ ಆಗಸ್ಟ್ 11ರಂದು ತೀರ್ಪು ನೀಡಿದ್ದ ಹೈಕೋರ್ಟ್, ತನಿಖಾ ಹಂತದಲ್ಲಿರುವ ಮತ್ತು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುವ ಪ್ರಕರಣಗಳಿಗೆ ಸಂಬಂಧಿಸಿದ ಕಡತಗಳನ್ನು ಲೋಕಾಯುಕ್ತಕ್ಕೆ ಹಸ್ತಾಂತರಿಸುವಂತೆ ಆದೇಶಿಸಿತ್ತು. ಆದರೆ, ರಾಜ್ಯ ಸರ್ಕಾರ ಪೂರಕ ಆದೇಶ ಹೊರಡಿಸದ ಕಾರಣದಿಂದ ಕಡತಗಳು ಎಸಿಬಿಯಲ್ಲೇ ಉಳಿದಿವೆ.

ಒಟ್ಟು 2,149 ಪ್ರಕರಣಗಳು ಎಸಿಬಿಯಲ್ಲಿ ತನಿಖಾ ಹಂತದಲ್ಲಿವೆ.

ಸಿಬ್ಬಂದಿ ಬಲ ಹೆಚ್ಚಿಸಲು ಪ್ರಸ್ತಾವ

ಭ್ರಷ್ಟಾಚಾರ ಪ್ರಕರಣಗಳ ತನಿಖೆಯನ್ನು ನಡೆಸಬೇಕಿರುವುದರಿಂದ ಲೋಕಾಯುಕ್ತ ಪೊಲೀಸ್ ವಿಭಾಗದ ಬಲ ಹೆಚ್ಚಿಸುವಂತೆ ಏಬ ಪ್ರಸ್ತಾವವನ್ನು ಸರ್ಕಾರದ ಮುಂದಿಡಲು ಲೋಕಾಯುಕ್ತರು ಸಿದ್ಧತೆ ನಡೆಸಿದ್ದಾರೆ.

ಎಸಿಬಿಯಲ್ಲಿರುವ ಅನುಭವಿ, ಕಳಂಕರಹಿತ ಅಧಿಕಾರಿಗಳನ್ನು ಆಯ್ದು ಲೋಕಾಯುಕ್ತ ಪೊಲೀಸ್ ವಿಭಾಗದಲ್ಲಿ ನಿಯೋಜಿಸಲು ಲೋಕಾಯುಕ್ತರು ನಿರ್ಧರಿಸಿದ್ದಾರೆ. ಲೋಕಾಯುಕ್ತದಲ್ಲಿ ಹಾಲಿ ಇರುವ ಪೊಲೀಸ್ ಅಧಿಕಾರಿಗಳಲ್ಲಿ ಕೆಲವರನ್ನು ಬದಲಾವಣೆ ಮಾಡುವ ಯೋಚನೆಯೂ ಇದೆ ಎಂದು ಮೂಲಗಳು ತಿಳಿಸಿವೆ.

ಹೈಕೋರ್ಟ್ ವಿಭಾಗೀಯ ಪೀಠದ ತೀರ್ಪು ಪ್ರಕಟವಾದ ದಿನದಿಂದಲೇ ಎಸಿಬಿ ಅಧಿಕಾರಿಗಳು ತನಿಖೆ ಸ್ಥಗಿತಗೊಳಿಸಿದ್ದಾರೆ.

ತನಿಖಾ ಹಂತದ ಎಲ್ಲ ಪ್ರಕರಣಗಳ ಕಡತ ಮತ್ತು ದಾಖಲೆಗಳನ್ನು ಗಂಟು ಕಟ್ಟಿ ಒಂದೆಡೆ ಇರಿಸಿರುವ ಎಸಿಬಿ ಅಧಿಕಾರಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಿಂದ ಆದೇಶ ಹೊರಬೀಳುವುದನ್ನೇ ಕಾಯುತ್ತಿದ್ದಾರೆ.

'ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ ಅವರಿಗೆ ಕಳೆದ ವಾರ ಪತ್ರವೊಂದನ್ನು ಬರೆದಿರುವ ಲೋಕಾಯುಕ್ತರು, ಎಸಿಬಿಯಲ್ಲಿ ಬಾಕಿ ಇರುವ ಪ್ರಕರಣಗಳನ್ನು ಲೋಕಾಯುಕ್ತಕ್ಕೆ ವರ್ಗಾವಣೆ ಮಾಡಬೇಕೆಂಬ ಹೈಕೋರ್ಟ್ ಆದೇಶ ಪಾಲಿಸುವಂತೆ ಕೋರಿದ್ದಾರೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಉನ್ನತ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಆ.11ರಂದು ಹೈಕೋರ್ಟ್ ತೀರ್ಪು ಪ್ರಕಟವಾದ ಬಳಿಕ ಎಸಿಬಿ ತನ್ನ ಕೆಲಸ ಸ್ಥಗಿತಗೊಳಿಸಿದೆ. ತನಿಖಾ ಹಂತದಲ್ಲಿರುವ ಪ್ರಕರಣಗಳು ಮತ್ತು ವಿಚಾರಣೆಗಳಿಗೆ ಸಂಬಂಧಿಸಿದ ಕಡತಗಳು ಲೋಕಾಯುಕ್ತ ಪೊಲೀಸ್ ವಿಭಾಗಕ್ಕೂ ವರ್ಗಾವಣೆಯಾಗಿಲ್ಲ' ಎಂಬ ಉಲ್ಲೇಖ ಪತ್ರದಲ್ಲಿದೆ.

ವಿಚಾರಣಾ ಹಂತದಲ್ಲೂ ಇಕ್ಕಟ್ಟು: ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಎಸಿಬಿ ಪೊಲೀಸರು ದಾಖಲಿಸಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯಗಳಲ್ಲಿ ನಡೆಯುತ್ತಿರುವ ವಿಚಾರಣೆಗಳಲ್ಲೂ ಇಕ್ಕಟ್ಟಿನ ಸ್ಥಿತಿ ನಿರ್ಮಾಣವಾಗಿದೆ.



ಈಗ ಉಂಟಾಗಿರುವ ನಿರ್ವಾತದ ಸ್ಥಿತಿಯು ಎಸಿಬಿಯಲ್ಲಿರುವ ಪ್ರಕರಣಗಳ ತನಿಖೆ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆ ಇದೆ. ಪ್ರಕರಣಗಳನ್ನು ಹಸ್ತಾಂತರಿಸುವಂತೆ ಕೋರಿದ್ದೇನೆ.

ನ್ಯಾ. ಬಿ.ಎಸ್. ಪಾಟೀಲ, ಲೋಕಾಯುಕ್ತ

ಎಸಿಬಿ ರದ್ದುಗೊಂಡಿರುವುದರಿಂದ ಆ ಸಂಸ್ಥೆಯನ್ನು ಪ್ರತಿನಿಧಿಸುತ್ತಿದ್ದ ವಕೀಲರು ವಿಚಾರಣೆಗೆ ಹಾಜರಾಗುತ್ತಿಲ್ಲ. ಈ ಪ್ರಕರಣಗಳಿಗೆ ಸಂಬಂಧಿಸಿದ ಕಡತಗಳೇ ಲೋಕಾಯುಕ್ತಕ್ಕೆ ತಲುಪದಿರುವುದರಿಂದ ಲೋಕಾಯುಕ್ತದ ಪರ ವಕೀಲರು ವಿಚಾರಣೆಯಲ್ಲಿ ವಾದ ಮಂಡಿಸಲು ಆಗುತ್ತಿಲ್ಲ.

'ಒಂದು ವಾರದಿಂದ ಈಚೆಗೆ ಹಲವು ಪ್ರಕರಣಗಳಲ್ಲಿ ಇಂತಹ ಇಕ್ಕಟ್ಟಿನ ಸನ್ನಿವೇಶ ನಿರ್ಮಾಣವಾಗಿತ್ತು. ಇಂತಹ ಪ್ರಕರಣಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದ ಸಮಯವನ್ನೂ ಹಿನ್ನಡೆ ಆಗುವುದನ್ನು ತಪ್ಪಿಸುವ ಉದ್ದೇಶದಿಂದ ನೋಟಿಸ್ ಪಡೆದುಕೊಂಡು ಮುಂದಿನ ಕ್ರಮ ವಹಿಸುವಂತೆ ಸಂಸ್ಥೆಯ ವಕೀಲರಿಗೆ ಲೋಕಾಯುಕ್ತರು ಸೂಚಿಸಿದ್ದರು.

ಈಗ ಹಲವು ಪ್ರಕರಣಗಳಲ್ಲಿ ಲೋಕಾಯುಕ್ತದ ವಕೀಲರೇ ನೋಟಿಸ್ ಸ್ವೀಕರಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಹೈಕೋರ್ಟ್ ಮತ್ತು ವಿಚಾರಣಾ ನ್ಯಾಯಾಲಯದಿಂದ ತನಿಖಾ ತಂಡದ ಪ್ರತಿನಿಧಿಯಾಗಿ ನೋಟಿಸ್ ಸ್ವೀಕರಿಸಿದ ಬಳಿಕವೂ ಪ್ರಕರಣಗಳಿಗೆ ಸಂಬಂಧಿಸಿದ ಕಡತಗಳು ಇಲ್ಲದ ಕಾರಣದಿಂದ ಮುಂದಿನ ವಾದ ಮಂಡನೆಗೆ ಸಿದ್ಧತೆ ನಡೆಸಲು ಸಾಧ್ಯವಾಗಿಲ್ಲ. ಈ ಕಾರಣದಿಂದ ಎಸಿಬಿ ಅಧಿಕಾರಿಗಳಿಗೆ ಪತ್ರ ಬರೆದು ಕೆಲವು ಪ್ರಕರಣಗಳ ಕಡತಗಳನ್ನು ತರಿಸಿಕೊಳ್ಳಲಾಗಿದೆ.

ಸೆ.17ರಿಂದ ದಲಿತರ ಸಂಪರ್ಕ

ಪ್ರಜಾವಾಣಿ ವಾರ್ತೆ



ಕೋಲಾರದಲ್ಲಿ ಬಿಜೆಪಿ ರಾಜ್ಯ ಎಸ್‌ಸಿ ಮೋರ್ಚಾ ಪ್ರಶಿಕ್ಷಣ ವರ್ಗಕ್ಕೆ ಮೋರ್ಚಾದ ರಾಷ್ಟ್ರೀಯ ಅಧ್ಯಕ್ಷ ಲಾಲ್ ಸಿಂಗ್ ಆರ್ಯ ಶುಕ್ರವಾರ ಚಾಲನೆ ನೀಡಿದರು. ಮೋರ್ಚಾದ ರಾಜ್ಯ ಅಧ್ಯಕ್ಷ ಛಲವಾದಿ ನಾರಾಯಣಸ್ವಾಮಿ, ಸಂಸದ ಎಸ್‌.ಮುನಿಸ್ವಾಮಿ ಇದ್ದಾರೆ

ಕೋಲಾರ: 'ಪ್ರಧಾನಿ ಮೋದಿ ಜನ್ಮದಿನವಾದ ಸೆ.17ರಿಂದ ಸಂವಿಧಾನ ದಿನವಾದ ನ.26ರವರೆಗೆ ಬಿಜೆಪಿ ಎಸ್.ಸಿ ಮೋರ್ಚಾದಿಂದ ದೇಶದ 75 ಸಾವಿರ ಹಳ್ಳಿಗಳಲ್ಲಿ ದಲಿತರ ಸಮಸ್ಯೆ ಆಲಿಸಿ ಬಗೆಹರಿಸಲಾಗುವುದು' ಎಂದು ಬಿಜೆಪಿ ಎಸ್.ಸಿ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷ ಲಾಲ್ ಸಿಂಗ್ ಆರ್ಯ ತಿಳಿಸಿದರು.

ನಗರ ಹೊರವಲಯದಲ್ಲಿ ಶುಕ್ರವಾರ ಆರಂಭವಾದ ರಾಜ್ಯ ಬಿಜೆಪಿ ಎಸ್.ಸಿ ಮೋರ್ಚಾ ಪ್ರಶಿಕ್ಷಣ ವರ್ಗಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'ಮೋದಿ ಜನ್ಮದಿನವನ್ನು ಸೇವಾ ದಿವಸವಾಗಿ ಆಚರಿಸುತ್ತಿದ್ದು, ಮೋರ್ಚಾ ಪದಾಧಿಕಾರಿಗಳು ಕೇಂದ್ರದ ಯೋಜನೆ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ದಲಿತ ಸಮುದಾಯದವರಿಗೆ ಮನದಟ್ಟು ಮಾಡಲಿದ್ದಾರೆ. 70 ದಿನ ನಡೆಯಲಿರುವ ಬಸ್ತಿ ಸಂಪರ್ಕ ಅಭಿಯಾನದಡಿ ಪ್ರತಿ ಜಿಲ್ಲೆಯಲ್ಲಿ 25 ಸಂಪರ್ಕ ಸಭೆ ಆಯೋಜಿಸಲಿದ್ದಾರೆ' ಎಂದರು.

'ಕಾಂಗ್ರೆಸ್ ದಲಿತರ ವಿರೋಧಿಯಾಗಿದ್ದು, ಸಮುದಾಯವನ್ನು ಅಧಿಕಾರದಿಂದ ದೂರವಿಡುವ ಕೆಲಸ ಮಾಡಿಕೊಂಡು ಬಂದಿದೆ. ಬಿಜೆಪಿ ಆದಿವಾಸಿ ಸಮುದಾಯಕ್ಕೆ ರಾಷ್ಟ್ರಪತಿಯಂಥ ಹುದ್ದೆ ನೀಡಿ ಗೌರವಿಸಿದೆ' ಎಂದರು.

ಎಸ್.ಸಿ ಮೋರ್ಚಾ ರಾಜ್ಯ ಅಧ್ಯಕ್ಷ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, 'ಬಿಜೆಪಿ ಯಾವತ್ತೂ ದಲಿತ, ಸಂವಿಧಾನ, ಅಂಬೇಡ್ಕರ್ ವಿರೋಧಿ ಅಲ್ಲ. ಕಾಂಗ್ರೆಸ್ 7 ದಶಕಗಳಿಂದವೋಟ್ ಬ್ಯಾಂಕ್ ಮಾಡಿಕೊಂಡಿದೆ ಎಂದರು.

'8 ತಿಂಗಳಲ್ಲಿ ರಾಜ್ಯ ವಿಧಾನಸಭೆ ಚುನಾವಣೆ ಬರಲಿದ್ದು ಪಕ್ಷ ಸಂಘಟನೆ ಕಾರ್ಯ ನಡೆಯುತ್ತಿದೆ. ಪ್ರಶಿಕ್ಷಣ ವರ್ಗ ಇದಕ್ಕೆ ಸಹಕಾರಿಯಾಗಲಿದೆ ' ಎಂದರು.

ಸಂಸದ ಎಸ್.ಮುನಿಸ್ವಾಮಿ ಪ್ರಶಿಕ್ಷಣ ವರ್ಗ ಆಯೋಜನೆ ಜವಾಬ್ದಾರಿ ವಹಿಸಿಕೊಂಡಿದ್ದು, ರಾಜ್ಯದ ವಿವಿಧೆಡೆಯಿಂದ 200 ಮುಖಂಡರು ಭಾಗವಹಿಸಿದ್ದಾರೆ. ಪಕ್ಷ ಸಂಘಟನೆ ಸಂಬಂಧ ಸೆ.4ರವರೆಗೆ ಮುಖಂಡರು ಸಮಾಲೋಚನೆ ನಡೆಸಲಿದ್ದಾರೆ.

ವಿಪಕ್ಷಗಳ ಆರೋಪಗಳಿಗೆ ತಕ್ಕ ಉತ್ತರ ನೀಡಲು ಎಸ್.ಸಿ ಮೋರ್ಚಾದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರಿಗೆ ತರಬೇತಿ ನೀಡಲಾಗುತ್ತಿದೆ

ಲಾಲ್ ಸಿಂಗ್ ಆರ್ಯ, ಬಿಜೆಪಿ ಎಸ್‌ಸಿ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷ

ರಾಜ್ಯದಲ್ಲಿ ಶೇ 70ರಷ್ಟು ದಲಿತ ಸಮುದಾಯ ಈಗ ಬಿಜೆಪಿ ತೆಕ್ಕೆಯಲ್ಲಿದೆ. ದಲಿತರು ವ್ಯವಸ್ಥೆ ಅರಿತು ಕಾಂಗ್ರೆಸ್ ತೊರೆದು ಬಿಜೆಪಿ ಸೇರುತ್ತಿದ್ದಾರೆ

ಛಲವಾದಿ ನಾರಾಯಣಸ್ವಾಮಿ, ರಾಜ್ಯ ಅಧ್ಯಕ್ಷ, ಎಸ್‌ಸಿ ಮೋರ್ಚಾ

ಬರಗೂರರ ಕಾದಂಬರಿಯಲ್ಲಿ ರಾಷ್ಟ್ರಗೀತೆಗೆ ಅವಮಾನ ಆಗಿಲ್ಲ

'ಭರತನಗರಿ': ಕಮಿಷನರ್‌ಗೆ ಪ್ರತಿದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರೊ. ಬರಗೂರು ರಾಮಚಂದ್ರಪ್ಪ ಅವರು 'ಭರತನಗರಿ' ಕಾದಂಬರಿಯಲ್ಲಿ ರಾಷ್ಟ್ರಗೀತೆಗೆ ಅವಮಾನ ಮಾಡಿದ್ದಾರೆಂದು ಆರೋಪಿಸಿ ನೀಡಿರುವ ದೂರಿನಲ್ಲಿ ಸತ್ಯಾಂಶ ಇಲ್ಲ ಎಂದು ಡಿಎಸ್‌ಎಸ್‌ನ (ಅಂಬೇಡ್ಕರ್‌ವಾದ) ಮಾವಳ್ಳಿ ಶಂಕರ್, ಡಿಎಸ್‌ಎಸ್ (ಭೀಮ ವಾದ) ಮೋಹನ್‌ರಾಜ್, ಪತ್ರಕರ್ತ ಬಿ.ಎಂ. ಹನೀಫ್ ಮತ್ತಿತರರು ಪೊಲೀಸ್ ಆಯುಕ್ತರಿಗೆ ಶುಕ್ರವಾರ ಪ್ರತಿದೂರು ಸಲ್ಲಿಸಿದ್ದಾರೆ.

ಕಾದಂಬರಿಯಲ್ಲಿ ರಾಷ್ಟ್ರಗೀತೆಗೆ ಅವಮಾನ ಮಾಡಲಾಗಿದೆ ಎಂದು ವಿಧಾನ ಪರಿಷತ್‌ನ ಬಿಜೆಪಿ ಸದಸ್ಯರಾದ ಎನ್. ರವಿಕುಮಾರ್ ಹಾಗೂ ಛಲವಾದಿ ನಾರಾಯಣ ಸ್ವಾಮಿ ದೂರು ನೀಡಿದ್ದರು.

'ನಲವತ್ತು ವರ್ಷಗಳ ಹಿಂದೆ ಬರಗೂರರು ಬರೆದಿದ್ದ ಕಾದಂಬರಿಯ ಒಂದು ಪಾತ್ರ ರಾಷ್ಟ್ರಗೀತೆಯ ಧಾಟಿಯಲ್ಲಿ ದೇಶದ ಸ್ಥಿತಿಯನ್ನು ವಿಡಂಬನೆ ಮಾಡಿತ್ತು. ರಾಜಕೀಯ ವಿಡಂಬನೆಯ ಕಾದಂಬರಿಯಲ್ಲಿ ಪಾತ್ರದ ಮನೋಧರ್ಮಕ್ಕೆ ಅನುಗುಣವಾಗಿ ಹಾಗೆ ಬರೆಯಲಾಗಿತ್ತು. ಈ ಕುರಿತು ಬರಗೂರರು ಈಗಾಗಲೇ ಸ್ಪಷ್ಟನೆ ನೀಡಿದ್ದು, ರಾಷ್ಟ್ರಗೀತೆಯನ್ನು ಅವಮಾನ ಮಾಡುವ ಉದ್ದೇಶ ಇಲ್ಲ ಎಂದಿದ್ದಾರೆ. ಇದನ್ನು ಗಮನಿಸಿ, ಬರಗೂರರ ವಿರುದ್ಧ ಬಂದಿರುವ ದೂರನ್ನು ತಮ್ಮ ಹಂತದಲ್ಲೇ ಮುಕ್ತಾಯ ಮಾಡಬೇಕು' ಎಂದು ಪ್ರತಿ-ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಇಂದಿನ ಸಂದರ್ಭವನ್ನೂ ಒಳಗೊಳ್ಳಬೇಕೆಂಬ ಉದ್ದೇಶದಿಂದ ಬರಗೂರರು ಮೂಲಕೃತಿಗೆ ಹೊಸ ರೂಪ ನೀಡಿದ್ದಾರೆ. 2021ರ ಅವರ ಸಮಗ್ರ ಸಾಹಿತ್ಯ ಸಂಪುಟಗಳಲ್ಲಿ ಅದು ಸೇರಿದೆ. ಹೊಸದರಲ್ಲಿ ರಾಷ್ಟ್ರಗೀತೆ ಧಾಟಿಯ ಬದಲು ಬೇರೆ ಗೀತೆ ಬರೆದಿದ್ದಾರೆ. ಹೀಗಾಗಿ ಹಳತು ಅಸ್ತಿತ್ವ ಕಳೆದುಕೊಳ್ಳುತ್ತದೆ ಎಂದೂ ವಿವರಿಸಿದ್ದಾರೆ.

ಡಿ.ಎಸ್.ಎಸ್‌ನ ಗೋಪಾಲಕೃಷ್ಣ ಹರಳಹಳ್ಳಿ, ಎಸ್‌ಯುಸಿಐ (ಸಿ)ಯ ಎಂ.ಎನ್. ಶ್ರೀರಾಮ್, ಬಂಡಾಯ ಸಾಹಿತ್ಯ ಸಂಘಟನೆಯ ಬಿ.ರಾಜಶೇಖರಮೂರ್ತಿ, ಮಾನವ ಬಂಧುತ್ವ ವೇದಿಕೆಯ ಅನಂತ ನಾಯಕ್, ಸೌಹಾರ್ದ ಕರ್ನಾಟಕದ ಎಸ್.ವೈ. ಗುರುಶಾಂತ್, ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಬಸವರಾಜ್ ಕವಿತಾಳ, ಎಸ್‌ಎಫ್‌ಐಡಬ್ಲ್ಯೂನ ಜ್ಯೋತಿ ಅನಂತ ಸುಬ್ಬರಾವ್ ಹಾಗೂ ಹೆಣ್ಣೂರು ಶ್ರೀನಿವಾಸ್ ಪ್ರತಿ ದೂರು ಸಲ್ಲಿಸಿದವರಲ್ಲಿ ಇದ್ದಾರೆ.

'ಸ್ಮಾರ್ಟ್ ಸಿಟಿ: ಜೂನ್‌ಗೆ ಎಲ್ಲ ಕಾಮಗಾರಿ ಪೂರ್ಣ'

ಬೆಂಗಳೂರು: ರಾಜ್ಯದಲ್ಲಿ 'ಸ್ಮಾರ್ಟ್ ಸಿಟಿ' ಅನುದಾನದಲ್ಲಿ ಪ್ರಗತಿಯಲ್ಲಿರುವ ಎಲ್ಲ 230 ಕಾಮಗಾರಿಗಳಿಗೆ ತಿಂಗಳುವಾರು ಭೌತಿಕ ಹಾಗೂ ಆರ್ಥಿಕ ಗುರಿಗಳನ್ನು ನಿಗದಿಪಡಿಸಲಾಗಿದ್ದು, 2023ರ ಜೂನ್‌ನೊಳಗೆ ಪೂರ್ಣಗೊಳಿಸಲಾಗುವುದು ಎಂದು ಸ್ಮಾರ್ಟ್ ಸಿಟಿ ಅಭಿಯಾನದ ತಾಂತ್ರಿಕ ವಿಭಾಗದ ಕಾರ್ಯನಿರ್ವಾಹಕ ನಿರ್ದೇಶಕರು ತಿಳಿಸಿದ್ದಾರೆ.

'ನಗರಾಭಿವೃದ್ಧಿ ಸಚಿವರ ಅಧ್ಯಕ್ಷತೆಯಲ್ಲಿ ರಾಜ್ಯದ ಎಲ್ಲ 7 ನಗರಗಳಲ್ಲಿ 35 ಸಭೆಗಳನ್ನು ನಡೆಸಿ ಯೋಜನೆ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗಿದೆ. ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಆಯಾ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪರಿಶೀಲನಾ ಸಭೆಗಳು ನಡೆದು, ಅನುಷ್ಠಾನದಲ್ಲಿ ಎದುರಾಗುವ ಸವಾಲುಗಳಿಗೆ ಪರಿಹಾರ ಕಂಡುಕೊಳ್ಳಲಾಗುತ್ತಿದೆ. ಕಾಲಮಿತಿಯಲ್ಲಿ ಕಾಮಗಾರಿ ಅನುಷ್ಠಾನಗೊಳಿಸಲು ಕ್ರಮ ವಹಿಸಲಾಗಿದೆ' ಎಂದು ಹೇಳಿದ್ದಾರೆ.

2 ವರ್ಷಗಳಲ್ಲಿ ₹3,557 ಕೋಟಿ ವೆಚ್ಚದಲ್ಲಿ 354 ಕಾಮಗಾರಿಗಳು ಮುಕ್ತಾಯವಾಗಿದ್ದು, ₹2,493 ಕೋಟಿ ವೆಚ್ಚದ ಕಾಮಗಾರಿಗಳು ಪ್ರಾರಂಭವಾಗಿವೆ. ಆರ್ಥಿಕ ಪ್ರಗತಿ ಶೇ 86ರಷ್ಟಿದೆ. ಕಾಮಗಾರಿ, ಆರ್ಥಿಕ ಪ್ರಗತಿಯಲ್ಲಿ ರಾಜ್ಯ 3ನೇ ಶ್ರೇಯಾಂಕದಲ್ಲಿದೆ ಎಂದು ಮಾಹಿತಿ ನೀಡಿದ್ದಾರೆ.

31 ಶಿಕ್ಷಕರಿಗೆ ರಾಜ್ಯ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2022-23ನೇ ಸಾಲಿನ ರಾಜ್ಯ ಮಟ್ಟದ ಉತ್ತಮ ಶಿಕ್ಷಕರ ಪ್ರಶಸ್ತಿಗೆ ಪ್ರಾಥಮಿಕ ಶಾಲೆಗಳ 20 ಮತ್ತು ಪ್ರೌಢಶಾಲೆಗಳ 11 ಶಿಕ್ಷಕರನ್ನು ರಾಜ್ಯ ಸರ್ಕಾರ ಆಯ್ಕೆ ಮಾಡಿದೆ.

ಪ್ರಶಸ್ತಿ ತಲಾ ₹10 ಸಾವಿರ ನಗದು ಒಳಗೊಂಡಿದೆ. ಆಯ್ಕೆಯಾಗಿರುವ ಶಿಕ್ಷಕಿ ಯರಿಗೆ 'ಅಕ್ಷರ ಮಾತೆ ಸಾವಿತ್ರಿಬಾಯಿ ಫುಲೆ' ಹೆಸರಿನಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಶಿಕ್ಷಣ ಇಲಾಖೆ ತಿಳಿಸಿದೆ.

ಪ್ರಾಥಮಿಕ ಶಾಲಾ ವಿಭಾಗ: ಮಂಜುನಾಥ ಶಂಕರಪ್ಪ ಮಂಗೂಣಿ (ಬೆನ್ನೂರ, ನವಲಗುಂದ), ಅಮಿತಾನಂದ ಹೆಗ್ಡೆ (ಬಂಗಾಡಿ, ಬೆಳ್ತಂಗಡಿ), ಚಂದ್ರಶೇಖರ ಎಚ್.ಎಲ್. (ರಾಗಿಮಾಕಲಹಳ್ಳಿ, ಚಿಕ್ಕ ಬಳ್ಳಾಪುರ), ಅಪ್ಪಸಾಹೇಬ ವಸಂ ತಪ್ಪ ಗಿರೆಣ್ಣವರ (ತುಕ್ಕಾ ನಟ್ಟಿ, ಮೂಡಲಗಿ), ಶಿವಾ ನಂದಪ್ಪ ಬಿ.(ಹರಗುವಳ್ಳಿ, ಶಿಕಾರಿಪುರ), ಹುಸೇನಸಾಬ್ (ಬಸನಾಳ, ಕಲ ಬುರಗಿ), ಸುದರ್ಶನ್ ಕೆ.ವಿ.(ಕ್ಲೀವ್ ಲ್ಯಾಂಡ್ ಟೌನ್, ಬೆಂಗಳೂರು ಉತ್ತರ-3), ಕೊಟ್ರಪ್ಪ ವಿರೂಪಾಕ್ಷಪ್ಪ ಮೇಲ್ಕುರಿ (ಹಂದಿಗನೂರು, ಹಾವೇರಿ), ಸಂಜೀವ ದೇವಾಡಿಗ(ಮಿಯೂರು ಬಂಗ್ಲೆಗುಡ್ಡೆ, ಕಾರ್ಕಳ), ಫಿರೆಂಗಪ್ಪ ಸಿದ್ದಪ್ಪ ಕಟ್ಟಿಮನಿ(ತೊದಲಬಾಗಿ, ಜಮಖಂಡಿ), ಚಂದ್ರಕಲಾ(ಹಾಲಭಾವಿ, ಶಹಾಪುರ), ನಿರಂಜನ ಪಿ.ಜೆ. (76 ವೆಂಕಟಾಪುರ ಕ್ಯಾಂಪ್, ಹೊಸಪೇಟೆ), ಸುಶೀಲಾಬಾಯಿ ಲಕ್ಷ್ಮೀಕಾಂತ್ ಗುರುವ(ವಡಗಾವಿ, ಬೆಳಗಾವಿ), ವಿದ್ಯಾ ಕಂಪಾಪೂರ ಮಠ (ನೆರೆಬೆಂಚಿ, ಕುಷ್ಟಗಿ), ಬಸವರಾಜ ಜಾಡರ (ಮುಳ್ಳೂರು, ಸಿಂಧನೂರು), ಗಂಗಾಧರಪ್ಪ ಬಿ.ಆರ್. (ಮೆಣಸೆ, ಶೃಂಗೇರಿ), ಚಂದ್ರಶೇಖರರೆಡ್ಡಿ(ಕೆ.ರಾಂಪುರ, ಪಾವಗಡ), ಸುಧಾಕರ ಗಣಪತಿ ನಾಯಕ(ಕಂಚನಹಳ್ಳಿ, ಯಲ್ಲಾಪುರ), ಈಶ್ವರಪ್ಪ ಅಂದಾನಪ್ಪ ರೇವಡಿ(ಹಿರೇಕೊಪ್ಪ, ರೋಣ), ಕವಿತಾ ಈ.(ಬೋರಪ್ಪನಗುಡಿ, ಚಳ್ಳಕೆರೆ).

ಪ್ರೌಢಶಾಲೆ : ಮಹೇಶ್ ಕೆ.ಎನ್.(ಕಡ್ಲೇಗುದ್ದು, ಚಿತ್ರದುರ್ಗ), ಇಬ್ರಾಹಿಂ ಎಸ್.ಎಂ.(ನೇರುಗಳಲೆ, ಸೋಮವಾ ರಪೇಟೆ), ರಘು ಬಿ.ಎಂ.(ಶಿವಮೊಗ್ಗ), ಭೀಮಪ್ಪ(ಮಸ್ಕಿ, ರಾಯಚೂರು), ರಾಧಾಕೃಷ್ಣ ಟಿ. (ಕೊಯ್ಯೂರು, ಬೆಳ್ತಂಗಡಿ), ನಾರಾಯಣ ಪರಮೇಶ್ವರ ಭಾಗವತ(ಶಿರಸಿ), ಅರುಣಾ ಜೂಡಿ(ಕಿನ್ನಾಳ, ಕೊಪ್ಪಳ), ಸುನೀಲ ಪರೀಟ(ಲಕ್ಕುಂಡಿ, ಬೈಲಹೊಂಗಲ), ಬಾಲಸುಬ್ರಹ್ಮಣ್ಯ ಎಸ್.ಟಿ.(ಕೊಕ್ಕರೆ ಬೆಳ್ಳೂರು, ಮದ್ದೂರು), ಚೇತನ ಬಣಕಾರ (ಹರಪನಹಳ್ಳಿ, ವಿಜಯನಗರ), ಕೀರ್ತಿ ಬಸಪ್ಪ ಲಗಳಿ(ಮಿಟ್ಟೇಮರಿ, ಬಾಗೇಪಲ್ಲಿ).

ಕಾನೂನು ವಿ.ವಿಗೆ ಬಸವರಾಜು ಕುಲಪತಿ



ಬಸವರಾಜು

ಮೈಸೂರು: ಮೈಸೂರು ವಿಶ್ವವಿದ್ಯಾಲಯದ ಕಾನೂನು ನಿಕಾಯದ ಡೀನ್ ಆಗಿದ್ದ ಡಾ.ಸಿ. ಬಸವರಾಜು ಅವರನ್ನು ಹುಬ್ಬಳ್ಳಿಯ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕುಲಪತಿಯನ್ನಾಗಿ ಶುಕ್ರವಾರ ನೇಮಕ ಮಾಡಲಾಗಿದೆ. ಅವರ ಅಧಿಕಾರದ ಅವಧಿ 4 ವರ್ಷಗಳವರೆಗೆ ಇರಲಿದೆ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಆದೇಶದಲ್ಲಿ ತಿಳಿಸಿದ್ದಾರೆ.

ಗಣೇಶ ಮೂರ್ತಿ ವಿಸರ್ಜನೆ ವೇಳೆ ಘರ್ಷಣೆ

ಪ್ರಜಾವಾಣಿ ವಾರ್ತೆ

ಮುಳಬಾಗಿಲು (ಕೋಲಾರ): ನಗರದ ನೂಗಲಬಂಡೆ ಬಡಾವಣೆಯಲ್ಲಿ ಶುಕ್ರವಾರ ಗಣೇಶ ಮೂರ್ತಿ ವಿಸರ್ಜನೆ ಮೆರವಣಿಗೆಗೂ ಮುನ್ನ ಎರಡು ಗುಂಪುಗಳ ನಡುವೆ ಘರ್ಷಣೆ ನಡೆದಿದೆ. ಘರ್ಷಣೆಯಲ್ಲಿ ಯುವಕರಿಬ್ಬರು ಗಾಯಗೊಂಡಿದ್ದು, ಹಲ್ಲೆ ನಡೆಸಿದ ಮೂವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಮನೋಜ್ (21) ಹಾಗೂ ಸುರೇಂದ್ರ (19) ಗಾಯಗೊಂಡಿದ್ದಾರೆ. ಅಕ್ಬರ್, ಅಫ್ಜಲ್, ಯಾಸಿನ್ ಪಾಷಾ ಎಂಬ ಯುವಕರನ್ನು ನಗರ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಸ್ಥಳದಲ್ಲಿ ಹೆಚ್ಚುವರಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದ್ದು, ಈಗ ಪರಿಸ್ಥಿತಿ ಶಾಂತವಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಿ.ದೇವರಾಜ್ 'ಪ್ರಜಾವಾಣಿ'ಗೆ ತಿಳಿಸಿದರು.

ಕೆಪಿಟಿಸಿಎಲ್ ಪರೀಕ್ಷೆ ಆರೋಪಿ ಸೆರೆ



ಸಂಜೀವ ಲಕ್ಷ್ಮಣ

ಬೆಳಗಾವಿ: ಕೆಪಿಟಿಸಿಎಲ್ ಕಿರಿಯ ಸಹಾಯಕರ ನೇಮಕಾತಿ ಪರೀಕ್ಷೆಯ ಅಕ್ರಮದ ಪ್ರಮುಖ ಆರೋಪಿ ಸಂಜೀವ ಲಕ್ಷ್ಮಣ ಭಂಡಾರಿಯನ್ನು ಬೆಳಗಾವಿ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ. ಇದರೊಂದಿಗೆ ಬಂಧಿತರ ಸಂಖ್ಯೆ 13ಕ್ಕೆ ಏರಿದೆ.

ಈತ ಹಿಂದಿನ ಪೊಲೀಸ್ ಕಾನ್‌ಸ್ಟೆಬಲ್ ನೇಮಕಾತಿ ಪರೀಕ್ಷೆಯಲ್ಲೂ ಅಕ್ರಮ ಎಸಗಿ ಜೈಲು ಸೇರಿದ್ದ. ಜಾಮೀನಿನ ಮೇಲೆ ಹೊರಗೆ ಬಂದಿದ್ದ. ಕೆಪಿಟಿಸಿಎಲ್ ನೇಮಕಾತಿಯ ಅಕ್ರಮ ನಂತರ ತಲೆಮರೆಸಿಕೊಂಡಿದ್ದ.

'ಹುಬ್ಬಳ್ಳಿ- ಧಾರವಾಡ ಪೊಲೀಸ್ ಕಮಿಷನರೇಟ್‌ನ ಬೆಂಡಿಗೇರಿ ಠಾಣೆಯ ಪೊಲೀಸರ ನೆರವಿನೊಂದಿಗೆ ಆರೋಪಿಯನ್ನು ಬಂಧಿಸಲಾಗಿದ್ದು, ಗೋಕಾಕದ ಜೆಎಂಎಫ್‌ಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು. ಏಳು ದಿನಗಳವರೆಗೆ ಪೊಲೀಸ್ ವಶಕ್ಕೆ ನೀಡಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸಂಜೀವ ಪಾಟೀಲ ತಿಳಿಸಿದ್ದಾರೆ.

ಕೆಎಸ್‌ಆರ್‌ಟಿಸಿ ಪಾಸ್ ಅವಧಿ ವಿಸ್ತರಣೆ

ಬೆಂಗಳೂರು: ಅಂತಿಮ ಸೆಮಿಸ್ಟರ್ ಅಭ್ಯಸಿಸುತ್ತಿರುವ ವಿದ್ಯಾರ್ಥಿಗಳಿಗೆ ನೀಡಿರುವ 2021-22ನೇ ಸಾಲಿನ ಪಾಸ್ ಅವಧಿಯನ್ನು ಕೆಎಸ್‌ಆರ್‌ಟಿಸಿ ಅಕ್ಟೋಬರ್ 31ರವರೆಗೆ ವಿಸ್ತರಿಸಿದೆ.

ಹಳೆಯ ಪಾಸ್ ಮತ್ತು ಅವಧಿ ವಿಸ್ತರಣೆ ಸಮಯದಲ್ಲಿ ನೀಡಿರುವ ರಸೀದಿ ತೋರಿಸಿ ಉಚಿತವಾಗಿ ವಿದ್ಯಾರ್ಥಿಗಳು ಪ್ರಯಾಣ ಮಾಡಬಹುದು. ಉಳಿದ ಸೆಮಿಸ್ಟರ್ ವಿದ್ಯಾರ್ಥಿಗಳು ಸೇವಾಸಿಂಧು ಮುಖೇನ ಹೊಸ ಪಾಸ್ ಪಡೆಯಲು ಅವಕಾಶ ಇದೆ. ಪಾಸ್ ಪಡೆದುಕೊಳ್ಳಲು ಸೆ.30ರ ತನಕ ಅವಕಾಶ ಇದ್ದು, ಆ ತನಕ ಈ ವಿದ್ಯಾರ್ಥಿಗಳೂ ಹಳೆಯ ಪಾಸ್ ಮತ್ತು ಅವಧಿ ವಿಸ್ತರಣೆ ಸಮಯದಲ್ಲಿ ನೀಡಿರುವ ರಸೀದಿ ತೋರಿಸಿ ಉಚಿತವಾಗಿ ಪ್ರಯಾಣ ಮಾಡಬಹುದು ಎಂದು ಕೆಎಸ್‌ಆರ್‌ಟಿಸಿ ತಿಳಿಸಿದೆ.

ಭೂಮಿಕಾ
ಮಹಿಳೆಯ ಆಪ್ತ ಸಂಗಾತಿ

ಕೇಂದ್ರ ಸರ್ಕಾರ ಪ್ರತಿ ವರ್ಷ ಸೆಪ್ಟೆಂಬರ್ ತಿಂಗಳನ್ನು 'ಪೋಷಣ್ ಅಭಿಯಾನ'ಕ್ಕೆ ಮೀಸಲಿಟ್ಟಿದೆ. ಪೌಷ್ಟಿಕ ಆಹಾರದ ಬಗ್ಗೆ ಜಾಗೃತಿ ಮೂಡಿಸುವುದು ಈ ಅಭಿಯಾನದ ಉದ್ದೇಶ. ದೇಹಕ್ಕೆ ಪುಷ್ಟಿ ನೀಡುವ ಆಹಾರ ಸೇವಿಸದೇ, ಬಾಯಿ ಚಪಲಕ್ಕೆ ತಿನ್ನುವ 'ಜಂಕ್‌ಫುಡ್'ನಿಂದ ಅನುಕೂಲಕ್ಕಿಂತ ತೊಂದರೆಯೇ ಹೆಚ್ಚು. ಈ ಬಗ್ಗೆ ಗೊತ್ತಿದ್ದರೂ ಜಂಕ್‌ಫುಡ್ ಮೋಹಪಾಶದಿಂದ ಮಕ್ಕಳನ್ನು ಬಿಡಿಸುವುದು ದೊಡ್ಡ ಸವಾಲು. ಇಂಥ ಸಂಕಷ್ಟದಲ್ಲಿ 'ನಾವೇನು ಮಾಡಬಹುದು?' – ಈ ಕುರಿತ ಮಾಹಿತಿ ಇಲ್ಲಿದೆ.



ಇದೆಯೇ ಜಂಕ್‌ಫುಡ್ ಚಾಳಿ ಇಲ್ಲಿ ಸ್ವಲ್ಪ ಕೇಳಿ..

ಡಾ. ವೀಣಾ ಎಸ್. ಭಟ್

'ಬರೀ ಕುರುಕಲು ತಿಂಡಿನೇ ತಿನ್ತಾರೆ ಡಾಕ್ಟ್ರೆ ನೀವಾದ್ರು ಸ್ವಲ್ಪ ಬುದ್ಧಿ ಹೇಳಿ. ನಿಮ್ಮ ಮಾತನ್ನಾದ್ರೂ ಕೇಳ್ತಾರೋ ನೋಡೋಣ' – ಇದು ನನ್ನ ಬಳಿ ಬರುವ ಬಹುತೇಕ ಅಪ್ಪ–ಅಮ್ಮಂದಿರ ಅಹವಾಲು. ಇವರೆಲ್ಲ, ಜಂಕ್‌ಫುಡ್ ಹಾಗೂ 'ಉಮಾಮಿ' ರುಚಿಯ ಮೋಹಪಾಶಕ್ಕೆ ಸಿಲುಕಿರುವ ಮಕ್ಕಳನ್ನು, ಅದರಿಂದ ಬಿಡಿಸುವ ಬಗ್ಗೆ ಕೇಳುತ್ತಾರೆ.

ಇನ್ನೂ ಶಾಲಾ–ಕಾಲೇಜುಗಳಿಗೆ ಆರೋಗ್ಯ ಮಾಹಿತಿ ನೀಡುವ ಕಾರ್ಯಕ್ರಮಗಳಿಗೆ ಭೇಟಿ ಕೊಟ್ಟಾಗ, ಅಲ್ಲಿನ ಶಿಕ್ಷಕರು, 'ಡಾಕ್ಟ್ರೆ, ಬಿಸಿಯೂಟದಲ್ಲಿ ನೀಡುವ ಸಾಂಬಾರು, ತರಕಾರಿಗಳನ್ನೆಲ್ಲ ಮಕ್ಕಳು ತಟ್ಟೆಯಲ್ಲೇ ಬಿಡ್ತಾರೆ. ದಿನಾ ಚಿಪ್ಸ್, ಕುರ್‌ಕುರೆ.. ಇಂಥವು ಇದ್ದರೇನೇ ಇವರಿಗೆ ಖುಷಿ. ಮಕ್ಕಳಿಗೆ, ಈ ಬಗ್ಗೆಯೂ ಸ್ವಲ್ಪ ಹೇಳಿ' ಎಂದು ತಮ್ಮ ಅಳಲನ್ನು ತೋಡಿಕೊಳ್ಳುತ್ತಾರೆ.

ಇದು ಶಾಲಾ ಕಾಲೇಜು ಮಾತ್ರವಲ್ಲ, ಮದುವೆಯಂತಹ ಸಮಾರಂಭಗಳಿಗೂ ಕೃತಕ ಆಹಾರ, ಪಾನೀಯಗಳು ಲಗ್ಗೆ ಇಟ್ಟಿವೆ. ಇಂಥ ಆಹಾರ ಕೌಂಟರ್‌ನಲ್ಲಿ ವಯೋಭೇದವಿಲ್ಲದೇ ಜನ ಜಂಗುಳಿ ಇರುತ್ತದೆ. ಆ ಜನಸಂದಣಿಯಲ್ಲಿ, 'ನಮ್ಮನೆಯ ಮಕ್ಕಳಿಗೆ ಮನೆ ತಿಂಡಿನೇ ಇಷ್ಟ ಆಗೋದಿಲ್ಲ' ಎಂದು ಆಪಾದಿಸುವ ಪಾಲಕರೇ ಹೆಚ್ಚಿನ ಸಂಖ್ಯೆಯಲ್ಲಿರುತ್ತಾರೆ!

'ಆಹಾರ ವ್ಯಸನ'ಕ್ಕೆ ಕಾರಣ



ಇಂಥ ಆಹಾರ ಪದಾರ್ಥಗಳನ್ನು ಜನ ಮುಗಿಬಿದ್ದು ತಿನ್ನುವುದಕ್ಕೆ ಕಾರಣ, ಅವು ರುಚಿಯಾಗಿರುತ್ತವೆ ಎಂತಲೋ ಅಥವಾ ಪೌಷ್ಟಿಕಾಂಶಯುಕ್ತವಾಗಿವೆ ಎಂತಲೋ ಅಲ್ಲ. ಅವುಗಳಲ್ಲಿ ಹೆಚ್ಚು ಮಸಾಲೆ ಬೆರೆತಿರುತ್ತದೆ. ಅದರಿಂದ ಹೆಚ್ಚು ರುಚಿಯಾಗಿರುತ್ತದೆ. ಅಂದ ಹಾಗೆ, ಹೀಗೆ ಸೆಳೆಯುವ ಆಹಾರದಲ್ಲಿರುವ ಮಸಾಲೆ, ಅಡುಗೆ ಮನೆಯ ಒಗ್ಗರಣೆ ಡಬ್ಬಿಯಲ್ಲಿನ ಚಕ್ಕೆ, ಲವಂಗ, ಏಲಕ್ಕಿ, ಶುಂಠಿ ಇತ್ಯಾದಿಗಳಲ್ಲ. ಬದಲಿಗೆ ಕೃತಕ ರುಚಿ ಹಾಗೂ ಪರಿಮಳ ಹೊಮ್ಮಿಸುವ ವಿವಿಧ ರಾಸಾಯನಿಕಗಳು ಮತ್ತು ಲವಣಗಳು. ಇಂಥವು ಕಳಪೆ ಆಹಾರದ ರುಚಿ ಹಾಗೂ ಪರಿಮಳಗಳನ್ನೂ ವರ್ಧಿಸುತ್ತವೆ. ನಿಜವಾದ ರುಚಿಯನ್ನು ಮರೆಮಾಚಿಸುತ್ತವೆ. ಹೀಗಾಗಿ ಮಕ್ಕಳು ಇಂಥ ಆಹಾರದ ವ್ಯಸನಕ್ಕೆ (ತಿಂದ ಆಹಾರವನ್ನೇ ಪದೇ ಪದೇ ತಿನ್ನುವುದು) ಒಳಗಾಗುತ್ತಾರೆ.

ಆಹಾರದಲ್ಲಿ ಇಂಥ ರಾಸಾಯನಿಕಗಳು ಬೆರೆತಿರುವ ವಿಚಾರ ಮಕ್ಕಳಿಗೆ ತಿಳಿಯುವುದಿಲ್ಲ. ಮಕ್ಕಳು ತಮ್ಮ ನಾಲಗೆಯಲ್ಲಿನ ರುಚಿಮೊಗ್ಗುಗಳು (ಟೇಸ್ಟ್ ಬಡ್ಸ್) ಇಷ್ಟಪಡುವುದನ್ನು ತಿನ್ನುತ್ತಾರೆ. ಈ ರಾಸಾಯನಿಕಗಳು ಮೆದುಳಿನ ಹಂತದಲ್ಲೇ ಹಸ್ತಕ್ಷೇಪ ಮಾಡಿ ಮಕ್ಕಳನ್ನು ಜಂಕ್‌ಫುಡ್ ವ್ಯಸನಿಗಳಾಗುವಂತೆ ಮಾಡುತ್ತವೆ. ಈ ವ್ಯಸನಕಾರಕ ರಾಸಾಯನಿಕಗಳಲ್ಲಿ ಬಹಳ ಮುಖ್ಯವಾದವು ಮಾನೊಸೋಡಿಯಂ ಗ್ಲುಟಮೇಟ್ (ಎಂಎಸ್‌ಜಿ) ಹಾಗೂ ಆಸ್ಪರ್ಟೇಟ್. ಇವು ಅಮೈನೋ ಆಮ್ಲಗಳಾಗಿದ್ದು, ಮೆದುಳಿನಲ್ಲಿ ನರವಾಹಕಗಳಾಗಿ ಕೆಲಸಮಾಡುತ್ತವೆ. ಇವು ಅತಿಯಾದಾಗ ಮೆದುಳಿನ ನರಕೋಶಗಳನ್ನು ಪ್ರಚೋದಿಸಿ ಕ್ರಮೇಣ ಬಳಲುವಂತೆ ಮಾಡಿ, ಅವುಗಳನ್ನೇ ನಾಶ ಮಾಡುತ್ತವೆ.

ಎಂಎಸ್‌ಜಿ ಎಂದರೆ...

ಈ ಎಂಎಸ್‌ಜಿ ಎನ್ನುವುದು ಗ್ಲುಟಮಿಕ್ ಆಸಿಡ್ ಎಂಬ ಅತ್ಯವಶ್ಯವಲ್ಲದ ಅಮೈನೊ ಆಮ್ಲ. ಇದನ್ನು ಸೋಡಿಯಂ ಜೊತೆ ಮಿಶ್ರಣ ಮಾಡಿ ರುಚಿ ಹಾಗೂ ಪರಿಮಳಕಾರಕವಾಗಿ ಆಹಾರದೊಂದಿಗೆ ಬಳಸುತ್ತಾರೆ. ಭಾರತ, ಚೀನಾ, ಜಪಾನ್ ಸೇರಿದಂತೆ ಜಗತ್ತಿನಾದ್ಯಂತ ಎಂಎಸ್‌ಜಿಯನ್ನು ಆಹಾರ ಪರಿಮಳಕಾರಕವಾಗಿ ಬಳಕೆಯಾಗುತ್ತಿದೆ. ಫಿಜ್ಜಾ, ಬರ್ಗರ್, ಫ್ರೆಂಚ್‌ಫ್ರೈಸ್, ಪಾಸ್ತಾ, ಸೂಪ್, ಸಾಸ್, ಚಿಪ್ಸ್, ಕೃತಕ ತಂಪು ಪೇಯಗಳು, ಎನರ್ಜಿ ಡ್ರಿಂಕ್ಸ್, ಹಣ್ಣಿನ ರಸ, ಕೆಚಪ್, ಇನ್‌ಸ್ಟಂಟ್ ಸ್ನ್ಯಾಕ್ಸ್‌ನಂತಹ ಸಂಸ್ಕರಿತ ಆಹಾರಗಳಲ್ಲಿ ಇದನ್ನು ನಿಗದಿತ ಪ್ರಮಾಣಕ್ಕಿಂತ ಹೆಚ್ಚಾಗಿ ಬಳಸುತ್ತಿದ್ದಾರೆ.

ನಮಗೆಲ್ಲರಿಗೂ ಗೊತ್ತಿರುವ ಹಾಗೆ ಸಿಹಿ, ಕಹಿ, ಉಪ್ಪು ಮತ್ತು ಹುಳಿ – ಇವು ವೈಜ್ಞಾನಿಕವಾಗಿ ನಾಲ್ಕು ಮೂಲ ರುಚಿಗಳು. ಇವುಗಳನ್ನು ನಾಲಿಗೆಯ ಮೇಲಿರುವ ನಿರ್ದಿಷ್ಟ ರುಚಿಮೊಗ್ಗುಗಳು ಗುರುತಿಸಿ ಇದರಿಂದ ಮೆದುಳಿಗೆ ಸಂದೇಶ ಹೋಗಿ ನಮ್ಮ ಮುಮ್ಮೆದುಳಿನಲ್ಲಿರುವ ರುಚಿ ಕೇಂದ್ರಗಳು ವಿವಿಧ ರುಚಿಗಳನ್ನು ಗ್ರಹಿಸುತ್ತವೆ. ಇದೊಂದು ಸಂಕೀರ್ಣವಾದ ವ್ಯವಸ್ಥೆ. 1908ರಲ್ಲಿ ಕಿಕುನೇ ಇಕಿಡಾ ಎನ್ನುವ ವಿಜ್ಞಾನಿ 'ಉಮಾಮಿ' ಎಂಬ ಐದನೆಯ ರುಚಿ ಇರುವ ಬಗ್ಗೆ ವರದಿ ಮಾಡಿದ್ದರು. ಇದು ಉಪ್ಪು ಮತ್ತು ಖಾರಗಳ ಸಮ್ಮಿಶ್ರಣದ ರುಚಿ ಕೊಡುವಂತದ್ದು. ಇಂಥದ್ದೇ ರುಚಿ ಹೊಂದಿರುವ ಹಲವು ಸಂಸ್ಕರಿತ ಆಹಾರಗಳು ಮಾರುಕಟ್ಟೆಯಲ್ಲಿವೆ.

ಪರಿಣಾಮಗಳೇನು ?

ಮಾನೊಸೋಡಿಯಂ ಗ್ಲುಟಮೇಟ್ ನಂತಹ ರಾಸಾಯನಿಕಗಳಿಂದ ಹದಗೊಳ್ಳಲ್ಪಟ್ಟ ಹಾಗೂ ಉಮಾಮಿ ರುಚಿಯ ಆಹಾರ ನಾಲಿಗೆಯಲ್ಲಿರುವ ರುಚಿಮೊಗ್ಗುಗಳನ್ನು (ಟೇಸ್ಟ್ ಬಡ್ಸ್) ಪ್ರಚೋದಿಸಿ ಆಸ್ವಾದನಾಭರಿತ ರುಚಿ ಹಾಗೂ ಪರಿಮಳಗಳನ್ನು ಹೆಚ್ಚಿಸುತ್ತದೆ. ಮಾದಕ ದ್ರವ್ಯ ಸೇವಿಸಿದಾಗ ಆಗುವ ಪರಿಣಾಮವನ್ನೇ ಉಂಟುಮಾಡಿ ಇನ್ನೂ ಹೆಚ್ಚು ತಿನ್ನಬೇಕೆನಿಸುವ ಹಾಗೆ ಮಾಡುತ್ತದೆ. ಜೊತೆಗೆ ಮೆದುಳಿನಲ್ಲಿ ಡೋಪಮಿನ್ ಎಂಬ ನರವಾಹಕಗಳನ್ನು ಉತ್ಪಾದಿಸುವಂತೆ ಮಾಡುತ್ತದೆ. ಈ ಡೋಪಮಿನ್ ಪ್ರತಿಫಲ ವ್ಯವಸ್ಥೆಯ ಮುಖ್ಯವಾದ ನರವಾಹಕ. ಇದರಿಂದ ತಾತ್ಕಾಲಿಕವಾಗಿ ಸಂತೋಷದ ಅನುಭವವಾಗಿ ಮತ್ತೆ ಮತ್ತೆ ಅದೇ ಆಹಾರವನ್ನು ತಿನ್ನಬೇಕೆನ್ನುವ ಬಯಕೆಯಾಗುತ್ತದೆ. ಇದರಿಂದ ಮೆದುಳಿನ ಜೀವಕೋಶಗಳು ನಿಧಾನವಾಗಿ ನಾಶವಾಗುತ್ತವೆ.

ಅಲ್ಲದೇ, 'ಲೆಪ್ಟಿನ್' ಎಂಬ ಬೊಜ್ಜು ನಿಯಂತ್ರಣದ ಹಾರ್ಮೋನಿನ ಸಂದೇಶಗಳಿಗೆ ನೀಡಬೇಕಾದ ಮೆದುಳಿನ ಪ್ರತಿಕ್ರಿಯೆಯನ್ನು ಮಾರ್ಪಡಿಸುತ್ತದೆ. ಇದರಿಂದ ಬೊಜ್ಜು ಕೂಡ ಹೆಚ್ಚಾಗುತ್ತದೆ. ಮೇದೋಜೀರಕಾಂಗ (ಪ್ಯಾಂಕ್ರಿಯಾಸ್) ಇನ್ಸುಲಿನ್ ಹಾರ್ಮೋನು ಉತ್ಪಾದನೆಯನ್ನು ಇನ್ನಷ್ಟು ಪ್ರಚೋದಿಸಿ ರಕ್ತದಲ್ಲಿನ ಸಕ್ಕರೆ ಪ್ರಮಾಣವನ್ನು ಕಡಿಮೆ ಮಾಡುತ್ತಾ ಮತ್ತೆ ಮತ್ತೆ ಬೇಗನೆ ಹಸಿವು ಉಂಟುಮಾಡುತ್ತದೆ. ಆದ್ದರಿಂದ ಎಷ್ಟೇ ಜಂಕ್‌ಫುಡ್ ಸೇವಿಸಿದರೂ ಒಂದು ಗಂಟೆಗೊಳಗೆ ಮತ್ತೆ ಆಹಾರ ತಿನ್ನಬೇಕೆನಿಸುತ್ತದೆ.

ದೀರ್ಘಕಾಲ ಎಂಎಸ್‌ಜಿ ಮಿಶ್ರಿತ ಆಹಾರ ಸೇವನೆಯಿಂದ, ಅಲ್ಜಮೈರ್ (ಮರೆವಿನ ಕಾಯಿಲೆ), ಪಾರ್ಕಿನ್‌ಸನ್ಸ್, ಮೂರ್ಛೆರೋಗ, ಅಲರ್ಜಿ, ಆಸ್ತಮಾ, ಏಕಾಗ್ರತೆಯ ಕೊರತೆ, ಎದೆನೋವು, ಮನಸ್ಸು ಗೊಂದಲಕ್ಕೊಳಗಾಗುವುದು, ಭೇದಿ, ಬಂಜೆತನ, ಬೆವರು, ಎದೆ ಹೊಡೆದುಕೊಳ್ಳುವಿಕೆ.. ಹೀಗೆ ಸಮಸ್ಯೆಗಳ ಸರಮಾಲೆಯನ್ನೇ ಸೃಷ್ಟಿಸುತ್ತದೆ.

ಇನ್ನು ಕೃತಕ ಸಿಹಿ ತಿನಿಸುಗಳು, ಸಿಹಿ ಪಾನೀಯ ಹಾಗೂ ಹಣ್ಣಿನ ರಸಗಳಲ್ಲಿ ಬಳಸುವ ಆಸ್ಪರ್ಟೇಮ್ ಕೂಡ ತಲೆನೋವು, ತಲೆಸುತ್ತು, ನಿದ್ರೆಯ ತೊಂದರೆ, ಸುಸ್ತು, ಅಲ್ಜಮೈರ್, ಮಧುಮೇಹದಂತಹ ಅನಾರೋಗ್ಯ ಸಮಸ್ಯೆಗಳನ್ನು ತಂದೊಡ್ಡುತ್ತದೆ. ಈ ಎಲ್ಲದರ ಹಿನ್ನೆಲೆಯಲ್ಲಿ ಜಂಕ್‌ಫುಡ್‌ನಿಂದ ದೂರವಿರುವುದು ತುಂಬಾ ಒಳ್ಳೆಯದು.

'ಜಂಕ್ ಫುಡ್'ನಿಂದ ದೂರವಿರಿಸಲು ಹೀಗೆ ಮಾಡಿ..

- ಮನೆ, ಶಾಲೆ ಹಾಗೂ ಸಾಧ್ಯವಾದಲ್ಲೆಲ್ಲ, ಕಲಬೆರೆಕೆ ಆಹಾರದ ದುಷ್ಪರಿಣಾಮಗಳು ಹಾಗೂ ಶುದ್ಧ ಆಹಾರ ಕುರಿತು ಜಾಗೃತಿ ಮೂಡಿಸಬೇಕು.
- ಮೊದಲು ಮನೆಯಲ್ಲಿರುವ ಹಿರಿಯರು, ಜಂಕ್‌ಫುಡ್‌ನಿಂದ ದೂರವಿದ್ದು, ಮಕ್ಕಳಿಗೆ ಮಾದರಿಯಾಗಬೇಕು.
- ಶಾಲಾ ಕಾಲೇಜುಗಳಲ್ಲಿ ಮಕ್ಕಳಿಗೆ ಕಥೆಗಳನ್ನು ಹೇಳುವುದು, ಮಕ್ಕಳ ನಡುವೆಯೇ ಸಂವಾದ ಏರ್ಪಡಿಸುವುದು, ಕಿರು ನಾಟಕ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಜಂಕ್‌ಫುಡ್ ಅಪಾಯದ ಬಗ್ಗೆ ಜಾಗೃತಿ ಮೂಡಿಸಬಹುದು.
- ವೈದ್ಯರು, ಆರೋಗ್ಯ ಕಾರ್ಯಕರ್ತರು ವಿಷಯತಜ್ಞರು ಹಾಗೂ ಸಾಮಾಜಿಕ ಕಾರ್ಯಕರ್ತರು ಸಾರ್ವಜನಿಕ ಸ್ಥಳಗಳಲ್ಲಿ, ಅವಕಾಶ ಸಿಕ್ಕಾಗಲೆಲ್ಲ, ರಾಸಾಯನಿಕಗಳ ಅಪಾಯದ ಕುರಿತು ಜಾಗೃತಿ ಮೂಡಿಸಬಹುದು.
- ಆಹಾರ ಉತ್ಪಾದನಾ ಕಂಪನಿಗಳು, ಸರ್ಕಾರ ನಿಗದಿಪಡಿಸಿರುವ ಮಾನದಂಡಗಳನ್ನು ಮೀರಿ ಆಹಾರದಲ್ಲಿ ರಾಸಾಯನಿಕಗಳನ್ನು ಬಳಸಬಾರದು. ಹಣ ಸಂಪಾದನೆಗಾಗಿ ಇಂಥ ಮಾರ್ಗಗಳನ್ನು ಅನುಸರಿಸಬಾರದು. ಈ ಮೂಲಕ ಆಹಾರ ತಯಾರಿಕಾ ಕಂಪನಿಗಳು ತಮ್ಮ ಸಾಮಾಜಿಕ ಜವಾಬ್ದಾರಿ, ಜನಪರ ಕಾಳಜಿ ಮೆರೆಯಬೇಕು.

ಗೋಧಿ, ಬೆಲ್ಲದ ಚಾಕೊಲೇಟ್ ಕೇಕ್ !

ನಳಪಾಕ

ಮೂರು ವರ್ಷಗಳಿಂದ ಮನೆಯಿಂದಲೇ ಕಲಿಯುತ್ತಿರುವ (ಹೋಮ್ ಸ್ಕೂಲಿಂಗ್) 14ರ ಹರೆಯದ ಕಾರ್ಕಳದ ದಿಯಾಗೆ ಬೇಕಿಂಗ್ ಅಂದರೆ ಬಹಳ ಇಷ್ಟ. ಚಿಕ್ಕಂದಿನಿಂದಲೇ ಅಮ್ಮ ಅಡುಗೆ, ಬೇಕ್ ಮಾಡುವಾಗ ನೋಡುತ್ತಾ , ಜೊತೆಗೆ ಸಹಾಯ ಮಾಡುತ್ತಾ, ತಾನೂ ವಿಧವಿಧವಾದ ಕೇಕ್ ಮಾಡುವುದನ್ನು ಕಲಿತಿದ್ದಾರೆ. ಅದರ ರೆಸಿಪಿ ಇಲ್ಲಿದೆ...



ಹೋಮ್ ಸ್ಕೂಲಿಂಗ್ ಆದ್ದರಿಂದ, ದಿಯಾಗೆ ಅಡುಗೆಯ ಬೇರೆ ಬೇರೆ ಪ್ರಯೋಗಕ್ಕೆ ಸಮಯ ಸಿಗುತ್ತದೆ. ಇತ್ತೀಚೆಗೆ ಅವರು ಮೊಟ್ಟೆ, ಬೆಣ್ಣೆಗಳಿಲ್ಲದೇ, ಮೈದಾ, ಸಕ್ಕರೆ ಉಪಯೋಗಿಸದೇ, ಗೋಧಿ, ಬೆಲ್ಲದ ಜೊತೆಗೆ ಬೇರೆ ಬೇರೆ ಹಿಟ್ಟುಗಳನ್ನು ಬಳಸಿ ವಿವಿಧ ರೀತಿಯ ಆರೋಗ್ಯಕರ ಕೇಕ್‌ಗಳನ್ನು ತಯಾರಿಸಿದ್ದಾರೆ. ಅವುಗಳಲ್ಲಿ ಒಂದು ಕೇಕ್‌ನ ರೆಸಿಪಿಯನ್ನು ಇಲ್ಲಿ ಹಂಚಿಕೊಂಡಿದ್ದಾರೆ.

ವೀಗನ್ ಚಾಕೊಲೇಟ್ ಕೇಕ್



ಬೇಕಾಗುವ ಸಾಮಗ್ರಿ

ಗೋಧಿ ಹಿಟ್ಟು - 1/2 ಕಪ್, ರಾಗಿ ಹಿಟ್ಟು /ಹಲಸಿನ /ಬಾಳೆಕಾಯಿ ಹುಡಿ (ಯಾವುದಾದರೂ ಒಂದು ಅಥವಾ ಮಿಕ್ಸ್) - 1/2 ಕಪ್, ಬೆಲ್ಲದ ಪುಡಿ - 1/2 ಕಪ್, ಬೇಕಿಂಗ್ ಪೌಡರ್ - 1 ಟೀ ಚಮಚ. ಬೇಕಿಂಗ್ ಸೋಡಾ - 1/2 ಟೀ ಚಮಚ, ವಿನೆಗರ್ - 1 ಟೀ ಚಮಚ, ವಾಲ್ನಟ್ ಚೂರುಗಳು - 1/4 ಕಪ್, ತೆಂಗಿನ ಎಣ್ಣೆ - 1/4 ಕಪ್, ಚಾಕೊಲೆಟ್ ಪುಡಿ- 1/4 ಕಪ್ (ನಾನು ಕ್ಯಾಂಪ್ಕೊ ಬಳಸಿದೆ).

ತಯಾರಿಸುವ ವಿಧಾನ : ಒಂದು ದೊಡ್ಡ ಬೌಲ್‌ಗೆ ಕುದಿಯುವ ನೀರನ್ನು ಹಾಕಿ ಬೆಲ್ಲವನ್ನು ಸೇರಿಸಬೇಕು. ಬೆಲ್ಲವನ್ನು ಪೂರ್ತಿ ಕರಗಿಸಿ ಹತ್ತು ನಿಮಿಷದ ನಂತರ ತೆಂಗಿನ ಎಣ್ಣೆಯನ್ನು ಬೆರೆಸಬೇಕು.

ಗೋಧಿ ಹಿಟ್ಟು, ಚಾಕೊಲೆಟ್ ಪುಡಿ, ಬೇಕಿಂಗ್ ಹುಡಿ, ಬೇಕಿಂಗ್ ಸೋಡಾವನ್ನು ಜೊತೆಯಾಗಿ ಜರಡಿ ಮಾಡಿ ಇಟ್ಟುಕೊಳ್ಳಬೇಕು. ಈ ಮಿಶ್ರಣವನ್ನು ತಯಾರಿಸಿಟ್ಟುಕೊಂಡ ಬೆಲ್ಲದ ದ್ರಾವಣಕ್ಕೆ ನಿಧಾನವಾಗಿ ಬೆರೆಸಬೇಕು. ಚೆನ್ನಾಗಿ ವಿಸ್ಕ್ ಮಾಡಿದ ನಂತರ ವಿನೆಗರ್ ಸೇರಿಸಬೇಕು. ಸಣ್ಣಗೆ ಚೂರು ಮಾಡಿದ ವಾಲ್ನಟ್ ಬೆರೆಸಬೇಕು.

ಮಿಶ್ರಣ ತಯಾರು ಮಾಡುತ್ತಿರುವಾಗಲೇ ಸುಮಾರು 10 ನಿಮಿಷ ಒವೆನ್ ಅನ್ನು ಬಿಸಿಯಾಗಲು ಬಿಡಬೇಕು.

ಏಳು ಇಂಚಿನ ಬೇಕಿಂಗ್ ಟ್ರೇಗೆ ತೆಂಗಿನ ಎಣ್ಣೆ ಸ್ವಲ್ಪ ಹಚ್ಚಿ ಇಟ್ಟುಕೊಂಡಿರಬೇಕು. ತಯಾರಿಸಿದ ಮಿಶ್ರಣವನ್ನು ಅದರ ಮೇಲೆ ಹರಡಿ 180° ತಾಪಮಾನದಲ್ಲಿ 30 ನಿಮಿಷ ಬೇಯಿಸಬೇಕು. ಸಣ್ಣ ಕಡ್ಡಿಯನ್ನು ಬಳಸಿ ಕೇಕ್ ಬೆಂದದ್ದನ್ನು ಖಾತ್ರಿ ಪಡಿಸಿಕೊಂಡು ತಣಿಯಲು ಬಿಡಬೇಕು. ತಣಿದ ನಂತರ ಬೇಕಿದ್ದರೆ ಕೇಕ್ ಅಲಂಕಾರ ಮಾಡಬಹುದು.

ಕೇಕ್ ಅಲಂಕಾರ (ಚಾಕೊಲೇಟ್ ಫ್ರಾಸ್ಟಿಂಗ್):

ಬೇಕಾದ ಸಾಮಗ್ರಿ

ಚಾಕೊ ಚಿಪ್ಸ್ ಅಥವಾ ಡಾರ್ಕ್ ಚಾಕೊಲೇಟ್ ಚೂರುಗಳು– 2 ಕಪ್

ತೆಂಗಿನ ಕ್ರೀಮ್ (ಅಂಗಡಿಯಲ್ಲಿ ಸಿಗುವುದು ಬಳಸಲು ಸುಲಭ): 300 ಎಂ.ಎಲ್.

ಅಲಂಕಾರದ ವಿಧಾನ: ತೆಂಗಿನ ಕ್ರೀಮ್ ಬಿಸಿ ಮಾಡಿ ಚಾಕೊಲೆಟ್ ಚೂರುಗಳನ್ನು ಬೆರೆಸಬೇಕು. ಚಾಕೊಲೆಟ್ ಚೆನ್ನಾಗಿ ಕರಗಿದ ನಂತರ ಫ್ರಿಜ್‌ನಲ್ಲಿ ಇಡಬೇಕು. ಪ್ರತಿ ಕಾಲು ಗಂಟೆಗೊಮ್ಮೆ ಚೆನ್ನಾಗಿ ಕಲಸುತ್ತಾ ಇದ್ದರೆ ಒಂದು ಗಂಟೆಯ ನಂತರ ಫ್ರಾಸ್ಟಿಂಗ್ ಬಳಸಲು ತಯರಾಗಿರುತ್ತದೆ. ಇದನ್ನು ಬಳಸಿ ಬೇಕಾದಂತೆ ಕೇಕ್ ಅನ್ನು ಅಲಂಕಾರ ಮಾಡಬಹುದು.

(ವಿ. ಸೂ:ಕನಿಷ್ಠ ಅರ್ಧ ಕಪ್ ಗೋಧಿ ಹಿಟ್ಟು ಉಪಯೋಗಿಸಲೇಬೇಕು. ಉಳಿದ ಅರ್ಧ ಕಪ್ ಬೇರೆ ಹಿಟ್ಟುಗಳನ್ನು ಬಳಸಬಹುದು)



ದಿಯಾ ಅವರ ಇನ್‌ಸ್ಟಾಗ್ರಾಂ ಐಡಿ https://www.instagram.com/_.diyashetty._/?igshid=YmMyMTA2M2Y%3D

ಲೈಂಗಿಕ ಶೋಷಕರಿಂದ ಮಕ್ಕಳ ರಕ್ಷಣೆ

ಏನಾದ್ರೂ ಕೇಳ್ಬೋದು



ನಡಹಳ್ಳಿ ವಸಂತ್ ಶಿವಮೊಗ್ಗ



40ರ ಗೃಹಿಣಿ ಸುಧಾ ನನ್ನ ಕೋಣೆಯ ಒಳಬಂದವರೇ ಇಲ್ಲಿನ ವಾತಾವರಣ ಸುರಕ್ಷಿತವೇ ಎಂದು ಪರೀಕ್ಷಿಸುವಂತೆ ಸುತ್ತಲೂ ಒಮ್ಮೆ ಕಣ್ಣಾಡಿಸಿ ಕುರ್ಚಿಯಲ್ಲಿ ಮುದುರಿ ಕುಳಿತರು. ಪರಿಚಯದ ನಂತರ ನಮ್ಮ ಮಾತುಕತೆ ಮುಂದುವರಿದಂತೆ ನನ್ನ ಮೇಲೆ ಭರವಸೆಯಿಡುವ ಹಂತಕ್ಕೆ ಬಂದಾಗ ತನ್ನ ಜೀವನದ ದುರಂತ ಕತೆಯನ್ನು ಹೇಳತೊಡಗಿದರು. ಬಾಲ್ಯದಿಂದ ಪದೇ ಪದೇ ತಂದೆಯಿಂದಲೇ ಅವರು ಲೈಂಗಿಕ ಶೋಷಣೆ ಅನುಭವಿಸಿದ್ದರು. ಉನ್ನತ ವಿದ್ಯಾಭ್ಯಾಸ ಪಡೆದಿದ್ದ ತಂದೆ ಸರ್ಕಾರಿ ಹುದ್ದೆಯಲ್ಲಿದ್ದು ಸಾಮಾಜಿಕ ಮಾನ್ಯತೆಯನ್ನೂ ಗಳಿಸಿದ್ದರು. ವಿದ್ಯಾವಂತೆಯಾದ ಅಮ್ಮನ ಹತ್ತಿರ ವಿಷಯ ಹೇಳಿದರೂ ಯಾವುದೇ ಬದಲಾವಣೆಯಾಗಿರಲಿಲ್ಲ. ಇವೆಲ್ಲಾ 30 ವರ್ಷಗಳ ಹಿಂದೆ ನಡೆದಿದ್ದಾದರೂ ಸ್ನಾತಕೋತ್ತರ ಪದವಿ ಪಡೆದು ಒಳ್ಳೆಯ ಉದ್ಯೋಗದಲ್ಲಿರುವ ಸುಧಾ ಆ ಘಟನೆಗಳನ್ನು ನನ್ನೆದುರು ಹೇಳುವಾಗ ತೀವ್ರವಾದ ದೈಹಿಕ ಮಾನಸಿಕ ನೋವನ್ನು ಅನುಭವಿಸುತ್ತಿದ್ದರು.

ಮಕ್ಕಳ ಮೇಲೆ ನಡೆಯುವ ಲೈಂಗಿಕ ಶೋಷಣೆ ಅತ್ಯಾಚಾರಗಳು ಉಳಿಸಿಹೋಗುವ ಆಘಾತದಿಂದ ಹೊರಬರುವುದು ಅಷ್ಟು ಸುಲಭವಲ್ಲ. ಅವರಿಗೆ ಜೀವನದ ಎಲ್ಲಾ ಸಂಬಂಧಗಳು ಸಹಜತೆಯನ್ನು ಕಳೆದುಕೊಳ್ಳುತ್ತವೆ. 'ನನ್ನ ಮಗಳನ್ನು ಅವಳ ಅಪ್ಪನ (ಅಂದರೆ ತನ್ನ ಪತಿಯ) ಹತ್ತಿರ ಬಿಡುವುದಕ್ಕೂ ನನಗೆ ಭಯವಾಗುತ್ತದೆ' ಎನ್ನುವ ಸುಧಾ ಅವರ ಮಾತುಗಳೇ ಇದಕ್ಕೆ ಸಾಕ್ಷಿ. ಸೋದರಮಾವನಿಂದ ಬಾಲ್ಯದಲ್ಲಿ ಲೈಂಗಿಕ ಕಿರುಕುಳ ಅನುಭವಿಸಿದ್ದ 25 ರ ಇನ್ನೊಬ್ಬ ಯುವತಿ ನಾನು ಯಾವ ಗಂಡಸನ್ನೂ ನಂಬುವುದಿಲ್ಲ ಎಂದು ನನ್ನೆದುರು ಹೇಳಿದ್ದರು. ತಂದೆಯಿಂದ ಹಿಂಸೆಯನ್ನು ಅನುಭವಿಸಿದ್ದ 11ರ ಕಿಶೋರಿಯೊಬ್ಬಳು ಯಾವುದೇ ಪುರುಷ ಹತ್ತಿರ ಬಂದರೂ ಭಯದಿಂದ ಕಲ್ಲಾಗುತ್ತಿದ್ದಳು.

ಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯ ಮತ್ತು ಶೋಷಣೆಯ ಪ್ರಕರಣಗಳ ಅಂಕಿಸಂಖ್ಯೆಗಳನ್ನು ಅಂದಾಜು ಮಾಡುವುದು ಕಷ್ಟ. ಲಕ್ಷಕ್ಕೆ ಒಂದೆರೆಡು ಪ್ರಕರಣಗಳು ಕಾನೂನಿನ ಕಣ್ಣಿಗೆ ಬೀಳಬಹುದು. ಹೆಚ್ಚಿನ ಪ್ರಕರಣಗಳನ್ನು ಮಕ್ಕಳು ಪೋಷಕರ ಜೊತೆ ಕೂಡ ಹಂಚಿಕೊಂಡಿರುವುದಿಲ್ಲ. ಗೊಂದಲ ಪಾಪಪ್ರಜ್ಞೆ ಅವಮಾನ ಕೀಳರಿಮೆ, ಹೀಗೆ ಹಿಂಜರಿಕೆಗಳ ಭಾರ ಹೊತ್ತಿರುವ ಮಕ್ಕಳು ಜೀವನವಿಡೀ ನರಳುತ್ತಾರೆ. ಎಷ್ಟೋ ಮಕ್ಕಳು ಆತ್ಮಹತ್ಯೆಗೆ ಶರಣಾಗುತ್ತಾರೆ. ವೈಶ್ಯಾವಾಟಿಕೆಗೆ ಇಳಿದಿರುವವರು ಮತ್ತು ನಶೆಗೆ ದಾಸರಾಗಿರುವವರಲ್ಲಿ ಹೆಚ್ಚಿನವರು ಬಾಲ್ಯದಲ್ಲಿ ಲೈಂಗಿಕ ಶೋಷಣೆಗೆ ಒಳಗಾಗಿರುತ್ತಾರೆ ಎಂದು ಕೆನಡಾದ ವೈದ್ಯ ಬರಹಗಾರ ಮನೋಚಿಕಿತ್ಸಕ ಗಾಬೋರ್ ಮಾಟೆ ಹೇಳುತ್ತಾನೆ.

ಇನ್ನೂ ಅಪಾಯಕಾರಿಯಾದ ವಿಚಾರವೆಂದರೆ ಮಕ್ಕಳ ಮೇಲೆ ನಡೆಯುವ ಲೈಂಗಿಕ ಶೋಷಣೆಯಲ್ಲಿ ಸುಮಾರು ಶೇ 90ರಷ್ಟು ಕುಟುಂಬದವರು ಮತ್ತು ಪರಿಚಿತರಿಂದಲೇ ಆಗಿರುತ್ತದೆ. ಹಾಗಾಗಿ ಹೆಚ್ಚಿನ ಪ್ರಕರಣಗಳು ಬೆಳಕು ಕಾಣುವುದಿಲ್ಲ. ಇಂತಹ ಕೃತ್ಯವೆಸಗುವವರಿಗೆ ಸಾಮಾಜಿಕ ಧಾರ್ಮಿಕ ರಾಜಕೀಯ ಅಥವಾ ಹಣದ ಪ್ರಭಾವವಿದ್ದರಂತೂ ಕಾನೂನಿನ ಸಹಾಯ ಕೇಳುವದಕ್ಕಿಂತ ದೊಡ್ಡ ಶಿಕ್ಷೆ ಇನ್ನೊಂದಿಲ್ಲ.

ಕುಟುಂಬಗಳ ಮಟ್ಟದಲ್ಲಿ ಪೋಷಕರು ಮಕ್ಕಳ ಕುರಿತು ಹೆಚ್ಚು ಎಚ್ಚರವಹಿಸಬೇಕು. ಮಕ್ಕಳಲ್ಲಿ ಭಯಹುಟ್ಟಿಸದೆ ಶೋಷಣೆಗೆ ಪ್ರತಿಭಟಿಸುವ ಮತ್ತು ತಮ್ಮನ್ನು ರಕ್ಷಿಸಿಕೊಳ್ಳುವ ಮಾರ್ಗಗಳನ್ನು ಕಲಿಸಬೇಕು. ಈ ಕುರಿತಾದ ಮಾಹಿತಿಯನ್ನು ಪೋಷಕರು ಮಕ್ಕಳಿಗೆ ಮೊದಲೇ ತಿಳಿಸಿರಬೇಕು. ನಿನ್ನ ಖಾಸಗಿ ಅಂಗಗಳನ್ನು ಯಾರಾದರೂ ಸ್ಪರ್ಷಿಸಿದರೆ ಅವರು ಯಾರೇ ಆಗಿದ್ದರೂ ತಕ್ಷಣ ತಮಗೆ ತಿಳಿಸಬೇಕು ಎನ್ನುವ ಮಾಹಿತಿ ಬಹಳ ಅಗತ್ಯವಾಗಿ ರುತ್ತದೆ. ಬೇಬಿ ಸಿಟ್ಟಿಂಗ್, ಡೇಕೇರ್‌ಗಳಲ್ಲಿ ಬಿಡುವುದು ಅನಿವಾರ್ಯವಾದರೆ ಆಗಾಗ ಅಲ್ಲಿಗೆ ದಿಢೀರ್ ಭೇಟಿನೀಡಿ ಮಕ್ಕಳ ಸುರಕ್ಷತೆಯನ್ನು ಖಾತ್ರಿಪಡಿಸಿಕೊಳ್ಳಬೇಕು. ಪೋಷಕರು ಮಕ್ಕಳ ಮಾತು ವರ್ತನೆಗಳನ್ನು ಟೀಕಿಸುವುದು ಹೊಡೆಯುವುದು ಬೈಯುವುದು ಮಾಡದಿದ್ದರೆ ಮಕ್ಕಳ ಸಹಜವಾಗಿ ಎಲ್ಲವನ್ನೂ ಹಂಚಿ ಕೊಳ್ಳುತ್ತಾರೆ. ಆಗ ವಿಷಯಗಳನ್ನು ಕೆದಕಿ ಹೊರತೆಗೆಯುವ ಅಗತ್ಯವೇ ಇರುವುದಿಲ್ಲ.

ಕೆಲವೊಮ್ಮೆ ಪೋಷಕರ ಹಿಡಿತವನ್ನು ಮೀರಿ ಘಟನೆಗಳು ನಡೆಯಬಹುದು. ಆಗ ಮೊದಲ ಹಂತದಲ್ಲಿಯೇ ಅದನ್ನು ಗುರುತಿಸಿದರೆ ಪುನರಾವರ್ತನೆಯನ್ನು ತಪ್ಪಿಸಬಹುದು. ಮಕ್ಕಳ ಮಾತು ವರ್ತನೆಗಳಲ್ಲಿ ಒಮ್ಮೆಲೆ ಆಗುವ ತೀವ್ರವಾದ ಬದಲಾವಣೆಗಳು. ಆವರ ಆರೋಗ್ಯದಲ್ಲಿನ ಏರುಪೇರುಗಳು, ಏಕಾಂಗಿಯಾಗಿರಲು ಬಯಸುವುದು, ಪದೇಪದೇ ದೇಹವನ್ನು ಶುದ್ಧಮಾಡಿಕೊಳ್ಳುವುದು, ಓದು ಸ್ನೇಹ ಸಂಬಂಧಗಳಲ್ಲಿ ಆಸಕ್ತಿ ಕಳೆದುಕೊಳ್ಳುವುದು ಮುಂತಾದ ಅಸಹಜ ನಡವಳಿಕೆಗಳ ಕಂಡುಬಂದರೆ ಎಚ್ಚರಗೊಳ್ಳಬೇಕು.

ಮಾಹಿತಿ ದೊರೆತ ಮೇಲೆ ಯಾವುದೇ ಕಾರಣಕ್ಕೂ ಮಕ್ಕಳಿಗೆ ಮತ್ತೆ ಅಂತಹ ಸಂದರ್ಭಗಳನ್ನು ಎದುರಿಸಲು ಅವಕಾಶ ನೀಡಬಾರದು. ಸಾಧ್ಯವಿದ್ದರೆ ಪೊಲೀಸರ ಸಹಾಯ ಪಡೆಯಬಹುದು. ಸಾಧ್ಯವೇ ಇಲ್ಲ ಎನ್ನಿಸಿದಾಗಲೂ ಅಪರಾಧಿಯನ್ನು ನೇರವಾಗಿ ಎದುರಿಸುವ ಪ್ರಯತ್ನಮಾಡಬಾರದು. ಇದರಿಂದ ಅವರು ಮುಂದೆ ಮಗುವಿಗೆ ಹೆಚ್ಚು ಅಪಾಯಕಾರಿಯಾಗಬಹುದು ಅಥವಾ ಪುರಾವೆಗಳನ್ನು ನಾಶಪಡಿಸಬಹುದು. ಸಂಬಂಧ ವಯಸ್ಸು ಮುಂತಾದ ದೃಷ್ಟಿಯಿಂದ ಕಾನೂನು ಕ್ರಮ ಸಾಧ್ಯವೇ ಇಲ್ಲ ಎನ್ನಿಸಿದರೆ ಶೋಷಕರು ಮಕ್ಕಳ ಸಂಪರ್ಕಕ್ಕೆ ಬರದಂತೆ ಮನೆಯಿಂದ ಹೊರಗಿಡಬೇಕು. ಶೋಷಕರಿಗೆ ಮನೋಚಿಕಿತ್ಸಕರ ಸಹಾಯಪಡೆಯಲು ಸೂಚಿಸಿದರೆ ಒಳ್ಳೆಯದು.

ಶೋಷಿತರಾದ ಮಕ್ಕಳಿಗೆ ಪೋಷಕರ ಸಂಪೂರ್ಣ ಬೆಂಬಲ ಅಗತ್ಯ. ಯಾವುದೇ ಕಾರಣಕ್ಕೂ ನಿನ್ನನ್ನು ದೂಷಿಸುವುದಿಲ್ಲ, ನೀನು ಮೊದಲಿನಂತೆಯೇ ನಮಗೆ ಪ್ರೀತಿಪಾತ್ರಳು/ನು ಎನ್ನುವ ಭರವಸೆ ನೀಡಬೇಕು. ಇಡೀ ಕುಟುಂಬ ಮನೋಚಿಕಿತ್ಸಕರ ಸಹಾಯ ಪಡೆದರೆ ಈ ಆಘಾತದಿಂದ ಬೇಗ ಚೇತರಿಸಿಕೊಳ್ಳಬಹುದು. ಮಕ್ಕಳು ಆದಷ್ಟು ಬೇಗ ಅವರ ಸಹಜ ದಿನಚರಿಗೆ ಹಿಂತಿರುಗುವಂತೆ ವ್ಯವಸ್ಥೆ ರೂಪಿಸಬೇಕು.

ಕಾನೂನು ಕ್ರಮಗಳು ಅಸಾಧ್ಯ ಎನ್ನಿಸಿದರೂ ಮಾಹಿತಿಯನ್ನು ಕುಟುಂಬದ ಇತರ ಸದಸ್ಯರು, ಇತರ ಪೋಷಕರು, ಶಾಲೆಯ ಆಡಳಿತ ಮಂಡಳಿ ಮುಂತಾದ ಕಡೆ ಹಂಚಿಕೊಳ್ಳಬೇಕು ಇದರಿಂದ ಹೆಚ್ಚಿನ ಮಕ್ಕಳು ಬಲಿಪಶುಗಳಾಗುವುದನ್ನು ತಡೆಯಬಹುದು. ಹತ್ತಿರದಲ್ಲಿ ಇರುವ ಮಕ್ಕಳ ಅಥವಾ ಮಹಿಳಾ ಸಹಾಯ ಕೇಂದ್ರಗಳನ್ನು ಹಾಗೂ ಸ್ವಯಂ ಸೇವಾ ಸಂಸ್ಥೆಗಳ(ಎನ್‌ಜಿಒ) ಬೆಂಬಲವನ್ನೂ ಪಡೆಯಬಹುದು.

ಮಕ್ಕಳ ಲೈಂಗಿಕ ಶೋಷಣೆಯಂತಹ ಅನಿಷ್ಟದ ವಿರುದ್ಧ ಎಲ್ಲಾ ಪೋಷಕರು ಮತ್ತು ಇಡೀ ಸಮಾಜ ಒಗ್ಗೂಡಿ ಧ್ವನಿಯೆತ್ತಬೇಕಾಗಿದೆ.

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು.



ಬ್ಯಾಡ್ಮಿಂಟನ್‌ನ ಉಜ್ವಲ ಭರವಸೆ ರುಜುಲಾ

ಬಸವರಾಜ ದಳವಾಯಿ



ರುಜುಲಾ ರಾಮು– ಪ್ರಜಾವಾಣಿ ಚಿತ್ರ

ಇತ್ತೀಚೆಗೆ ನಡೆದ ಚೊಚ್ಚಲ ಗ್ರ್ಯಾನ್‌ಪ್ರಿ ಬ್ಯಾಡ್ಮಿಂಟನ್ ಲೀಗ್‌ನಲ್ಲಿ ಬಿರುಸಿನ ಸ್ಮ್ಯಾಷ್ ಮತ್ತು ಚುರುಕಿನ ಪಾದಚಲನೆ ಮೂಲಕ ಗಮನಸೆಳೆದ ಆಟಗಾರ್ತಿ ರುಜುಲಾ ರಾಮು.

ಎಳವೆಯಲ್ಲಿಯೇ ಬ್ಯಾಡ್ಮಿಂಟನ್ ಕ್ರೀಡೆಯಲ್ಲಿ ಭರವಸೆ ಮೂಡಿಸಿರುವ ಬೆಂಗಳೂರಿನ ಪ್ರತಿಭೆ ರುಜುಲಾ, ಇಲ್ಲಿನ ಸೋಫಿಯಾ ಹೈಸ್ಕೂಲಿನಲ್ಲಿ ಒಂಬತ್ತನೇ ತರಗತಿಯ ವಿದ್ಯಾರ್ಥಿನಿ. ಏಳನೇ ವಯಸ್ಸಿನಲ್ಲಿಯೇ ಈ ಕ್ರೀಡೆಯ ಆಸಕ್ತಿ ಬೆಳೆಸಿಕೊಂಡವರು. ಸದ್ಯ 17 ವರ್ಷದೊಳಗಿನವರ ವಿಭಾಗದಲ್ಲಿ ಅಗ್ರಪಂಕ್ತಿಯಲ್ಲಿ ನಿಲ್ಲುವ ರಾಜ್ಯದ ಆಟಗಾರ್ತಿಯಾಗಿದ್ದಾರೆ.

ಈ ವರ್ಷದ ಆಗಸ್ಟ್‌ನಲ್ಲಿ ನಡೆದ ರಾಜ್ಯ ರ್‍ಯಾಂಕಿಂಗ್ ಟೂರ್ನಿಯ ಮಹಿಳಾ ಸಿಂಗಲ್ಸ್‌ನಲ್ಲಿ ರುಜಲಾ ಅವರಿಗೆ ಚಾಂಪಿಯನ್ ಪಟ್ಟ ಒಲಿದಿತ್ತು. ವಯಸ್ಸಿಗೂ ಮೀರಿದ ಆಟವಾಡಿದ್ದ ಅವರು ಪ್ರಮುಖ ಆಟಗಾರ್ತಿಯರಿಗೆ ಸೋಲಿನ ರುಚಿ ತೋರಿದ್ದರು. ಅದೇ ಟೂರ್ನಿಯ 19 ವರ್ಷದೊಳಗಿನವರ ವಿಭಾಗದಲ್ಲಿ ರನ್ನರ್ಸ್‌ಅಪ್ ಕೂಡ ಆಗಿದ್ದರು.

17 ವರ್ಷದೊಳಗಿನವರ ವಿಭಾಗದಲ್ಲಿ ಅಖಿಲ ಭಾರತ ರ್‍ಯಾಂಕಿಂಗ್‌ನಲ್ಲಿ ಮೂರನೇ ಸ್ಥಾನದಲ್ಲಿರುವ ರುಜುಲಾ ಮುಡಿಗೆ ಹಲವು ಪದಕಗಳ ಗರಿ ಸೇರಿವೆ. 2019ರಲ್ಲಿ ನಡೆದ 13 ವರ್ಷದೊಳಗಿನವರ ವಿಭಾಗದ ಎಲ್ಲ ರಾಜ್ಯ ರ್‍ಯಾಂಕಿಂಗ್ ಟೂರ್ನಿಗಳಲ್ಲಿ ಚಾಂಪಿಯನ್ ಪಟ್ಟ ಅವರದಾಗಿದೆ. ಅದೇ ವರ್ಷ ರಾಜ್ಯ ಜೂನಿಯರ್ ಚಾಂಪಿಯನ್‌ಷಿಪ್‌ನ ಮೂರು ವಿಭಾಗಗಳಲ್ಲಿ ಅವರು ಪ್ರಶಸ್ತಿ ಗೆದ್ದುಕೊಂಡಿದ್ದರು.

ಇದೇ ವರ್ಷ ಚಂಡೀಗಡದಲ್ಲಿ ನಡೆದ 17 ವರ್ಷದೊಳಗಿನವರ ವಿಭಾಗದ ರಾಷ್ಟ್ರೀಯ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶಿಸಿದ್ದು ಅವರ ಸಾಧನೆಗಳಲ್ಲೊಂದು.

ರುಜುಲಾ ಇದುವರೆಗೆ ಓಪನ್ ವಿಭಾಗಗಳು ಸೇರಿ 50ಕ್ಕೂ ಹೆಚ್ಚು ಟೂರ್ನಿಗಳಲ್ಲಿ ಭಾಗವಹಿಸಿದ್ದಾರೆ. ಒಲಿಂಪಿಕ್ಸ್‌ನಲ್ಲಿ ಎರಡು ಪದಕಗಳ ಜಯಿಸುವ ಗುರಿಯಿಟ್ಟುಕೊಂಡಿರುವ ಅವರು, ಸ್ಪೇನ್‌ನ ಕರೋಲಿನಾ ಮರಿನ್ ತನ್ನ ನೆಚ್ಚಿನ ಆಟಗಾರ್ತಿ ಎನ್ನುತ್ತಾರೆ.

'ಬೆಳಿಗ್ಗೆ 6.30ಕ್ಕೆ ಅಭ್ಯಾಸ ಆರಂಭಿಸುತ್ತೇನೆ. ಈ ವೇಳೆ ಒಂದೂವರೆ ತಾಸು ತಾಲೀಮು ನಡೆಸುತ್ತೇನೆ. ಒಂದಷ್ಟು ಹೊತ್ತು ಫಿಟ್‌ನೆಸ್‌ಗಾಗಿಯೂ ಮೀಸಲಿಡುತ್ತೇನೆ. ಶಾಲೆಗೆ ಹೋಗಿ ಬಂದ ಬಳಿಕ ಮತ್ತೆರಡು ತಾಸು ಅಭ್ಯಾಸದ ಅಂಗಣದಲ್ಲಿ ಬೆವರು ಹರಿಸುತ್ತೇನೆ' ಎಂದು ರುಜುಲಾ ಹೇಳುತ್ತಾರೆ. ಪಟೇಲ್ಸ್ ಇನ್ ಕ್ಲಬ್‌ನಲ್ಲಿ ತರಬೇತಿ ಪಡೆಯುತ್ತಿರುವ ಅವರಿಗೆ ಮೋಹನ್ ಕುಮಾರ್ ಕೋಚ್ ಆಗಿದ್ದಾರೆ.

'ಸದ್ಯಕ್ಕೆ ರಾಷ್ಟ್ರೀಯ ಟೂರ್ನಿಗಳತ್ತ ಹೆಚ್ಚಿನ ಗಮನಹರಿಸುತ್ತೇನೆ. ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ ತಂದೆ ರಾಮು ಮತ್ತು ತಾಯಿ ಲೀಲಾ ಪ್ರೋತ್ಸಾಹ ಅಪಾರವಾಗಿದೆ. ನನ್ನ ಎಲ್ಲ ಆಕಾಂಕ್ಷೆಗಳಿಗೆ ಬೆನ್ನೆಲುಬಾಗಿದ್ದಾರೆ. ವಿಕಾಸ್ ಅಣ್ಣ, ಲಚ್ಚಿ (ಲಕ್ಷ್ಮಣ್) ದೊಡ್ಡಪ್ಪ ಮತ್ತು ಶಕು ದೊಡ್ಡಮ್ಮ ನನ್ನ ಕನಸುಗಳ ಸಾಕಾರಕ್ಕೆ ಸ್ಫೂರ್ತಿಯ ಸೆಲೆಯಾಗಿದ್ದಾರೆ' ಎಂದು ರುಜುಲಾ ಮೆಚ್ಚುಗೆಯ ನೆನಪಿಸಿಕೊಳ್ಳುತ್ತಾರೆ.

ನಕಲಿ ಸಾಕ್ಷ್ಯಾಧಾರ ಸೃಷ್ಟಿಸಿದ ಪ್ರಕರಣ: ಸುಪ್ರೀಂ ಕೋರ್ಟ್ ವಿಚಾರಣೆ

ತೀಸ್ತಾಗೆ ಮಧ್ಯಂತರ ಜಾಮೀನು



ನವದೆಹಲಿ(ಪಿಟಿಐ): 2002ರ ಗುಜರಾತ್ ಗಲಭೆಯಲ್ಲಿ ಅಂದಿನ ಮುಖ್ಯಮಂತ್ರಿ ನರೇಂದ್ರ ಮೋದಿ ಮತ್ತು ಉನ್ನತ ಅಧಿಕಾರಿಗಳನ್ನು ಸಿಲುಕಿಸಲು ಸುಳ್ಳು ಆರೋಪ ಮಾಡಿ, ನಕಲಿ ಸಾಕ್ಷ್ಯಾಧಾರ ಸೃಷ್ಟಿಸಿದ ಪ್ರಕರಣ ಸಂಬಂಧ ಜೂನ್ 25ರಂದು ಬಂಧಿಸಿರುವ ಸಾಮಾಜಿಕ ಕಾರ್ಯಕರ್ತೆ ತೀಸ್ತಾ ಸೆಟಲ್‌ವಾಡ್ ಅವರಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ಮಧ್ಯಂತರ ಜಾಮೀನು ಮಂಜೂರು ಮಾಡಿದೆ.

ಮುಖ್ಯ ನ್ಯಾಯಮೂರ್ತಿ ಉದಯ್ ಉಮೇಶ್ ಲಲಿತ್, ನ್ಯಾಯಮೂರ್ತಿ ಎಸ್. ರವೀಂದ್ರ ಭಟ್ ಮತ್ತು ನ್ಯಾಯಮೂರ್ತಿ ಸುಧಾಂಶು ಧುಲಿಯಾ ಅವರಿದ್ದ ಪೀಠವು, ಗುಜರಾತ್ ಹೈಕೋರ್ಟ್ ಜಾಮೀನು ಅರ್ಜಿ ಇತ್ಯರ್ಥಪಡಿಸುವರೆಗೂ ತಮ್ಮ ಪಾಸ್‌ಪೋರ್ಟ್ ಅನ್ನು ವಿಚಾರಣಾ ನ್ಯಾಯಾಲಯಕ್ಕೆ ಒಪ್ಪಿಸಬೇಕು. ಪ್ರಕರಣ ಸಂಬಂಧ ತನಿಖಾ ಸಂಸ್ಥೆಯ ವಿಚಾರಣೆಗೆ ಸಹಕರಿಸಬೇಕು ಎಂದು ತೀಸ್ತಾ ಅವರಿಗೆ ಷರತ್ತು ವಿಧಿಸಿದೆ.

ಅರ್ಜಿದಾರರು ಮಹಿಳೆ ಮತ್ತು ಬಂಧನ ಅವಧಿಯಲ್ಲಿ ಏಳು ದಿನಗಳ ಕಾಲ ಕಸ್ಟಡಿ ವಿಚಾರಣೆಗೆ ಒಳಗಾಗಿರುವುದನ್ನು ಪರಿಗಣಿಸಿ ಮಧ್ಯಂತರ ಜಾಮೀನು ನೀಡಿರುವುದಾಗಿ ಪೀಠ ಹೇಳಿದೆ.

ತೀಸ್ತಾ ಅವರ ಜಾಮೀನು ಅರ್ಜಿಯನ್ನು ಯಾವುದೇ ಪ್ರಭಾವಕ್ಕೆ ಒಳಗಾಗದೇ ಪರಿಶೀಲಿಸಬೇಕು. ಅಲ್ಲದೇ, ಅರ್ಜಿದಾರರನ್ನು ಶನಿವಾರ ವಿಚಾರಣಾ ನ್ಯಾಯಾಲಯದ ಮುಂದೆ ಹಾಜರುಪಡಿಸಬೇಕು. ವಿಚಾರಣಾ ನ್ಯಾಯಾಲಯ ನಿಗದಿಪಡಿಸುವ ಷರತ್ತುಗಳ ಮೇಲೆ ಬಿಡುಗಡೆ ಮಾಡಬೇಕು ಎಂದು ನ್ಯಾಯಪೀಠ ನಿರ್ದೇಶಿಸಿದೆ.

ವಿಚಾರಣಾ ನ್ಯಾಯಾಲಯದಲ್ಲಿ ಜಾಮೀನು ಅರ್ಜಿ ವಿಚಾರಣೆ ವಿಳಂಬವಾದ ಹಿನ್ನೆಲೆಯಲ್ಲಿ ಗುಜರಾತ್ ಹೈಕೋರ್ಟ್ ಮೆಟ್ಟಿಲೇರಿದ್ದರು. ತೀಸ್ತಾ ಅವರ ಜಾಮೀನು ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಸೆ. 19ಕ್ಕೆ ನಿಗದಿಪಡಿಸಿತ್ತು. ಹೀಗಾಗಿ ತೀಸ್ತಾ ಮಧ್ಯಂತರ ಜಾಮೀನಿಗಾಗಿ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು.

ಗುರುವಾರವಷ್ಟೇ ಈ ಅರ್ಜಿ ವಿಚಾರಣೆ ಆರಂಭಿಸಿದ್ದ ಮುಖ್ಯ ನ್ಯಾಯಮೂರ್ತಿ ಯು.ಯು. ಲಲಿತ್ ಅವರ ನೇತೃತ್ವದ ತ್ರಿಸದಸ್ಯ ಪೀಠವು, ಹೈಕೋರ್ಟ್ ತೀಸ್ತಾ ಅವರ ಜಾಮೀನು ಅರ್ಜಿಗೆ ಪ್ರತಿಕ್ರಿಯಿಸಲು ರಾಜ್ಯ ಸರ್ಕಾರಕ್ಕೆ ಆ.3ರಂದು ನೋಟಿಸ್ ನೀಡಿ, ಆರು ವಾರಗಳ ಬಳಿಕ ಅರ್ಜಿ ವಿಚಾರಣೆಗೆ ದಿನಾಂಕ ನಿಗದಿಪಡಿಸಿರುವುದಕ್ಕೆ ಅಚ್ಚರಿಗೊಂಡು, ಹೈಕೋರ್ಟ್‌ನ ಈ ವಿಳಂಬ ಧೋರಣೆಗೆ ಆಕ್ಷೇಪ ವ್ಯಕ್ತಪಡಿಸಿತ್ತು.

ಗಂಗಾ ನದಿಯಲ್ಲಿ ದೋಣಿ ದುರಂತ: ಮೃತರ ಸಂಖ್ಯೆ 7ಕ್ಕೆ

ಪ್ರಜಾವಾಣಿ ವಾರ್ತೆ

ಗಾಜಿಪುರ: ಉತ್ತರ ಪ್ರದೇಶದ ಗಾಜಿಪುರದಲ್ಲಿ ಬುಧವಾರ ಸಂಭವಿಸಿದ್ದ ದೋಣಿ ದುರಂತದಲ್ಲಿ ಮೃತಪಟ್ಟವರ ಸಂಖ್ಯೆ ಏಳಕ್ಕೆ ಏರಿಕೆಯಾಗಿದೆ.


ಬುಧವಾರ ಸಂಜೆ ವಾರದ ಸಂತೆಯಿಂದ ಹಿಂತಿರುಗುತ್ತಿದ್ದ ವೇಳೆ ಗಂಗಾ ನದಿಯಲ್ಲಿ ದೋಣಿ ದುರಂತ ಸಂಭವಿಸಿತ್ತು. 24 ಜನರ ಪೈಕಿ 17 ಮಂದಿಯನ್ನು ರಕ್ಷಿಸಲಾಗಿತ್ತು.

ಬುಧವಾರ ಸಂಜೆಯೇ ಮುಳುಗು ತಜ್ಞರು ಎರಡು ಶವಗಳನ್ನು ಹೊರತೆಗೆದಿದ್ದರು. ಈಗ ಮತ್ತೆ ಐದು ಶವಗಳನ್ನು ಹೊರತೆಗೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೃತಪಟ್ಟವರಲ್ಲಿ ಐವರು ಮಕ್ಕಳು ಸೇರಿದ್ದಾರೆ. ಮೃತಪಟ್ಟವರನ್ನು ಸಂಧ್ಯಾ ಕುಮಾರ್ (6), ಅಲಿಸಾ ಯಾದವ್ (5), ಅನಿತಾ ಪಾಸ್ವಾನ್ (10), ವಿಶಾಲ್ ಯಾದವ್ (10), ಸತ್ಯಂ (12), ನಗೀನಾ ಪಾಸ್ವಾನ್ (70) ಮತ್ತು ವಿಷಂಭರ್ ಗೌರ್ ಎಂದು ಗುರುತಿಸಲಾಗಿದೆ. ಗಾಜಿಪುರ ಜಿಲ್ಲಾಡಳಿತವು ದೋಣಿ ದುರಂತದಲ್ಲಿ ಮೃತಪಟ್ಟವರ ಕುಟುಂಬಕ್ಕೆ ವಿಪತ್ತು ಪರಿಹಾರ ನಿಧಿಯಿಂದ ಆರ್ಥಿಕ ನೆರವು ನೀಡುವ ಭರವಸೆ ನೀಡಿದೆ.

ಎಐಎಡಿಎಂಕೆ: ಪಳನಿಸ್ವಾಮಿ ನಾಯಕತ್ವಕ್ಕೆ ಹೈಕೋರ್ಟ್ ಮುದ್ರೆ

ಚೆನ್ನೈ (ಪಿಟಿಐ): ಎಐಎಡಿಎಂಕೆಯ ಪರಮೋಚ್ಚ ಮತ್ತು ಶಾಸಕಾಂಗ ಪಕ್ಷದ ನಾಯಕರಾಗಿ ಕೆ.ಪಳನಿಸ್ವಾಮಿ ಅವರ ಆಯ್ಕೆಯನ್ನು ಮದ್ರಾಸ್ ಹೈಕೋರ್ಟ್ ಶುಕ್ರವಾರ ಸಿಂಧುಗೊಳಿಸಿದೆ.



ಪಕ್ಷದ ನಾಯಕತ್ವದ ವಿಚಾರದಲ್ಲಿ ಉದ್ಭವಿಸಿದ್ದ ವಿವಾದದಲ್ಲಿ ಪಕ್ಷದ ನಾಯಕ ಕೆ. ಪಳನಿಸ್ವಾಮಿ ಅವರ ಏಕ ನಾಯಕತ್ವ ಬೇಡಿಕೆಯ ಮನವಿಯನ್ನು ನ್ಯಾಯಮೂರ್ತಿ ಎಂ. ದುರೈಸ್ವಾಮಿ ಮತ್ತು ಸುಂದರ್ ಮೋಹನ್ ಅವರಿದ್ದ ವಿಭಾಗೀಯ ಪೀಠವು ಪುರಸ್ಕರಿಸಿದೆ.

ಪನ್ನೀರ್ ಸೆಲ್ವಂ ಅವರು ಪಕ್ಷದ ಸಂಚಾಲಕರಾಗಿ ಮತ್ತು ಪಳನಿಸ್ವಾಮಿ ಅವರು ಜಂಟಿ ಸಂಚಾಲಕರಾಗಿ ದ್ವಿನಾಯಕತ್ವದ ಯಥಾಸ್ಥಿತಿ ಕಾಯ್ದುಕೊಳ್ಳಲು, ನ್ಯಾಯಮೂರ್ತಿ ಜಿ. ಜಯಚಂದ್ರನ್ ಅವರಿದ್ದ ಏಕ ಸದಸ್ಯ ಪೀಠವು ಆಗಸ್ಟ್ 17ರಂದು ನೀಡಿದ್ದ ಆದೇಶವನ್ನು ವಿಭಾಗೀಯ ಪೀಠ ವಜಾಗೊಳಿಸಿದೆ.

ಜುಲೈ 11ರಂದು ನಡೆದ ಪಕ್ಷದ ಸಾಮಾನ್ಯ ಮಂಡಳಿ ಸಭೆಯಲ್ಲಿ ಕೆ. ಪಳನಿಸ್ವಾಮಿ ಅವರನ್ನು ಪಕ್ಷದ ಮಧ್ಯಂತರ ಪ್ರಧಾನ ಕಾರ್ಯದರ್ಶಿಯಾಗಿ ಉನ್ನತ ಹುದ್ದೆಗೆ ಆಯ್ಕೆ ಮಾಡಲಾಗಿತ್ತು. ಸಾಮಾನ್ಯ ಮಂಡಳಿ ಸಭೆಯಲ್ಲಿ ಪನ್ನೀರ್ ಸೆಲ್ವಂ ಅವರನ್ನು ಪಕ್ಷದಿಂದ ಉಚ್ಚಾಟಿಸಲಾಗಿತ್ತು.

ರಾಯಪುರ: ಸೆ. 10ರಿಂದ ಆರೆಸ್ಸೆಸ್ ಸಮನ್ವಯ ಸಭೆ

ಮುಂಬೈ: ಆರೆಸ್ಸೆಸ್ (ರಾಷ್ಟ್ರೀಯ ಸ್ವಯಂ ಸೇವಕ ಸಂಘದ) ವಾರ್ಷಿಕ ಸಮನ್ವಯ ಸಭೆ ಸೆ. 10ರಿಂದ 12ರವರೆಗೆ ಛತ್ತೀಸಗಡದ ರಾಯಪುರದಲ್ಲಿ ನಡೆಯಲಿದೆ.

ಆರೆಸ್ಸೆಸ್‌ನ 36 ಅಂಗ ಸಂಸ್ಥೆಗಳ ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ. ಮೋಹನ್ ಭಾಗವತ್, ದತ್ತಾತ್ರೇಯ ಹೊಸಬಾಳೆ ಮಾರ್ಗದರ್ಶನ ನೀಡುವರು ಎಂದೂ ಎಂದು ವಿಶ್ವ ಸಂವಾದ್ ಕೇಂದ್ರ ತಿಳಿಸಿದೆ.



ವಾಹನ ದಟ್ಟಣೆ

ನವದೆಹಲಿಯ ನಿಜಾಮುದ್ದೀನ್ ರಸ್ತೆಯಲ್ಲಿ ಶುಕ್ರವಾರ ಭಾರಿ ವಾಹನ ದಟ್ಟಣೆ ಉಂಟಾಗಿತ್ತು –ಪಿಟಿಐ ಚಿತ್ರ

ಅಫ್ಗಾನ್ ಮಸೀದಿಯಲ್ಲಿ ಸ್ಫೋಟ: ಧರ್ಮಗುರು ಸೇರಿ 18 ಮಂದಿ ಸಾವು

ಕಾಬೂಲ್ (ಎಪಿ): ಪಶ್ಚಿಮ ಅಫ್ಗಾನಿಸ್ತಾನದ ಹೆರಾತ್ ನಗರದ ಮಸೀದಿಯಲ್ಲಿ ಶುಕ್ರವಾರ ಸ್ಫೋಟ ಸಂಭವಿಸಿ ತಾಲಿಬಾನ್ ಪರ ಧರ್ಮಗುರು ಸೇರಿದಂತೆ 18 ಜನರು ಮೃತಪಟ್ಟಿದ್ದು, 23 ಜನರು ಗಾಯಗೊಂಡಿದ್ದಾರೆ.

ಗುಜಾರ್ ಮಸೀದಿ ಅಂಗಳ ಮೃತದೇಹಗಳಿಂದ ತುಂಬಿ ಹೋಗಿತ್ತು. ನೆಲವೆಲ್ಲ ರಕ್ತಮಯವಾಗಿತ್ತು. ಆಘಾತ ಮತ್ತು ಗಾಬರಿಯಿಂದ ವ್ಯಕ್ತಿಯೊಬ್ಬ 'ದೇವರು ದೊಡ್ಡವನು' ಎಂದು ಕೂಗಿದ.

ಶುಕ್ರವಾರ ಮಧ್ಯಾಹ್ನ ಪ್ರಾರ್ಥನೆಗಾಗಿ ಮಸೀದಿಯಲ್ಲಿ ಭಾರಿ ಪ್ರಮಾಣದ ಜನರು ನೆರೆದಿದ್ದ ವೇಳೆ ಸ್ಫೋಟಗೊಂಡಿದೆ. ಮೃತರ ಪೈಕಿ ತಾಲಿಬಾನ್ ಪರ ಧರ್ಮಗುರು ಮುಜೀಬ್ ರೆಹಮಾನ್ ಅನ್ಸಾರಿ ಸೇರಿದ್ದು, ದೇಶದ ಪಾಶ್ಚಿಮಾತ್ಯ ಬೆಂಬಲಿತ ಸರ್ಕಾರಗಳ ವಿರುದ್ಧ ಟೀಕೆಗಾಗಿ ಅಫ್ಗಾನಿಸ್ತಾನದಾದ್ಯಂತ ಹೆಸರುವಾಸಿಯಾಗಿದ್ದರು. ಆಂಬುಲೆನ್ಸ್‌ಗಳಲ್ಲಿ 18 ಮೃತದೇಹ ಮತ್ತು 21 ಗಾಯಾಳುಗಳನ್ನು ಹೆರಾತ್ ಆಸ್ಪತ್ರೆಗೆ ಸಾಗಿಸಲಾಗಿದೆ ಎಂದು ಹೆರಾತ್ ಆಂಬುಲೆನ್ಸ್ ಕೇಂದ್ರದ ಅಧಿಕಾರಿ ಮೊಹಮ್ಮದ್ ದಾವೂದ್ ಮೊಹಮ್ಮದಿ ಹೇಳಿದ್ದಾರೆ.

ಶ್ರೀಲಂಕಾಗೆ ಗೊಟಬಯ ವಾಪಸ್ ಇಂದು

ಕೊಲಂಬೊ (ಪಿಟಿಐ): ಶ್ರೀಲಂಕಾದಿಂದ ಪಲಾಯನ ಮಾಡಿದ್ದ ಮಾಜಿ ಅಧ್ಯಕ್ಷ ಗೊಟಬಯ ರಾಜಪಕ್ಸ (73) ಅವರು ಇದೇ 3ರಂದು (ಶನಿವಾರ) ದೇಶಕ್ಕೆ ವಾಪಸಾಗಲಿದ್ದಾರೆ ಎಂದು ಅಧಿಕೃತ ಮೂಲಗಳು ಶುಕ್ರವಾರ ತಿಳಿಸಿವೆ.



ಶನಿವಾರ ನಸುಕಿನಲ್ಲಿ ಕೊಲಂಬೊಗೆ ಆಗಮಿಸಲಿದ್ದಾರೆ. ಆದರೆ, ಅವರು ಬರುವ ವಿಮಾನದ ಬಗ್ಗೆ ಮಾಹಿತಿ ಲಭ್ಯವಿಲ್ಲ. ಕೊಲಂಬೊ ಉಪನಗರದ ಮಿರಿಹಾನ ತಮ್ಮ ಖಾಸಗಿ ನಿವಾಸಕ್ಕೆ ಅವರು ಮರಳಲಿದ್ದಾರೆ ಎಂಬುದೂ ಖಚಿತವಾಗಿಲ್ಲ. ಆದರೆ, ಮಾಜಿ ಅಧ್ಯಕ್ಷರು ಸರ್ಕಾರ ಒದಗಿಸುವ ಇತರ ಸವಲತ್ತು ಪಡೆಯಲು ಅರ್ಹರಾಗಿದ್ದಾರೆ ಎಂದು ಮೂಲಗಳು ಹೇಳಿವೆ.

ತೀವ್ರ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿರುವ ದ್ವೀಪ ರಾಷ್ಟ್ರದಲ್ಲಿ ಸುಮಾರು ಎರಡು ತಿಂಗಳ ಹಿಂದೆ ನಾಗರಿಕರು ಗೊಟಬಯ ಸರ್ಕಾರದ ವಿರುದ್ಧ ದಂಗೆ ಎದ್ದು, ನಿರಂತರ ಪ್ರತಿಭಟನೆ ನಡೆಸಿದ್ದರು. ಜುಲೈ 9ರಂದು ಪ್ರತಿಭಟನಾಕಾರರು ಅಧ್ಯಕ್ಷರ ನಿವಾಸ ಹಾಗೂ ರಾಜಧಾನಿಯ ಹಲವು ಪ್ರಮುಖ ಸರ್ಕಾರಿ ಕಟ್ಟಡಗಳ ಮೇಲೆ ದಾಳಿ ನಡೆಸಿದ್ದರು. ರಾಜೀನಾಮೆಗೆ ಪಟ್ಟು ಹಿಡಿದು ನಾಗರಿಕರು ಪ್ರತಿಭಟನೆ ತೀವ್ರಗೊಳಿಸಿದ್ದರಿಂದ ಗೊಟಬಯ ಅವರು ಜುಲೈ 13ರಂದು ದೇಶ ತೊರೆದಿದ್ದರು.

ಶ್ರೀಲಂಕಾದ ಏರ್‌ಫೋರ್ಸ್ ವಿಮಾನದಲ್ಲಿ ಮಾಲ್ದೀವ್ಸ್‌ಗೆ ಪಲಾಯನ ಮಾಡಿದ್ದ ಗೊಟಬಯ ನಂತರ ಅಲ್ಲಿಂದ ಸಿಂಗಪುರಕ್ಕೆ ವಾಸ್ತವ್ಯ ಬದಲಿಸಿದ್ದರು. ಅಲ್ಲಿಂದಲೇ ಜುಲೈ 14ರಂದು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು. ನಂತರ ತಾತ್ಕಾಲಿಕ ಆಶ್ರಯದ ಮೇರೆಗೆ ಥಾಯ್ಲೆಂಡ್‌ಗೆ ತೆರಳಿದ್ದರು.

ಮಂಕಿಪಾಕ್ಸ್‌ನ ಹೊಸ ತಳಿ ಪತ್ತೆ

ಲಂಡನ್ (ಪಿಟಿಐ): ಪಶ್ಚಿಮ ಆಫ್ರಿಕಾಕ್ಕೆ ಇತ್ತೀಚೆಗೆ ಪ್ರಯಾಣಿಸಿದ ವ್ಯಕ್ತಿಯೊಬ್ಬರಲ್ಲಿ ಮಂಕಿಪಾಕ್ಸ್‌ನ ಹೊಸ ತಳಿಯನ್ನು ಗುರುತಿಸಲಾಗಿದೆ ಎಂದು ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ.


ಬ್ರಿಟನ್‌ನಲ್ಲಿ ವರದಿಯಾಗುವ ಮಂಕಿಪಾಕ್ಸ್ ಸೋಂಕಿನ ಹೊಸ ಪ್ರಕರಣಗಳನ್ನು ಪ್ರಾದೇಶಿಕ ಜೀನೋಮ್ ಸೀಕ್ವೆನ್ಸಿಂಗ್ ಪರೀಕ್ಷೆ ನಡೆಸಿದಾಗ, ಇದರಲ್ಲಿ ಹೊಸ ರೂಪಾಂತರಿ ತಳಿ ಕಂಡು ಬಂದಿದೆ ಎಂದು ಬ್ರಿಟನ್‌ನ ಆರೋಗ್ಯ ಭದ್ರತಾ ಸಂಸ್ಥೆ (ಯುಕೆಎಚ್‌ಎಸ್‌ಎ) ತಿಳಿಸಿದೆ.

ಅಪಾಯಕಾರಿ ರೋಗಕಾರಕಗಳ (ಎಸಿಡಿಪಿ) ಸಲಹಾ ಸಮಿತಿ ಮೇರೆಗೆ ವ್ಯಕ್ತಿಯನ್ನು ರಾಯಲ್ ಲಿವರ್‌ಪೂಲ್ ಯೂನಿವರ್ಸಿಟಿ ಆಸ್ಪತ್ರೆಗೆ ಹೆಚ್ಚಿನ ಪರಿಣಾಮದ ಸಾಂಕ್ರಾಮಿಕ ರೋಗ (ಎಚ್‌ಸಿಐಡಿ) ಘಟಕಕ್ಕೆ ದಾಖಲಿಸಲಾಗಿದೆ.

ಸೋಂಕು ದೃಢೀಕರಿಸುವ ಮೊದಲು ನಿಕಟ ಸಂಪರ್ಕ ಹೊಂದಿರುವ ವ್ಯಕ್ತಿಗಳನ್ನು ಸಂಪರ್ಕಿಸಲು ಪ್ರಯತ್ನಿಸಲಾಗುತ್ತಿದೆ ಎಂದು ಯುಕೆಎಚ್‌ಎಸ್‌ಎ ಡಾ. ಸೋಫಿಯಾ ಮಾಕಿ ಹೇಳಿದರು.

ಚುನಾವಣಾ ಅಕ್ರಮ: ಸೂಕಿಗೆ ಇನ್ನೂ ಮೂರು ವರ್ಷ ಜೈಲುಶಿಕ್ಷೆ

ಬ್ಯಾಂಕಾಕ್ (ಎಪಿ): ಮ್ಯಾನ್ಮಾರ್‌ನ ಉಚ್ಚಾಟಿತ ನಾಯಕಿ ಆಂಗ್ ಸಾನ್ ಸೂಕಿ ಅವರು ಚುನಾವಣಾ ಅಕ್ರಮದಲ್ಲಿ ಭಾಗಿಯಾಗಿರುವುದು ಸಾಬೀತಾಗಿದ್ದು, ಅಲ್ಲಿನ ಸ್ಥಳೀಯ ನ್ಯಾಯಾಲಯವು ಶುಕ್ರವಾರ ಅವರಿಗೆ ಮೂರು ವರ್ಷಗಳ ಜೈಲು ಶಿಕ್ಷೆಯನ್ನು ವಿಧಿಸಿದೆ.



ಅಕ್ರಮವಾಗಿ ವಾಕಿ-ಟಾಕಿಗಳನ್ನು ಹೊಂದಿದ್ದಕ್ಕಾಗಿ, ಕೋವಿಡ್ ಮಾರ್ಗಸೂಚಿಗಳ ಉಲ್ಲಂಘನೆ, ದೇಶದ್ರೋಹ ಮತ್ತು ಭ್ರಷ್ಟಾಚಾರದ ಆರೋಪದಲ್ಲಿ ಸೂಕಿ ಅವರಿಗೆ ಈಗಾಗಲೇ ಅಲ್ಲಿನ ಮಿಲಿಟರಿ ಸರ್ಕಾರವು 17 ವರ್ಷಗಳ ಜೈಲು ಶಿಕ್ಷೆಯನ್ನು ವಿಧಿಸಿದೆ. ಇದೀಗ ಅವರ ಜೈಲುಶಿಕ್ಷೆಯ ಅವಧಿಯು 20 ವರ್ಷಕ್ಕೆ ಹೆಚ್ಚಳವಾಗಿದೆ.

ಸೂಕಿ ಅವರ ವಿರುದ್ಧ ಕಳೆದ ನವೆಂಬರ್‌ನಲ್ಲಿ ಚುನಾವಣಾ ಆಯೋಗವು ಚುನಾವಣಾ ವಂಚನೆಯ ದೂರನ್ನು ಸಲ್ಲಿಸಿತ್ತು. 2020ರ ಸಾಮಾನ್ಯ ಚುನಾವಣೆಯಲ್ಲಿ ಗೆದ್ದು ಅಧಿಕಾರದ ಚುಕ್ಕಾಣಿ ಹಿಡಿದಿದ್ದ ಸೂಕಿ ಮತ್ತು ಅವರ ಸಂಪುಟದ ಸಹೋದ್ಯೋಗಿಗಳು ಚುನಾವಣಾ ಪ್ರಕ್ರಿಯೆಯಲ್ಲಿ ವಂಚನೆ ಮತ್ತು ಕಾನೂನುಬಾಹಿರ ಕ್ರಮಗಳಲ್ಲಿ ತೊಡಗಿಕೊಂಡಿದ್ದರು ಎಂದು ಆಯೋಗವು ಆರೋಪಿಸಿತ್ತು.

ಶುಕ್ರವಾರ ಅಲ್ಲಿನ ಸ್ಥಳೀಯ ನ್ಯಾಯಾಲಯದಲ್ಲಿ ನಡೆದ ವಿಚಾರಣೆ ವೇಳೆ ಸೂಕಿ ವಿರುದ್ಧದ ಆರೋಪವು ಸಾಬೀತಾಗಿದ್ದು, ನ್ಯಾಯಾಲಯವು ಮೂರು ವರ್ಷಗಳ ಜೈಲು ಶಿಕ್ಷೆಯನ್ನು ವಿಧಿಸಿದೆ.

ಗುಜರಾತ್‌ನಲ್ಲಿ ಅಧಿಕಾರಕ್ಕೆ ಬಂದರೆ ಸಾಲಮನ್ನಾ: ಕೇಜ್ರಿವಾಲ್ ಭರವಸೆ

ಅಹಮದಾಬಾದ್: ಈ ವರ್ಷದ ಕೊನೆಯಲ್ಲಿ ನಡೆಯಲಿರುವ ಗುಜರಾತ್‌ನ ವಿಧಾನಸಭೆ ಚುನಾವಣೆಗೆ ಆಮ್ ಆದ್ಮಿ ಪಕ್ಷ ಭರ್ಜರಿ ಪ್ರಚಾರ ಕೈಗೊಂಡಿದೆ. ಪಕ್ಷ ಅಧಿಕಾರಕ್ಕೆ ಬಂದರೆ ಸಾಲಮನ್ನಾ ಸೇರಿದಂತೆ 6 ಪ್ರಮುಖ ಭರವಸೆಗಳನ್ನು ಈಡೇರಿಸುವುದಾಗಿ ಪಕ್ಷದ ರಾಷ್ಟ್ರೀಯ ಸಂಚಾಲಕ ಅರವಿಂದ್ ಕೇಜ್ರಿವಾಲ್ ಭರವಸೆ ನೀಡಿದರು.

ದ್ವಾರಕಾ ಪಟ್ಟಣದಲ್ಲಿ ರೈತರನ್ನು ಉದ್ದೇಶಿಸಿ ಮಾತನಾಡಿದ ಅವರು, ನಾವು ಅಧಿಕಾರಕ್ಕೆ ಬಂದರೆ ರೈತರ ಕೃಷಿ ಉತ್ಪನ್ನಗಳನ್ನು ಕನಿಷ್ಠ ಬೆಂಬಲ ಬೆಲೆ(ಎಂಎಸ್‌ಪಿ) ಅಡಿ ಖರೀದಿಸಲು ಯೋಜನೆ ಜಾರಿಮಾಡುವುದಾಗಿ ಹೇಳಿದರು.



❦ ಸುಭಾಷಿತ ❦

ಮುಚ್ಚಿಡುವ ಎಲ್ಲಾ ಸತ್ಯಗಳು ವಿಷಕಾರಿಯಾಗುತ್ತವೆ.
–ಫ್ರೆಡರಿಕ್ ನೀಶೆ

ಈದ್ಗಾ: 'ಸುಪ್ರೀಂ' ಆದೇಶ ಸ್ವಾಗತಾರ್ಹ ಸೌಹಾರ್ದ ಪರಂಪರೆ ಎತ್ತಿಹಿಡಿಯೋಣ

ಇನ್ನೂರು ವರ್ಷಗಳಿಂದ ರಂಜಾನ್‌ನಂತಹ ವಿಶೇಷ ಸಂದರ್ಭಗಳಲ್ಲಿ ಮುಸ್ಲಿಂ ಸಮುದಾಯದವರ ಸಾಮೂಹಿಕ ಪ್ರಾರ್ಥನೆ ಹಾಗೂ ಮಕ್ಕಳ ಕ್ರೀಡೆ, ಕುರಿ ವ್ಯಾಪಾರಕ್ಕೆ ಬಳಕೆಯಾಗುತ್ತಿದ್ದ ಬೆಂಗಳೂರಿನ ಚಾಮರಾಜಪೇಟೆಯ ಈದ್ಗಾ ಮೈದಾನದಲ್ಲಿ ಇದೇ ಮೊದಲ ಬಾರಿಗೆ ಗಣೇಶೋತ್ಸವ ಆಚರಣೆಗೆ ಅವಕಾಶ ಕಲ್ಪಿಸಲು ಹೊರಟಿದ್ದ ರಾಜ್ಯ ಸರ್ಕಾರದ ನಡೆಗೆ ಸುಪ್ರೀಂ ಕೋರ್ಟ್ ತಡೆ ನೀಡಿದೆ. ಗಣಪತಿ ಪ್ರತಿಷ್ಠಾಪನೆಗೆ ಅವಕಾಶ ನಿರಾಕರಿಸಿರುವ ಸುಪ್ರೀಂ ಕೋರ್ಟ್‌ನ ತ್ರಿಸದಸ್ಯ ಪೀಠವು ಯಥಾಸ್ಥಿತಿ ಕಾಪಾಡಿಕೊಳ್ಳುವಂತೆ ಆದೇಶಿಸಿರುವುದು ಸ್ವಾಗತಾರ್ಹ. ಈದ್ಗಾ ಮೈದಾನವು ಬಕ್ರೀದ್ ಮತ್ತು ರಂಜಾನ್ ಹಬ್ಬಗಳಂದು ಸಾಮೂಹಿಕ ಪ್ರಾರ್ಥನೆಗೆ ಹಾಗೂ ಮಕ್ಕಳ ಕ್ರೀಡಾ ಚಟುವಟಿಕೆಗೆ ಸೀಮಿತವಾಗಿರಬೇಕು ಎಂದು ಕರ್ನಾಟಕ ಹೈಕೋರ್ಟ್‌ನ ಏಕಸದಸ್ಯ ಪೀಠ ಆದೇಶಿಸಿತ್ತು. ಕರ್ನಾಟಕ ಸರ್ಕಾರದ ಕಂದಾಯ ಇಲಾಖೆಯು ಹೈಕೋರ್ಟ್ ಆದೇಶ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿತ್ತು. ಇದನ್ನು ಆಲಿಸಿದ್ದ ದ್ವಿಸದಸ್ಯ ಪೀಠವು 'ಈದ್ಗಾ ಮೈದಾನದಲ್ಲಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಲು ಅನುಮತಿ ಕೋರಿ ಬೆಂಗಳೂರು ನಗರ ಜಿಲ್ಲಾಧಿಕಾರಿ ಸ್ವೀಕರಿಸಿರುವ ಮನವಿ ಪತ್ರಗಳನ್ನು ಆ. 31ರಿಂದ ಸೀಮಿತ ಅವಧಿಗೆ ಪರಿಗಣಿಸಿ ಕರ್ನಾಟಕ ಸರ್ಕಾರ ಸೂಕ್ತ ಆದೇಶ ಹೊರಡಿಸಬಹುದು' ಎಂದು ಹೇಳಿತ್ತು.



ಮೈದಾನಗಳು ರಾಜಕೀಯ ಮೇಲಾಟಕ್ಕೆ ಬಳಕೆಯಾಗುವುದು ಬೇಡ

ವಿಭಾಗೀಯ ಪೀಠದ ಆದೇಶ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಕರ್ನಾಟಕ ವಕ್ಫ್ ಮಂಡಳಿ ಹಾಗೂ ಸೆಂಟ್ರಲ್ ಮುಸ್ಲಿಂ ಅಸೋಸಿಯೇಷನ್ ಮೇಲ್ಮನವಿ ಸಲ್ಲಿಸಿದ್ದವು. ಈ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ಇಂದಿರಾ ಬ್ಯಾನರ್ಜಿ, ಅಭಯ್ ಎಸ್. ಓಕಾ ಹಾಗೂ ಎಂ.ಎಂ. ಸುಂದರೇಶ್ ಅವರನ್ನು ಒಳಗೊಂಡ ಪೀಠವು '200 ವರ್ಷಗಳಿಂದ ಈ ಮೈದಾನದಲ್ಲಿ ಗಣೇಶೋತ್ಸವ ಆಚರಣೆ ಮಾಡಿಲ್ಲ. ಇದನ್ನು ನೀವು ಸಹ ಒಪ್ಪಿಕೊಳ್ಳುತ್ತಿದ್ದೀರಿ. ಹಾಗಾದರೆ ಏಕೆ ಯಥಾಸ್ಥಿತಿಯನ್ನು ಕಾಯ್ದುಕೊಳ್ಳಬಾರದು' ಎಂದು ಕರ್ನಾಟಕ ಸರ್ಕಾರ, ವಕ್ಫ್ ಮಂಡಳಿ ಹಾಗೂ ಇತರರನ್ನು ಪ್ರಶ್ನಿಸಿದ್ದಲ್ಲದೇ, ಬೇರೆ ಕಡೆ ಗಣೇಶೋತ್ಸವ ಆಚರಿಸುವಂತೆ ಸೂಚಿಸಿದೆ. ಧಾರ್ಮಿಕ ಕೇಂದ್ರಗಳನ್ನು ವಿವಾದದ ನೆಲೆಯಾಗಿಸಿ, ರಾಜಕೀಯ ಲಾಭ ಮಾಡಿಕೊಳ್ಳುವ ಇಂದಿನ ದುರ್ದಿನಗಳಲ್ಲಿ ನ್ಯಾಯಮೂರ್ತಿಗಳು ಎತ್ತಿರುವ ಪ್ರಶ್ನೆ ಹಾಗೂ ನೀಡಿರುವ ಆದೇಶವು ಭಾರತವು ಕಾಪಿಟ್ಟುಕೊಂಡು ಬಂದ ಧಾರ್ಮಿಕ ಸಹಿಷ್ಣುತೆ ಹಾಗೂ ಸೌಹಾರ್ದದ ಆಶಯಗಳ ಭಾಗವೇ ಆಗಿದೆ. ಹೀಗಿರುವಾಗ, ರಾಜ್ಯ ಸರ್ಕಾರವೇ ಈ ಸಂಬಂಧ ವಿವಾದದ ಭಾಗವಾಗಲು ಹೊರಟಿದ್ದು ಒಪ್ಪತಕ್ಕ ನಡೆಯಲ್ಲ. ಸಮುದಾಯಗಳನ್ನು ಪರಸ್ಪರ ಎತ್ತಿಕಟ್ಟುವಂತಹ ಯಾವುದೇ ಬಗೆಯ ನಡವಳಿಕೆಯು ಜವಾಬ್ದಾರಿಯುತ ಸರ್ಕಾರಕ್ಕೆ ಶೋಭೆ ತರುವಂತಹದ್ದಲ್ಲ.

ರಾಜಕೀಯ ಪಕ್ಷಗಳಿಗೆ ಅಸ್ಥಿರತೆ ಕಾಡಿದಾಗಲೆಲ್ಲ ಧಾರ್ಮಿಕ ವಿವಾದಗಳು ಆಸರೆಯಾಗುತ್ತಲೇ ಬಂದಿವೆ. 1990ರ ದಶಕದಲ್ಲಿ ಹುಬ್ಬಳ್ಳಿಯ ಈದ್ಗಾ ಮೈದಾನದಲ್ಲಿ ರಾಷ್ಟ್ರಧ್ವಜ ಹಾರಿಸಲು ಅವಕಾಶ ಬೇಕೆಂದು ಬಿಜೆಪಿ ದೊಡ್ಡ ಮಟ್ಟದ ಹೋರಾಟ ನಡೆಸಿತ್ತು. ಹಿಂದೂ ಮತ್ತು ಮುಸ್ಲಿಂ ಸಮುದಾಯಗಳವರು ಪರ-ವಿರೋಧದ ನೆಲೆಯಲ್ಲಿ ಬೀದಿಗೆ ಇಳಿದಿದ್ದರಿಂದ ಘರ್ಷಣೆ ತೀವ್ರಗೊಂಡು ಗೋಲಿಬಾರ್ ನಡೆದಿತ್ತು. ನಾಲ್ವರು ಜೀವ ಕಳೆದುಕೊಂಡಿದ್ದರು. ಕರ್ಫ್ಯೂ ಹಾಗೂ ನಿಷೇಧಾಜ್ಞೆ ಹೇರಿದ್ದರಿಂದಾಗಿ ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳಲ್ಲಿ ಜನ ಸಂಕಷ್ಟ ಅನುಭವಿಸಿದ್ದರು. ವ್ಯವಹಾರ ಸ್ಥಗಿತಗೊಂಡು ವಾಣಿಜ್ಯನಗರಿ ತತ್ತರಿಸಿಹೋಗಿತ್ತು. ಆದರೆ ರಾಜಕೀಯವಾಗಿ ಇದು ಬಿಜೆಪಿಗೆ ಲಾಭ ತಂದುಕೊಟ್ಟಿತ್ತು. 1994ರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿದ್ದ ಜಗದೀಶ ಶೆಟ್ಟರ್ ಎದುರು ಜನತಾದಳದಿಂದ ಸ್ಪರ್ಧಿಸಿದ್ದ ಈಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸೋಲು ಅನುಭವಿಸಿದ್ದರು. ಈದ್ಗಾ ಮೈದಾನದ ವಿವಾದವೇ ಆ ಸೋಲಿಗೆ ಕಾರಣ ಎಂದು ವ್ಯಾಖ್ಯಾನಿಸಲಾಗಿತ್ತು. ಚುನಾವಣೆಯಲ್ಲಿ ಜನತಾದಳ ಬಹುಮತ ಪಡೆದು ಅಧಿಕಾರ ಹಿಡಿದಿತ್ತು. ಆಗ ಮುಖ್ಯಮಂತ್ರಿಯಾಗಿದ್ದ ಎಚ್‌.ಡಿ. ದೇವೇಗೌಡ ಹಾಗೂ ಸಿ.ಎಂ. ಇಬ್ರಾಹಿಂ ಅವರು ದೀರ್ಘ ಅವಧಿಯ ಈ ವಿವಾದವನ್ನು ಸೌಹಾರ್ದದಿಂದ ಬಗೆಹರಿಸಿದ್ದರು. ಬೆಂಗಳೂರಿನ ಚಾಮರಾಜಪೇಟೆಯ ಮೈದಾನವು ರಾಜಕೀಯ ಮೇಲಾಟಕ್ಕೆ ಬಳಕೆಯಾಗುವುದು ಬೇಡ. ಮೈದಾನಗಳು ಹಾಗೂ ಧಾರ್ಮಿಕ ಕೇಂದ್ರಗಳು ಮನುಷ್ಯ ಸಂಬಂಧಗಳನ್ನು ಬೆಸೆಯುವ ವೇದಿಕೆಗಳು. ಗಣೇಶೋತ್ಸವದಂತಹ ಆಚರಣೆಗಳು ವಿವಾದಗಳ ಸೃಷ್ಟಿಗೆ ಬಳಕೆಯಾಗಬಾರದು. ಸರ್ಕಾರ ಇಂತಹ ಪ್ರಕರಣಗಳನ್ನು ಸೌಹಾರ್ದದಿಂದ ಬಗೆಹರಿಸುವ ದಿಕ್ಕಿನತ್ತ ಹೆಜ್ಜೆ ಇಡಬೇಕೇ ವಿನಾ ರಾಜಕೀಯ ಲಾಭ-ನಷ್ಟದ ಲೆಕ್ಕಾಚಾರದಲ್ಲಿ ಯಾವುದೇ ಒಂದು ಸಮುದಾಯದ ಪರ ಅಥವಾ ವಿರುದ್ಧ ನಿಲುವು ತಳೆಯಬಾರದು. ಕರ್ನಾಟಕದ ಶಾಂತಿ-ಸೌಹಾರ್ದದ ಪರಂಪರೆಯನ್ನು ಸರ್ಕಾರ ಎತ್ತಿಹಿಡಿಯಬೇಕು. ಸುಪ್ರೀಂ ಕೋರ್ಟ್ ನಿರ್ದೇಶನದಂತೆ ನಡೆಯುವುದು ಋಜುಮಾರ್ಗ.

ದಿನದ ಟ್ವೀಟ್

ಬೇಕು ಧೈರ್ಯ ಮತ್ತು ಬದ್ಧತೆ



ಸರ್ಕಾರ ನಡೆಸುವವರನ್ನು ಪ್ರಶ್ನಿಸಲು ಧೈರ್ಯ ಮತ್ತು ಬದ್ಧತೆ ಎರಡೂ ಅತ್ಯಗತ್ಯ. ಆದರೆ ಈ ಎರಡೂ ಈಗ ಹಿಂದೆಂದೂ ಇಲ್ಲದಷ್ಟು ಒತ್ತಡದಲ್ಲಿವೆ.

ಅನುರಾಧಾ ರಾಮನ್, ಪತ್ರಕರ್ತೆ

ಕಿಡಿನುಡಿ



ಬಾಗಿನ ಕೊಡುತ್ತಾರೆ, ಕಾಲಿಗೆ ಬೀಳುತ್ತಾರೆ, ಮಗುವಿನ ಕೆನ್ನೆ ಚಿವುಟಿ ಮುದ್ದಾಡುತ್ತಾರೆ, ಊಟ ಹಂಚುತ್ತಾರೆ, ಸೀರೆ ಕೊಡುತ್ತಾರೆ, ಕ್ರಿಕೆಟ್ ಆಡುತ್ತಾರೆ, ಮನೆಗೆ ಬಂದು ಕಾಫಿ ಹೀರುತ್ತಾರೆ, ಗಣಪತಿ ಪೆಂಡಾಲ್‌ಗಳಿಗೆ ಭೇಟಿ ನೀಡಿ ನಮಸ್ಕರಿಸುತ್ತಾರೆ, ಸ್ಟೆಪ್ ಹಾಕುತ್ತಾರೆ, ಬುಕ್– ಪೆನ್ಸಿಲ್ ಕೊಡುತ್ತಾರೆ. ಇವೆಲ್ಲಾ ನಮಗಾಗಿ ಅಲ್ಲ, ನಮ್ಮ ಮತಕ್ಕಾಗಿ.

ರೋಹಿತ್ ಸಿಂಹ, ಎಂಜಿನಿಯರ್

25 ವರ್ಷಗಳ ಹಿಂದೆ

ಬುಧವಾರ, 3-9-1997

• ಕೃಷ್ಣಾ, ವಿ.ಸಿ. ನಾಲಾ ಗುತ್ತಿಗೆ ನ್ಯಾಯಾಂಗ ತನಿಖೆಗೆ ಆಗ್ರಹ

ಬೆಂಗಳೂರು, ಸೆ. 2– ಕೃಷ್ಣಾ ಮೇಲ್ದಂಡೆ ಯೋಜನೆ ಕಾಮಗಾರಿಗಳಲ್ಲಿ ನಿಯಮಗಳನ್ನು ಉಲ್ಲಂಘಿಸಿ ನೀಡಿರುವ ತುಂಡು ಗುತ್ತಿಗೆ ವ್ಯವಹಾರ, ವಿಶ್ವೇಶ್ವರಯ್ಯ ನಾಲಾ ಆಧುನೀಕರಣ ಯೋಜನೆಯ ಅಸಮರ್ಪಕ ಕಾಮಗಾರಿ ಬಗೆಗೆ ನ್ಯಾಯಾಂಗ ವಿಚಾರಣೆ ನಡೆಸುವಂತೆ ವಿರೋಧ ಪಕ್ಷದ ನಾಯಕ ಎಂ. ಮಲ್ಲಿಕಾರ್ಜುನ ಖರ್ಗೆ ಅವರು ಇಂದು ವಿಧಾನಸಭೆಯಲ್ಲಿ ಸರ್ಕಾರವನ್ನು ಆಗ್ರಹಿಸಿದರು.

ಭಾರಿ ನೀರಾವರಿ ಇಲಾಖೆಯ ಬೇಡಿಕೆ ಮೇಲಿನ ಚರ್ಚೆ ಆರಂಭಿಸಿದ ಅವರು, ನೀರಾವರಿ ಕಾಮಗಾರಿಗಳಲ್ಲಿ ಅನೇಕ ಕಡೆ ನಡೆದಿರುವ ಅವ್ಯವಹಾರಗಳನ್ನೂ ನ್ಯಾಯಾಂಗ ವಿಚಾರಣೆಗೆ ಒಪ್ಪಿಸಬೇಕೆಂದು ಒತ್ತಾಯಿಸಿದರು. ನೀರಾವರಿ ಯೋಜನೆಗಳ ಅನುಷ್ಠಾನದಲ್ಲಿ ನಿರ್ಲಕ್ಷ್ಯದಿಂದಾದ ವೈಫಲ್ಯವೇ ಈ ಸರ್ಕಾರದ ಸಾಧನೆಯಾಗಿದೆ ಎಂದು ಟೀಕೆಗಳ ಸುರಿಮಳೆಗರೆದರು.

• ಖ್ಯಾತ ಅನುವಾದಕ ಅಹೋಬಲ ಶಂಕರ ಇನ್ನಿಲ್ಲ

ಬೆಂಗಳೂರು, ಸೆ. 2– ಶರತ್‌ಚಂದ್ರ, ರವೀಂದ್ರನಾಥ ಟ್ಯಾಗೋರ್ ಮುಂತಾದ ಖ್ಯಾತ ಬಂಗಾಳಿ ಲೇಖಕರ ಮಹತ್ವದ ಕಾದಂಬರಿಗಳನ್ನು ಹಲವು ದಶಕಗಳ ಹಿಂದೆ ಕನ್ನಡಕ್ಕೆ ಅನುವಾದಿಸಿದ್ದ ಖ್ಯಾತ ಸಾಹಿತಿ ಹಾಗೂ ಪತ್ರಕರ್ತ ಅಹೋಬಲ ಶಂಕರ (85) ಅವರು ಇಂದು ಬೆಳಗಿನ ಜಾವ ಮುಂಬೈನಲ್ಲಿ ನಿಧನರಾದರು.

ಬೆಂಗಳೂರಿನವರಾದ ಅವರು ಇಲ್ಲಿನ ಸೆಂಟ್ರಲ್ ಕಾಲೇಜಿನಲ್ಲಿ ಬಿಎಸ್‌.ಸಿ ಪದವಿ ಪಡೆದಿದ್ದರು.

50 ವರ್ಷಗಳ ಹಿಂದೆ

ಭಾನುವಾರ, 3-9-1972

• ಸಾಮಾನ್ಯ ವಿಮೆ ರಾಷ್ಟ್ರೀಕರಣ ಮಸೂದೆಗೆ ಸಂಸತ್ ಒಪ್ಪಿಗೆ: ಪರಿಹಾರಧನದ ಬಗ್ಗೆ ಉಗ್ರ ಟೀಕೆ

ನವದೆಹಲಿ, ಸೆ. 2– ಸಾಮಾನ್ಯ ವಿಮೆ ರಾಷ್ಟ್ರೀಕರಣ ಮಸೂದೆಗೆ ಇಂದು ರಾಜ್ಯಸಭೆ ನೀಡಿದ ಅಂಗೀಕಾರದೊಂದಿಗೆ ಕಂಪನಿಗಳ ಮಾಲೀಕತ್ವ ವಹಿಸಿಕೊಳ್ಳುವುದರ ಮೂಲಕ ಸಾಮಾನ್ಯ ವಿಮೆ ರಾಷ್ಟ್ರೀಕರಣ ಮಾಡುವ ಸರ್ಕಾರದ ಯೋಜನೆಯನ್ನು ಸಂಸತ್ತು ಪೂರ್ಣವಾಗಿ ಅನುಮೋದಿಸಿದೆ.

ಈ ಮಸೂದೆಗೆ ಸೂಚಿಸಿದ್ದ ಎಲ್ಲ ತಿದ್ದುಪಡಿಗಳೂ ತಿರಸ್ಕೃತವಾದವು.

ಈಗಾಗಲೇ ಲೋಕಸಭೆ ಅಂಗೀಕರಿಸಿರುವ ಈ ಮಸೂದೆಯು ಭಾರತೀಯ ಸಾಮಾನ್ಯ ವಿಮಾ ಸಂಸ್ಥೆಗಳ ಷೇರುಗಳನ್ನು ಸ್ವಾಧೀನಪಡಿಸಿಕೊಂಡು ವರ್ಗಾವಣೆ ಮಾಡಲು, ಆರ್ಥಿಕ ರಂಗದ ಅಗತ್ಯಕ್ಕೆ ತಕ್ಕಂತೆ 107 ಸಂಸ್ಥೆಗಳನ್ನು ನಾಲ್ಕು ಘಟಕಗಳನ್ನಾಗಿ ಪುನರ್ ರಚಿಸಲು ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

• 74ರಲ್ಲಿ ಕಕ್ಷೆಗೆ ಭಾರತದ ಉಪಗ್ರಹ

ಬ್ಯಾಂಕಾಕ್, ಸೆ. 2– ಭಾರತವು 1974ರಲ್ಲಿ ಪ್ರಪ್ರಥಮ ಉಪಗ್ರಹವೊಂದನ್ನು ಭೂಕಕ್ಷೆಗೆ ಹಾರಿಸಿ, ಉಪಗ್ರಹ ಹಾರಿಸುವ ರಾಷ್ಟ್ರಗಳ ಸಾಲಿಗೆ ಸೇರಲಿದೆ.

250 ಕಿಲೊಗ್ರಾಂ ತೂಕದ ಈ ಉಪಗ್ರಹವನ್ನು ಭಾರತದ ವಿಜ್ಞಾನಿಗಳು ಭಾರತೀಯ ವಸ್ತುಗಳನ್ನೇ ಬಳಸಿ ಸಿದ್ಧಪಡಿಸುತ್ತಿರುವರು.

ನಾಡಿನಲ್ಲಿ ರಷ್ಯಾದ ರಾಕೆಟ್ ಮೇಲಿನಿಂದ ಕಕ್ಷೆಗೆ ಹಾರಿಬಿಡಲಾಗುವುದು. ಉಪಗ್ರಹವೊಂದನ್ನು ಕಕ್ಷೆಗೆ ಹಾರಿಸಲು ಅಗತ್ಯವಾದ ಅತ್ಯಾಧುನಿಕವಾದ ರಾಕೆಟ್ ವ್ಯವಸ್ಥೆ ಸಿದ್ಧಗೊಳಿಸಲು ಭಾರತಕ್ಕೆ ಇನ್ನೂ ಸಾಧ್ಯವಾಗದಿರುವುದೇ ಇದಕ್ಕೆ ಕಾರಣ ಎಂದು ಭಾರತದ ಎಲೆಕ್ಟ್ರಾನಿಕ್ಸ್ ಮಂಡಳಿ ಅಧ್ಯಕ್ಷ ಪ್ರೊ. ಎಂ.ಜಿ.ಕೆ.ಮೆನನ್ ತಿಳಿಸಿದ್ದಾರೆ.

ಈ ಅಣೆಕಟ್ಟೆಯ ಪ್ರಕರಣದಿಂದ ದೇಶ ಕಲಿಯಬೇಕಾದ ಪಾಠವಿದೆ

ಕಾರಮ್: ವಿಫಲವಾದ ಹೊಸ ಅಣೆಕಟ್ಟು



ವಿಶ್ಲೇಷಣೆ

ಡಾ. ಎಚ್‌.ಆರ್‌.ಕೃಷ್ಣಮೂರ್ತಿ

ಆಗಸ್ಟ್ ತಿಂಗಳ ಎರಡನೆಯ ವಾರದಲ್ಲಿ ದೇಶದಾದ್ಯಂತ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಆಚರಣೆಗಾಗಿ ಭರದಿಂದ ಸಿದ್ಧತೆಗಳು ನಡೆಯುತ್ತಿದ್ದ ಸಮಯದಲ್ಲೇ, ಮಧ್ಯಪ್ರದೇಶದ ಧಾರ್ ಮತ್ತು ಖಾರ್ಗೋನ್ ಜಿಲ್ಲೆಗಳ 18 ಹಳ್ಳಿಗಳ 40,000 ಮಂದಿ ಜೀವ ಉಳಿಸಿಕೊಳ್ಳುವ ತರಾತುರಿಯಲ್ಲಿದ್ದರು. ಯಾವುದೇ ಸಮಯದಲ್ಲಿ ಅಪ್ಪಳಿಸಬಹುದಾಗಿದ್ದ ಅನಾಹುತದ ನಿರೀಕ್ಷೆಯಲ್ಲಿ ತುದಿಗಾಲಿನಲ್ಲಿ ನಿಂತಿದ್ದ ಮಧ್ಯಪ್ರದೇಶ ಸರ್ಕಾರವು ಆಪತ್‌ರಕ್ಷಕ ಭಾರತೀಯ ಸೇನೆಯ ನೆರವನ್ನು ಕೋರಿತ್ತು. ರಾಷ್ಟ್ರೀಯ ಮತ್ತು ರಾಜ್ಯ ವಿಪತ್ತು ಪ್ರತಿಕ್ರಿಯಾ ತಂಡಗಳು ಕಾರ್ಯಾಚರಣೆಗೆ ಸಿದ್ಧವಾಗಿದ್ದವು. ರಾಜ್ಯದ ಮುಖ್ಯಮಂತ್ರಿಯವರು ಪ್ರಧಾನಮಂತ್ರಿ ಮತ್ತು ಕೇಂದ್ರ ಗೃಹ ಸಚಿವರ ಸಂಪರ್ಕದಲ್ಲಿದ್ದರು.

ಇಂತಹ ಆತಂಕ, ತುರ್ತುಪರಿಸ್ಥಿತಿಗೆ ಕಾರಣವಾಗಿದ್ದು, ಧಾರ್ ಜಿಲ್ಲೆಯ ಭರೂದ್‌ಪುರ ಅಥವಾ ಕಾರಮ್ ಅಣೆಕಟ್ಟೆಯಲ್ಲಿ ನೀರಿನ ಸೋರಿಕೆ, ಎದ್ದು ಕಾಣುವ ಬಿರುಕು ಮತ್ತು ಅಣೆಕಟ್ಟೆ ಬಿರಿಯಬಹುದಾದ ಸಾಧ್ಯತೆ. ಕಾರಮ್, ಮಧ್ಯಪ್ರದೇಶದ ಪ್ರಮುಖ ನದಿಯಾದ ನರ್ಮದೆಯ ಉಪನದಿ. ಧಾರ್ ಜಿಲ್ಲೆಯ ಧರ್ಮಪುರಿ ತಾಲ್ಲೂಕಿನಲ್ಲಿ ಕಾರಮ್ ನದಿಗೆ ಅಣೆಕಟ್ಟೆಯೊಂದನ್ನು ನಿರ್ಮಿಸಲಾಗುತ್ತಿದೆ. ₹ 305 ಕೋಟಿ ಅಂದಾಜುವೆಚ್ಚದ ಈ ಯೋಜನೆ ಪ್ರಾರಂಭವಾದದ್ದು 2018ರಲ್ಲಿ. 590 ಮೀಟರ್ ಉದ್ದ, 52 ಮೀಟರ್ ಎತ್ತರದ ಈ ಅಣೆಕಟ್ಟೆಯ ಸಂಗ್ರಹಣಾ ಸಾಮರ್ಥ್ಯ 43.98 ಮಿಲಿಯನ್ ಕ್ಯೂಬಿಕ್ ಮೀಟರ್‌ಗಳು (ಮಿಕ್ಯೂಮಿ). ಒಟ್ಟು 10,500 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸುವ ಈ ಅಣೆಕಟ್ಟೆಯ ನಿರ್ಮಾಣ ಕಾರ್ಯ ಈ ವರ್ಷದ ಜೂನ್ ತಿಂಗಳಲ್ಲಿ ಮುಗಿಯಬೇಕಿತ್ತು. ಆದರೆ ಈಗ ಶೇ 80ರಷ್ಟು ಕೆಲಸ ಮುಗಿದಿದ್ದು, ಈ ವರ್ಷದ ಮಳೆಗಾಲದಿಂದ ಮೊದಲ ಬಾರಿಗೆ ಜಲಾಶಯದಲ್ಲಿ ನೀರಿನ ಸಂಗ್ರಹ ಪ್ರಾರಂಭವಾಯಿತು.

ಆಗಸ್ಟ್ 10ರಂದು ಅಣೆಕಟ್ಟೆಯಿಂದ ನೀರು ಸೋರಲು ಪ್ರಾರಂಭವಾಗಿ, 11ರಂದು ಸೋರಿಕೆಯ ಪ್ರಮಾಣ ಗಮನಾರ್ಹವಾಗಿ ಏರಿತು. ಸೋರಿಕೆಯನ್ನು ತಡೆಯಲು ಸಾಧ್ಯವಾಗದಿದ್ದಾಗ, 13ರಂದು ಬೆಳಗಿನ ಜಾವ ಭಾರತೀಯ ಸೇನೆಯ ಎಂಜಿನಿಯರುಗಳ ತಂಡವು ನೀರಿನ ಸೋರಿಕೆಯನ್ನು ತಡೆಯುವ ಕೆಲಸ ಪ್ರಾರಂಭಿಸಿತು.

ಈ ಮಧ್ಯೆ, ಅಣೆಕಟ್ಟೆಯಲ್ಲಿ ಬಿರುಕು ಕಾಣಿಸಿಕೊಂಡಿದ್ದರಿಂದ ಮಧ್ಯಪ್ರದೇಶ ಸರ್ಕಾರವು ಅಣೆಕಟ್ಟೆಯ ಕೆಳಭಾಗದ 18 ಹಳ್ಳಿಗಳ 40,000 ಜನರನ್ನು ಲಗುಬಗೆಯಿಂದ ಸ್ಥಳಾಂತರಗೊಳಿಸಿತು. ಅಣೆಕಟ್ಟೆ ಒಡೆದು ನೀರು ಪ್ರವಾಹದೋಪಾದಿಯಲ್ಲಿ ಮುನ್ನುಗ್ಗುವ ಸಾಧ್ಯತೆ ಇದ್ದುದರಿಂದ ಧಾರ್ ಜಿಲ್ಲೆಯ ಮೂಲಕ ಸಾಗುವ ಮುಂಬೈ- ಆಗ್ರಾ ಹೆದ್ದಾರಿಯಲ್ಲಿ ವಾಹನ ಸಂಚಾರವನ್ನು ಪ್ರತಿಬಂಧಿಸಲಾಯಿತು. ಈ ಹಂತದಲ್ಲಿ ಕಾರ್ಯಾಚರಣೆಯ ತಂತ್ರವನ್ನು ಬದಲಿಸಿದ ಸರ್ಕಾರ, ಅಣೆಕಟ್ಟೆಯ ಒಂದು ಭಾಗವನ್ನು ಒಡೆದು, ನೀರು ಹೊರಹೋಗಲು ಮಾರ್ಗ ಕಲ್ಪಿಸಿ, ಕಟ್ಟೆಯ ಗೋಡೆಯ ಮೇಲೆ ನೀರಿನ ಒತ್ತಡ ತಗ್ಗಿಸಲು ನಿರ್ಧರಿಸಿತು. ಜೆಸಿಬಿ ಯಂತ್ರಗಳಿಂದ ಆರು ಮೀಟರ್ ಗೋಡೆಯನ್ನು ಎಚ್ಚರಿಕೆಯಿಂದ ಕೆಡವಿ, ಹೊರನುಗ್ಗಿದ ನೀರು ತಾತ್ಕಾಲಿಕವಾಗಿ ನಿರ್ಮಿಸಿದ ಕಾಲುವೆಯ ಮೂಲಕ ಸಾಗುವಂತೆ ಮಾಡುವ ಪ್ರಯತ್ನ ಪ್ರಾರಂಭವಾಯಿತು. ಆಗಸ್ಟ್ 14ರಂದು ಬೆಳಗಿನ ಜಾವ 3 ಗಂಟೆಗೆ, ಕೆಡವಿದ ಗೋಡೆಯ ಮೂಲಕ ಹೊರನುಗ್ಗಿದ ನೀರು, ಕಾಲುವೆಯಲ್ಲಿ ಹರಿದು ಮುಂದೆ ಮತ್ತೆ ನದಿಯನ್ನು ಸೇರಿತು. ರಾತ್ರಿ 10 ಗಂಟೆಯ ವೇಳೆಗೆ, ಅಣೆಕಟ್ಟೆಯಲ್ಲಿ ಸಂಗ್ರಹವಾಗಿದ್ದ 15 ಮಿಕ್ಯೂಮಿ ನೀರು ಹೊರಗೆ ಹರಿದಿದ್ದರಿಂದ, ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ ಇಡೀ ದೇಶಕ್ಕೆ ಮುಜುಗರವಾಗುವಂತೆ ಸಂಭವಿಸಬಹುದಾಗಿದ್ದ ಅವಘಡದಿಂದ ಜನ ಪಾರಾದರು. ಆದರೆ ಮೊದಲ ಬಾರಿಗೆ ನೀರು ಸಂಗ್ರಹವಾದ ಮಳೆಗಾಲದಲ್ಲೇ ವಿಫಲವಾದ ದೇಶದ ಮೊದಲ ಹೊಸ ಅಣೆಕಟ್ಟೆ ಎಂಬ ಕುಖ್ಯಾತಿ ಇದೀಗ ಈ ಅಣೆಕಟ್ಟೆಗೆ ಅಂಟಿದೆ.

ಅಣೆಕಟ್ಟುಗಳ ವೈಫಲ್ಯ ನಮ್ಮ ದೇಶದಲ್ಲಿ ಬಹಳ ಅಪರೂಪವೇನಲ್ಲ. ಸ್ವಾತಂತ್ರ್ಯ ಬಂದ 75 ವರ್ಷಗಳಲ್ಲಿ ಕುಸಿತ, ಬಿರಿತ, ಒಡೆತಗಳಿಂದ 42 ಅಣೆಕಟ್ಟುಗಳು ವಿಫಲವಾಗಿವೆ. 1979ರಲ್ಲಿ ಗುಜರಾತ್‌ನ ಮಚು ಅಣೆಕಟ್ಟೆಯ ವೈಫಲ್ಯದಿಂದ 12,000 ಮನೆಗಳು ನಾಶವಾಗಿ, 2,000 ಮಂದಿ ಪ್ರಾಣ ಕಳೆದುಕೊಂಡ ಭೀಕರ ನಿದರ್ಶನವಿದೆ. ಇಂತಹ ಅವಘಡಗಳನ್ನು ಅಧ್ಯಯನ ಮಾಡಿರುವ ವಿಜ್ಞಾನಿಗಳು ಅಣೆಕಟ್ಟುಗಳ ವೈಫಲ್ಯಕ್ಕೆ ನಾಲ್ಕು ಮುಖ್ಯ ಕಾರಣಗಳನ್ನು ಗುರುತಿಸಿದ್ದಾರೆ.

ಮೊದಲನೆಯದು, ಓವರ್ ಟಾಪಿಂಗ್. ಅಣೆಕಟ್ಟೆಯ ಜಲಾಶಯದಿಂದ ನೀರು ಹರಿದು ಹೋಗುವ ಕೋಡಿಯ (ಸ್ಪಿಲ್‌ವೇ) ವಿನ್ಯಾಸ ಸರಿಯಿಲ್ಲದಿದ್ದಾಗ ಅಥವಾ ಕೋಡಿ ಮುಚ್ಚಿಹೋಗಿದ್ದಾಗ, ಮಳೆಗಾಲದಲ್ಲಿ ಜಲಾಶಯದ ನೀರಿನ ಮಟ್ಟ ತ್ವರಿತಗತಿಯಲ್ಲಿ ಏರಿ, ಅಣೆಕಟ್ಟೆಯ ಮೇಲ್ಭಾಗದಲ್ಲಿ ಹರಿದು ಕಟ್ಟೆ ಕುಸಿಯುತ್ತದೆ. ಎರಡನೆಯ ಕಾರಣ, ಅಣೆಕಟ್ಟೆಯ ಅಸ್ತಿಭಾರದಲ್ಲಿ ಕಾಣಿಸಿಕೊಳ್ಳುವ ಲೋಪದೋಷ, ನ್ಯೂನತೆಗಳು. ಅಣೆಕಟ್ಟೆಯ ಕಟ್ಟಡದೊಳಗೆ ಜಿನುಗುವ ನೀರು ದೀರ್ಘಕಾಲದಲ್ಲಿ ಉಂಟುಮಾಡುವ ಕೊರೆತ, ಶಿಥಿಲತೆಯು ಮೂರನೆಯ ಮುಖ್ಯ ಕಾರಣವಾದರೆ, ನೀರನ್ನು ಸಾಗಿಸುವ ನಾಲೆ, ಕೊಳವೆಗಳು, ಏಕಮುಖ ಕವಾಟಗಳ ವೈಫಲ್ಯವು ನಾಲ್ಕನೆಯ ಕಾರಣ.



ಇವುಗಳಲ್ಲದೇ ಭೂಕಂಪನ, ಭೂಕುಸಿತ ಮುಂತಾದ ನೈಸರ್ಗಿಕ ಕಾರಣಗಳೂ ಉಂಟು. ಈ ಎಲ್ಲ ಕಾರಣಗಳ ಪರಿಚಯವಿರುವ ಕೇಂದ್ರ ಜಲ ಆಯೋಗವು ದೇಶದ ಎಲ್ಲ ಅಣೆಕಟ್ಟುಗಳ ಒಟ್ಟಾರೆ ಆರೋಗ್ಯದ ದೃಷ್ಟಿಯಿಂದ ಕೈಗೊಳ್ಳಬೇಕಾದ ಎಲ್ಲ ಕ್ರಮಗಳನ್ನು ಅನುಮಾನಕ್ಕೆ ಆಸ್ಪದವೇ ಇಲ್ಲದಂತೆ ನಿರೂಪಿಸಿದೆ. ಆದರೆ ಈ ಸಮಗ್ರ ಸೂಚನೆಗಳಲ್ಲಿ ಎಷ್ಟು ಕಾರ್ಯಗತವಾಗಿವೆ ಎಂಬುದು ಪ್ರಶ್ನಾರ್ಹ.

ನಮ್ಮ ದೇಶದಲ್ಲಿ ಬೃಹತ್ ಅಣೆಕಟ್ಟುಗಳ ಸುರಕ್ಷತೆಯ ಸ್ಥಿತಿಗತಿಗಳ ಬಗ್ಗೆ ಒಂದು ಸ್ಥೂಲಚಿತ್ರವನ್ನು 2017ರಲ್ಲಿ ಸಂಸತ್ತಿನಲ್ಲಿ ಮಂಡನೆಯಾದ ಮಹಾಲೇಖಪಾಲರ (ಸಿಎಜಿ) ವರದಿ ನೀಡುತ್ತದೆ. ಆ ವರದಿಯಂತೆ, ದೇಶದ 5,264 ಬೃಹತ್ ಅಣೆಕಟ್ಟುಗಳಲ್ಲಿ (ಇಂದಿನ ಸಂಖ್ಯೆ 5,745) ಆಪತ್ತಿನ ತುರ್ತು ಸಮಯದ ಯೋಜನೆಗಳಿರುವುದು 349 ಅಣೆಕಟ್ಟುಗಳಲ್ಲಿ ಮಾತ್ರ.

ಪ್ರತೀ ರಾಜ್ಯದಲ್ಲಿ ಇರುವ ಅಣೆಕಟ್ಟು ಸುರಕ್ಷತಾ ಸಂಸ್ಥೆ, ಮಳೆಗಾಲಕ್ಕೆ ಮುಂಚೆ ಮತ್ತು ಮಳೆಗಾಲದ ನಂತರ, ಆಯಾ ರಾಜ್ಯದಲ್ಲಿರುವ ಪ್ರತಿಯೊಂದು ಬೃಹತ್ ಅಣೆಕಟ್ಟೆಯನ್ನೂ ವಿಶದವಾದ ಪರೀಕ್ಷೆಗೆ ಒಳಪಡಿಸಿ, ಅದರ ವರದಿಯನ್ನು ಮುಂದಿನ ವರ್ಷದ ಏಪ್ರಿಲ್ ಒಳಗಾಗಿ ಕೇಂದ್ರ ಜಲ ಆಯೋಗಕ್ಕೆ ಕಳುಹಿಸಬೇಕು. ಆದರೆ ಸಿಎಜಿ ಪರಿಶೀಲಿಸಿದ 17 ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಎರಡು ರಾಜ್ಯಗಳು ಮಾತ್ರ ಈ ವರದಿಯನ್ನು ಸಲ್ಲಿಸಿದ್ದವು. ಮಧ್ಯಪ್ರದೇಶದಲ್ಲಿ 906 ಬೃಹತ್ ಅಣೆಕಟ್ಟುಗಳಿದ್ದು, ಕೇಂದ್ರ ಜಲ ಆಯೋಗದ ಸೂಚನೆಯಂತೆ ವರ್ಷದಲ್ಲಿ ಎರಡು ಬಾರಿ ಅವುಗಳ ವಿಶದ ಪರೀಕ್ಷೆ ನಡೆಯಬೇಕು. ಆದರೆ 2016-19ರ ಮೂರು ವರ್ಷಗಳಲ್ಲಿ ಸರಾಸರಿ ಶೇ 24ರಷ್ಟು ಅಣೆಕಟ್ಟುಗಳು ಮಾತ್ರ ಪರಿಶೀಲನೆಗೆ ಒಳಗಾಗಿವೆ.

ಬೃಹತ್ ಅಣೆಕಟ್ಟುಗಳ ಸುರಕ್ಷತೆಗೆ ಅಗತ್ಯವಾದ ಸಮಸ್ತ ವಿಧಿವಿಧಾನಗಳನ್ನೂ ಒಳಗೊಂಡಿರುವ 'ಅಣೆಕಟ್ಟು ಸುರಕ್ಷತಾ ಅಧಿನಿಯಮ- 2021', ರಾಷ್ಟ್ರಪತಿಗಳ ಅಂಕಿತದ ನಂತರ 2021ರ ಡಿಸೆಂಬರ್‌ನಿಂದ ವಿಧ್ಯುಕ್ತವಾಗಿ ಜಾರಿಗೆ ಬಂದಿದೆ. ಅಣೆಕಟ್ಟುಗಳ ಸುರಕ್ಷತೆಗೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ನಿರ್ದಿಷ್ಟವಾದ ಜವಾಬ್ದಾರಿಗಳನ್ನು ನೀಡಲು ಅಗತ್ಯವಾದ ಕಾನೂನು ಮತ್ತು ಸಾಂಸ್ಥಿಕ ಚೌಕಟ್ಟನ್ನು ಇದು ಒದಗಿಸಿದೆ.

ಬೃಹತ್ ಅಣೆಕಟ್ಟುಗಳ ಮೇಲೆ ಕಣ್ಗಾವಲು, ದಿನನಿತ್ಯದ ಕಾರ್ಯಾಚರಣೆ, ನಿರ್ವಹಣೆಗೆ ಅಗತ್ಯವಾದ ಎಲ್ಲ ವ್ಯವಸ್ಥೆಗಳನ್ನು ಕಲ್ಪಿಸುವ ಕೆಲಸ ನಡೆಯುತ್ತಿದೆ. ಆದರೆ ಈ ಅಧಿನಿಯಮದಲ್ಲಿ ನಿರ್ಮಾಣದ ಹಂತದಲ್ಲಿರುವ ಅಣೆಕಟ್ಟುಗಳ ಪ್ರಸ್ತಾಪವೇ ಇಲ್ಲದಿರುವುದರಿಂದ, ಕರಾಮ್‌ನಂತಹ ಅಣೆಕಟ್ಟುಗಳ ಸುರಕ್ಷತೆ ಈ ಅಧಿನಿಯಮದ ವ್ಯಾಪ್ತಿಯಿಂದ ಹೊರಗೆ ಉಳಿಯುತ್ತದೆ ಎಂಬುದನ್ನು, 'ಸೌತ್ ಏಷ್ಯಾ ನೆಟ್‌ವರ್ಕ್ ಆನ್ ಡ್ಯಾಮ್ಸ್, ರಿವರ್ಸ್ ಆ್ಯಂಡ್ ಪೀಪಲ್' ಸಂಸ್ಥೆ ಎತ್ತಿ ತೋರಿಸಿದೆ.

ಕೇಂದ್ರ ಜಲ ಆಯೋಗದ ಭಾಗವಾದ, ನ್ಯಾಷನಲ್ ರಿಜಿಸ್ಟರ್ ಆಫ್ ಲಾರ್ಜ್ ಡ್ಯಾಮ್ಸ್ ಮೂಲದಂತೆ, ನಮ್ಮ ದೇಶದಲ್ಲಿ ನಿರ್ಮಾಣದ ವಿವಿಧ ಹಂತಗಳಲ್ಲಿರುವ 447 ಬೃಹತ್ ಅಣೆಕಟ್ಟುಗಳಿದ್ದು, ಸುರಕ್ಷತೆಯ ದೃಷ್ಟಿಯಿಂದ ಅವುಗಳನ್ನು ಈ ಅಧಿನಿಯಮದ ವ್ಯಾಪ್ತಿಗೆ ತ್ವರಿತವಾಗಿ ತರಬೇಕಾದ ಅಗತ್ಯವಿದೆ. ಇದು, ಕಾರಮ್ ಅಣೆಕಟ್ಟೆಯ ಪ್ರಕರಣದಿಂದ ದೇಶ ಕಲಿಯಬೇಕಾದ ಪಾಠ ಎಂಬುದು ತಜ್ಞರ ಅಭಿಪ್ರಾಯ.

ಚುರುಮುರಿ



ಚೀತಾನ್ವೇಷಣೆ

• ನಾರಾಯಣ ರಾಯಚೂರ್

'ರೀ, ಬೆಳಗಾವಿಯಿಂದ ಫ್ರೆಂಡ್ ಬಕುಳಾ ಫೋನ್ ಮಾಡಿದ್ಲು, ಅಲ್ಲಿ ಚಿರತೆ ಕಾಟ ಒಂದು ತಿಂಗಳಾದರೂ ನಿಂತಿಲ್ವಂತೆ. ಎಲ್ಲರೂ ಮನೆಬಾಗಲು ಹಾಕ್ಕೊಂಡು ಕೂತಿದಾರಂತೆ'.

'ಆ ಚೀತಾ... ಇಂಗ್ಲೀಷೇ ಬರ್ತದೆ. ಆ ಚಿರತೆಯ ಇಂಚಿಂಚು ಮಾಹಿತಿ ಹೇಳ್ತೇನೆ ಕೇಳು. ಅರಣ್ಯ ಇಲಾಖೆ, ಪೊಲೀಸು, ಸಕ್ರೆಬೈಲಿನ ಆನೆ, ಜೆಸಿಬಿ ಏನೆಲ್ಲ ತಂದು ಬೆನ್ನಟ್ಟಿಕೊಂಡು ಹೋದರೂ ಕೈಗೆ ಸಿಗ್ತಾಯಿಲ್ಲವಂತೆ, ಸುತ್ತಲಿನ ಜಿಲ್ಲೆಗಳಲ್ಲೂ ಚಿರತೆ ಕಾಟವಂತೆ!'

'ಅದರ ಕಷ್ಟ ಏನೋ? ಯಾರ ಜೊತೆ ಜಗಳ ಮಾಡಿಕೊಂಡು 'ಕೆಟ್ಟು ಪಟ್ಟಣ ಸೇರು' ಎಂಬಂತೆ ಇಲ್ಲಿಗೆ ಬಂದಿದೆಯೋ?' ಮಡದಿಯ ಕಳಕಳಿ.

'ಅದು ಅದರ ಹೆಂಡ್ತಿ ಜೊತೆ ಜಗಳ ಮಾಡಿಕೊಂಡೇ ಬಂದಿರ್ಬೇಕು! ಅದು ಗಂಡು ಚಿರತೆಯಂತೆ- ಅರಣ್ಯ ಇಲಾಖೆಯವರು ಅದರ ಲಿಂಗ ಪತ್ತೆ ಮಾಡಿ ಹನಿಟ್ರ್ಯಾಪ್ ಮಾಡಲು ಸಿದ್ಧತೆ ನಡೆಸಿದಾರಂತೆ ಕಣೆ, ಅದರದೇ ಚಾನ್ಸು'.

'ನಿಮಗಂತೂ ಎಲ್ಲದರಲ್ಲೂ ಮೋಜು-ಮಸ್ತಿ, ಅಲ್ಲಿ ಜನ ಒದ್ದಾಡ್ತಿದ್ದಾರೆ, ಅದೂ, ಗಾಲ್ಫ್ ಕ್ಲಬ್ ಗ್ರೌಂಡಲ್ಲಿ ಠಿಕಾಣಿ ಹೂಡಿದೆಯಂತ್ರೀ!'

'ಹೋ! ಅದು ರಿಚ್ ಚೀತಾನೇ ಇರಬೇಕು. ಅದಕ್ಕೇ ಶ್ರೀಮಂತರ ಆಟದ ಮೈದಾನದಲ್ಲೇ ಆಟ ಆಡಿಸ್ತಿದೆ. ಆಗಲೇ 50 ಲಕ್ಷ ಖರ್ಚು ಮಾಡಿಸಿದೆಯಂತೆ!'

'ಚಿರತೆ, ನೀನೇಕೆ ಕಾಡ ದಾರಿಯ ಮರೆತೆ?! ಅಂತ ಕವನ ಕಟ್ಟೋದು; ಅದರ ಚಿತ್ರ, ಆಧಾರ್ ಕಾರ್ಡ್ ಮಾಡಿ ಜಾಲತಾಣದಲ್ಲಿ ಹಾಕೋದು ನಡೆದಿದೆಯಂತೆ'.

'ಆಧಾರ್ ಕಾರ್ಡ್ ಮಾಡಿದ್ಮೇಲೆ ಕುಲ ಗೋತ್ರಾನೂ ಜಾಲಾಡಿರಬೇಕು?'

'ಹೌದ್ಹೌದು, ಫ್ರೆಂಡ್ ಹೇಳ್ತಿದ್ಲು- ಚಿರತೆ ಸಿಂಹ ರಾಶಿದಂತೆ!'

'ಅದಕ್ಕೇ... ಆನೆ ತಂದಿರಬೇಕು ಹಿಡಿಯೋಕೆ, ಗಜಕೇಸರಿ ಯೋಗ!'

'ಯೋಗಾನೊ, ರೋಗಾನೊ? ವೀರಪ್ಪನ್ ಹಿಡಿಯೋಕೂ ಇಷ್ಟು ಕಷ್ಟಪಟ್ಟಿರಲಿಲ್ಲವೇನೊ?'

'ಬಡಪಾಯಿ ಚಿರತೆ ಏನ್ಮಾಡತ್ತೆ ಹೇಳು? ಅದು ವಾಸ ಮಾಡೋ ಕಾಡನ್ನ ನಾವು ಕಬಳಿಸ್ತಾಯಿದೀವಿ, ಬೆಟ್ಟ ಕೊರೀತಾಯಿದೀವಿ'.

'ನೀವೀಗ ಕೊರಿಯೋದನ್ನ ನಿಲ್ಸಿ, ಸ್ನಾನಕ್ಕೇಳಿ'.

ಸಂಗತ

ಪ್ರಕೃತಿಯೆಂಬ ಬೆರಗಿನ ಶಿಕ್ಷಕ

ಪ್ರಾಪಂಚಿಕ ಹಂಗಿಲ್ಲದ ಪ್ರಕೃತಿಯಲ್ಲಿ ನಾವು ನಿಜವಾದ ಗುರುವನ್ನು ಕಾಣಬಹುದು

• ಡಾ. ಜ್ಯೋತಿ

ಶಿಕ್ಷಕರ ದಿನಾಚರಣೆ (ಸೆ. 5) ಸಮೀಪಿಸುತ್ತಿರುವಂತೆ, ಶಿಕ್ಷಕ ವೃತ್ತಿಯ ಹಿರಿಮೆ ಮತ್ತು ವರ್ತಮಾನ ಕಾಲದಲ್ಲಿ ಅದರ ಪ್ರಸ್ತುತತೆಯ ಕುರಿತು ಸಾರ್ವಜನಿಕ ವೇದಿಕೆಗಳಲ್ಲಿ ಬಹಳಷ್ಟು ಚರ್ಚೆಗಳು ನಡೆಯುತ್ತವೆ. ಆದರ್ಶ ಶಿಕ್ಷಕ ಯಾರು, ಗುರು- ಶಿಷ್ಯ ಸಂಬಂಧಗಳು ಹೇಗಿರಬೇಕು ಎನ್ನುವ ಸಾಂದರ್ಭಿಕ ಪ್ರಶ್ನೆಗಳು ಏಳುತ್ತವೆ.

ಈ ಪ್ರಸ್ತುತತೆಯಲ್ಲಿ, ವರ್ತಮಾನದ ವಸ್ತುನಿಷ್ಠ ಮತ್ತು ಯಾಂತ್ರಿಕ ಪ್ರಪಂಚದಲ್ಲಿ ನಿಸ್ವಾರ್ಥದಿಂದ ವಿದ್ವತ್ತನ್ನು ಧಾರೆಯೆರೆಯುವ ಗುರುಗಳನ್ನು, ಜ್ಞಾನಾರ್ಜನೆಯ ಖುಷಿಗಾಗಿ ಕಲಿಯುವ ಹೆಬ್ಬಯಕೆಯನ್ನು ಬೆಳೆಸಿಕೊಂಡ ಶಿಷ್ಯಂದಿರನ್ನು ನಾವು ಕಾಣಬಹುದೇ ಎನ್ನುವ ಪ್ರಶ್ನೆಗೆ ಉತ್ತರ ಹುಡುಕಿದರೆ, ಗುರು-ಶಿಷ್ಯರಿಬ್ಬರೂ ಕಲಿಕಾ ಪ್ರಕ್ರಿಯೆಯಲ್ಲಿ ಪರಕೀಯತೆ ಅನುಭವಿಸುತ್ತಿರುವುದನ್ನು ಕಾಣುತ್ತೇವೆ.

ಗುರುವೇ ಜ್ಞಾನದ ಮೂಲವೆಂದು ಪರಿಗಣಿಸಿದ್ದ ಕಾಲದಲ್ಲಿ, ಹಲವಾರು ವರ್ಷಗಳ ನಿರಂತರ ಶ್ರದ್ಧೆಯಿಂದ ಕಲಿತ ವಿದ್ಯೆಯು ಶಿಷ್ಯಂದಿರನ್ನು ಮುಂದಿನ ಬದುಕಿಗೆ ಅಣಿಯಾಗಿಸುತ್ತಿತ್ತು. ಆದರೆ, ನಾಗರಿಕತೆ ವಿಸ್ತಾರವಾದಂತೆ, ವಿದ್ಯಾರ್ಜನೆಗೊಂದು ನಿರ್ದಿಷ್ಟ ಚೌಕಟ್ಟು ದೊರೆತು ಪ್ರಕೃತಿಯಿಂದ ಮನುಷ್ಯ ದೂರವಾಗುತ್ತಾ, ಈ ಮೂಲಕ ಬದುಕನ್ನು ಸೀಮಿತ ದೃಷ್ಟಿಯಿಂದ ನೋಡುತ್ತಾ, ಬಹುತೇಕ ಸಂಬಂಧಗಳು ವ್ಯಾವಹಾರಿಕ ಆಗಿರುವುದನ್ನು ನಾವು ಗಮನಿಸಬಹುದು. ಈ ಹಿನ್ನೆಲೆಯಲ್ಲಿ, ವಿದ್ಯಾರ್ಥಿಯ ಏಳ್ಗೆಯಲ್ಲಿ ತನ್ನ ಜೀವನದ ಸಾರ್ಥಕತೆಯನ್ನು ಕಾಣುವ ಗುರುವಾಗಲೀ, ಶಿಕ್ಷಣದಿಂದ ಸಿಗುವ ಆರ್ಥಿಕ ಉಪಯೋಗವನ್ನು ಪರಿಗಣಿಸದೆ ಜ್ಞಾನ ಉದ್ದೀಪನಕ್ಕಾಗಿ ಕಲಿಯುವುದರಲ್ಲಿ ಖುಷಿ ಕಾಣುವ ಶಿಷ್ಯಂದಿರಾಗಲೀ ಕಾಣಸಿಗುವುದು ಅಪರೂಪ ಎನ್ನಬಹುದು.

ಮಹಾಭಾರತದಲ್ಲಿ, 'ಸರಿಯಾದ ಜೀವನಮಾರ್ಗ ಯಾವುದೆಂದು ಹೇಗೆ ತಿಳಿಯುವುದು' ಎನ್ನುವ ಯಕ್ಷಪ್ರಶ್ನೆಗೆ, ಯುಧಿಷ್ಠಿರ ಹೀಗೆ ಉತ್ತರಿಸುತ್ತಾನೆ: 'ವಾದ-ವಿವಾದಗಳಿಂದಲ್ಲ- ಅವು ಎಂದಿಗೂ ನಮ್ಮನ್ನು ಅಂತಿಮ ನಿರ್ಣಯದತ್ತ ಕೊಂಡೊಯ್ಯುವುದಿಲ್ಲ. ಗುರುಗಳಿಂದಲ್ಲ- ಅವರು ತಮ್ಮ ಅಭಿಪ್ರಾಯಗಳನ್ನಷ್ಟೇ ಕೊಡಬಲ್ಲರು. ಸರಿಯಾದ ಮಾರ್ಗವನ್ನು ತಿಳಿದುಕೊಳ್ಳಬೇಕೆಂದರೆ, ಮನುಷ್ಯನು ಮೌನ ಮತ್ತು ಏಕಾಂತದಲ್ಲಿ ತನ್ನ ಬದುಕನ್ನು ಪರಾಮರ್ಶಿಸಬೇಕು'. ಈ ನೆಮ್ಮದಿಯ ಮೌನ ಮತ್ತು ಏಕಾಂತ ನಮಗೆ ಪ್ರಕೃತಿಯ ಮಡಿಲಲ್ಲಿ ಸಿಗುತ್ತವೆ. ಕಲಿಯುವ ಆಸಕ್ತಿಯಿರುವ ಎಲ್ಲರಿಗೂ ಶ್ರೇಷ್ಠ ಗುರುಗಳ ಮಾರ್ಗದರ್ಶನ ಸಿಗುತ್ತದೆಯೆಂದು ಹೇಳಲಾಗದು. ಈ ದಿಸೆಯಲ್ಲಿ, ಎಲ್ಲರಿಗೂ ಲಭ್ಯವಿರುವ ಪ್ರಕೃತಿಯನ್ನು ಗುರುವಿನ ಸ್ಥಾನದಲ್ಲಿಟ್ಟು ತದೇಕಚಿತ್ತದಿಂದ ಗಮನಿಸಿದರೆ, ತರಗತಿಗಿಂತ ಹೆಚ್ಚಿನ ಜೀವನ ಕೌಶಲ ಮತ್ತು ಜ್ಞಾನ ಗಳಿಸಲು ಸಾಧ್ಯವಾಗಬಹುದು.

ಪ್ರಕೃತಿಯಲ್ಲಿನ ಪ್ರತೀ ಮಾನವೇತರ ಜೀವಿಯು ಕಲಿಸುವ ಶ್ರೇಷ್ಠ ಜೀವನ ಮೌಲ್ಯಗಳೆಂದರೆ, ಶಾಂತಿ, ಮೌನ, ತಾಳ್ಮೆ, ಸಂಯಮ, ಪುನರಾವರ್ತನೆ, ನಿರಂತರತೆ, ಹೋರಾಟದ ಛಲ, ವರ್ತಮಾನದಲ್ಲಿ ಬದುಕುವ ಅಗತ್ಯ, ಆಲಸ್ಯರಹಿತ ಬದುಕು, ಸಮಯಪ್ರಜ್ಞೆ, ಕೂಡಿ ಬಾಳುವುದು ಇತ್ಯಾದಿ. ಉದಾಹರಣೆಗೆ: ಮರ. ಇದು, ಹೂವು, ಹಣ್ಣು, ನೆರಳು, ಆಮ್ಲಜನಕ, ಜೀವಿಗಳಿಗೆ ಆಶ್ರಯತಾಣ, ಪುನರ್‌ಸೃಷ್ಟಿಗೆ ಕಾರಣವಾಗುವುದಲ್ಲದೆ ಹಲವಾರು ಜೀವನಮೌಲ್ಯಗಳನ್ನು ಕೊಡುತ್ತದೆ. ಇನ್ನೊಬ್ಬರಿಂದ ಏನನ್ನಾದರೂ ನಿರೀಕ್ಷಿಸುವ ಬದಲು, ಸ್ವತಃ ನೀಡುವುದು ಉದಾತ್ತ ಎನ್ನುತ್ತದೆ. ಆಕಾಶಕ್ಕೆ ಕೈಚಾಚಿದಷ್ಟೂ ಬೇರು ಆಳಕ್ಕಿಳಿಯುತ್ತಾ ಹೋಗುತ್ತದೆ. ಈ ಮೂಲಕ ಸಮತೋಲನ ಕಾಪಾಡಿಕೊಳ್ಳಬೇಕು ಎನ್ನುತ್ತದೆ.



ಹೂವು, ಹಣ್ಣಿನಂತಹ ಫಲಗಳು ತಕ್ಷಣ ಸಿಗುವುದಿಲ್ಲ, ದೀರ್ಘಾವಧಿ ಕಾಯುವ ತಾಳ್ಮೆ ಮುಖ್ಯ ಎನ್ನುತ್ತದೆ. ಋತುಗಳು ಬದಲಾದಂತೆ ತನ್ನನ್ನು ತಾನು ಮಾರ್ಪಡಿಸಿಕೊಳ್ಳುತ್ತಿರಬೇಕು ಎನ್ನುತ್ತದೆ (ಎಲೆಗಳನ್ನು ತ್ಯಜಿಸುವುದು ಅಥವಾ ಹೆಚ್ಚಿಸಿಕೊಳ್ಳುವುದರ ಮೂಲಕ). ಬಾಹ್ಯ ಪ್ರಪಂಚದ ಬದಲಾವಣೆಗೆ ಸ್ಪಂದಿಸಿ ಮಾರ್ಪಡಿಸಿಕೊಳ್ಳದೇ ಹೋದರೆ ಅಪ್ರಸ್ತುತವಾಗಬಹುದು ಎನ್ನುತ್ತದೆ. ಬದುಕು ಮಳೆಯನ್ನೂ ಕೊಡುತ್ತದೆ, ಬಿಸಿಲನ್ನು ಕೂಡ. ಎರಡನ್ನೂ ಸಮಾನವಾಗಿ ಸ್ವೀಕರಿಸಬೇಕು ಎನ್ನುತ್ತದೆ. ಬಾಹ್ಯಜಗತ್ತು ತನ್ನನ್ನು ಎಷ್ಟು ಸಾರಿ ಮುಗಿಸಲು ಪ್ರಯತ್ನ ಮಾಡಿದರೂ ಪುನಃ ಪುನಃ ಚಿಗುರುವ ಇಚ್ಛಾಶಕ್ತಿ ಉಳಿಸಿಕೊಂಡಿರಬೇಕು ಎನ್ನುತ್ತದೆ.

ಹೀಗೆ, ಮನುಷ್ಯೇತರ ಪ್ರತೀ ಜೀವಿಯಲ್ಲಿ ನಾವು ಅಪ್ರತಿಮ ಜೀವನ್ಮುಖಿ ಹೋರಾಟವನ್ನು ಕಾಣಬಹುದು. ನಿತ್ಯ ಮರುಹುಟ್ಟು ಮತ್ತು ನವೀಕರಣಗೊಳ್ಳಬೇಕಾದ ಅನಿವಾರ್ಯವನ್ನು ಕಲಿಸುವ ಪ್ರಕೃತಿಯ ವಿಸ್ಮಯವು ಕವಿ ಬೇಂದ್ರೆಯವರ 'ನಿದ್ದೆಗೊಮ್ಮೆ ನಿತ್ಯ ಮರಣ, ಎದ್ದ ಸಲ ನವೀನ ಜನನ ನಮಗೆ ಏಕೆ ಬಾರದೋ...' ಎನ್ನುವ ಸಾಲಿನಲ್ಲಿ ಅಡಕವಾಗಿದೆ. ಪ್ರಾಪಂಚಿಕ ಹಂಗಿಲ್ಲದ ಪ್ರಕೃತಿಯಲ್ಲಿ ನಾವು ನಿಜವಾದ ಗುರುವನ್ನು ಕಾಣಬಹುದು.

ಹಾಗೆಯೆ, ನದಿಗಳು ತಾವು ತಲುಪಬೇಕಾದ ಹಾದಿಯಲ್ಲಿ ಸಿಗುವ ಎಲ್ಲಾ ಅಡೆತಡೆಗಳು, ಜೊತೆಯಾಗುವ ಮಾಲಿನ್ಯಗಳನ್ನೆಲ್ಲಾ ಮೀರಿ ಸಮುದ್ರ ಮುಟ್ಟುವಂತೆ, ನಮ್ಮ ಪ್ರಯತ್ನಗಳಲ್ಲಿ ನಿರಂತರತೆ ಕಾಯ್ದುಕೊಳ್ಳುತ್ತಾ ಅರ್ಥಪೂರ್ಣವಾಗಿ ಬದುಕುವುದನ್ನು ಅಥವಾ ಅರಣ್ಯ ನ್ಯಾಯದಲ್ಲಿ ದುರ್ಬಲರು ಮೊದಲು ಬೇಟೆಯಾಗುವುದನ್ನು ಗಮನಿಸುತ್ತಾ, ನಾವು ಎಚ್ಚರ ಕಾಯ್ದುಕೊಳ್ಳಬೇಕು ಎನ್ನುವುದನ್ನು ಕಲಿಯಬಹುದು.

ಆದ್ದರಿಂದ, ಭೂಮಿ- ಆಕಾಶ, ಕಾಡು- ಹೊಲ, ಸರೋವರ- ನದಿಗಳು, ಪರ್ವತ- ಸಮುದ್ರ ಇವೆಲ್ಲವೂ ಅತ್ಯುತ್ತಮ ಶಿಕ್ಷಕರು. ನಾವು ಪುಸ್ತಕಗಳಿಂದ ಕಲಿಯುವುದಕ್ಕಿಂತ ಹೆಚ್ಚಿನದನ್ನು ಕಲಿಸುತ್ತವೆ. ಅನನ್ಯವಾದ ಜೀವನತಾತ್ಪರ್ಯ ಕಲಿಸುವ ಜಗತ್ತಿನ ಮೊದಲ ಶಿಕ್ಷಕ ಎಂದರೆ ಪ್ರಕೃತಿ.

ವಾಚಕರ ವಾಣಿ

ರಸ್ತೆ ದುರಸ್ತಿ ಆಗಬೇಕೆಂದರೆ...

ಯಾವುದಾದರೂ ಸ್ಥಳಕ್ಕೆ ಪ್ರಧಾನಿ ಅಥವಾ ಮುಖ್ಯಮಂತ್ರಿ ಭೇಟಿ ನೀಡುತ್ತಾರೆ ಎಂದರೆ, ಅಲ್ಲಿ ಎಲ್ಲವೂ ಶಿಸ್ತುಬದ್ಧವಾಗಿ ಇವೆ ಎಂದು ಬಿಂಬಿಸುವಂತಹ ರೀತಿಯಲ್ಲಿ ಕೆಲಸಗಳು ನಡೆಯುತ್ತವೆ. ವರ್ಷಗಳಿಂದ ಸ್ಥಗಿತಗೊಂಡಿದ್ದ ರಸ್ತೆ ಕಾಮಗಾರಿ, ಬೀದಿದೀಪ ದುರಸ್ತಿಯಂತಹ ಕಾರ್ಯಗಳು ಕೂಡಲೇ ಅಚ್ಚುಕಟ್ಟಾಗಿ ನಡೆಯುತ್ತವೆ. ಈ ಬಾರಿಯ ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ರಾಜ್ಯಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ, ಬೆಂಗಳೂರಿನ ರಸ್ತೆಯೊಂದನ್ನು ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಅಭಿವೃದ್ಧಿಪಡಿಸಲಾಗಿತ್ತು. ಈ ನೆಪದಲ್ಲಾದರೂ ರಸ್ತೆ ಕಾಮಗಾರಿ ನಡೆಯಿತು ಎಂದು ಜನ ಖುಷಿಪಟ್ಟುಕೊಂಡರಾದರೂ ಪ್ರಧಾನಿ ಬಂದು ಹೋದ ಮೂರೇ ದಿನಗಳಲ್ಲಿ ಆ ರಸ್ತೆ ದುಃಸ್ಥಿತಿಗೆ ತಲುಪಿದ್ದು ನೋಡಿ ಬೇಸರವಾದುದು ಸಹಜ.

ಇದೀಗ ಮಂಗಳೂರಿಗೆ ಶುಕ್ರವಾರ ಪ್ರಧಾನಿ ಭೇಟಿ ಹಿನ್ನೆಲೆಯಲ್ಲಿ, ಗುಂಡಿಗಳಿಂದ ಹಾಳಾಗಿದ್ದ ರಸ್ತೆಗಳು ಮರುಹುಟ್ಟು ಪಡೆದಿವೆ ಎಂದು ವರದಿಯಾಗಿದೆ. ಆದರೆ, ಅಪಘಾತಗಳಿಗೆ ಕಾರಣವಾಗುತ್ತಿದ್ದ ರಸ್ತೆಗಳ ದುರಸ್ತಿಗೆ ನಾಗರಿಕರು ಎಷ್ಟೋ ಸಲ ಆಗ್ರಹಿಸಿದ್ದರೂ ಸ್ಪಂದನೆ ಸಿಕ್ಕಿರಲಿಲ್ಲ. ಹಾಗಿದ್ದರೆ, ಇಂತಹ ಕಾಮಗಾರಿಗಳು ನಡೆಯಲು ಪ್ರಮುಖ ವ್ಯಕ್ತಿಗಳೇ ಸ್ಥಳಕ್ಕೆ ಭೇಟಿ ನೀಡಬೇಕೆ ಎಂಬ ಪ್ರಶ್ನೆ ಸಹಜವಾಗಿಯೇ ಮೂಡುತ್ತದೆ.

ಆನಂದ ಜೇವೂರ್, ಕಲಬುರಗಿ

ಥೀಮ್ ಪಾರ್ಕ್: ರಾಜಕೀಯ ಬೇಡ

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಹತ್ತಿರ 24 ಎಕರೆ ಪ್ರದೇಶದಲ್ಲಿ 30 ಕೋಟಿ ವೆಚ್ಚದಲ್ಲಿ ಕೆಂಪೇಗೌಡ ಥೀಮ್ ಪಾರ್ಕ್ ನಿರ್ಮಾಣಕ್ಕಾಗಿ ಭೂಮಿಪೂಜೆ ನಡೆದಿರುವುದು ವರದಿಯಾಗಿದೆ. ಈ ಪಾರ್ಕಿನಲ್ಲಿ ಕೆಂಪೇಗೌಡರ 108 ಅಡಿ ಎತ್ತರದ ಕಂಚಿನ ಪ್ರತಿಮೆ ನಿರ್ಮಿಸುವುದಾಗಿ ಸಚಿವರು ಹೇಳಿದ್ದಾರೆ. ಶಾಂತಿ ಮತ್ತು ವೈರಾಗ್ಯದ ಸಂದೇಶ ಸಾರಿದ ಬಾಹುಬಲಿಯ 57 ಅಡಿಗಳ ಏಕಶಿಲಾ ವಿಗ್ರಹ ಶ್ರವಣಬೆಳಗೊಳದಲ್ಲಿದೆ ಮತ್ತು ಇದು ವಿಶ್ವವಿಖ್ಯಾತಿ ಪಡೆದಿದೆ. ಇದಕ್ಕಿಂತ ಎತ್ತರದ ಪ್ರತಿಮೆಗಳಿಗೆ ಅರ್ಥವಿದೆಯೇ ಎಂದು ರಾಜ್ಯದ ಜನ ಪ್ರಶ್ನಿಸಿಕೊಳ್ಳಬೇಕು. ಥೀಮ್ ಪಾರ್ಕ್ ಮಾಡಿ, ಕೆಂಪೇಗೌಡರ ಪ್ರತಿಮೆಯನ್ನೂ ಸ್ಥಾಪಿಸಿ. ಆದರೆ 108 ಅಡಿಯ ಕಂಚಿನ ಪ್ರತಿಮೆ ಮತ್ತು ಇದಕ್ಕಾಗಿ ಕೋಟ್ಯಂತರ ರೂಪಾಯಿ ಖರ್ಚು ಮಾಡುವುದು ಪ್ರಶ್ನಾರ್ಹವಾಗಿದೆ. ಇದರ ಅಗತ್ಯವಿದೆಯೇ ಎಂದು ಆಲೋಚಿಸಬೇಕಾಗಿದೆ.

ಈ ಪ್ರತಿಮೆ ಪ್ರತಿಷ್ಠಾಪನೆಗಾಗಿ ರಾಜ್ಯದ ಎಲ್ಲ ಜಿಲ್ಲೆಗಳ ಕೆರೆ-ಕಟ್ಟೆಗಳಿಂದ ಪವಿತ್ರ ಜಲ ಮತ್ತು ಮಣ್ಣನ್ನು ಸಂಗ್ರಹಿಸಲಾಗುತ್ತದೆ ಎಂದು ವರದಿಯಾಗಿದೆ. ಯಾವ ಕೆರೆ ಕಟ್ಟೆಯ ನೀರೂ ಕುಡಿಯಲು ಯೋಗ್ಯವಾಗಿಲ್ಲ. ಹಾಗಿರುವಾಗ ಅದು ಪವಿತ್ರ ಜಲ ಹೇಗಾಗುತ್ತದೆ? ಇವುಗಳನ್ನು ಸಂಗ್ರಹಿಸುವ ಕಾರ್ಯಕ್ರಮದ ಮೂಲಕ ಬಿಜೆಪಿ ತನ್ನ ಚುನಾವಣಾ ಪ್ರಚಾರ ಮಾಡುತ್ತಿದೆ ಎಂಬುದರಲ್ಲಿ ಅನುಮಾನವಿಲ್ಲ.

ಈ.ಬಸವರಾಜು, ಬೆಂಗಳೂರು

ನೋಡಬನ್ನಿ

ನದಿ ಹೊಳೆ ಜಲಪಾತ
ನೋಡಲೆಂದು ಹೋಗಲೇಬೇಕೆಂದಿಲ್ಲ
ಗುಡ್ಡ ಬೆಟ್ಟ ಮಲೆನಾಡಿಗೆ...
ಎಲ್ಲೆಂದರಲ್ಲಿ ಪ್ರತ್ಯಕ್ಷ
ಬನ್ನಿ, ಮಳೆಗಾಲದಲ್ಲಿ ಒಮ್ಮೆ
ನಮ್ಮೂರಿನ ರೋಡಿಗೆ...!

ಆರ್.ಸುನೀಲ್, ತರೀಕೆರೆ

ಕಲ್ಯಾಣ ಕಾರ್ಯ: ಆತ್ಮಾವಲೋಕನ ಆಗಲಿ

ಭಾರತೀಯ ಗರ್ಭಿಣಿ ಪ್ರವಾಸಿ ತೀವ್ರ ಅನಾರೋಗ್ಯಕ್ಕೀಡಾದಾಗ, ಸಕಾಲಿಕವಾಗಿ ಆರೋಗ್ಯ ಸೇವೆಗಳು ಲಭ್ಯವಾಗದೇ ಮೃತಪಟ್ಟ ಕಾರಣದಿಂದ, ಪೋರ್ಚುಗಲ್ ಆರೋಗ್ಯ ಸಚಿವರ ರಾಜೀನಾಮೆ ಪಡೆದ ಪ್ರಸಂಗ ದೊಡ್ಡ ಗಮನಾರ್ಹ ಸುದ್ದಿ. ಇಂತಹ ಪ್ರಸಂಗಗಳಿಂದ ನೈತಿಕತೆ, ಸ್ವಾಭಿಮಾನ, ಮಾನವೀಯತೆ ಇರುವವರು ಕಲಿಯಬೇಕಾದದ್ದು ಬಹಳಷ್ಟಿದೆ. ವಿಶ್ವದ ಅತ್ಯಂತ ಶ್ರೀಮಂತ ರಾಷ್ಟ್ರಗಳ ಪೈಕಿ ಒಂದು ಎಂದು ಗುರುತಿಸಿಕೊಂಡಿರುವ ಪೋರ್ಚುಗಲ್, ಆರೋಗ್ಯ ರಕ್ಷಣೆಗೆ ಹೆಚ್ಚು ಮುತುವರ್ಜಿ ವಹಿಸಿದ ರಾಷ್ಟ್ರ. ಸದ್ಯ ರಾಜೀನಾಮೆ ನೀಡಿರುವ ಸಚಿವೆ ಕೋವಿಡ್ ಸಂದರ್ಭದಲ್ಲಿ ಅತ್ಯುತ್ತಮ ಕಾರ್ಯ ನಿರ್ವಹಣೆಗೆ ಹೆಸರಾಗಿದ್ದವರು.

ಈ ಪ್ರಕರಣದಿಂದ ಒಂದು ರಾಷ್ಟ್ರ ಹೇಗೆ ಘನತೆ, ಗೌರವಕ್ಕೆ, ಮಾನವೀಯತೆಗೆ ಮಾನ್ಯತೆ ನೀಡುತ್ತದೆ, ಮಾನವಾಭಿವೃದ್ಧಿ ಸೂಚ್ಯಂಕಗಳ ಕುರಿತು ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಹೇಗೆ ಮುಂಚೂಣಿ ನೆಲೆಯಲ್ಲಿ ನಿಲ್ಲುತ್ತವೆ ಎಂಬುದು ಬಹಿರಂಗವಾಗಿದೆ. ನಮ್ಮಲ್ಲಿ ಸುಸ್ಥಿರ ಅಭಿವೃದ್ಧಿ ಯೋಜನೆಗಳು, ಕಾರ್ಯಕ್ರಮಗಳ ಹೆಸರಿನಲ್ಲಿ ಕೋಟ್ಯಂತರ ಹಣ ಪ್ರತಿವರ್ಷ ವಿನಿಯೋಗವಾಗುತ್ತದೆ. ಆದರೆ, ದೇಶದಲ್ಲಿನ ಎಷ್ಟೋ ಮಂದಿ ಸಾಕ್ಷರರಿಗೂ ಶಿಕ್ಷಣ, ಆರೋಗ್ಯ ಸಂಪನ್ಮೂಲಗಳು, ಲಿಂಗತ್ವದಂತಹ ವಿಷಯಗಳಿಗೆ ಇರುವ ಆದ್ಯತೆ, ಕಾರ್ಯಕ್ರಮಗಳು, ಸೇವೆ, ಸವಲತ್ತುಗಳ ಕುರಿತು ಮಾಹಿತಿ ಇರುವುದಿಲ್ಲ. ತಂತ್ರಜ್ಞಾನ ಮುಂದುವರಿದಿದ್ದರೂ ಇಂತಹ ಪರಿಸ್ಥಿತಿ ಇರುವುದು ದುರದೃಷ್ಟಕರ. ಆಡಳಿತ ವ್ಯವಸ್ಥೆಯು ಸ್ಪಂದನಶೀಲವಾಗಬೇಕಿದೆ. ಜನಪರ ಕಲ್ಯಾಣ ಕಾರ್ಯಗಳನ್ನು ರೂಪಿಸುವಲ್ಲಿ, ಅನುಷ್ಠಾನ ಮಾಡುವಲ್ಲಿ, ನಿರೀಕ್ಷಿತ ಫಲಿತಾಂಶಗಳನ್ನು ಕಂಡುಕೊಳ್ಳುವಲ್ಲಿನ ಪ್ರಕ್ರಿಯೆ ಹಾಗೂ ಕಾರ್ಯತಂತ್ರಗಳ ಕುರಿತು ವಿಮರ್ಶೆ ಮಾಡಿಕೊಳ್ಳಬೇಕಾದ ಅವಶ್ಯಕತೆ ಇದೆ.

ಸಿ.ವಿಜಯಕುಮಾರ್, ಮೈಸೂರು

ಹೊಣೆ ಅರಿತು ಬದುಕು ನಡೆಸೋಣ

ಈಚೆಗೆ ಸುರಿದ ಭಾರಿ ಮಳೆಯಿಂದ ಬರದ ನಾಡಿನಲ್ಲೂ ಜಲಸಿರಿ ಉಕ್ಕಿಹರಿದಿದೆ. ವಾಡಿಕೆ ಮಳೆ ಸುರಿಯುವುದು ಕೂಡ ಅಪರೂಪ ಎಂಬಂತಾಗಿರುವ ಬಯಲುಸೀಮೆಯ ಪ್ರದೇಶಗಳು, ಒಂದು ವಾರದಿಂದ ಅತಿವೃಷ್ಟಿ ಸಂದರ್ಭವನ್ನು ಎದುರಿಸುತ್ತಿವೆ. ಬೆಂಗಳೂರಿನ ಸುತ್ತಮುತ್ತಲ ಜಿಲ್ಲೆಗಳಲ್ಲಿ ಮರಳು ಗಣಿಗಾರಿಕೆಯ ಹಾವಳಿ ಅತಿಯಾಗಿದೆ. ಅರಣ್ಯ ಒತ್ತುವರಿಯಿಂದ ಹಳ್ಳ-ತೊರೆಗಳು ನೆಲಸಮವಾಗಿವೆ. ಅರಣ್ಯ ಪ್ರದೇಶವು ಬಂಜರು ಭೂಮಿಯಾಗಿದೆ. ಕೆರೆ ಕಾಲುವೆಗಳ ಅಸಮರ್ಪಕ ನಿರ್ವಹಣೆ ಹಾಗೂ ಅಭಿವೃದ್ಧಿ ಹೆಸರಲ್ಲಿ ವ್ಯಾಪಕ ಅರಣ್ಯ ನಾಶದಿಂದ ಧರೆಗೆ ಸುರಿದ ಮಳೆಯು ಭೂಮಿಗೆ ಇಂಗದೆ ಊರು-ಕೇರಿ ಮುಳುಗಡೆಯಾಗುವಂತೆ ಮಾಡಿದೆ. ನೈಸರ್ಗಿಕ ಸಂಪತ್ತನ್ನು ರಕ್ಷಿಸುವ ಹೊಣೆ ನಮ್ಮೆಲ್ಲರ ಮೇಲಿದೆ ಎಂಬುದನ್ನು ಇನ್ನಾದರೂ ಅರಿತು ಬಾಳಬೇಕಿದೆ.

ಮಂಜುನಾಥ ವಿ.ಜೆ., ವೇದಲವೇಣಿ, ಗೌರಿಬಿದನೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಕಪ್ಪತಗುಡ್ಡ ಮತ್ತು ಇತರ ವನ್ಯಜೀವಿ ಧಾಮಗಳ ಪರಿಸರಸೂಕ್ಷ್ಮ ಪ್ರದೇಶಗಳ ವ್ಯಾಪ್ತಿ ಕುಗ್ಗಿಸುವ ನಿರ್ಧಾರ ಸರಿಯೇ?

ಹಸಿರು ಗುಡ್ಡದ ಉಸಿರು ನಿಲ್ಲದಿರಲಿ...



ಕಪ್ಪತಗುಡ್ಡ ಪ್ರದೇಶದಲ್ಲಿ ಗಣಿಗಾರಿಕೆ ನಡೆಸುವುದರಿಂದ ವಾಯು ಮತ್ತು ಜಲ ಮಾಲಿನ್ಯ ಉಂಟಾಗುತ್ತದೆ. ಮೊದಲೇ ದುರಸ್ತಿ ಕಾಣದ ರಸ್ತೆಗಳು ಮತ್ತಷ್ಟು ಹಾಳಾಗುತ್ತವೆ. ಗಣಿಗಾರಿಕೆಯಿಂದ ಭೂಕಂಪನ ಉಂಟಾಗಲಿದ್ದು ಇದರಿಂದ ಮಳೆಗಾಲದಲ್ಲಿ ಗುಡ್ಡಗಳು ಕುಸಿಯುವ ಸಂಭವ ಇದೆ. ನಾವು ಈ ಹಿಂದೆ ಕೊಡಗಿನಲ್ಲಿ ನೋಡಿದಂತಹ ಸಂಕಷ್ಟಗಳನ್ನು ಕಪ್ಪತಗುಡ್ಡ ಪ್ರದೇಶದಲ್ಲೂ ಕಾಣಬೇಕಾಗಿ ಬರಬಹುದು. ಗಣಿಗಾರಿಕೆಯಿಂದ ಜೀವ ಮತ್ತು ಸಸ್ಯವೈವಿಧ್ಯ ನಾಶವಾಗುತ್ತದೆ

ಪ್ರಜಾವಾಣಿ ಚರ್ಚೆ

● ಡಾ. ಸಿದ್ಧರಾಮ ಸ್ವಾಮೀಜಿ

ಗದಗ, ಮುಂಡರಗಿ ಮತ್ತು ಶಿರಹಟ್ಟಿ ತಾಲ್ಲೂಕುಗಳಲ್ಲಿ ಸುಮಾರು 60 ಸಾವಿರಕ್ಕೂ ಹೆಚ್ಚು ಎಕರೆ ಪ್ರದೇಶದಲ್ಲಿ ವ್ಯಾಪಿಸಿರುವ ಕಪ್ಪತಗುಡ್ಡ ಉತ್ತರ ಕರ್ನಾಟಕದ ಸಹ್ಯಾದ್ರಿ ಅಷ್ಟೇ ಅಲ್ಲ; ಅದು ಈ ಭಾಗದ ಜನರ ಜೀವನಾಡಿ ಕೂಡ.

ಜಿಂಕೆ, ತೋಳ, ಕರಡಿ, ನರಿ, ಮೊಲ ಸೇರಿದಂತೆ ವಿವಿಧ ಬಗೆಯ ಪ್ರಾಣಿಗಳಿಗೆ ಆಶ್ರಯ ತಾಣವಾಗಿರುವ ಕಪ್ಪತಗಿರಿ, ಅಪರೂಪದ ವನಸ್ಪತಿ ಸಸ್ಯಗಳನ್ನೂ ಒಳಗೊಂಡಿರುವ ಪ್ರದೇಶ. ಹೀಗೆ ಸಾವಿರಾರು ಬಗೆಯ ಔಷಧೀಯ ಸಸ್ಯವೈವಿಧ್ಯ ಮತ್ತು ಜೀವವೈವಿಧ್ಯದಿಂದ ಕೂಡಿರುವ ಪ್ರದೇಶವನ್ನು ಪ್ರತಿಯೊಬ್ಬರೂ ಸೂಕ್ಷ್ಮ ಮನಸ್ಸು ಮತ್ತು ಕಣ್ಣಿನಿಂದಲೇ ನೋಡಬೇಕಿದೆ. ಏಕೆಂದರೆ, ಪ್ರಾಕೃತಿಕ ಸಮತೋಲನ ಮತ್ತು ಸ್ಥಳೀಯ ಜನರ ಹಿತದೃಷ್ಟಿಯಿಂದ ಕಪ್ಪತಗುಡ್ಡವನ್ನು ಯಥಾಸ್ಥಿತಿಯಲ್ಲೇ ಉಳಿಸಿಕೊಳ್ಳಬೇಕಿರುವುದು ತುಂಬ ಮುಖ್ಯ.

ಕಪ್ಪತಗುಡ್ಡ ಸುತ್ತಮುತ್ತಲಿನಲ್ಲಿ ವಾಸಿಸುವವರು, ಅದರಲ್ಲೂ ವಿಶೇಷವಾಗಿ ಲಂಬಾಣಿ ತಾಂಡಗಳಲ್ಲಿರುವ ಜನರು ಕಪ್ಪತಗುಡ್ಡದಲ್ಲಿ ಸಿಗುವ ಹಣ್ಣು ಹಂಪಲು, ಜೇನು ಹಾಗೂ ಇನ್ನಿತರ ಅರಣ್ಯ ಉತ್ಪನ್ನಗಳನ್ನೇ ಅವಲಂಬಿಸಿ ಬದುಕು ಮುನ್ನಡೆಸುತ್ತಿದ್ದಾರೆ. ಈ ಗಿರಿಶ್ರೇಣಿಯ ಪರಿಸರ ಸೂಕ್ಷ್ಮ ವಲಯದ ವ್ಯಾಪ್ತಿ ಕುಗ್ಗಿಸಿ, ಅಲ್ಲಿ ಉದ್ಯಮಗಳ ಸ್ಥಾಪನೆಗೋ ಗಣಿಗಾರಿಕೆಗೋ ಅವಕಾಶ ಮಾಡಿಕೊಟ್ಟರೆ ಅವರ ಜೀವನಕ್ಕೂ ತೊಂದರೆ ಆಗುತ್ತದೆ. ಜೀವವೈವಿಧ್ಯವೂ ಸಂಕಷ್ಟಕ್ಕೆ ಸಿಲುಕುತ್ತದೆ. ಜತೆಗೆ ಹಲವು ವೈಶಿಷ್ಟ್ಯಗಳನ್ನು ಹೊಂದಿರುವ ಪರಿಸರಕ್ಕೆ ಸರಿಪಡಿಸಲು ಆಗದಷ್ಟು ದೊಡ್ಡ ಹಾನಿಯಾಗುತ್ತದೆ.

ಸರ್ಕಾರವು ಕಪ್ಪತಗುಡ್ಡವನ್ನು ವನ್ಯಜೀವಿಧಾಮವೆಂದು ಘೋಷಿಸಿ 2019ರಲ್ಲಿ ಅಧಿಸೂಚನೆ ಹೊರಡಿಸಿತು. ಸರ್ಕಾರದ ಘೋಷಣೆ ಅನುಸಾರ ಹಾಗೂ ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ವನ್ಯಜೀವಿಧಾಮದ 10 ಕಿ.ಮೀ. ವ್ಯಾಪ್ತಿಯಲ್ಲಿ ಯಾವುದೇ ಗಣಿಗಾರಿಕೆ ನಡೆಸುವುದಕ್ಕೆ ಅವಕಾಶ ಇಲ್ಲ. ಆ ಆದೇಶದ ಪ್ರಕಾರ 10 ಕಿ.ಮೀ. ಒಳಗಿನ ಜಾಗವನ್ನು ಪರಿಸರ ಸೂಕ್ಷ್ಮ ಪ್ರದೇಶ ಎಂದೇ ಅರ್ಥೈಸಲಾಗಿದೆ. ವಸ್ತುಸ್ಥಿತಿ ಹೀಗಿದ್ದರೂ ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿಯನ್ನು 1 ಕಿ.ಮೀ.ಗೆ ಮಿತಗೊಳಿಸಲು ರಾಜ್ಯ ಸರ್ಕಾರ ಕೈಗೊಂಡ ತೀರ್ಮಾನದಿಂದ ಸುಪ್ರೀಂ ಕೋರ್ಟ್ ಆದೇಶಕ್ಕೆ ವ್ಯತಿರಿಕ್ತವಾಗಿ ನಡೆದುಕೊಂಡಂತೆ ಆಗುತ್ತದೆ. ಅಲ್ಲದೆ, ಪರಿಸರದ ಮೇಲಾಗುವ ಪರಿಣಾಮಗಳನ್ನೂ ಕಡೆಗಣಿಸಿದಂತೆ ಆಗುತ್ತದೆ.

ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಗಣಿಗಾರಿಕೆಗೆ ಅವಕಾಶ ಕೊಟ್ಟರೆ ವನ್ಯಜೀವಿಧಾಮದ ಮೇಲೆ ಯಾವುದೇ ಪರಿಣಾಮ ಉಂಟಾಗುವುದಿಲ್ಲ ಎಂದು ಅರಣ್ಯ ಇಲಾಖೆ ಅಧಿಕಾರಿಗಳೇ ಹೇಳಿರುವುದು 'ಬೇಲಿಯೇ ಎದ್ದು ಹೊಲ ಮೇಯಿತು' ಎಂಬ ಗಾದೆಮಾತನ್ನು ನೆನಪಿಸುತ್ತದೆ. ಯಾವುದೇ ಕಾರಣಕ್ಕೂ ಅಲ್ಲಿ ಗಣಿಗಾರಿಕೆಗೆ ಅವಕಾಶ ಕೊಡಬಾರದು. ಅದು ಕಪ್ಪತಗುಡ್ಡ ಪರಿಸರದ ಎಲ್ಲ ಜನರ ಒಕ್ಕೊರಲ ಅಭಿಪ್ರಾಯವಾಗಿದೆ.

ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಇದೇ 5ರಂದು ನಡೆಯಲಿರುವ ಸಭೆಯಲ್ಲಿ ಪರಿಸರ ಸೂಕ್ಷ್ಮ ಪ್ರದೇಶವನ್ನು 10 ಕಿ.ಮೀ.ಗೆ ನಿಗದಿಪಡಿಸುವ ಕುರಿತು ಮತ್ತು ಆ ಪ್ರದೇಶದಲ್ಲಿ ಗಣಿಗಾರಿಕೆಗೆ ಅವಕಾಶ ನೀಡಬಾರದು ಎನ್ನುವ ಕುರಿತು ನಿರ್ಣಯ ಆಗಬೇಕು ಎನ್ನುವುದು ನಮ್ಮೆಲ್ಲರ ಒತ್ತಾಯವಾಗಿದೆ. ಕಪ್ಪತಗುಡ್ಡ ಪ್ರದೇಶದಲ್ಲಿ ಗಣಿಗಾರಿಕೆಗೆ ಆಸಕ್ತಿವಹಿಸಿ ಬಂದಿರುವ ಪ್ರಸ್ತಾವಗಳನ್ನು ಸರ್ಕಾರ ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸಬೇಕು. ಪರಿಸರದ ಹಿತಾಸಕ್ತಿ ಬಲಿಕೊಟ್ಟು ಅಭಿವೃದ್ಧಿ ಚಟುವಟಿಕೆ ನಡೆಸುವುದು ಯಾವುದೇ ಕಾರಣಕ್ಕೂ ಬೇಕಾಗಿಲ್ಲ.

ಕಪ್ಪತಗುಡ್ಡ ಪ್ರದೇಶದಲ್ಲಿ ಗಣಿಗಾರಿಕೆ ನಡೆಸುವುದರಿಂದ ವಾಯು ಮತ್ತು ಜಲ ಮಾಲಿನ್ಯ ಉಂಟಾಗುತ್ತದೆ. ಮೊದಲೇ ದುರಸ್ತಿ ಕಾಣದ ರಸ್ತೆಗಳು ಮತ್ತಷ್ಟು ಹಾಳಾಗುತ್ತವೆ. ಗಣಿಗಾರಿಕೆಯಿಂದ ಭೂಕಂಪನ ಉಂಟಾಗಲಿದ್ದು ಇದರಿಂದ ಮಳೆಗಾಲದಲ್ಲಿ ಗುಡ್ಡಗಳು ಕುಸಿಯುವ ಸಂಭವ ಇದೆ. ಕೊಡಗಿನಲ್ಲಿ ನಾವು ಈ ಹಿಂದೆ ನೋಡಿದಂತಹ ಸಂಕಷ್ಟಗಳನ್ನು ಕಪ್ಪತಗುಡ್ಡ ಪ್ರದೇಶದಲ್ಲೂ ಕಾಣಬೇಕಾಗಿ ಬರಬಹುದು. ಗಣಿಗಾರಿಕೆಯಿಂದ ಜೀವ ಮತ್ತು ಸಸ್ಯವೈವಿಧ್ಯ ನಾಶವಾಗುತ್ತದೆ. ಕೊಡಗಿನಲ್ಲಿ ಕಂಡುಬಂದ ಸಂಕಷ್ಟ ಕಪ್ಪತಗುಡ್ಡದ ಪ್ರದೇಶಕ್ಕೆ ವ್ಯಾಪಿಸುವುದನ್ನು ತಡೆಯಲು ಯಾವುದೇ ಕಾರಣಕ್ಕೂ ಗಣಿಗಾರಿಕೆಗೆ ಅವಕಾಶ ನೀಡಬಾರದು.

ನಮ್ಮ ಗುರುಗಳಾದ ಸಿದ್ಧಲಿಂಗ ಸ್ವಾಮೀಜಿ ಅವರು 2016ರಲ್ಲಿ ಕಪ್ಪತಗುಡ್ಡ ಸಂರಕ್ಷಣೆಗಾಗಿ ಟೊಂಕ ಕಟ್ಟಿ ನಿಂತಿದ್ದರು. ಬೆಳಗಾವಿಯಲ್ಲಿ ನಡೆಯುತ್ತಿದ್ದ ಅಧಿವೇಶನದ ಸಂದರ್ಭದಲ್ಲಿ ನೂರಾರು ಮಂದಿ ಸ್ವಾಮೀಜಿಗಳನ್ನು ಕರೆದುಕೊಂಡು ಹೋಗಿ ಆಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ, ಕಪ್ಪತಗುಡ್ಡವನ್ನು ಸಂರಕ್ಷಿತ ಅರಣ್ಯಪ್ರದೇಶ ಅಂತ ಘೋಷಣೆ ಮಾಡಬೇಕು, ಪ್ರವಾಸೋದ್ಯಮಕ್ಕೆ ಹೆಚ್ಚು ಒತ್ತು ಕೊಡಬೇಕು ಎಂಬುದನ್ನು ಮನವರಿಕೆ ಮಾಡಿಕೊಟ್ಟಿದ್ದರು.

ಕಪ್ಪತಗುಡ್ಡ ಪ್ರದೇಶದಲ್ಲಿ ಪ್ರವಾಸೋದ್ಯಮಕ್ಕೆ ಸಾಕಷ್ಟು ಅವಕಾಶ ಇದೆ. ವನ್ಯಜೀವಿಧಾಮ ಮಾಡಿದರೆ ಇನ್ನೂ ಹೆಚ್ಚಿನ ರೀತಿಯಲ್ಲಿ ಪ್ರವಾಸೋದ್ಯಮವನ್ನು ಬೆಳೆಸಬಹುದಾಗಿದೆ. ಸಾವಿರಾರು ಜನರಿಗೆ ಉದ್ಯೋಗದ ಅವಕಾಶಗಳು ತೆರೆದುಕೊಳ್ಳುತ್ತವೆ. ಸರ್ಕಾರ ಇಂತಹ ಒಳ್ಳೆಯ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕೇ ಹೊರತು, ಅಲ್ಲಿ ಗಣಿಗಾರಿಕೆಗೆ ಅವಕಾಶ ಮಾಡಿಕೊಡುವುದರಿಂದ ಒಂದು ರೀತಿಯಲ್ಲಿ ಅಲ್ಲಿನ ಪರಿಸರಕ್ಕೆ, ಜನರಿಗೆ ವಿಷಪ್ರಾಶನ ಮಾಡಿಸಿದಂತೆ.

ಗಣಿಗಾರಿಕೆ ನಡೆಸಲು ಸಲ್ಲಿಸಿರುವ ಪ್ರಸ್ತಾವಗಳನ್ನು ಪ್ರಭಾವಿಗಳ ಒತ್ತಡಕ್ಕೆ ಮಣಿಯದೆ, ಆಸೆ ಆಮಿಷಗಳಿಗೆ ಒಳಗಾಗದೆ ಸರ್ಕಾರವು ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸಬೇಕು. ಅದರ ಜತೆಗೆ, ವಿಶೇಷವಾಗಿ ಕಪ್ಪತಗುಡ್ಡವನ್ನು ರಕ್ಷಿಸುವ ಮತ್ತು ಅದರ ಅಭಿವೃದ್ಧಿಗೆ ಪೂರಕವಾಗಿರುವಂತಹ ಯೋಜನೆಗಳನ್ನು ಸರ್ಕಾರ ರೂಪಿಸಬೇಕು. ಪ್ರತಿ ವರ್ಷ ಕಾಡಿಗೆ ಬೆಂಕಿ ಬೀಳುತ್ತದೆ. ಪ್ರತಿಸಲವೂ ಕಾಡನ್ನು ಬೆಂಕಿಯಿಂದ ರಕ್ಷಿಸಲಾಗುತ್ತದೆ. ಅದೇರೀತಿ, ಕಪ್ಪತಗುಡ್ಡವನ್ನು ಗಣಿಗಾರಿಕೆಯಿಂದ ರಕ್ಷಣೆ ಮಾಡಬೇಕು.

ಕಪ್ಪತಗುಡ್ಡ ಪ್ರದೇಶದಲ್ಲಿ 300ಕ್ಕಿಂತಲೂ ಹೆಚ್ಚು ಗಾಳಿಯಂತ್ರಗಳನ್ನು ಅಳವಡಿಸಿದ್ದಾರೆ. ಇವು ಕೂಡ ಅಲ್ಲಿನ ಪರಿಸರಕ್ಕೆ, ಜೀವವೈವಿಧ್ಯಕ್ಕೆ ಅನೇಕ ರೀತಿಯಲ್ಲಿ ತೊಂದರೆಯನ್ನುಂಟು ಮಾಡುತ್ತಿವೆ. ಇಂತಹ ತೊಂದರೆಗಳನ್ನೂ ತಡೆಗಟ್ಟುವ ಕೆಲಸ ಆಗಬೇಕಿದೆ. ಕಪ್ಪತಗುಡ್ಡವನ್ನು ಉಳಿಸುವ ಜವಾಬ್ದಾರಿ ನಮ್ಮೆಲ್ಲರದ್ದಾಗಿದೆ. ಒಂದು ವೇಳೆ, ಗಣಿಗಾರಿಕೆಯಿಂದ ಕಪ್ಪತಗುಡ್ಡ ಹಾಳಾದರೆ ಗದಗ, ಕೊಪ್ಪಳ, ರಾಯಚೂರು ಜಿಲ್ಲಾ ಪ್ರದೇಶ ಮರುಭೂಮಿ ಆಗುವುದರಲ್ಲಿ ಯಾವುದೇ ಸಂದೇಹ ಇಲ್ಲ. ಏಕೆಂದರೆ, ಈ ಭಾಗದಲ್ಲಿ ಕಪ್ಪತಗುಡ್ಡದ ಕಾರಣದಿಂದಲೇ ಮಳೆ ಬರುತ್ತದೆ. ಅದು ಹಾಳಾದರೆ ಈ ಭಾಗ ಮರುಭೂಮಿ ಆಗುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ.

ಕಪ್ಪತಗುಡ್ಡವನ್ನು ನೋಡಲು ಬಹಳ ದೂರದ ಊರುಗಳಿಂದಲೂ ಪ್ರವಾಸಿಗರು ಬರುತ್ತಾರೆ. ಶುದ್ಧಗಾಳಿ ಹೊಂದಿರುವ ಪ್ರದೇಶ ಎಂಬ ಹಿರಿಮೆಯೂ ಕಪ್ಪತಗುಡ್ಡಕ್ಕಿದೆ. ಈ ಖ್ಯಾತಿಯನ್ನು ಉಳಿಸಿಕೊಳ್ಳಬೇಕಿರುವುದು ಕೂಡ ಅಷ್ಟೇ ಮಹತ್ವದ್ದಾಗಿದ್ದು, ಈ ದಿಸೆಯಲ್ಲಿ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು.

ಎಷ್ಟೋ ಜನ ರಾಜಕಾರಣಿಗಳೇ ಬೇನಾಮಿ ಹೆಸರಿನಲ್ಲಿ ಗಣಿಗಾರಿಕೆ ಮಾಡುತ್ತಿದ್ದಾರೆ. ಕಪ್ಪತಗುಡ್ಡದಲ್ಲಿ ಗಣಿಗಾರಿಕೆ ಎಂಬುದು ಕೇವಲ ಕೆಲವು ಮಂದಿ ಉಳ್ಳವರ ಹೊಟ್ಟೆ ತುಂಬಿಸಿಕೊಳ್ಳುವ ಕೆಲಸವೇ ಹೊರತು ಬೇರೇನೂ ಅಲ್ಲ. ಬಡಪಾಯಿಗಳ ಹೊಟ್ಟೆಮೇಲೆ ಹೊಡೆಯುವ ಕೆಲಸ ಇದಾಗಿದೆ. ಕಪ್ಪತಗುಡ್ಡದಲ್ಲಿ ಗಣಿಗಾರಿಕೆ ಆರಂಭಗೊಂಡರೆ ಬಡಜನರು ಸಾಯುತ್ತಾರೆ. ಪರಿಸರ, ಬೆಟ್ಟ ಗುಡ್ಡ ಹಾಳಾಗುತ್ತದೆ. ಗುಡ್ಡವನ್ನು ಅವಲಂಬಿಸಿರುವ ಪ್ರಾಣಿ ಸಂಕುಲವೂ ನಾಶವಾಗುತ್ತದೆ. ಹೀಗೆ ಜನರ ಜೀವನವನ್ನು ಹಾಳು ಮಾಡಿ ತಮ್ಮ ಹೊಟ್ಟೆ ತುಂಬಿಸಿಕೊಳ್ಳುವ ಕೆಲಸವನ್ನು ಜನಪ್ರತಿನಿಧಿಗಳು, ಗಣಿ ಮಾಲೀಕರು ಮಾಡಬಾರದು. ರಾಜ್ಯದ ಮುಖ್ಯಮಂತ್ರಿ ಬುದ್ಧಿವಂತರಿದ್ದಾರೆ. ಇಂತಹ ಎಲ್ಲ ವಿಷಯಗಳ ಬಗ್ಗೆ ತಿಳಿವಳಿಕೆ ಇದೆ. ಅವರು ಈ ವಿಷಯದಲ್ಲಿ ಬಹಳ ನಿರ್ದಾಕ್ಷಿಣ್ಯ ಕ್ರಮ ಕೈಗೊಂಡು ಕಪ್ಪತಗುಡ್ಡವನ್ನು ಎಂದಿನಂತೆ ಉಳಿಸುತ್ತಾರೆ ಎಂಬ ವಿಶ್ವಾಸ ನಮ್ಮದು.

ಲೇಖಕ: ಪೀಠಾಧ್ಯಕ್ಷರು, ಗದಗ ಡಂಬಳ ತೋಂಟದಾರ್ಯ ಮಠ, ಗದಗ

ನಿರೂಪಣೆ: **ಕೆ.ಎಂ. ಸತೀಶ್ ಬೆಳ್ಳಕ್ಕಿ**





ವೇದವ್ಯಾಸರ ಶಿವಪುರಾಣಸಾರ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 215

ಮನ್ಮಥನ ಮೊರೆಹೋದ ಇಂದ್ರ

ತಾರಕಾಸುರನಿಂದ ಪೀಡಿಸಲ್ಪಟ್ಟ ಇಂದ್ರ ಮನ್ಮಥನನ್ನು ಸ್ಮರಿಸಿದ. ರತಿಪತಿಯೂ ಮೂರು ಲೋಕಗಳನ್ನು ಕಾಮದಿಂದ ಜಯಿಸಿದವನೂ ಆದಂತಹ ಮನ್ಮಥ ಗರ್ವದಿಂದಲೇ ತನ್ನ ಪ್ರಿಯೆ ರತಿ ಮತ್ತು ಗೆಳೆಯ ವಸಂತನೊಡನೆ ಇಂದ್ರನ ಬಳಿಗೆ ಬಂದ. ಮನ್ಮಥ ಗಂಭೀರಭಾವದಿಂದ 'ಎಲೈ ದೇವೇಂದ್ರನೇ, ನಿನಗೆ ಯಾವ ಮಹಾಕಾರ್ಯವು ಬಂದೊದಗಿರುವುದು? ನನ್ನನ್ನು ಕರೆಸಿದ ಕಾರಣವೇನು?' ಎಂದ.

ಮನ್ಮಥ ಹೇಳಿದ ಮಾತನ್ನು ಕೇಳಿ ಇಂದ್ರ ಸಂತೋಷದಿಂದ 'ಯೋಗ್ಯವಾದುದನ್ನೇ ಹೇಳಿರುವೆ' ಎಂದು ಮನ್ಮಥನನ್ನು ಆದರದಿಂದ ಹೊಗಳುತ್ತಾ ಬರಮಾಡಿಕೊಂಡ. ನಂತರ ಇಂದ್ರ, 'ಎಲೈ ಮನ್ಮಥನೇ, ನಿನ್ನ ಸಿದ್ಧತೆ ಚೆನ್ನಾಗಿರುವುದು. ಈಗ ನನಗೆ ಒದಗಿರುವ ಮಹಾಕಾರ್ಯವನ್ನು ಸಾಧಿಸಲು ಸಿದ್ಧನಾಗಿರುವ ನೀನು ಧನ್ಯನು. ಈಗ ನೀನು ಮಾಡಬೇಕಾಗಿರುವ ಮಹಾಕಾರ್ಯವನ್ನು ಹೇಳುವೆ. ಈ ನನ್ನ ಕಾರ್ಯವೇ ನಿನ್ನ ಕಾರ್ಯವೆಂದು ತಿಳಿ. ಇದು ಹೊಗಳಿಕೆಯ ಮಾತಲ್ಲ.

'ಎಲೈ ಮದನ, ನನಗೆ ಅನೇಕ ಪ್ರಿಯಮಿತ್ರರಿದ್ದಾರೆ. ಆದರೆ ನಿನ್ನಂತಹ ಸನ್ಮಿತ್ರನು ಮತ್ತೊಬ್ಬನಿಲ್ಲ. ಜಯವನ್ನು ಸಂಪಾದಿಸಲು ನನಗೆ ಎರಡು ಸಾಧನಗಳಿವೆ. ಒಂದು ಮನ್ಮಥನಾದ ನೀನು, ಮತ್ತೊಂದು ವಜ್ರಾಯುಧ. ವಜ್ರಾಯುಧವೂ ಒಮ್ಮೊಮ್ಮೆ ನಿಷ್ಫಲವಾದರೂ, ನಿನ್ನಿಂದ ನನಗೆ ಎಂದೂ ಅಪಜಯವಾಗಿಲ್ಲ. ಮಿತ್ರನಿಗೆ ಹಿತವನ್ನು ಉಂಟುಮಾಡುವವನಿಗಿಂತಲೂ ಪ್ರಿಯನಾದವನು ಯಾರು? ಮಿತ್ರವರ್ಯನಾದ ನೀನು ನನ್ನ ಈ ಕಾರ್ಯವನ್ನು ಮಾಡಬೇಕು.

'ಎಲೈ ಪ್ರಿಯಮಿತ್ರ ಕಾಮ, ಕಾಲವಶದಿಂದ ನನಗೆ ಈಗ ಮಹಾಸಂಕಷ್ಟ ಬಂದಿದೆ. ಇದನ್ನು ನಿನ್ನ ಹೊರತು ಬೇರಾರೂ ಆ ದುಃಖವನ್ನು ಹೋಗಲಾಡಿಸಲು ಸಾಧ್ಯವಿಲ್ಲ. ದುರ್ಭಿಕ್ಷಕಾಲದಲ್ಲಿ ದಾನಮಾಡುವವನ ಪರೀಕ್ಷೆಯಾಗುತ್ತದೆ. ಹಾಗೆಯೇ, ಯುದ್ಧದಲ್ಲಿ ಶೂರನ ಯೋಗ್ಯತೆಯು ಗೊತ್ತಾಗುತ್ತದೆ. ಕಷ್ಟಕಾಲದಲ್ಲಿ ಮಿತ್ರನ ಯೋಗ್ಯತೆಯು ಬಯಲಾಗುತ್ತದೆ. ಗೃಹಕೃತ್ಯವು ಕೆಳಮಟ್ಟಕ್ಕೆ ಬಂದಾಗ ಸ್ತ್ರೀಯರ ಯೋಗ್ಯತೆಯ ಪರೀಕ್ಷೆಯಾಗುತ್ತದೆ. ಸಂಕಟದಲ್ಲಿ ಸ್ನೇಹದ ಪರೀಕ್ಷೆಯಾಗುತ್ತದೆ. ಎದುರಿನಲ್ಲಿ ಆಡಿದ ಮಾತಿನ ಸತ್ಯತೆಯು ಹಿಂದುಗಡೆಯಲ್ಲಿ ಗೊತ್ತಾಗುತ್ತದೆ.

'ಎಲೈ ಮಿತ್ರವರ್ಯ ಮನ್ಮಥ! ಹೀಗೆ ಅನಿವಾರ್ಯವಾಗಿ ಬಂದಿರುವ ನನ್ನ ಆಪತ್ತಿನಲ್ಲಿ ನಿನ್ನ ಪರೀಕ್ಷೆಯು ಆಗಬೇಕಿದೆ. ಈ ಕಾರ್ಯದಿಂದ ಕೇವಲ ನನಗೆ ಮಾತ್ರ ಸುಖವಾಗುವುದಿಲ್ಲ. ಎಲ್ಲ ದೇವತೆಗಳಿಗೂ ಲೋಕಗಳಿಗೂ ಸುಖವಾಗುವುದು' ಎಂದ.

ಸ್ವರ್ಗಾಧಿಪತಿ ದೇವೇಂದ್ರ ಆಡಿದ ಮಾತುಗಳನ್ನು ಕೇಳಿದ ಮನ್ಮಥ ಮಂದಹಾಸ ಬೀರಿದ. 'ಎಲೈ ಇಂದ್ರನೆ, ಇದೇನು ಹೀಗೆ ಹೇಳುವೆ? ಇದಕ್ಕೆ ಉತ್ತರವನ್ನು ನಾನು ಹೇಳುವುದಿಲ್ಲ. ನಿಜವಾದ ಮಿತ್ರನು ಉಪಕಾರವನ್ನು ಮಾಡುವನೇ ಹೊರತು, ಸುಮ್ಮನೆ ಮಾತನಾಡಲಾರ. ಆಪತ್ತಿನ ಕಾಲದಲ್ಲಿ ಹೆಚ್ಚಾಗಿ ಯಾವನು ಮಾತನಾಡುವನೋ ಅವನು ಏನೂ ಮಾಡಲಾರ. ಹಾಗಿದ್ದರೂ ಈಗ ನಾನು ಒಂದು ಮಾತನ್ನು ಹೇಳುವೆ ಕೇಳು. ನಿನ್ನ ಇಂದ್ರಪದವಿಯನ್ನು ಕಸಿದುಕೊಳ್ಳಲು ಯಾರು ತಪಸ್ಸು ಮಾಡಿದರೂ ಅವರನ್ನು ಸರ್ವಥಾ ನಾನು ಹಾಳುಮಾಡುವೆ. ಸುಂದರ ಸ್ತ್ರೀ ಕುಡಿನೋಟಗಳಿಂದ ತಪಸ್ವಿಯ ತಪಸ್ಸನ್ನು ಕೆಡಿಸುವೆ. ದೇವತೆಗಳು, ಋಷಿಗಳು, ದಾನವರು, ಮಾನವರೆಲ್ಲರ ಲೆಕ್ಕವೇ ನನಗಿಲ್ಲ. ನಿನ್ನ ವಜ್ರಾಯುಧವು ದೂರದಲ್ಲಿರಲಿ, ಶಸ್ತ್ರಗಳು-ಅಸ್ತ್ರಗಳು ಅಸಂಖ್ಯ ಸೈನಿಕರು ಸುಮ್ಮನಿರಲಿ. ಮಿತ್ರನಾದ ನಾನೊಬ್ಬನೇ ನಿನ್ನ ಮುಂದಿರುವ ಕಾರ್ಯವನ್ನು ಸಾಧಿಸಬಲ್ಲೆ? ನನ್ನ ಮೋಹಪಾಶದಿಂದ ಬ್ರಹ್ಮ ವಿಷ್ಣು ಮಹೇಶ್ವರರನ್ನೇ ಮರುಳುಗೊಳಿಸಬಲ್ಲೆ. ಮಿಕ್ಕವರ ಗಣನೆಯೇ ನನಗಿಲ್ಲ' ಎಂದ ಮನ್ಮಥ, ಗರ್ವದಿಂದ.

ಅಭಿವೃದ್ಧಿ ವಿಚಾರದಲ್ಲಿ ಸಂಕುಚಿತ ಭಾವ ಬೇಡ

● ಶಿವಕುಮಾರ ಉದಾಸಿ



ಅಭಿವೃದ್ಧಿ ವಿಚಾರದಲ್ಲಿ ನಾವು ಸಂಕುಚಿತ ಮನೋಭಾವ ಬಿಡಬೇಕು. ಆ ಭಾಗದ ಜನರು ಎದುರಿಸುತ್ತಿರುವ ಸಮಸ್ಯೆಗಳನ್ನು ಅರಿತು ಮುಂದಡಿ ಇಡಬೇಕು. ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿಯೊಳಗೆ ಇದ್ದರೆ ಒಂದು ವಿದ್ಯುತ್ ಕಂಬ ಹಾಕಲೂ ಸಾಧ್ಯವಿಲ್ಲ. ಹತ್ತಾರು ಸಲ ಅಲೆದಾಡಿದರೂ ಅನುಮತಿ ಸಿಗುವುದಿಲ್ಲ. ನಗರದೊಳಗೆ ಇರುವ ನಮಗೆ ಎಲ್ಲ ಸವಲತ್ತುಗಳು ಬೇಕು. ಕಾಡಿನಲ್ಲಿರುವ ಜನರು ಎಲ್ಲ ಸವಲತ್ತುಗಳನ್ನೂ ತ್ಯಾಗ ಮಾಡಿ ಕಗ್ಗತ್ತಲಿನಲ್ಲೇ ಇರಬೇಕು ಎಂಬ ವಾದ ಸರಿಯಲ್ಲ

ಗದಗ ಜಿಲ್ಲೆಯ ಕಪ್ಪತಗುಡ್ಡ ಉತ್ತರ ಕರ್ನಾಟಕ ಭಾಗದ ಜನರ ಜೀವನಾಡಿಯಾಗಿದೆ. ಕಪ್ಪತಗುಡ್ಡ ವನ್ಯಜೀವಿಧಾಮದ ಪರಿಸರ ಸೂಕ್ಷ್ಮ ವಲಯದ ವ್ಯಾಪ್ತಿಯನ್ನು 10 ಕಿ.ಮೀ.ನಿಂದ 1 ಕಿ.ಮೀ.ಗೆ ಇಳಿಸಲು ರಾಜ್ಯ ಸರ್ಕಾರ ತೀರ್ಮಾನ ತೆಗೆದುಕೊಂಡಿದೆ. ಈ ತೀರ್ಮಾನ ಶ್ಲಾಘನೀಯ. ಈ ಭಾಗದ ಜನರ ಬಹುಕಾಲದ ಬೇಡಿಕೆಗೆ ಸರ್ಕಾರ ಮನ್ನಣೆ ನೀಡಿದೆ.

ಕಪ್ಪತಗುಡ್ಡ ವನ್ಯಜೀವಿಧಾಮದ ಪರಿಸರ ಸೂಕ್ಷ್ಮ ವಲಯದ ವ್ಯಾಪ್ತಿಯನ್ನು ಕುಗ್ಗಿಸಿ ಸ್ಥಳೀಯ ಜನರಿಗೆ ಅನುಕೂಲವಾಗುವಂತೆ ಅಭಿವೃದ್ಧಿ ಚಟುವಟಿಕೆಗಳಿಗೆ ಅನುವು ಮಾಡಿಕೊಡಬೇಕು ಎಂದು ಒತ್ತಾಯಿಸಿ ಕೇಂದ್ರ ಪರಿಸರ ಸಚಿವರು ಹಾಗೂ ರಾಜ್ಯದ ಅರಣ್ಯ, ಪರಿಸರ ಹಾಗೂ ಜೀವಿಶಾಸ್ತ್ರ ಸಚಿವರಿಗೆ ಪತ್ರ ಬರೆದಿದ್ದೆ. ನನ್ನ ಬೇಡಿಕೆಗೂ ಸರ್ಕಾರ ಸ್ಪಂದಿಸಿದೆ.

ಕಪ್ಪತಗುಡ್ಡ ವನ್ಯಜೀವಿಧಾಮದ ಸುತ್ತಲೂ ಇರುವ 574.01 ಚ.ಕಿ.ಮೀ. ಕ್ಷೇತ್ರವನ್ನು ಪರಿಸರ ಸೂಕ್ಷ್ಮ ವಲಯ ಎಂದು ಘೋಷಿಸುವಂತೆ ಅರಣ್ಯ ಇಲಾಖೆಯು ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸಿದೆ ಎಂಬ ವಿಷಯ ತಿಳಿದಿದ್ದರಿಂದ ಕೇಂದ್ರ ಮತ್ತು ರಾಜ್ಯ ಸಚಿವರಿಗೆ ಪತ್ರ ಬರೆದಿದ್ದೆ.

ಹಿಂದುಳಿದ ತಾಲ್ಲೂಕುಗಳು ಎಂಬ ಹಣೆಪಟ್ಟಿ ಹೊಂದಿರುವ ಶಿರಹಟ್ಟಿ ಮತ್ತು ಮುಂಡರಗಿ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಈ ಪ್ರದೇಶ ಬರುತ್ತದೆ. ಅಲ್ಲದೇ, ಈಗ ಗುರುತಿಸಿರುವ 4ನೇ ಬ್ಲಾಕ್ ಕಪ್ಪತಗುಡ್ಡದಿಂದ ತುಂಬ ದೂರ ಇದೆ. ಈ ಕಾರಣಕ್ಕಾಗಿ ಅಲ್ಲಿ ಕ್ರಷರ್‌ಗಳಿಗೆ ಅವಕಾಶ ಮಾಡಿಕೊಡಬೇಕು ಎಂದು ಪತ್ರದಲ್ಲಿ ಕೋರಿದ್ದೆ. ವನ್ಯಜೀವಿಧಾಮ ಹಾಗೂ ಪರಿಸರ ಸೂಕ್ಷ್ಮ ವಲಯದ ಬ್ಲಾಕ್‌ಗಳನ್ನು ಗುರುತಿಸುವಾಗ ಕಾಡನ್ನು ಭಾಗಗಳಾಗಿ ವಿಂಗಡಿಸುವ ಬದಲು ಕಪ್ಪತಗುಡ್ಡಕ್ಕೆ ಹೊಂದಿಕೊಂಡಿರುವ ಎಲ್ಲ ಪ್ರದೇಶಗಳನ್ನೂ ಇಡಿಯಾಗಿ ತೆಗೆದುಕೊಂಡಿದ್ದರೆ ಚೆನ್ನಾಗಿತ್ತು ಎಂಬುದು ನನ್ನ ಭಾವನೆ. ಪ್ರತಿ ಬ್ಲಾಕ್‌ಗಳ ನಡುವೆ ತುಂಬ ಅಂತರವಿರುವುದರಿಂದ ಅಭಿವೃದ್ಧಿಗೆ ತೊಡಕಾಗುತ್ತದೆ.

ಈಗ ಗುರುತಿಸಿರುವ 4ನೇ ಬ್ಲಾಕ್‌ನಲ್ಲಿ ಮೊದಲಿನಿಂದಲೂ ಕ್ರಷರ್‌ಗಳು ಕಾರ್ಯಾಚರಿಸುತ್ತಿದ್ದವು. ಹಾಗಾಗಿ, 4ನೇ ಬ್ಲಾಕ್ ಅನ್ನು ವನ್ಯಜೀವಿಧಾಮ ವ್ಯಾಪ್ತಿಯಿಂದ ಕೈಬಿಡಬೇಕು ಎಂಬುದು ನನ್ನ ಬೇಡಿಕೆಯಾಗಿತ್ತು. ಅಲ್ಲಿ ಕ್ರಷರ್‌ಗಳು ನಡೆಯುತ್ತಿದ್ದುದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸಿಕ್ಕಿತ್ತು. ಅರಣ್ಯ ನಾಶ ಮಾಡಬೇಕು ಎಂಬ ಉದ್ದೇಶ ನಮ್ಮದಲ್ಲ. ಕೋವಿಡ್–19ನಿಂದಾಗಿ ಎಲ್ಲ ಕಡೆ ಉದ್ಯೋಗ ನಷ್ಟವಾಗಿದೆ. ಸ್ಥಳೀಯರಿಗೆ ಉದ್ಯೋಗಾವಕಾಶ ಸಿಗುತ್ತದೆ ಎಂಬ ಕಾಳಜಿ ಇದರ ಹಿಂದಿದೆ.

ಅಭಿವೃದ್ಧಿ ವಿಚಾರದಲ್ಲಿ ನಾವು ಸಂಕುಚಿತ ಮನೋಭಾವ ಬಿಡಬೇಕು. ಆ ಭಾಗದ ಜನರು ಎದುರಿಸುತ್ತಿರುವ ಸಮಸ್ಯೆಗಳನ್ನು ಅರಿತು ಮುಂದಡಿ ಇಡಬೇಕು. ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿಯೊಳಗೆ ಇದ್ದರೆ ಒಂದು ವಿದ್ಯುತ್ ಕಂಬ ಹಾಕಲೂ ಸಾಧ್ಯವಿಲ್ಲ. ಹತ್ತಾರು ಸಲ ಅಲೆದಾಡಿದರೂ ಅನುಮತಿ ಸಿಗುವುದಿಲ್ಲ. ನಗರದೊಳಗೆ ಇರುವ ನಮಗೆ ಎಲ್ಲ ಸವಲತ್ತುಗಳು ಬೇಕು. ಕಾಡಿನಲ್ಲಿರುವ ಜನರು ಎಲ್ಲ ಸವಲತ್ತುಗಳನ್ನೂ ತ್ಯಾಗ ಮಾಡಿ ಕಗ್ಗತ್ತಲಿನಲ್ಲೇ ಇರಬೇಕು ಎಂಬ ವಾದ ಸರಿಯಲ್ಲ. ಪರಿಸರಕ್ಕೆ ಹಾನಿಯಾಗದ ರೀತಿಯಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡಲು ಸಾಧ್ಯವಿದೆ. ಆ ದಿಸೆಯಲ್ಲಿ ನಾವು ಆಲೋಚನೆ ಮಾಡಬೇಕು. ದನ ಕಾಯುವವರು ಹಾಗೂ ಕುರಿ ಕಾಯುವವರು ಕಪ್ಪತಗುಡ್ಡವನ್ನು ದಶಕಗಳಿಂದ ನೆಚ್ಚಿಕೊಂಡಿದ್ದಾರೆ. ಪರಿಸರ ಸಂರಕ್ಷಣೆಯ ಹೆಸರಿನಲ್ಲಿ ಅವರ ಓಡಾಟಕ್ಕೆ ಅನಗತ್ಯವಾಗಿ ತೊಂದರೆ ನೀಡಲಾಗುತ್ತಿದೆ. ಇದು ನಿಲ್ಲಬೇಕು.

ಈ ವನ್ಯಜೀವಿ ಧಾಮದಲ್ಲಿ ಅಪರೂಪದ ಗಿಡಮೂಲಿಕೆಗಳು ಔಷಧೀಯ ಸಸ್ಯಗಳು ಇವೆ. ಇತ್ತೀಚಿನ ದಿನಗಳಲ್ಲಿ ಆಯುಷ್, ಆಯುರ್ವೇದ ಔಷಧಕ್ಕೆ ಹೆಚ್ಚಿನ ಮನ್ನಣೆ ಸಿಗುತ್ತಿದೆ. ಪರಿಸರಕ್ಕೆ ಹಾನಿ ಮಾಡದೆಯೇ ಇಲ್ಲಿರುವ ಗಿಡಮೂಲಿಕೆಗಳನ್ನು ಬಳಸಿಕೊಳ್ಳಲು ಆಯುಷ್ ಹಾಗೂ ಆಯುರ್ವೇದ ಸಂಶೋಧನಾ ಸಂಸ್ಥೆಯನ್ನು ತೆರೆಯಬೇಕು.

ಅಭಿವೃದ್ಧಿ ವಿಚಾರದಲ್ಲಿ ನಮ್ಮ ದೃಷ್ಟಿಕೋನ ಬದಲಾಗಬೇಕು. ನಮ್ಮ ಮನೆಯಲ್ಲಿ ನಿಂತು ನೋಡಿದರೆ ಸುತ್ತಲಿನ ನಾಲ್ಕು ಮನೆಗಳು ಕಾಣುತ್ತವೆ. ಅಲ್ಲಿನ ಜನರ ಸಮಸ್ಯೆಗಳಷ್ಟೇ ಗೊತ್ತಾಗುತ್ತವೆ. ಹದ್ದಿನ ಕಣ್ಣಿನಿಂದ ನೋಡಿದರೆ ಮಾತ್ರ ಎಲ್ಲ ಜನರ ಸಮಸ್ಯೆ, ಸಂಕಟ ಅರಿವಾಗುತ್ತದೆ. ಸಂರಕ್ಷಣೆಯ ನೆಪದಲ್ಲಿ ಇಲ್ಲಿರುವ ನೆಲವಾಸಿಗಳನ್ನು ಅನುಮಾನದಿಂದ ನೋಡುವ ಬದಲು ಅವರ ನೋವಿಗೆ ಸ್ಪಂದಿಸುವ ಕೆಲಸ ಆಗಬೇಕು. ಅವರ ಪ್ರಜ್ಞಾವಂತಿಕೆಯ ಮಾತುಗಳಿಗೆ ನಾವು ಕಿವಿಯಾಗಬೇಕು. ಅವರ ಅಸ್ತಿತ್ವವನ್ನು ಮರೆತು ಮುಂದಡಿ ಇಟ್ಟರೆ ಅಭಿವೃದ್ಧಿ ಸಾಧ್ಯವೇ ಎಂಬ ಬಗ್ಗೆ ಚಿಂತನೆ ನಡೆಸಬೇಕು.

ಕಪ್ಪತಗುಡ್ಡದ ಪರಿಸರಕ್ಕೆ ಧಕ್ಕೆ ತರುವಂತಹ ಯಾವುದೇ ಕೈಗಾರಿಕೆಗೆ ಅವಕಾಶ ಕಲ್ಪಿಸುವುದನ್ನು ತೀವ್ರವಾಗಿ ಖಂಡಿಸುತ್ತೇನೆ. ವನ್ಯಜೀವಿಧಾಮದಲ್ಲಿ ಗಣಿಗಾರಿಕೆಗೆ ಅವಕಾಶ ನೀಡಬಾರದು. ಗಣಿಗಾರಿಕೆಯ ಪ್ರಸ್ತಾವಗಳನ್ನು ರಾಜ್ಯ ವನ್ಯಜೀವಿ ಮಂಡಳಿ ಪರಿಶೀಲಿಸುತ್ತದೆ. ಈ ಪ್ರಸ್ತಾವಗಳಿಗೆ ಅನುಮತಿ ನೀಡುವುದು ಬಿಡುವುದು ಮಂಡಳಿಯ ವಿವೇಚನೆಗೆ ಬಿಟ್ಟಿದ್ದು. ಅಕ್ರಮ ಗಣಿಗಾರಿಕೆ ಮಾಡಿದರೆ ಶಿಕ್ಷಿಸಲು ಕಾನೂನು ಇದೆ, ನಿಯಮಗಳಿವೆ. ದಂಡ ವಿಧಿಸಲು ಅವಕಾಶ ಇದೆ. ನಿಯಮಬಾಹಿರ ಚಟುವಟಿಕೆಗಳಿಗೆ ಅವಕಾಶ ನೀಡಲೇಬಾರದು.

ಪರಿಸರ ಸಂರಕ್ಷಣೆಯ ನೆಪದಲ್ಲಿ ಉತ್ತರ ಕರ್ನಾಟಕ ಭಾಗಕ್ಕೆ ಆಗುತ್ತಿರುವ ಅನ್ಯಾಯದ ಬಗ್ಗೆಯೂ ನಾವು ಆಲೋಚನೆ ಮಾಡಬೇಕು. ಹುಬ್ಬಳ್ಳಿ- ಅಂಕೋಲಾ ರೈಲು ಮಾರ್ಗ ಆಗಬೇಕು ಎಂಬುದು ಈ ಭಾಗದ ಜನತೆಯ ಹಲವು ದಶಕಗಳ ಹಂಬಲ. ಪರಿಸರ ಸಂರಕ್ಷಣೆ ಮತ್ತು ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು, ಈ ಯೋಜನೆ ಸಾಕಾರಕ್ಕೆ ಸೂಕ್ತ ಮಾರ್ಗ ಹುಡುಕಬೇಕು. ಈ ರೈಲು ಮಾರ್ಗ ಸಾಕಾರಗೊಂಡರೆ ಕರಾವಳಿ ಮತ್ತು ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಅಪಾರ ಸಂಖ್ಯೆಯ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ. ಜೊತೆಗೆ, ಈ ಭಾಗದ ವಾಣಿಜ್ಯ ವಹಿವಾಟು ಕೂಡ ಸುಗಮವಾಗಲಿದೆ. ಮರಗಳನ್ನು ಕಡಿಯಲಾಗುತ್ತದೆ ಎಂಬ ನೆಪ ಒಡ್ಡಿ ಈ ಯೋಜನೆಗೆ ದಶಕಗಳಿಂದ ಅಡ್ಡಿ ಪಡಿಸಲಾಗುತ್ತಿದೆ.

ಈ ಹಿಂದೆ ಕೊಂಕಣ ರೈಲುಮಾರ್ಗ ಪಶ್ಚಿಮ ಘಟ್ಟದೊಳಗೆ ಹಾದು ಹೋಯಿತು. ಆಗ ಯಾರೂ ಆಕ್ಷೇಪ ಎತ್ತಲಿಲ್ಲ. ಈ ರೈಲು ಮಾರ್ಗ ನಿರ್ಮಾಣದಿಂದ ಕರಾವಳಿಯ ಅಭಿವೃದ್ಧಿಗೆ ಮತ್ತಷ್ಟು ವೇಗ ದೊರಕಿತು. ಒಂದು ವೇಳೆ ಈಗ ಕೊಂಕಣ ರೈಲು ಮಾರ್ಗ ನಿರ್ಮಾಣಕ್ಕೆ ಮುಂದಾಗಿದ್ದರೆ ಎಷ್ಟೊಂದು ಅಡ್ಡಿ ಆತಂಕಗಳು ಎದುರಾಗುತ್ತಿದ್ದವು. ಮಾಧವ ಗಾಡ್ಗೀಳ್, ಕಸ್ತೂರಿರಂಗನ್ ವರದಿ ಎಲ್ಲವೂ ಮುನ್ನೆಲೆಗೆ ಬರುತ್ತಿದ್ದವು. ಪರಿಸರ ಸಂರಕ್ಷಣೆಗೆ ಆದ್ಯತೆ ಸಿಗಬೇಕು ಎಂಬುದು ನಿಜ. ಅದರ ಜತೆಗೆ ಅಭಿವೃದ್ಧಿಯೂ ಆಗಬೇಕು. ಕಪ್ಪತಗುಡ್ಡ ಸಂರಕ್ಷಣೆ, ಹುಬ್ಬಳ್ಳಿ- ಅಂಕೋಲಾ ಯೋಜನೆ ಬೇಡ ಎಂದು ಹೇಳುತ್ತಾ ಎಲ್ಲ ವಿಚಾರಕ್ಕೂ ಅಡ್ಡಿಪಡಿಸುತ್ತಾ ಬಂದರೆ ಉತ್ತರ ಕರ್ನಾಟಕ ಅಭಿವೃದ್ಧಿಯಾಗುವುದು ಯಾವಾಗ. ರಾಜ್ಯದ ರಾಜಧಾನಿ ಬೆಂಗಳೂರು ಮಾತ್ರ ಅಭಿವೃದ್ಧಿಯಾದರೆ ಸಾಕೇ?

ಪ್ರಜಾಪ್ರಭುತ್ವದಲ್ಲಿ 'ಬ್ಯಾಲೆನ್ಸ್ ಆಫ್ ಪವರ್' ಅಂತ ನಾವು ಮಾಡುತ್ತೇವೆ. ಅದೇ ರೀತಿ, ಪ್ರಕೃತಿ ಸಮತೋಲನವೂ ಬೇಕು. ಈ ದಿಸೆಯಲ್ಲಿ ಸರ್ಕಾರ ಕಾರ್ಯೋನ್ಮುಖವಾಗಬೇಕು. ಅಭಿವೃದ್ಧಿ- ಪರಿಸರ ಜತೆ ಜತೆಯಲ್ಲಿ ಸಾಗಬೇಕು. ಹಾಗೆಂದ ಮಾತ್ರಕ್ಕೆ ಲಕ್ಷ್ಮಣ ರೇಖೆಯನ್ನು ದಾಟುವುದೂ ಸರಿಯಲ್ಲ.

ಲೇಖಕ: ಸಂಸದ, ಹಾವೇರಿ ಕ್ಷೇತ್ರ

ನಿರೂಪಣೆ: **ಮಂಜುನಾಥ ಹೆಬ್ಬಾರ್**

ಪದಬಂಧ 5068


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ತಂದೆಯ ತಂದೆ (4)
3.ನಗುವಿನಿಂದ ಕೂಡಿದ ಮುಖ (4)
5.ದುರಸ್ತಿಯನ್ನು ಹೀಗೆನ್ನಿ (3)
6.ವತ್ಸ ನಡುವಿರುವ ವರ್ಷ (4)
7.ಯತಿಗೆ ದೊರೆತಿರುವ ಸೋಡಿ (4)
9.ಈ ತರ ಬಂದಿರುವ ಏರ್ಪಾಟು (4)
11.ಸಂಭ್ರಮಕ್ಕಿಲ್ಲಿ ಗರ ಬಡಿದಿದೆ! (4)
13.ಕೈಯನ್ನು ಕೊನೆಗಿಟ್ಟಿರುವ ಆಳು (3)
14.ಜರಿ ಸೀರೆಯಲ್ಲಿರುವ ಬೆಲೆಯುಳ್ಳ ಮಣಿ (4)
15.ಒಳ್ಳೆಯ ಅಭಿಪ್ರಾಯ (4)

ಮೇಲಿಂದ ಕೆಳಕ್ಕೆ

2.ಓಡುತ್ತಾಹೋಗಿ ಸುದ್ದಿ ಮುಟ್ಟಿಸುವವನು (4)
3. ಮೂರು ಮೈಲುಗಳ ಒಂದು ಅಳತೆ (4)
4.ಆಕಾಶದಲ್ಲಿ ಸಂಚರಿಸುವಂಥದ್ದು (2)
6.ಸಂತನಲ್ಲಿರುವ ಗುರುತು (3)
8.ಇಲ್ಲಿ ಅಂಧಕಾರ ಕವಿದಿದೆ (3)
10.ಈತ ಕೆಟ್ಟ ನಡತೆಯವನು (4)
11.ಸರಸ ಹಾಗೂ ವಿರಸ ಸಮನಾಗಿರುವಿಕೆ (4)
12.ಗಂಡು ಕೋಳಿಯಿದು (2)



5067ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ನಿಷ್ಪಕ್ಷಪಾತ 4.ಆಮೋದ
5.ಮತಿ 7.ವಿಧ
10.ಕರಿ 13.ಪುರ
15.ಮಾರುತ 16.ವಿಮಾನಯಾನ

ಮೇಲಿಂದ ಕೆಳಕ್ಕೆ:
1.ಅಕ್ಷರಸ್ಥ 2.ನಿದರ್ಶನ
3.ತಮ 4.ಆರಾಧಕ
6.ತಿವಿ 8.ಧನವಂತ
9.ಅನುಮಾನ 11.ರಿಪು
12.ಬಡನಡು 14.ರವಿ

ಸುಡೊಕು 5454

	5			7			3	
7			2		3	6		8
		6		4			2	
4		3		1		8		6
	1		9		4		7	
9		8		3		4		1
1		9	3		5		8	
	6			9			1	
5		7	4		1	9		3


5453 ಸುಡೊಕು

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

2	4	1	6	8	3	9	7	5
9	8	5	2	4	7	6	1	3
7	6	3	1	9	5	8	4	2
4	5	9	8	2	1	7	3	6
6	1	7	3	5	4	2	9	8
8	3	2	9	7	6	4	5	1
3	2	4	7	1	8	5	6	9
5	9	6	4	3	2	1	8	7
1	7	8	5	6	9	3	2	4

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಸೆಪ್ಟೆಂಬರ್ 3, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ಸಪ್ತಮಿ ಗಂ. 12-29 ನಕ್ಷತ್ರ: ಅನುರಾಧ ಗಂ. 22-57 ಯೋಗ: ವೈಧೃತಿ ಗಂ. 17-00, ಕರಣ: ವಣಿಜ ಗಂ. 12-29, ಸಿಂಹ ಮಾಸದ 17ನೇ ದಿನ. ರಾಹುಕಾಲ : ಬೆಳಿಗ್ಗೆ 09:00 – 10:30
ಸೂರ್ಯೋದಯ : 06-23 ಸೂರ್ಯಾಸ್ತ : 06-37 ಮುಸ್ಲಿಂ ದಿನಾಂಕ : 06 ಸಫರ್
ದಿನ ವಿಶೇಷ : ರಾಧಾಷ್ಟಮಿ, ಮಹಾಲಕ್ಷ್ಮಿ ವ್ರತಾರಂಭ, ದೂರ್ವಾಷ್ಟಮಿ, ಕೇಲ್ ಮುಹೂರ್ತ (ಕೂರ್ಗ್)
ಅದೃಷ್ಟ ಸಂಖ್ಯೆ : 9, 12

ಮೇಷ: ವೃತ್ತಿ ನಿಪುಣತೆಯಿಂದ ವರಮಾನ ಬರುವ ಕಂಪನಿಗಳಿಂದ ಬೇಡಿಕೆ ಬರುವುದು. ಯಾವುದೇ ವಿಚಾರವಾದರೂ ತೀರ್ಮಾನ ಕೈಗೊಳ್ಳುವ ಮುನ್ನ ಮನೆಯವರೊಂದಿಗೆ ಹಾಗೂ ತಿಳಿದವರೊಂದಿಗೆ ಚರ್ಚಿಸಿ ನಿರ್ಧರಿಸಿ.

ವೃಷಭ: ಜವಾಬ್ದಾರಿ ಹೆಚ್ಚಿರುವುದರಿಂದ ಸೃಜನಾತ್ಮಕವಾಗಿ ಕಾರ್ಯ ನಿರ್ವಹಿಸಿ. ಆರ್ಥಿಕತೆಗೆ ಹೆಂಡತಿಯ ಸಹಕಾರ ಅಗತ್ಯವೆನಿಸಲಿದೆ. ಷೇರು ಬಂಡವಾಳಗಳನ್ನು ಹೆಚ್ಚಿಸಿಕೊಳ್ಳುವಿರಿ.

ಮಿಥುನ: ಅವಿವಾಹಿತರಿಗೆ ಕಂಕಣ ಬಲ ಕೂಡಿ ಬರುವ ಯೋಗವಿದೆ. ಈಶ್ವರನ ಅನುಗ್ರಹವು ನಿಮ್ಮ ಪಾಲಿಗೆ ಸಂಪೂರ್ಣವಿದ್ದು ತೊಂದರೆಗಳನ್ನು ನಿವಾರಿಸಿ ವೃತ್ತಿರಂಗದಲ್ಲಿ ಮುಂದುವರಿಯಲು ಪೂರಕವಾಗುತ್ತದೆ.

ಕರ್ಕಾಟಕ: ಇಂದಿನ ಸಂಧಾನ ಅಥವಾ ಕರಾರು ಒಪ್ಪಂದಗಳು ಅನುಕೂಲಕರ ಎನಿಸಲಿದೆ. ಬದಲಾವಣೆಯನ್ನು ಬಯಸಿದ ನಿಮಗೆ ಇದು ಹರ್ಷದ ಸಮಯವಾಗಿದೆ. ಸಾಂಸಾರಿಕವಾಗಿ ಸುಖ- ದುಃಖಗಳ ಸಮ್ಮಿಶ್ರ ಫಲವಿದೆ.

ಸಿಂಹ: ವೈಯಕ್ತಿಕ ಕಷ್ಟಗಳನ್ನು ಯಾರಲ್ಲಿಯೂ ಹೇಳಿಕೊಳ್ಳಬೇಡಿ. ಸಸಾರಕ್ಕೆ ಒಳಗಾಗುವ ಸನ್ನಿವೇಶಗಳಿರುವುದು. ಶ್ರೀಮಂತ ಬದುಕಿನ ಜೀವನ ದಲ್ಲಿ ಆಸಕ್ತಿ. ಕಾನೂನು ಸಂಬಂಧೀ ವಿಷಯಗಳ ಅಧ್ಯಯನದಲ್ಲಿ ಆಸಕ್ತಿ ಹೆಚ್ಚಲಿದೆ.

ಕನ್ಯಾ: ನ್ಯಾಯವಾದಿಗಳಿಗೆ ಉದ್ಯೋಗದಲ್ಲಿ ಹೆಚ್ಚಿನ ಶ್ರಮ ಅಗತ್ಯವೆನಿಸಲಿದೆ. ನಿಮ್ಮ ಸಿಟ್ಟು, ಒರಟುತನ ನಿಮ್ಮ ಏಕಾಂಗಿತನಕ್ಕೆ ಮುಖ್ಯ ಕಾರಣವಾಗುವುದು. ನಿಮ್ಮ ಸಂಪಾದನೆಯನ್ನು ನೋಡಿದ ಕೆಲವರು ಮತ್ಸರ ಪಡುವಂತಾಗುತ್ತದೆ.

ತುಲಾ: ಈ ದಿನ ನೀವು ಯೋಜನೆಯನ್ನು ಪೂರ್ಣಗೊಳಿಸುವ ವಿಚಾರವಾಗಿ ಗಡಿಬಿಡಿಯ ವಾತಾವರಣ ಇರಲಿದೆ. ಎಲ್ಲಾ ಕೆಲಸಗಳೂ ತ್ವರಿತಗತಿಯಲ್ಲಿ ಸಾಗುವುದು. ದುರ್ಗಾಪರಮೇಶ್ವರಿಯ ಆರಾಧನೆ ಶುಭ ತರಲಿದೆ.

ವೃಶ್ಚಿಕ: ಹಿಂದೆಂದೂ ಮಾಡದ ಕೆಲಸಗಳನ್ನು ಈಗ ಮಾಡಬೇಕಾಗುವುದು. ಜಾಗ್ರತೆ ವಹಿಸಿ. ವಾಹನದ ಬಿಡಿ ಭಾಗಗಳ ಮಾರಾಟಗಾರರಿಗೆ ಹೆಚ್ಚಿನ ಲಾಭ ಉಂಟಾಗುವುದು. ಕೆಲಸದ ಮುಕ್ತಾಯ ಬಹಳ ಆಯಾಸವಾಗುವುದು.


ಧನು: ಬಹಳ ಬೇಗ ಗುರಿ ತಲುಪಬೇಕು ಎಂಬ ಹಂಬಲವು ನಿಮ್ಮ ಫಲಿತಾಂಶಕ್ಕೆ ಅಡ್ಡಿ ಮಾಡುವ ಸಾಧ್ಯತೆಯಿದೆ. ರಾಜಕೀಯ ರಂಗದಲ್ಲಿ ಜನಪ್ರಿಯತೆಯನ್ನು ಪಡೆಯುವಿರಿ. ಅಧ್ಯಾಪಕ ವರ್ಗದವರಿಗೆ ಹೆಚ್ಚಿನ ಕೆಲಸಗಳು ಇರಲಿದೆ.

ಮಕರ: ಪತ್ರಿಕೆ ಮತ್ತು ಕೆಲವು ಖಾಸಗಿ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುವವರಿಗೆ ಕೆಲಸದ ಅಸ್ಥಿರತೆ ಅನುಭವಕ್ಕೆ ಬರಲಿದೆ. ರಿಯಲ್ ಎಸ್ಟೇಟ್ ವ್ಯವಹಾರಸ್ಥರಿಗೆ ಕಾರ್ಯ ಸಾಧನೆಗೆ ಅನುಕೂಲಕರವಾದ ವಾತಾವರಣ ಸಿಗುವುದು.

ಕುಂಭ: ನೈತಿಕ ಜವಾಬ್ದಾರಿಗಳ ಕಡೆಗೆ ನಿಮ್ಮ ಹೆಚ್ಚಿನ ಗಮನವಿರಲಿ. ನಿಮ್ಮ ಕೆಲಸ ಕಾರ್ಯಗಳು ಯಾವುದೇ ಆತಂಕವಿಲ್ಲದೆ ನಡೆಯುವುದು. ಕ್ಷಣಿಕ ಸುಖಕ್ಕಾಗಿ ಅಧಿಕ ಮಟ್ಟದ ಹಣ ವ್ಯಯ ಮಾಡುವುದು ಸರಿಯಲ್ಲ.

ಮೀನ: ಇಂದು ನೀವು ತೆಗೆದುಕೊಳ್ಳುವ ನಿರ್ಧಾರವು ಘರ್ಷಣೆ ಉಂಟಾಗುವುದಕ್ಕೆ ಮೂಲ ಕಾರಣವಾಗುತ್ತದೆ. ಮೇಲಧಿಕಾರಿಗಳಿಂದ ಪ್ರಶಂಸೆಯ ನುಡಿಗಳನ್ನು ಕೇಳುವಂತಾಗಲಿದೆ.

ಷೇರುಪೇಟೆ ವಹಿವಾಟು 36



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,543
ಇಂದಿನ ಅಂತ್ಯ	17,539
▼	4
ದಿನದ ಕನಿಷ್ಠ	17,476

ವಿನಿಮಯ ದರ

$ ಡಾಲರ್	79.87
£ ಪೌಂಡ್	92.35
€ ಯುರೊ	79.85
¥ ಯೆನ್ (100ಕ್ಕೆ)	58

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹455
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹465

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1655 (1665)
ಸೋಯಾ (ರಿಫೈನ್ಡ್)	₹1240 (1250)
ಸೂರ್ಯಕಾಂತಿ (ರಿಫೈನ್ಡ್)	₹1450 (1450
ಪಾಮೋಲಿನ್	₹1000 (1025)

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹310-459
ದ್ವಿತಳಿ (ಬಿ.ವಿ)	₹355-806

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹150.50
ಆರ್‌ಎಸ್‌ಎಸ್-5	₹141
ಗುಡ್ ಲಾಟ್	₹135

ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು	
1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

₹5 ಕೋಟಿ ಮೀರಿದ ತೆರಿಗೆ ವಂಚನೆ: ತನಿಖೆಗೆ ಅವಕಾಶ

ನವದೆಹಲಿ (ಪಿಟಿಐ): ₹5 ಕೋಟಿಗೂ ಹೆಚ್ಚಿನ ಮೊತ್ತದ ಜಿಎಸ್‌ಟಿ ವಂಚನೆ ಪ್ರಕರಣಗಳಲ್ಲಿ ತಪ್ಪಿತಸ್ಥರ ವಿರುದ್ಧ ಅಧಿಕಾರಿಗಳು ತನಿಖೆ ಆರಂಭಿಸಬಹುದು ಎಂದು ಕೇಂದ್ರ ಹಣಕಾಸು ಸಚಿವಾಲಯ ಶುಕ್ರವಾರ ಹೇಳಿದೆ.

ಆದರೆ, ತೆರಿಗೆ ವಂಚನೆಯ ಹಿನ್ನೆಲೆ ಇರುವವರು ಅಥವಾ ವಿಚಾರಣೆಯ ಸಂದರ್ಭದಲ್ಲಿ ತಪ್ಪಿತಸ್ಥರನ್ನು ಬಂಧಿಸಿದ್ದರೆ ಅಂತಹ ಸಂದರ್ಭಗಳಲ್ಲಿ ವಂಚನೆ ಮೊತ್ತದ ಮಿತಿಯು ₹ 5 ಕೋಟಿಗೂ ಹೆಚ್ಚು ಇರಬೇಕು ಎಂದೇನೂ ಇಲ್ಲ ಎಂದು ತಿಳಿಸಿದೆ.

ತೆರಿಗೆ ಅಧಿಕಾರಿಗಳು ತನಿಖೆ ಆರಂಭಿಸುವುದಕ್ಕೆ ಸಂಬಂಧಿಸಿದಂತೆ ಹಣಕಾಸು ಸಚಿವಾಲಯದ ಅಡಿಯಲ್ಲಿ ಬರುವ ತನಿಖಾ ವಿಭಾಗವು ಶುಕ್ರವಾರ ಕೆಲವೊಂದು ಸೂಚನೆಗಳನ್ನು ನೀಡಿದೆ. ತನಿಖೆ ಆರಂಭಿಸಲು ಪೂರಕ ಸಾಕ್ಷ್ಯಗಳು ಲಭ್ಯವಿರುವುದು ಮುಖ್ಯವಾಗುತ್ತದೆ ಎಂದು ಅದು ತಿಳಿಸಿದೆ. ವಿಚಾರಣೆ ವೇಳೆ ತಪ್ಪಿತಸ್ಥರನ್ನು ಬಂಧಿಸಿದ್ದು, ಜಾಮೀನು ಸಿಗದೇ ಇದ್ದರೆ, ವ್ಯಕ್ತಿಯನ್ನು ಬಂಧಿಸಿದ 60 ದಿನಗಳ ಒಳಗಾಗಿ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಬೇಕು. ಅಪರಾಧದ ಸ್ವರೂಪ ಮತ್ತು ತೀವ್ರತೆ, ತೆರಿಗೆ ವಂಚನೆಯ ಪ್ರಮಾಣದ ಆಧಾರದ ಮೇಲೆ ಪ್ರಕರಣದಿಂದ ಪ್ರಕರಣಕ್ಕೆ ನಿರ್ಧಾರಗಳು ಬದಲಾಗಬೇಕು ಎಂದೂ ತಿಳಿಸಿದೆ.

ರೂಪಾಯಿ 31 ಪೈಸೆ ಇಳಿಕೆ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಶುಕ್ರವಾರ 31 ಪೈಸೆ ಇಳಿಕೆ ಕಂಡಿತು. ಒಂದು ಡಾಲರ್‌ಗೆ ₹79.87ರಂತೆ ವಿನಿಮಯಗೊಂಡಿತು.

ಡಾಲರ್‌ಗೆ ಬೇಡಿಕೆ ಹೆಚ್ಚಾಗಿರುವುದು ಹಾಗೂ ಏಷ್ಯಾದ ಷೇರುಪೇಟೆಗಳಲ್ಲಿ ನಷ್ಟ ಆಗಿರುವುದು ರೂಪಾಯಿ ಮೌಲ್ಯ ಕುಸಿತಕ್ಕೆ ಪ್ರಮುಖ ಕಾರಣಗಳಾಗಿವೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಏರಿಕೆಯೂ ರೂಪಾಯಿ ಮೇಲೆ ಒತ್ತಡ ಉಂಟುಮಾಡಿದೆ.

ಆರ್‌ಬಿಐನ ಹಣಕಾಸು ನೀತಿ ಸಮಿತಿ ಸದಸ್ಯ ಜೆ.ಆರ್. ವರ್ಮಾ

'ರೆಪೊ ಏರಿಕೆ ಪರಿಣಾಮ ಅಸ್ಪಷ್ಟ'

ಮುಂಬೈ (ರಾಯಿಟರ್ಸ್): ಹಣದುಬ್ಬರ ನಿಯಂತ್ರಿಸಲು ರಿಸರ್ವ್ ಬ್ಯಾಂಕ್ (ಆರ್‌ಬಿಐ) ಈಚೆಗೆ ಮಾಡಿರುವ ರೆಪೊ ದರ ಏರಿಕೆಯು ಎಷ್ಟರಮಟ್ಟಿಗೆ ಪರಿಣಾಮ ಬೀರಿದೆ ಎನ್ನುವುದು ಇನ್ನೂ ಸ್ಪಷ್ಟವಾಗಿಲ್ಲ ಎಂದು ಆರ್‌ಬಿಐ ಹಣಕಾಸು ನೀತಿ ಸಮಿತಿಯ (ಎಂಪಿಸಿ) ಸದಸ್ಯ ಜೆ.ಆರ್. ವರ್ಮಾ ಹೇಳಿದ್ದಾರೆ.

ಆರ್ಥಿಕ ಸ್ಥಿತಿಯ ಆಧಾರದ ಮೇಲೆ ಬಡ್ಡಿದರ ಹೊಂದಾಣಿಕೆಯ ಪ್ರಮಾಣವು ನಿರ್ಧಾರವಾಗಲಿದೆ ಎಂದೂ ಅವರು ತಿಳಿಸಿದ್ದಾರೆ.

'ಆರ್ಥಿಕ ಬೆಳವಣಿಗೆಯು ಉತ್ತಮವಾಗಿದ್ದರೆ, ಹಣದುಬ್ಬರವನ್ನು ಶೇ 4ಕ್ಕೆ ಇಳಿಕೆ ಮಾಡುವ ನಿಟ್ಟಿನಲ್ಲಿ ಹೆಚ್ಚಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆದರೆ, ಆರ್ಥಿಕತೆಯು ಬೆಳವಣಿಗೆ ಸಾಧಿಸಲು ಹೆಣಗಾಡುತ್ತಿದ್ದಲ್ಲಿ ಬಡ್ಡಿದರದಲ್ಲಿ ನಿಧಾನಗತಿಯ ಹೊಂದಾಣಿಕೆ ಸಾಕಾಗುತ್ತದೆ' ಎಂದು ಅವರು ಹೇಳಿದ್ದಾರೆ.



ಆರ್‌ಬಿಐ ಆಗಸ್ಟ್ ತಿಂಗಳಿನಲ್ಲಿ ರೆಪೊ ದರವನ್ನು ಶೇ 0.50ರಷ್ಟು ಹೆಚ್ಚಿಸಿದೆ. ಇದರಿಂದಾಗಿ ಮೇ ತಿಂಗಳಿನಿಂದ ಆಗಸ್ಟ್‌ವರೆಗೆ ರೆಪೊ ದರವು ಒಟ್ಟಾರೆ ಶೇ 1.40ರಷ್ಟು ಹೆಚ್ಚಾಗಿದೆ. ಸೆಪ್ಟೆಂಬರ್ 30ರಂದು ಆರ್‌ಬಿಐ ರೆಪೊ ದರವನ್ನು ಮತ್ತೆ ಶೇ 0.50ರಷ್ಟು ಹೆಚ್ಚಿಸುವ ನಿರೀಕ್ಷೆ ಮಾಡಲಾಗಿದೆ.

'ನಗದು ಲಭ್ಯತೆಯನ್ನು ನಿಯಂತ್ರಿಸಲು ಬ್ಯಾಂಕ್‌ಗಳ ಮಧ್ಯೆ ವಿತರಿಸುವ ಅಲ್ಪಾವಧಿಯ ಸಾಲದ ಬಡ್ಡಿದರವನ್ನು ಗರಿಷ್ಠ ಮಟ್ಟದಲ್ಲಿ ಇಡಲಾಗಿದೆ. ಹೀಗಾಗಿ ಬಡ್ಡಿದರ ಏರಿಕೆಯು ನಿಜವಾಗಿಯೂ ಶೇ 1.40ರಷ್ಟು ಅಲ್ಲ, ಬದಲಾಗಿ ಶೇ 2.05ರಷ್ಟು ಹೆಚ್ಚಾಗಿದೆ' ಎಂದು ಅವರು ವಿವರಿಸಿದ್ದಾರೆ.

'ಸದ್ಯ ನಾವು ಗರಿಷ್ಠ ಹಣದುಬ್ಬರ ಮತ್ತು ಮಂದಗತಿಯ ಆರ್ಥಿಕ ಬೆಳವಣಿಗೆಯ ಸ್ಥಿತಿಯಲ್ಲಿ ಇದ್ದೇವೆ. ಹೀಗಾಗಿ ನೈಜ ಬಡ್ಡಿದರವು 'ತಟಸ್ಥ ದರ'ಕ್ಕಿಂತಲೂ (ಶೇ 6 ರಿಂದ ಶೇ 6.25ರವರೆಗೆ) ತುಸು ಹೆಚ್ಚಿನ ಮಟ್ಟದಲ್ಲಿ ಇರಲಿದೆ. ನೈಜ ಬಡ್ಡಿದರವನ್ನು ಹಾಲಿ ಇರುವ ಹಣದುಬ್ಬರದ ಪ್ರಮಾಣದ ಆಧಾರದ ಮೇಲೆ ಅಂದಾಜು ಮಾಡುವುದಕ್ಕೆ ಬದಲಾಗಿ ಮೂರರಿಂದ ನಾಲ್ಕು ತ್ರೈಮಾಸಿಕಗಳ ಹಣದುಬ್ಬರವನ್ನು ಒಟ್ಟುಗೂಡಿಸಿ ಅಂದಾಜು ಮಾಡಬೇಕಾಗುತ್ತದೆ' ಎಂದು ತಿಳಿಸಿದ್ದಾರೆ.

'ಶೇ 5ಕ್ಕೆ ಇಳಿಯಲಿದೆ ಹಣದುಬ್ಬರ'

ಹಣದುಬ್ಬರವು ಮುಂದಿನ ವರ್ಷದ ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ಶೇ 5ರ ಆಸುಪಾಸಿಗೆ ಇಳಿಕೆ ಕಾಣುವ ನಿರೀಕ್ಷೆ ಇದೆ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ್ ದಾಸ್ ಅವರು ಜೀ ಬಿಸಿನೆಸ್ ಟಿ.ವಿ.ಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

ಚಿಲ್ಲರೆ ಹಣದುಬ್ಬರವು ಹಲವು ತಿಂಗಳುಗಳಿಂದ ಶೇ 6ರ ಮಟ್ಟಕ್ಕಿಂತಲೂ ಹೆಚ್ಚಿಗೆ ಇದೆ. ಜುಲೈನಲ್ಲಿ ಚಿಲ್ಲರೆ ಹಣದುಬ್ಬರವು ಶೇ 6.71ರಷ್ಟಾಗಿದೆ.

ಆರ್ಥಿಕ ಬೆಳವಣಿಗೆಯ ಮೇಲೆ ಹೆಚ್ಚಿನ ಪರಿಣಾಮ ಆಗದೇ ಇರುವ ರೀತಿಯಲ್ಲಿ ಹಣದುಬ್ಬರವನ್ನು ನಿಯಂತ್ರಿಸಲು ಹಣಕಾಸು ನೀತಿಯು ಗಮನ ಹರಿಸಲಿದೆ ಎಂದೂ ಅವರು ಹೇಳಿದ್ದಾರೆ. ವಿದೇಶಿ ವಿನಿಮಯ ಮೀಸಲು ಹೆಚ್ಚಿನ ಮಟ್ಟದಲ್ಲಿರುವುದು ರೂಪಾಯಿ ಸ್ಥಿರತೆಗೆ ನೆರವಾಗಿದೆ ಎಂದಿದ್ದಾರೆ.

ಮೊಬಿಕ್ವಿಕ್ ವರಮಾನ ಶೇ 80ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಮೊಬಿಕ್ವಿಕ್ ಕಂಪನಿಯ ವರಮಾನವು 2022ರ ಮಾರ್ಚ್‌ಗೆ ಕೊನೆಗೊಂಡ ಹಣಕಾಸು ವರ್ಷಲ್ಲಿ ಶೇ 80ರಷ್ಟು ಹೆಚ್ಚಾಗಿದ್ದು ₹ 543 ಕೋಟಿಗೆ ಏರಿಕೆ ಆಗಿದೆ.

2020–21ನೇ ಹಣಕಾಸು ವರ್ಷದಲ್ಲಿ ಕಂಪನಿಯ ಒಟ್ಟಾರೆ ವರಮಾನ ₹302 ಕೋಟಿಗೆ ತಲುಪಿತ್ತು.

ಸದ್ಯ, ಪಾವತಿ ಮತ್ತು ಡಿಜಿಟಲ್ ಹಣಕಾಸು ಸೇವೆಗಳ ಮೂಲಕ ವರಮಾನ ಗಳಿಸುತ್ತಿರುವುದಾಗಿ ಅದು ತಿಳಿಸಿದೆ.

ವಹಿವಾಟು ಸ್ಥಿರತೆ ಹಾದಿಗೆ ಮರಳುತ್ತಿದ್ದು, ಅಲ್ಪಾವಧಿಯ ಹಣಕಾಸಿನ ಗುರಿಗಳನ್ನು ಸಾಧಿಸುವದಲ್ಲದೇ ದೀರ್ಘಾವಧಿಗೆ ಕಂಪನಿಯನ್ನು ಪೂರ್ಣ ಪ್ರಮಾಣದಲ್ಲಿ ಡಿಜಿಟಲ್ ಬ್ಯಾಂಕ್ ಆಗಿ ಪರಿವರ್ತಿಸುವ ವಿಶ್ವಾಸವಿದೆ ಎಂದು ಕಂಪನಿಯ ಸಹ ಸ್ಥಾಪಕಿ ಉಪಾಸನಾ ತಕು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಂಪನಿಯು 2021ರ ಜುಲೈನಲ್ಲಿ ಐಪಿಒಗಾಗಿ ಕರಡು ದಾಖಲೆಪತ್ರಗಳನ್ನು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ಸಲ್ಲಿಸಿದೆ. ಐಪಿಒ ಮೂಲಕ ₹1,500 ಕೋಟಿ ಬಂಡವಾಳ ಸಂಗ್ರಹಿಸಲು ಉದ್ದೇಶಿಸಿದೆ. ಐಪಿಒ ಮೂಲಕ ಷೇರುಪೇಟೆ ಪ್ರವೇಶಿಸಲು ಕಂಪನಿಗೆ 2022ರ ನವೆಂಬರ್ ವರೆಗೆ ಅವಕಾಶ ಇದೆ.

ಮಾರುಕಟ್ಟೆಯು ಸ್ಥಿರತೆ ಹಾದಿಗೆ ಮರಳಿದ ಬಳಿಕ ಐಪಿಒಗೆ ಬರಲಾಗುವುದು ಎಂದು ಉಪಾಸನಾ ಹೇಳಿದ್ದಾರೆ. 2022ನೇ ಹಣಕಾಸು ವರ್ಷದಲ್ಲಿ ಕಂಪನಿಯ ಒಟ್ಟು ಬಳಕೆದಾರರ ಸಂಖ್ಯೆ 12.7 ಕೋಟಿ ಆಗಿದೆ.

ವಿದೇಶಿ ವಿನಿಮಯ ಮೀಸಲು ಸಂಗ್ರಹ ಇಳಿಕೆ



ಮುಂಬೈ (ಪಿಟಿಐ): ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹವು ಆಗಸ್ಟ್ 26ಕ್ಕೆ ಕೊನೆಗೊಂಡ ವಾರದಲ್ಲಿ ₹23,880 ಕೋಟಿ ಕಡಿಮೆ ಆಗಿದ್ದು, ₹44.65 ಲಕ್ಷ ಕೋಟಿಗೆ ಇಳಿಕೆ ಆಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಮಾಹಿತಿ ನೀಡಿದೆ.

ಆಗಸ್ಟ್ 19ಕ್ಕೆ ಕೊನೆಗೊಂಡ ವಾರದಲ್ಲಿ ಮೀಸಲು ಸಂಗ್ರಹವು ₹44.89 ಲಕ್ಷ ಕೋಟಿ ಇತ್ತು ಎಂದು ತಿಳಿಸಿದೆ.

ಮೀಸಲು ಸಂಗ್ರಹದ ಬಹುಪಾಲನ್ನು ವಿದೇಶಿ ಕರೆನ್ಸಿಗಳು ಹೊಂದಿವೆ. ಹೀಗಾಗಿ ವಿದೇಶಿ ಕರೆನ್ಸಿಗಳ ಸಂಗ್ರಹದಲ್ಲಿ ಇಳಿಕೆ ಆದರೆ ಅದು ಒಟ್ಟಾರೆ ಮೀಸಲು ಸಂಗ್ರಹ ಮೇಲೆ ಪರಿಣಾಮ ಬೀರುತ್ತದೆ.

ವಿದೇಶಿ ಕರೆನ್ಸಿಗಳ ಸಂಗ್ರಹವು ₹20,457 ಕೋಟಿ ಕಡಿಮೆ ಆಗಿ ₹39.68 ಲಕ್ಷ ಕೋಟಿಗೆ ತಲುಪಿದೆ. ಚಿನ್ನದ ಮೀಸಲು ಸಂಗ್ರಹ ₹2,157 ಕೋಟಿ ಕಡಿಮೆ ಆಗಿದೆ. ಅಂತರರಾಷ್ಟ್ರೀಯ ಹಣಕಾಸು ನಿಧಿಯಲ್ಲಿ (ಐಎಂಎಫ್) ಇರುವ ಭಾರತದ ಮೀಸಲು ಸಂಗ್ರಹವು 79 ಕೋಟಿ ಕಡಿಮೆ ಆಗಿದ್ದು, ₹39,163 ಕೋಟಿಗೆ ಇಳಿಕೆ ಕಂಡಿದೆ ಎಂದು ಆರ್‌ಬಿಐ ತಿಳಿಸಿದೆ.

ಜಿಆರ್‌ಟಿ: ಮದುವೆ ಸಮಾರಂಭಗಳಿಗೆ ವಿಶೇಷ ಆಭರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಆರ್‌ಟಿ ಜುವೆಲರ್ಸ್ ಕಂಪನಿಯು ಮದುವೆ ಸಮಾರಂಭಗಳಿಗಾಗಿ ವಿಶೇಷವಾಗಿ ಸಂಗ್ರಹಿಸಲಾಗದ ಆಭರಣಗಳನ್ನು ಬಿಡುಗಡೆ ಮಾಡಿದೆ.

ಚಿನ್ನದ ವಜ್ರಗಳು, ಪ್ಲಾಟಿನಂ, ಬೆಳ್ಳಿ ಮತ್ತು ಬೆಲೆಬಾಳುವ ರತ್ನದ ಹರಳುಗಳ ಉಂಗುರುಗಳು, ಬಳೆ, ಕಿವಿಯೋಲೆ, ಹಾರಗಳು ಮತ್ತು ತೋಳುಪಟ್ಟಿಗಳಂತಹ ವಿವಿಧ ಬಗೆಯ ಆಭರಣಗಳನ್ನು ಈ ಸಂಗ್ರಹವು ಒಳಗೊಂಡಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

'ಮದುವೆ ಸಮಾರಂಭಗಳಲ್ಲಿ ಆಭರಣಗಳು ಯಾವಾಗಲೂ ನಿರ್ಣಾಯಕ ಮತ್ತು ಭಾವನಾತ್ಮಕ ಪಾತ್ರ ವಹಿಸುತ್ತವೆ. ನವವಿವಾಹಿತರು ಮತ್ತು ಅವರ ಕುಟುಂಬಗಳು ಚಿನ್ನಾಭರಣಗಳಿಗೆ ನೀಡುವ ಪ್ರಾಮುಖ್ಯತೆಯನ್ನು ನಾವು ಅರ್ಥಮಾಡಿಕೊಂಡಿದ್ದು, ಈ ಸಂಗ್ರಹವನ್ನು ಬಿಡುಗಡೆ ಮಾಡಲಾಗಿದೆ' ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಜಿ.ಆರ್. ಅನಂತ ಪದ್ಮನಾಭನ್ ಹೇಳಿದರು.

ಸ್ಟಾರ್‌ಬಕ್ಸ್ ಸಿಇಒ ಆಗಿ ಭಾರತ ಮೂಲದ ನರಸಿಂಹನ್ ನೇಮಕ

ನ್ಯೂಯಾರ್ಕ್ (ರಾಯಿಟರ್ಸ್): ಅಮೆರಿಕದ ಬಹುರಾಷ್ಟ್ರೀಯ ಕಂಪನಿ ಸ್ಟಾರ್‌ಬಕ್ಸ್‌ನ ನೂತನ ಸಿಇಒ ಆಗಿ ಭಾರತ ಮೂಲದ ಲಕ್ಷ್ಮಣ್ ನರಸಿಂಹನ್ ಅವರನ್ನು ನೇಮಿಸಲಾಗಿದೆ.

ನರಸಿಂಹನ್ ಅವರು 2023ರ ಏಪ್ರಿಲ್ 1ರಂದು ಅಧಿಕಾರ ವಹಿಸಿಕೊಳ್ಳಲಿದ್ದಾರೆ. ನರಸಿಂಹನ್ ಅವರು ಸದ್ಯ ರೆಕಿಟ್ ಕಂಪನಿಯ ಸಿಇಒ ಆಗಿದ್ದು, ಸೆಪ್ಟೆಂಬರ್ 30ರಂದು ಕಂಪನಿ ತೊರೆಯಲಿದ್ದಾರೆ.

ಭಾರತ ಮೂಲದ ಪ್ರಮುಖ ಸಿಇಒಗಳು: 1) ಸುಂದರ್ ಪಿಚೈ–ಗೂಗಲ್ ಎಲ್‌ಎಲ್‌ಸಿ ಆ್ಯಂಡ್ ಅಲ್ಫಾಬೆಟ್ 2) ಸತ್ಯ ನಾದೆಲ್ಲ–ಮೈಕ್ರೊಸಾಫ್ಟ್ 3) ಪರಾಗ್ ಅಗರ್ವಾಲ್–ಟ್ವಿಟರ್ 4) ಲೀನಾ ನಾಯರ್–ಚಾನಲ್ 5) ಅರವಿಂದ ಕೃಷ್ಣ–ಐಬಿಎಂ ಗ್ರೂಪ್ 6) ಶಂತನು ನಾರಾಯಣ್–ಅಡೋಬಿ ಇಂಕ್ 7) ಅಜಯ್‌ಪಾಲ್ ಸಿಂಗ್ ಬಂಗಾ–ಮಾಸ್ಟರ್‌ಕಾರ್ಡ್ 8) ಜಯಶ್ರೀ ಉಲ್ಲಾಳ್–ಅರಿಸ್ಟಾ ನೆಟ್‌ವರ್ಕ್ಸ್ 9) ರಾಜೀವ್ ಸೂರಿ–ನೋಕಿಯಾ ಇಂಕ್ 10) ಜಾರ್ಜ್ ಕುರಿಯನ್–ನೆಟ್ ಆ್ಯಪ್

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-600
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	500

ಅಡಿಕೆ

ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹೊಸನಗರ	
ಬಿಳಿಗೋಟು	22099-22099
ಚಾಲಿ	40000-40000
ಕೆಂಪುಗೋಟು	35199-40069
ರಾಶಿ	48239-55629
ಕಾರ್ಕಳ	
ಹೊಸತು	40000-47500
ಕುಮಟ	
ಚಿಪ್ಪು	30009-33999
ಕೋಕ	20169-33599
ಫ್ಯಾಕ್ಟರಿ	13509-23249
ಹಳೆಚಾಲಿ	44089-47639
ಹೊಸಚಾಲಿ	37569-42099
ಪುತ್ತೂರು	
ಹೊಸತು	34500-47500
ಸಿದ್ದಾಪುರ	
ಚಿಪ್ಪು	31299-35699
ಕೋಕ	26699-35112
ಚಾಲಿ	38699-42999
ಕೆಂಪುಗೋಟು	28119-33699
ರಾಶಿ	51799-52209
ಶಿರಸಿ	
ಬೆಟ್ಟೆ	40899-49611
ಬಿಳಿಗೋಟು	25099-36599
ಚಾಲಿ	37226-43811
ರಾಶಿ	46499-52419
ಯಲ್ಲಾಪುರ	
ಚಿಪ್ಪು	30099-35499
ಕೋಕ	19178-32612
ಚಾಲಿ	36899-43199
ಕೆಂಪುಗೋಟು	30399-35629
ರಾಶಿ	49899-56899
ತಟ್ಟಿಬೆಟ್ಟೆ	38000-47367

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16700	16000	16350	235.25 ಸೆಂಟ್ಸ್
ಎಸಿ	9100	8500	8950	
ಆರ್‌ಪಿ	9800	9800	9800	ಲಂಡನ್
ಆರ್‌ಸಿ	4800	4600	4675	2250 ಡಾಲರ್ಸ್

ಟ್ವಿಟರ್ ಖಾತೆ ನಿರ್ಬಂಧ: ಕೇಂದ್ರದ ಸಮರ್ಥನೆ

ಬೆಂಗಳೂರು: 'ರಾಷ್ಟ್ರೀಯತೆ, ಸಾರ್ವಜನಿಕ ಹಿತದೃಷ್ಟಿ ಕಾಪಾಡುವ, ಗುಂಪು ಘರ್ಷಣೆ ಮತ್ತು ಲಿಂಚಿಂಗ್‌ನಂತಹ (ಗುಂಪು ಹಲ್ಲೆ) ದುಷ್ಕೃತ್ಯಗಳನ್ನು ನಿಯಂತ್ರಿಸುವ ಉದ್ದೇಶದಿಂದ ಕೆಲವು ಖಾತೆಗಳನ್ನು ನಿರ್ಬಂಧಿಸಲು ಟ್ವಿಟರ್‌ಗೆ ಆದೇಶಿಸಲಾಗಿದೆ' ಎಂದು ಕೇಂದ್ರ ಸರ್ಕಾರ ಹೈಕೋರ್ಟ್‌ಗೆ ಸ್ಪಷ್ಟಪಡಿಸಿದೆ.

'ಮಾಹಿತಿ ತಂತ್ರಜ್ಞಾನ (ಐಟಿ) ಕಾಯ್ದೆ-2000ದ ಕಲಂ 69ಎ ಗೆ ವಿರುದ್ಧವಾಗಿರುವ 1,400ಕ್ಕೂ ಹೆಚ್ಚು ಟ್ವಿಟರ್ ಖಾತೆಗಳನ್ನು ಬ್ಲಾಕ್ ಮಾಡಬೇಕು' ಎಂಬ ನೋಟಿಸ್‌ಗಳನ್ನು ಪ್ರಶ್ನಿಸಿ 'ಟ್ವಿಟರ್' ಕಂಪನಿ ಸಲ್ಲಿಸಿರುವ ರಿಟ್ ಅರ್ಜಿಗೆ ಸಂಬಂಧಿಸಿದಂತೆ ಸಲ್ಲಿಸಲಾಗಿರುವ ಆಕ್ಷೇಪಣೆಯಲ್ಲಿ ಕೇಂದ್ರ ಸರ್ಕಾರ ತನ್ನ ಕ್ರಮವನ್ನು ಸಮರ್ಥಿಸಿಕೊಂಡಿದೆ.

'ಸುಳ್ಳು ಸುದ್ದಿ ಹಾಗೂ ಉದ್ದೇಶಪೂರ್ವಕ ಅಸಂಬದ್ಧ ಮಾಹಿತಿಗಳ ಪ್ರಸರಣ ಮತ್ತು ಹಂಚಿಕೆಯನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಟ್ವಿಟರ್ ಪರಿಣಾಮಕಾರಿ ಕ್ರಮ ಕೈಗೊಳ್ಳುತ್ತಿಲ್ಲ. ದೇಶದ ಸಮಗ್ರತೆ, ಸಾರ್ವಭೌಮತೆ, ರಾಷ್ಟ್ರೀಯ ಹಿತಾಸಕ್ತಿ ಮತ್ತು ಸಾರ್ವಜನಿಕ ಸುವ್ಯವಸ್ಥೆಗೆ ಸಂಬಂಧಿಸಿದ ತಪ್ಪು ಮಾಹಿತಿಗಳ ಪ್ರಸರಣ ಇಂತಹ ವೇದಿಕೆಗಳಲ್ಲಿ ಹೆಚ್ಚಾಗುತ್ತಿವೆ' ಎಂದು ಆಕ್ಷೇಪಣೆಯಲ್ಲಿ ತಿಳಿಸಲಾಗಿದೆ.

'ದೇಶ ವಿರೋಧಿ ಮತ್ತು ವಿದೇಶದಲ್ಲಿರುವ ಶತ್ರುಗಳು ಭಾರತ ವಿರೋಧಿ ಅಪಪ್ರಚಾರಕ್ಕೆ ಇಂತಹವುಗಳನ್ನು ವೇದಿಕೆಯನ್ನಾಗಿ ಮಾಡಿಕೊಳ್ಳುತ್ತಿವೆ. ದೇಶದಲ್ಲಿ ಅಸ್ಥಿರತೆ ಉಂಟು ಮಾಡಲು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಏಕತೆಯಲ್ಲಿ ಬಿರುಕು ಮೂಡಿಸಲು ಇವನ್ನು ಬಳಸಿಕೊಳ್ಳಲಾಗುತ್ತಿದೆ. ಆದ್ದರಿಂದ, ಆರಂಭಿಕ ಹಂತದಲ್ಲೇ ಸುಳ್ಳು ಅಥವಾ ತಪ್ಪು ಮಾಹಿತಿಗಳನ್ನು ನಿರ್ಬಂಧಿಸುವುದು ಅಗತ್ಯವಾಗಿದೆ' ಎಂದು ವಿವರಿಸಲಾಗಿದೆ.

ಮುಂಬೈ ಧಾರಣೆ

ಶೇಂಗಾ

2-9-2022

ಜಾವಾ 70/80(ಹೊಸ)	11650-11700
ಜಾವಾ 80/90(ಹೊಸ)	10950-11000
ದಪ್ಪ ಮಧ್ಯಪ್ರದೇಶ(ಹೊಸ)	10300-10400
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1660 (1670)
ಒಂದು ವಾರದ ಡೆಲಿವರಿ	1665 (1665)
ಸೋಯಾ ಕಚ್ಚಾ	1175 (1190)
ಪಾಮ್ ವಾರದ ಡೆಲಿವರಿ	998 (1023)
ಸೂರ್ಯಕಾಂತಿ ಎಣ್ಣೆ ಕಚ್ಚಾ	1350 (1350)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,450 (50,150)
ಬೆಳ್ಳಿ ಕೆ.ಜಿ 52,250 (52,050)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶೀಯವಾಗಿ ನಿರ್ಮಿಸಿದ ದೇಶದ ಮೊದಲ ಯುದ್ಧವಿಮಾನ ವಾಹಕ ನೌಕೆ • ನೌಕಾಪಡೆ ಬಲ ಹೆಚ್ಚಳ

ಐಎನ್‌ಎಸ್ ವಿಕ್ರಾಂತ್ ಸೇವೆಗೆ ನಿಯೋಜನೆ

ಕೊಚ್ಚಿ (ಪಿಟಿಐ/ರಾಯಿಟರ್ಸ್): ದೇಶೀಯವಾಗಿ ನಿರ್ಮಿಸಲಾದ ದೇಶದ ಮೊದಲ ಯುದ್ಧವಿಮಾನ ವಾಹಕ ನೌಕೆ 'ಐಎನ್‌ಎಸ್ ವಿಕ್ರಾಂತ್' ಅನ್ನು ಪ್ರಧಾನಿ ನರೇಂದ್ರ ಮೋದಿ ಇಲ್ಲಿನ ಹಡಗುಕಟ್ಟೆಯಲ್ಲಿ ಶುಕ್ರವಾರ ನೌಕಾಪಡೆಯ ಸೇವೆಗೆ ನಿಯೋಜನೆ ಮಾಡಿದರು.

ಬೃಹತ್ ಯುದ್ಧವಿಮಾನ ವಾಹಕ ನೌಕೆ ನಿರ್ಮಾಣ ಸಾಮರ್ಥ್ಯವಿರುವ ಕೆಲವೇ ದೇಶಗಳ ಸಾಲಿಗೆ ಭಾರತವು ಈ ಮೂಲಕ ಸೇರಿದೆ. ಜತೆಗೆ ದಕ್ಷಿಣ ಏಷ್ಯಾ ಪ್ರದೇಶದಲ್ಲಿ ಚೀನಾದ ಯುದ್ಧನೌಕೆಗಳನ್ನು ಎದುರಿಸುವ ಸಾಮರ್ಥ್ಯ ಭಾರತಕ್ಕೆ ಲಭ್ಯವಾಗಿದೆ ಎಂದು ವಿಶ್ಲೇಷಿಸಲಾಗಿದೆ.

'ಐಎನ್‌ಎಸ್ ವಿಕ್ರಾಂತ್' ಸೇವೆಗೆ ನಿಯೋಜನೆಯಾಗಿರುವುದರಿಂದ ನೌಕಾಪಡೆಯ ಬಲ ಹೆಚ್ಚಿದೆ. ಮೂಲ ಐಎನ್‌ಎಸ್ ವಿಕ್ರಾಂತ್ ನೌಕೆಯನ್ನು ನಿವೃತ್ತಗೊಳಿಸಿದ್ದ ಕಾರಣ, ನೌಕಾಪಡೆಯಲ್ಲಿ ಯುದ್ಧವಿಮಾನ ವಾಹನ ನೌಕೆಯ ಸಂಖ್ಯೆ 1ಕ್ಕೆ ಇಳಿದಿತ್ತು. ಈಗ ಐಎನ್‌ಎಸ್ ವಿಕ್ರಮಾದಿತ್ಯ ಮಾತ್ರ

> **ಐಎನ್‌ಎಸ್ ವಿಕ್ರಾಂತ್ ಕೇವಲ ಒಂದು ಯುದ್ಧನೌಕೆಯಲ್ಲ. ಅದು ಒಂದು ತೇಲುವ ವಾಯುನೆಲೆ. ಜತೆಗೆ ಅದು ಭಾರತದ ಕೌಶಲ ಮತ್ತು ಸಾಮರ್ಥ್ಯಕ್ಕೆ ಹಿಡಿದ ಕೈಗನ್ನಡಿ**
> **ನರೇಂದ್ರ ಮೋದಿ,** ಪ್ರಧಾನಿ

ಸೇವೆಯಲ್ಲಿದ್ದು, ಐಎನ್‌ಎಸ್ ವಿಕ್ರಾಂತ್ ಅದಕ್ಕೆ ಜತೆಯಾಗಲಿದೆ.

ಐಎನ್‌ಎಸ್ ವಿಕ್ರಾಂತ್ ನೌಕಾಪಡೆಯ ಸೇವೆಗೆ ನಿಯೋಜನೆಯಾಗಿದ್ದರೂ, ನೌಕೆಯು 2023ರ ಅಂತ್ಯದ ವೇಳೆಗೆ ಪೂರ್ಣ ಪ್ರಮಾಣದಲ್ಲಿ ಕಾರ್ಯಾಚರಣೆಗೆ ಲಭ್ಯವಾಗಲಿದೆ. ಏಕೆಂದರೆ, ನೌಕೆಗೆ ಅಗತ್ಯವಿರುವಷ್ಟು ಯುದ್ಧವಿಮಾನಗಳು ಲಭ್ಯವಿಲ್ಲ. ಈಗ ಐಎನ್‌ಎಸ್ ವಿಕ್ರಮಾದಿತ್ಯ ನೌಕೆಯ ಕೆಲವು ಮಿಗ್–29 ಯುದ್ಧವಿಮಾನಗಳನ್ನು, ಐಎನ್‌ಎಸ್ ವಿಕ್ರಾಂತ್‌ಗೆ ನೀಡಲಾಗಿದೆ. ನೌಕೆಗೆ ಅಗತ್ಯವಿರುವಷ್ಟು ಯುದ್ಧವಿಮಾನಗಳು ಲಭ್ಯವಾದ ನಂತರವಷ್ಟೇ,



ಐಎನ್‌ಎಸ್ ವಿಕ್ರಾಂತ್‌ನ ರನ್‌ವೇಯಲ್ಲಿ ನಿಂತು ಪ್ರಧಾನಿ ನರೇಂದ್ರ ಮೋದಿ ಕೈಬೀಸಿದರು

ಯುದ್ಧವಿಮಾನ ಕಾರ್ಯಾಚರಣೆಯ ಪರೀಕ್ಷೆಗಳನ್ನು ನಡೆಸಲಾಗುತ್ತದೆ ಎಂದು ನೌಕಾಪಡೆಯ ಮೂಲಗಳು ಹೇಳಿವೆ ಎಂದು ರಾಯಿಟರ್ಸ್ ವರದಿ ಮಾಡಿದೆ.

ಮೋದಿ ಹೇಳಿಕೆಗೆ ಕಾಂಗ್ರೆಸ್ ಆಕ್ಷೇಪ: ಐಎನ್‌ಎಸ್ ವಿಕ್ರಾಂತ್ ಅನ್ನು ಸೇವೆಗೆ ನಿಯೋಜನೆ ಮಾಡಿದ ನಂತರ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ ಅವರು, 'ಕಳೆದ ಎಂಟು ವರ್ಷಗಳಲ್ಲಿ, ರಕ್ಷಣಾ ಕ್ಷೇತ್ರದಲ್ಲಿ ಭಾರತವು ಆತ್ಮನಿರ್ಭರವಾಗಿದೆ. ರಕ್ಷಣಾ ವಲಯವನ್ನು ಸ್ವಾವಲಂಬಿ ಮಾಡುವಲ್ಲಿ ನಮ್ಮ ಸರ್ಕಾರದ ಒತ್ತಾಸೆಯನ್ನು ಐಎನ್‌ಎಸ್ ವಿಕ್ರಾಂತ್ ಪ್ರಚುರಪಡಿಸಿದೆ' ಎಂದು ಹೇಳಿದರು. ಮೋದಿ ಅವರ ಈ ಮಾತಿಗೆ ಕಾಂಗ್ರೆಸ್ ಆಕ್ಷೇಪ ವ್ಯಕ್ತಪಡಿಸಿದೆ.

'ಈ ನೌಕೆಯ ನಿರ್ಮಾಣಕ್ಕೆ 22 ವರ್ಷಗಳು ತಗುಲಿವೆ. ಈ ಅವಧಿಯಲ್ಲಿ ಹಲವು ಸರ್ಕಾರಗಳು ಕಾರ್ಯನಿರ್ವಹಿಸಿವೆ. ಐಎನ್‌ಎಸ್ ವಿಕ್ರಾಂತ್ ನಿರ್ಮಾಣದಲ್ಲಿ ಎಲ್ಲಾ ಸರ್ಕಾರಗಳ ಕೊಡುಗೆಯೂ ಇದೆ. ಆದರೆ, ಮೋದಿ ತಾವೊಬ್ಬರೇ ಎಲ್ಲವನ್ನೂ ಮಾಡಿದ್ದೇವೆ ಎಂಬ ಹೆಗ್ಗಳಿಕೆ ತೋರುವ ಚಾಳಿ ಮುಂದುವರಿಸಿದ್ದಾರೆ' ಎಂದು ಕಾಂಗ್ರೆಸ್‌ನ ನಾಯಕ ಜೈರಾಮ್ ರಮೇಶ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

'ಈ ನೌಕೆಯನ್ನು 2013ರಲ್ಲಿ ಅಂದಿನ ರಕ್ಷಣಾ ಸಚಿವರಾಗಿದ್ದ ಎ.ಕೆ.ಆ್ಯಂಟನಿ ಲೋಕಾರ್ಪಣೆ ಮಾಡಿದ್ದರು' ಎಂದಿರುವ ಜೈರಾಮ್ ರಮೇಶ್, ಲೋಕಾರ್ಪಣೆಯ ವಿಡಿಯೊವನ್ನು ಟ್ವೀಟ್ ಮಾಡಿದ್ದಾರೆ.

ನೌಕಾಪಡೆಗೆ ನೂತನ ಲಾಂಛನ, ಧ್ವಜ



ನೌಕಾಪಡೆಯ ನೂತನ ಲಾಂಛನ ಮತ್ತು ಧ್ವಜವನ್ನು ಪ್ರಧಾನಿ ಮೋದಿ ಅವರು ಶುಕ್ರವಾರ ಅನಾವರಣ ಮಾಡಿದರು.

ಈ ಹಿಂದೆ ಬಿಳಿ ಧ್ವಜದ ಮೇಲಿನ ಎಡತುದಿಯಲ್ಲಿ ಭಾರತದ ಧ್ವಜವಿದ್ದು, ಬ್ರಿಟಿಷ್ ಕ್ರಾಸ್ ಧ್ವಜದ ಮಧ್ಯಭಾಗದಲ್ಲಿತ್ತು. ಕ್ರಾಸ್‌ನ ಮಧ್ಯಭಾಗದಲ್ಲಿ ರಾಷ್ಟ್ರ ಲಾಂಛನವಿತ್ತು. ನೂತನ ಧ್ವಜದಲ್ಲಿ ಕ್ರಾಸ್ ಅನ್ನು ಕೈಬಿಡಲಾಗಿದೆ. ನೂತನವಾಗಿ ರೂಪಿಸಲಾಗಿರುವ ಲಾಂಛನವನ್ನು ಧ್ವಜದ ಬಲಭಾಗದಲ್ಲಿ ಇರಿಸಲಾಗಿದೆ.


ವಸಾಹತುಶಾಹಿಯ ಜೀತದ ಪ್ರತೀಕದಂತಿದ್ದ ಲಾಂಛನದ ಹೊರೆಯನ್ನು ಇಳಿಸಲಾಗಿದೆ ಎಂದು ಪ್ರಧಾನಿ ಹೇಳಿದ್ದಾರೆ.

ದೇಶೀಯ ನಿರ್ಮಾಣ

ಐಎನ್‌ಎಸ್ ವಿಕ್ರಾಂತ್ ನಿರ್ಮಾಣದಲ್ಲಿ ದೇಶೀಯ ತಂತ್ರಜ್ಞಾನ, ಉಪಕರಣಗಳು ಮತ್ತು ಬಿಡಿಭಾಗಗಳನ್ನು ಬಳಸಲಾಗಿದೆ. ಈ ನೌಕೆಯು ಶೇ 76ರಷ್ಟು ದೇಶೀಯವಾದುದು ಎಂದು ರಕ್ಷಣಾ ಸಚಿವಾಲಯ ಹೇಳಿದೆ.

ಈ ನೌಕೆಯ ನಿರ್ಮಾಣದಲ್ಲಿ ಬಳಸಿರುವ ಉಕ್ಕು ಮತ್ತು ಕಬ್ಬಿಣದ ರಾಸಾಯನಿಕ ಸಂಯೋಜನೆಯು ವಿಶಿಷ್ಟವಾದುದು. 'ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ–ಡಿಆರ್‌ಡಿಒ' ಈ ಉಕ್ಕು ಮತ್ತು ಕಬ್ಬಿಣವನ್ನು ಅಭಿವೃದ್ಧಿಪಡಿಸಿದೆ. ಡಿಆರ್‌ಡಿಒ ವಿನ್ಯಾಸದ ಉಕ್ಕು ಮತ್ತು ಕಬ್ಬಿಣವನ್ನು ಭಾರತೀಯ ಉಕ್ಕು ಪ್ರಾಧಿಕಾರವು ತಯಾರಿಸಿದೆ. ಈ ನೌಕೆಯಲ್ಲಿ ಬಳಸಿರುವ ಉಕ್ಕು ಮತ್ತು ಕಬ್ಬಿಣ ಸಂಪೂರ್ಣವಾಗಿ ದೇಶೀಯವಾದುದು.

ಏವಿಯಾನಿಕ್ಸ್, ರೇಡಾರ್ ಮತ್ತಿತ್ತರ ಉಪಕರಣಗಳನ್ನು ಬಿಇಎಲ್, ಎಚ್‌ಎಎಲ್ ಮತ್ತು ಬಿಎಚ್‌ಇಎಲ್ ಅಭಿವೃದ್ಧಿಪಡಿಸಿವೆ. ಎಂಜಿನ್ ಮತ್ತು ಗ್ಯಾಸ್ ಟರ್ಬೈನ್‌ಗಳನ್ನು ಖಾಸಗಿ ಕಂಪನಿಗಳಾದ ಟಾಟಾ ಪವರ್, ಲಾರ್ಸನ್ ಅಂಡ್ ಟುಬ್ರೊ ಪೂರೈಸಿವೆ.



22 ವರ್ಷಗಳ ಶ್ರಮ

- 1957ರಲ್ಲಿ ಬ್ರಿಟನ್‌ನಿಂದ ಖರೀದಿಸಲಾಗಿದ್ದ ದೇಶದ ಮೊದಲ ಯುದ್ಧವಿಮಾನ ವಾಹಕ ನೌಕೆ 'ಐಎನ್‌ಎಸ್ ವಿಕ್ರಾಂತ್', 1990ರ ದಶಕದಲ್ಲೇ ಹಳತಾಗಿತ್ತು. ಹಾಗಾಗಿ ಅದನ್ನು ಸೇವೆಯಿಂದ ನಿವೃತ್ತಗೊಳಿಸಿ, ಬೇರೊಂದು ನೌಕೆಯನ್ನು ಸೇವೆಗೆ ನಿಯೋಜಿಸುವ ಪ್ರಸ್ತಾವವನ್ನು ರಕ್ಷಣಾ ಸಚಿವಾಲಯವು ಸಲ್ಲಿಸಿತ್ತು
- 1999ರಲ್ಲಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಬಿಜೆಪಿ ಸರ್ಕಾರವು ಹೊಸ ಯುದ್ಧವಿಮಾನ ವಾಹಕ ನೌಕೆಯನ್ನು ನಿರ್ಮಿಸಲು ಒಪ್ಪಿಗೆ ನೀಡಿತ್ತು. ಹೊಸ ನೌಕೆಗೂ 'ಐಎನ್‌ಎಸ್ ವಿಕ್ರಾಂತ್' ಎಂದೇ ಹೆಸರಿಡಲು ನಿರ್ಧರಿಸಲಾಯಿತು. 2002ರಲ್ಲಿ 'ಐಎನ್‌ಎಸ್ ವಿಕ್ರಾಂತ್' ನಿರ್ಮಾಣದ ಯೋಜನೆಗೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ ನೀಡಿತ್ತು
- 2005ರಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಅವಧಿಯಲ್ಲಿ ಕೊಚ್ಚಿಯ ಹಡಗುಕಟ್ಟೆಯಲ್ಲಿ ನಿರ್ಮಾಣಕ್ಕೆ ಚಾಲನೆ ನೀಡಲಾಯಿತು
- 2009ರಲ್ಲಿ ನೌಕೆಯ ನೆಲೆಗಟ್ಟು (ಕೀಲ್) ನಿರ್ಮಾಣ ಪೂರ್ಣ. 2011ರಲ್ಲಿ ನೌಕೆಯ ನಿರ್ಮಾಣ ಪೂರ್ಣವಾಯಿತು. ಆಗಲೇ ಅದರ ಪ್ರಾಥಮಿಕ ಪರೀಕ್ಷೆಗಳನ್ನು ಆರಂಭಿಸಲಾಯಿತು
- 2013ರಲ್ಲಿ ಅಂದಿನ ರಕ್ಷಣಾ ಸಚಿವರಾಗಿದ್ದ ಎ.ಕೆ.ಆ್ಯಂಟನಿ ಅವರು 'ಐಎನ್‌ಎಸ್ ವಿಕ್ರಾಂತ್' ಅನ್ನು ಲೋಕಾರ್ಪಣೆ ಮಾಡಿದ್ದರು. ನಂತರ ನೌಕೆಯನ್ನು ಎರಡನೇ ಹಂತದ ಪರೀಕ್ಷೆಗೆ ಕಳುಹಿಸಲಾಗಿತ್ತು
- 2020ರಲ್ಲಿ ನೌಕಾಪಡೆಯು 'ಐಎನ್‌ಎಸ್ ವಿಕ್ರಾಂತ್' ನೌಕೆಯನ್ನು ಸಾಗರದಲ್ಲಿನ ಕಾರ್ಯಾಚರಣೆ ಪರೀಕ್ಷೆಗೆ ಒಳಪಡಿಸಿತ್ತು

ಕಾಶ್ಮೀರ: ವಲಸೆ ಕಾರ್ಮಿಕನ ಮೇಲೆ ಗುಂಡಿನ ದಾಳಿ

ಶ್ರೀನಗರ: ದಕ್ಷಿಣ ಕಾಶ್ಮೀರದ ಪುಲ್ವಾಮಾ ಜಿಲ್ಲೆಯ ನೇವಾ ಪ್ರದೇಶದಲ್ಲಿ, ಉಗ್ರರು ವಲಸೆ ಕಾರ್ಮಿಕನೊಬ್ಬನ ಮೇಲೆ ಗುಂಡಿನ ದಾಳಿ ನಡೆಸಿದ್ದು, ಕಾರ್ಮಿಕ ಗಾಯಗೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

'ಪಶ್ಚಿಮ ಬಂಗಾಳದ ನಿವಾಸಿಯಾದ ಮುನೀರುಲ್ ಇಸ್ಲಾಮ್ ಎಂಬ ವಲಸೆ ಕಾರ್ಮಿಕನ ಮೇಲೆ ಉಗ್ರರು ಗುಂಡಿನ ದಾಳಿ ನಡೆಸಿದ್ದಾರೆ. ಮುನೀರುಲ್‌ನನ್ನು ಕೂಡಲೇ ಪುಲ್ವಾಮಾದ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಆತನ ಆರೋಗ್ಯ ಸ್ಥಿರವಾಗಿದೆ. ನೇವಾದಲ್ಲಿ ಶೋಧ ಕಾರ್ಯಾಚರಣೆ ನಡೆಸಲಾಗುತ್ತಿದೆ' ಎಂದು ಕಾಶ್ಮೀರ ವಲಯದ ಪೊಲೀಸರು ಟ್ವೀಟ್ ಮಾಡಿದ್ದಾರೆ.

ಕಾಶ್ಮೀರದಲ್ಲಿ, ವಿಶೇಷವಾಗಿ ದಕ್ಷಿಣ ಕಾಶ್ಮೀರದಲ್ಲಿ ವಲಸೆ ಕಾರ್ಮಿಕರ ಮೇಲಿನ ದಾಳಿಗಳು ಹೆಚ್ಚಾಗುತ್ತಿವೆ. ಈ ವರ್ಷ ಕಾಶ್ಮೀರದಾದ್ಯಂತ ಕನಿಷ್ಠ 10 ಮಂದಿ ವಲಸೆ ಕಾರ್ಮಿಕರನ್ನು ಉಗ್ರರು ಹತ್ಯೆ ಮಾಡಿದ್ದಾರೆ.

ಕಳೆದ ವರ್ಷ ಅಕ್ಟೋಬರ್‌ನಲ್ಲಿ ಅನೇಕ ವಲಸೆ ಕಾರ್ಮಿಕರು ಹಾಗೂ ಬೀದಿ ವ್ಯಾಪಾರಿಗಳನ್ನು ಉಗ್ರರು ಕೊಂದಿದ್ದರು. 2019ರ ಅಕ್ಟೋಬರ್ ವೇಳೆಗೆ ಅನಂತ್‌ನಾಗ್, ಕುಲ್ಗಾಮ್, ಶೋಪಿಯಾನ್ ಜಿಲ್ಲೆಗಳಲ್ಲಿ ಟ್ರಕ್ ಚಾಲಕರು ಸೇರಿ ಒಟ್ಟು 11 ವಲಸೆ ಕಾರ್ಮಿಕರನ್ನು ಹತ್ಯೆ ಮಾಡಲಾಗಿತ್ತು.

ಮತದಾರರ ಪಟ್ಟಿ ಪ್ರಕಟಿಸಿ ಮಿಸ್ತ್ರಿಗೆ ಶಶಿ ತರೂರ್ ಪತ್ರ



ನವದೆಹಲಿ (ಪಿಟಿಐ): ಎಐಸಿಸಿ ಅಧ್ಯಕ್ಷೀಯ ಚುನಾವಣೆಯ ಮತದಾರರ ಪಟ್ಟಿಯನ್ನು ಪ್ರಕಟಿಸುವಂತೆ ಹಿರಿಯ ಕಾಂಗ್ರೆಸ್ ನಾಯಕ, ಸಂಸದ ಶಶಿ ತರೂರ್ ಶುಕ್ರವಾರ ಪಕ್ಷದ ಕೇಂದ್ರ ಚುನಾವಣಾ ಪ್ರಾಧಿಕಾರದ ಅಧ್ಯಕ್ಷ ಮಧುಸೂದನ್ ಮಿಸ್ತ್ರಿ ಅವರಿಗೆ ಪತ್ರ ಬರೆದು ಆಗ್ರಹಿಸಿದ್ದಾರೆ.

ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧಿಸುವ ಇಂಗಿತ ವ್ಯಕ್ತಪಡಿಸಿರುವ ತರೂರ್ ಅವರು, 'ನಾಮ ನಿರ್ದೇಶನ ಮಾಡುವ ಮತ್ತು ಮತ ಚಲಾಯಿಸುವ ಹಕ್ಕು ಯಾರ್‍ಯಾರಿಗೆ ಇದೆ ಎಂಬುದು ಎಲ್ಲರಿಗೂ ತಿಳಿದಿರಬೇಕು. ಹೀಗಾಗಿ ಅದನ್ನು ಎಐಸಿಸಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು' ಎಂದು ಅವರು ಹೇಳಿದ್ದಾರೆ.

ಅಸ್ಸಾಂನ ಸಂಸದ ಪ್ರದ್ಯುತ್ ಬೋರ್ದೊಲಾಯಿ ಸಹ ಮತದಾರರ ಪಟ್ಟಿಯನ್ನು ಪ್ರಕಟಿಸುವಂತೆ ಮಿಸ್ತ್ರಿ ಅವರಿಗೆ ಪತ್ರ ಬರೆದಿದ್ದಾರೆ.

'ಚುನಾವಣಾ ಪ್ರಕ್ರಿಯೆ ಮುಕ್ತ, ನ್ಯಾಯಸಮ್ಮತವಾಗಿ ನಡೆಯುತ್ತಿದೆ ಎಂಬುದನ್ನು ಖಾತ್ರಿಪಡಿಸಿಕೊಳ್ಳಲು ಮತದಾರರ ಪಟ್ಟಿಯನ್ನು ಬಹಿರಂಗಗೊಳಿಸಬೇಕು' ಎಂದು ಪಕ್ಷದ ನಾಯಕರಾದ ಮನೀಶ್ ತಿವಾರಿ, ಕಾರ್ತಿ ಚಿದಂಬರಂ ಮತ್ತು ಶಶಿ ತರೂರ್ ಬುಧವಾರವೂ ಆಗ್ರಹಿಸಿದ್ದರು.

ಇದಕ್ಕೆ ಪ್ರತಿಕ್ರಿಯಿಸಿರುವ ಮಿಸ್ತ್ರಿ, 'ಚುನಾವಣೆ ಪಾರದರ್ಶಕ, ಮುಕ್ತ ಮತ್ತು ನ್ಯಾಯಸಮ್ಮತವಾಗಿಯೇ ನಡೆಯಲಿದೆ' ಎಂದಿದ್ದಾರೆ. ಕಳೆದ ವಾರ ಹೇಳಿಕೆ ನೀಡಿದ್ದ ಮಿಸ್ತ್ರಿ, 'ಪಕ್ಷದ ಸಂವಿಧಾನದ ಪ್ರಕಾರ, ಮತದಾರರ ಪಟ್ಟಿಯನ್ನು ಸಾರ್ವಜನಿಕವಾಗಿ ಪ್ರಕಟಿಸುವಂತಿಲ್ಲ. ಆದರೆ ಚುನಾವಣೆಯಲ್ಲಿ ಸ್ಪರ್ಧಿಸುವವರಿಗೆ ಈ ಪಟ್ಟಿ ನೀಡಲಾಗುತ್ತದೆ' ಎಂದಿದ್ದರು.



ಲುಫ್ತಾನ್ಸಾ ಏರ್‌ಲೈನ್ಸ್‌ನ ಎರಡು ವಿಮಾನ ರದ್ದಾದ ಬಳಿಕ ದೆಹಲಿಯ ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಹೊರಗೆ ಕಾಯುತ್ತಿದ್ದ ಪ್ರಯಾಣಿಕರು

ಲುಫ್ತಾನ್ಸಾ ರದ್ದು: ದೆಹಲಿ ವಿಮಾನ ನಿಲ್ದಾಣದಲ್ಲಿ ಸಿಲುಕಿದ ಪ್ರಯಾಣಿಕರು

ನವದೆಹಲಿ: ಪೈಲಟ್‌ಗಳ ಮುಷ್ಕರದಿಂದಾಗಿ ಜರ್ಮನಿ ಮೂಲದ ಲುಫ್ತಾನ್ಸಾ ಏರ್‌ಲೈನ್ಸ್ ತನ್ನ ಎರಡು ವಿಮಾನಗಳನ್ನು ರದ್ದುಪಡಿಸಿದ ಕಾರಣ, ಶುಕ್ರವಾರ 700 ಪ್ರಯಾಣಿಕರು ದೆಹಲಿಯ ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪರದಾಡಿದರು ಎಂದು ಪೊಲೀಸರು ಹೇಳಿದ್ದಾರೆ.

ಪ್ರಯಾಣಿಕರ ಸಂಬಂಧಿಕರು, ಕುಟುಂಬಗಳ ಸುಮಾರು 100ಕ್ಕೂ ಹೆಚ್ಚು ಮಂದಿ ವಿಮಾನ ನಿಲ್ದಾಣದ ಹೊರಗೆ ಜಮಾಯಿಸಿ, ವಿಮಾನ ಪ್ರಯಾಣದ ಹಣವನ್ನು ಮರುಪಾವತಿಸುವಂತೆ ಇಲ್ಲವೇ ಪರ್ಯಾಯ ಪ್ರಯಾಣ ವ್ಯವಸ್ಥೆ ಮಾಡಿಕೊಡುವಂತೆ ಒತ್ತಾಯಿಸಿದರು ಎಂದೂ ಪೊಲೀಸರು ಮಾಹಿತಿ ನೀಡಿದ್ದಾರೆ.

ಲುಫ್ತಾನ್ಸಾ ಏರ್‌ಲೈನ್ಸ್‌ನ ಎರಡು ವಿಮಾನಗಳ ಪೈಕಿ ಒಂದು ವಿಮಾನದಲ್ಲಿ 300 ಪ್ರಯಾಣಿಕರು ಶುಕ್ರವಾರ ಮುಂಜಾನೆ 2.50ಕ್ಕೆ ಫ್ರಾಂಕ್‌ಫರ್ಟ್‌ಗೆ ಹಾಗೂ ಮತ್ತೊಂದು ವಿಮಾನದಲ್ಲಿ 400 ಪ್ರಯಾಣಿಕರು ಮುಂಜಾನೆ 1.10ಕ್ಕೆ ಮ್ಯೂನಿಚ್‌ಗೆ ಪ್ರಯಾಣಿಸಬೇಕಿತ್ತು. ಆದರೆ, ಏರ್‌ಲೈನ್ಸ್ ಸಂಸ್ಥೆಯು ಯಾವುದೇ ಮುನ್ಸೂಚನೆ ನೀಡದೇ ವಿಮಾನಗಳನ್ನು ರದ್ದುಗೊಳಿಸಿದೆ ಎಂದು ಪ್ರಯಾಣಿಕರು ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಅವರನ್ನು ಸಿಐಎಸ್‌ಎಫ್ ಮತ್ತು ವಿಮಾನ ನಿಲ್ದಾಣದ ಸಿಬ್ಬಂದಿ ಸಮಾಧಾನ ಪಡಿಸಿದರು ಎನ್ನಲಾಗಿದೆ.

ಲುಫ್ತಾನ್ಸಾ ಏರ್‌ಲೈನ್ಸ್ ಪೈಲಟ್‌ಗಳು ಹೆಚ್ಚಿನ ಸಂಬಳಕ್ಕೆ ಒತ್ತಾಯಿಸಿ ಮುಷ್ಕರ ಕೈಗೊಂಡಿದ್ದಾರೆ. ಹಾಗಾಗಿ, ಎರಡು ವಿಮಾನಗಳ ಹಾರಾಟವನ್ನು ರದ್ದುಗೊಳಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೆವಿಐಸಿ ಅಧ್ಯಕ್ಷರಾಗಿದ್ದಾಗ ನಡೆದ ಪ್ರಕರಣ: ಎಎಪಿ ಆರೋಪ

'ದೆಹಲಿ ಎಲ್‌.ಜಿ ಸಕ್ಸೇನಾರಿಂದ ಅಕ್ರಮ'

ನವದೆಹಲಿ (ಪಿಟಿಐ): ದೆಹಲಿಯ ಲೆಫ್ಟಿನೆಂಟ್ ಗವರ್ನರ್ (ಎಲ್‌.ಜಿ) ವಿ.ಕೆ. ಸಕ್ಸೇನಾ ಅವರು ಖಾದಿ ಮತ್ತು ಗ್ರಾಮೀಣ ಕೈಗಾರಿಕೆಗಳ ಆಯೋಗದ (ಕೆವಿಐಸಿ) ಅಧ್ಯಕ್ಷರಾಗಿದ್ದಾಗ ಮುಂಬೈನಲ್ಲಿ ನಿರ್ಮಿಸಿದ್ದ ಖಾದಿ ಲಾಂಜ್‌ನ ಒಳಾಂಗಣ ವಿನ್ಯಾಸದ ಗುತ್ತಿಗೆಯನ್ನು ತಮ್ಮ ಮಗಳಿಗೆ ನೀಡಿದ್ದರು ಎಂದು ಎಎಪಿ ಶುಕ್ರವಾರ ಆರೋಪಿಸಿದೆ. ಅಧಿಕಾರ ದುರ್ಬಳಕೆ ಮಾಡಿಕೊಂಡಿರುವ ಸಕ್ಸೇನಾ ಅವರನ್ನು ತಕ್ಷಣವೇ ವಜಾ ಮಾಡಬೇಕು ಎಂದು ಪ್ರಧಾನಿಯನ್ನು ಅಗ್ರಹಿಸಿದೆ.

ಗುತ್ತಿಗೆಯನ್ನು ಮಗಳು ಶಿವಾಂಗಿ ಸಕ್ಸೇನಾ ಅವರಿಗೆ ನೀಡಿದ್ದಕ್ಕಾಗಿ ವಿ.ಕೆ. ಸಕ್ಸೇನಾ ಅವರ ವಿರುದ್ಧ ಕಾನೂನು ಕ್ರಮ ಆರಂಭಿಸುವಂತೆಯೂ ಎಎಪಿ ವಕ್ತಾರ ಸಂಜಯ ಸಿಂಗ್ ಒತ್ತಾಯಿಸಿದ್ದಾರೆ.

ಹಿರಿಯ ವಕೀಲರ ಜತೆಗೆ ಎಎಪಿ ಸಮಾಲೋಚನೆ ನಡೆಸುತ್ತಿದೆ. ನಿಯಮ ಉಲ್ಲಂಘನೆಯ ವಿಚಾರದಲ್ಲಿ ನ್ಯಾಯಾಲಯದಲ್ಲಿ ದೂರು ದಾಖಲಿಸುವ ಕುರಿತಂತೆಯೂ ಚಿಂತನೆ ನಡೆದಿದೆ ಎಂದು ಸಿಂಗ್ ತಿಳಿಸಿದ್ದಾರೆ.

'ಸಕ್ಸೇನಾ ಅವರು ತಾವು ಮಾಡಿದ ತಪ್ಪುಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಒಳಾಂಗಣ ವಿನ್ಯಾಸ ಗುತ್ತಿಗೆ ನೀಡಿಕೆಯಲ್ಲಿ ಸರಿಯಾದ ಪ್ರಕ್ರಿಯೆ

> **ವಿ.ಕೆ. ಸಕ್ಸೇನಾ ಅವರನ್ನು ತಕ್ಷಣವೇ ವಜಾ ಮಾಡಿ ತನಿಖೆಗೆ ಆದೇಶಿಸದೇ ಇದ್ದರೆ, ವಂಶಾಡಳಿತದ ಬಗ್ಗೆ ಮಾತನಾಡಲು ಪ್ರಧಾನಿಗೆ ಹಕ್ಕು ಇರುವುದಿಲ್ಲ**
> **ಸಂಜಯ ಸಿಂಗ್,** ಎಎಪಿ ವಕ್ತಾರ

ಪಾಲಿಸಲಾಗಿಲ್ಲ. ಕೆವಿಐಸಿ ಅಧ್ಯಕ್ಷರು ತಮ್ಮ ಸಂಬಂಧಿಗೆ ಗುತ್ತಿಗೆ ನೀಡುವುದು ಹೇಗೆ ಸಾಧ್ಯ' ಎಂದು ಸಿಂಗ್ ಪ್ರಶ್ನಿಸಿದ್ದಾರೆ.

'ವಿ.ಕೆ. ಸಕ್ಸೇನಾ ಅವರು ಕೆವಿಐಸಿ ಅಧ್ಯಕ್ಷರಾಗಿದ್ದಾಗ ಮುಂಬೈ ಖಾದಿ ಲಾಂಜ್‌ನ ಒಳಾಂಗಣವನ್ನು ತಮ್ಮ ಮಗಳಿಂದ ವಿನ್ಯಾಸ ಮಾಡಿಸಿದ್ದು ನಿಜವೇ' ಎಂದು ಸಿಂಗ್ ಅವರು ಗುರುವಾರ ಟ್ವೀಟ್ ಮಾಡಿ ಪ್ರಶ್ನಿಸಿದ್ದರು.

ಎಎಪಿ ಆರೋಪಕ್ಕೆ ಲೆಫ್ಟಿನೆಂಟ್ ಗವರ್ನರ್ ಕಚೇರಿಯು ಟ್ವೀಟ್ ಮೂಲಕವೇ ಸ್ಪಷ್ಟನೆ ನೀಡಿದೆ.

'ಲೆಫ್ಟಿನೆಂಟ್ ಗವರ್ನರ್ ಅವರು ಕೆವಿಐಸಿ ಅಧ್ಯಕ್ಷರಾಗಿದ್ದಾಗ ಮುಂಬೈ ಖಾದಿ ಲಾಂಜ್‌ನ ಒಳಾಂಗಣವನ್ನು ವಿನ್ಯಾಸಕಾರ್ತಿಯಾಗಿರುವ ತಮ್ಮ ಮಗಳಿಂದ ಉಚಿತವಾಗಿ ವಿನ್ಯಾಸ ಮಾಡಿಸಿದ್ದರು. ಒಳಾಂಗಣ ವಿನ್ಯಾಸಕ್ಕೆ ಟೆಂಡರ್ ಕರೆದಿರಲಿಲ್ಲ. ಯಾರಿಗೂ ಗುತ್ತಿಗೆ ನೀಡಿಯೂ ಇಲ್ಲ. ಬದಲಿಗೆ, ಉಚಿತವಾಗಿ ಮಾಡಿಸಿ ಕೆವಿಐಸಿಗೆ ಲಕ್ಷಾಂತರ ರೂಪಾಯಿ ಉಳಿಸಲಾಗಿದೆ' ಎಂದು ಎಲ್‌.ಜಿ ಕಚೇರಿಯು ಹೇಳಿದೆ.

ಇದಕ್ಕೆ ಪ್ರತಿಕ್ರಿಯೆ ನೀಡಿರುವ ಸಿಂಗ್, ಕೆವಿಐಸಿ ಕಾಯ್ದೆಯ ಪ್ರಕಾರ, ಕೆವಿಐಸಿಯ ಅಧಿಕಾರಿಗಳು ತಮ್ಮ ಕುಟುಂಬದ ಸದಸ್ಯರಿಗೆ ಗುತ್ತಿಗೆ ಅಥವಾ ಯಾವುದೇ ಕೆಲಸ ನೀಡುವಂತಿಲ್ಲ ಎಂದಿದ್ದಾರೆ.

'ಇದು ಎಂತಹ ತರ್ಕ? ಕಂಪ್ಯೂಟರ್ ಎಂಜಿನಿಯರ್ ಆಗಿರುವ ಸೌರಭ್ ಭಾರದ್ವಾಜ್ ಅವರು (ಎಎಪಿ ಮುಖಂಡ) ಸೆಂಟ್ರಲ್ ವಿಸ್ತಾದ ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಿಸಿದ ಎಲ್ಲ ಕೆಲಸಗಳನ್ನು ಉಚಿತವಾಗಿ ಮಾಡಲು ಬಯಸಿದ್ದಾರೆ. ನಮ್ಮ ಪ್ರವೀಣ್ ದೇಶಮುಖ್ ಅವರು (ಎಎಪಿ ಶಾಸಕ) ಎಂಬಿಎ ಓದಿದ್ದಾರೆ. ಪ್ರಧಾನಿ ಕಚೇರಿಯ ಎಲ್ಲ ವ್ಯವಹಾರಗಳನ್ನು ಅವರು ಉಚಿತವಾಗಿ ನಿರ್ವಹಿಸಲು ಬಯಸಿದ್ದಾರೆ. ಅವರಿಗೆ ಈ ಕೆಲಸಗಳನ್ನು ಕೊಡಲಾಗುವುದೇ' ಎಂದು ಸಿಂಗ್ ಪ್ರಶ್ನಿಸಿದ್ದಾರೆ.

ಒಳಾಂಗಣ ವಿನ್ಯಾಸದ ಗುತ್ತಿಗೆ ನೀಡಿಕೆಯನ್ನು ನಿಯಮ ಪ್ರಕಾರವೇ ಮಾಡಬೇಕಿತ್ತು. ಅದನ್ನು ಉಚಿತವಾಗಿಯೇ ಮಾಡಿಸಲು ಕೆವಿಐಸಿ ಬಯಸಿದ್ದಿದ್ದರೆ ಅದಕ್ಕೂ ಬಹಿರಂಗ ಆಹ್ವಾನ ನೀಡಬೇಕಿತ್ತು. ಅತ್ಯುತ್ತಮ ಒಳಾಂಗಣ ವಿನ್ಯಾಸಕಾರರನ್ನು ಆಯ್ಕೆ ಮಾಡಿಕೊಳ್ಳಬೇಕಿತ್ತು ಎಂದು ಸಿಂಗ್ ಹೇಳಿದ್ದಾರೆ.

ವಿ.ಕೆ. ಸಕ್ಸೇನಾ ಅವರು ಮುಂಬೈ ಖಾದಿ ಲಾಂಜ್‌ನ ಉದ್ಘಾಟನಾ ಫಲಕದಲ್ಲಿ ತಮ್ಮ ಮಗಳ ಹೆಸರನ್ನೂ ಸೇರಿಸಿದ್ದಾರೆ ಎಂದೂ ಸಿಂಗ್ ಹೇಳಿದ್ದಾರೆ.

ಎಲ್‌.ಜಿ ಕಚೇರಿ ಸ್ಪಷ್ಟನೆಗೆ ಆಕ್ಷೇಪ

ವಿ.ಕೆ. ಸಕ್ಸೇನಾ ಅವರ ವಿರುದ್ಧದ ಆರೋಪಗಳಿಗೆ ಎಲ್‌.ಜಿ ಕಚೇರಿಯು ಸ್ಪಷ್ಟನೆ ನೀಡಿರುವುದಕ್ಕೆ ಎಎಪಿ ವಕ್ತಾರ ಸೌರಭ್ ಭಾರದ್ವಾಜ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಇದು ಸರಿಯಾದ ಕ್ರಮ ಅಲ್ಲ ಎಂದಿದ್ದಾರೆ.

ಸಕ್ಸೇನಾ ಅವರು ವೈಯಕ್ತಿಕವಾಗಿ ಸ್ಪಷ್ಟನೆ ಕೊಡಬೇಕು. ಸಾಂವಿಧಾನಿಕ ಹುದ್ದೆಯೊಂದರ ಅಧಿಕೃತ ಟ್ವಿಟರ್ ಖಾತೆಯಿಂದ ಇಂತಹ ಸ್ಪಷ್ಟನೆ ನೀಡಬಾರದು ಎಂದು ಅವರು ಹೇಳಿದ್ದಾರೆ.

ಐಎಎಸ್: ನಿಯಮ ಬದಲಾವಣೆ ಪರಿಶೀಲನೆ

ನವದೆಹಲಿ (ಪಿಟಿಐ): ಐಎಎಸ್ ಅಧಿಕಾರಿಗಳನ್ನು ರಾಜ್ಯಗಳ ಅನುಮತಿಯಿಲ್ಲದೆ ನಿಯೋಜನೆ ಮೇಲೆ ಕೇಂದ್ರಕ್ಕೆ ಕರೆಸಿಕೊಳ್ಳುವ ಸಂಬಂಧ ನಾಗರಿಕ ಸೇವಾ ನಿಯಮಾವಳಿಯಲ್ಲಿ ಬದಲಾವಣೆ ತರಲು ಕೇಂದ್ರ ಸರ್ಕಾರ ಸಿದ್ಧಪಡಿಸಿದ್ದ ಪ್ರಸ್ತಾವಕ್ಕೆ ಹಲವು ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳು ಪ್ರತಿಕ್ರಿಯೆ ದಾಖಲಿಸಿದ್ದು, ಅವುಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಈ ಕುರಿತು ಇಲ್ಲಿಯವರೆಗೆ ಯಾವುದೇ ನಿರ್ಧಾರ ತೆಗೆದುಕೊಂಡಿಲ್ಲ ಎಂದು ಸರ್ಕಾರ ಸ್ಪಷ್ಟಪಡಿಸಿದೆ. ಪ್ರಸ್ತುತ ಜಾರಿಯಲ್ಲಿ ಇರುವ ನಿಯಮಗಳ ಪ್ರಕಾರ ಐಎಎಸ್ ಅಧಿಕಾರಿಗಳನ್ನು ಕೇಂದ್ರಕ್ಕೆ ನಿಯೋಜನೆ ಮೇರೆಗೆ ಕಳುಹಿಸಲು ಕೇಂದ್ರ– ರಾಜ್ಯ ಸರ್ಕಾರಗಳ ಪರಸ್ಪರ ಅನುಮತಿ ಅಗತ್ಯ.

ಈ ಸೇವಾ ನಿಯಮಗಳಲ್ಲಿ ಬದಲಾವಣೆ ತರುವ ಪ್ರಸ್ತಾವಕ್ಕೆ ರಾಜ್ಯ ಸರ್ಕಾರಗಳಿಂದ ಬಂದಿರುವ ಪ್ರತಿಕ್ರಿಯೆಗಳ ಪ್ರತಿಗಳನ್ನು ಆರ್‌ಟಿಐ ಅರ್ಜಿಗೆ ಒದಗಿಸಲು ಕೇಂದ್ರ ಸರ್ಕಾರ ನಿರಾಕರಿಸಿದೆ. ಈ ಸಂಬಂಧ ಸುದ್ದಿ ಸಂಸ್ಥೆ ಆರ್‌ಟಿಐ ಅಡಿ ಅರ್ಜಿ ಸಲ್ಲಿಸಿತ್ತು.

ಭಾರತೀಯ ಆಡಳಿತ ಸೇವಾ ನಿಯಮಗಳಲ್ಲಿ (1954) ಬದಲಾವಣೆ ತರಲು ಕೇಂದ್ರದ ಸಿಬ್ಬಂದಿ ಮತ್ತು ತರಬೇತಿ ಇಲಾಖೆ ಕಳೆದ ವರ್ಷ ಪ್ರಸ್ತಾವನೆ ಸಲ್ಲಿಸಿತ್ತು. ಈ ಕುರಿತು ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಪ್ರತಿಕ್ರಿಯೆ ದಾಖಲಿಸುವಂತೆ ಕೇಂದ್ರ ಸೂಚಿಸಿತ್ತು.

'ಈ ಪ್ರಸ್ತಾವನೆಗೆ ವಿವಿಧ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಮತ್ತು ಇತರ ಭಾಗೀದಾರರು ಪ್ರತಿಕ್ರಿಯೆ ಸಲ್ಲಿಸಿದ್ದಾರೆ. ಈ ಕುರಿತು ಪರಿಶೀಲನೆ ನಡೆಸಲಾಗುತ್ತಿದೆ' ಎಂದು ಇಲಾಖೆ ಆರ್‌ಟಿಐ ಅರ್ಜಿಗೆ ಪ್ರತಿಕ್ರಿಯಿಸಿದೆ.

'ನ್ಯಾಯಬೆಲೆ ಅಂಗಡಿ: ಮೋದಿ ಚಿತ್ರಕ್ಕೆ ಭದ್ರತೆ ಕೊಡಿ'

ಹೈದರಾಬಾದ್: ನ್ಯಾಯಬೆಲೆ ಅಂಗಡಿಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಭಾವಚಿತ್ರ ಕಾಣದಿರುವುದಕ್ಕೆ ಕೆಂಡಾಮಂಡಲವಾಗಿರುವ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ತೆಲಂಗಾಣದ ಎಲ್ಲ ನ್ಯಾಯಬೆಲೆ ಅಂಗಡಿಗಳಲ್ಲಿ ಪ್ರಧಾನಿ ಚಿತ್ರಕ್ಕೆ ಭದ್ರತೆ ಒದಗಿಸುವಂತೆ ಜಿಲ್ಲಾಧಿಕಾರಿಗೆ ಶುಕ್ರವಾರ ಸೂಚನೆ ನೀಡಿದರು.

ಬಡವರಿಗೆ ಸಬ್ಸಿಡಿ ದರದಲ್ಲಿ ಪೂರೈಸುತ್ತಿರುವ ಪಡಿತರ ಅಕ್ಕಿಯ ಪಾಲಿನಲ್ಲಿ ತಮ್ಮ ಕೊಡುಗೆಯ ಬಗ್ಗೆ ಕೆ. ಚಂದ್ರಶೇಖರ್ ರಾವ್ ಸರ್ಕಾರ ಮತ್ತು ಕೇಂದ್ರದ ನರೇಂದ್ರ ಮೋದಿ ಸರ್ಕಾರದ ನಡುವೆ ರಾಜಕೀಯ ವಾಗ್ಯುದ್ಧ ನಡೆಯುತ್ತಿದೆ.

ಬಿಜೆಪಿಯ 'ಲೋಕಸಭಾ ಪ್ರವಾಸ್ ಯೋಜನಾ' ಭಾಗವಾಗಿ ಝಹೀರಾಬಾದ್ ಲೋಕಸಭಾ ಕ್ಷೇತ್ರದಲ್ಲಿ ಹಮ್ಮಿಕೊಂಡಿದ್ದ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದ ಸೀತಾರಾಮನ್ ಅವರು, ಬಿರ್ಕೂರ್‌ನ ನ್ಯಾಯಬೆಲೆ ಅಂಗಡಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಭಾವಚಿತ್ರ ಏಕೆ ಕಾಣೆಯಾಗಿದೆ ಎಂದು ಜಿಲ್ಲಾಧಿಕಾರಿ ಜಿತೇಶ್ ಪಾಟೀಲ್ ಅವರನ್ನು ಪ್ರಶ್ನಿಸಿದರು.

ನ್ಯಾಯ ಬೆಲೆ ಅಂಗಡಿಗಳ ಮೂಲಕ ವಿತರಿಸುತ್ತಿರುವ ಪಡಿತರ ಅಕ್ಕಿಯಲ್ಲಿ ಕೇಂದ್ರ ಮತ್ತು ರಾಜ್ಯದ ಪಾಲು ಎಷ್ಟು ಎಂದು ಕೇಳಿದ ಪ್ರಶ್ನೆಗೆ ಸರಿಯಾಗಿ ಉತ್ತರಿಸದ ಕಾಮರೆಡ್ಡಿ ಜಿಲ್ಲಾಧಿಕಾರಿ ಜಿತೇಶ್ ಪಾಟೀಲ್ ಅವರನ್ನು ಸಚಿವೆ ತರಾಟೆಗೆ ತೆಗೆದುಕೊಂಡರು.

ಮರಣ ದಂಡನೆ ಪ್ರಶ್ನಿಸಿ 30 ದೋಷಿಗಳು ಮೇಲ್ಮನವಿ

ಅಹಮದಾಬಾದ್: 2008ರ ಅಹಮದಾಬಾದ್ ಸರಣಿ ಬಾಂಬ್ ಸ್ಫೋಟ ಪ್ರಕರಣದಲ್ಲಿ ಮರಣದಂಡನೆ ಶಿಕ್ಷೆಗೆ ಗುರಿಯಾದ 38 ದೋಷಿಗಳ ಪೈಕಿ 30 ಮಂದಿ ವಿಚಾರಣಾ ನ್ಯಾಯಾಲಯದ ತೀರ್ಪು ಪ್ರಶ್ನಿಸಿ ಗುಜರಾತ್ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದಾರೆ.

ನ್ಯಾಯಮೂರ್ತಿಗಳಾದ ವಿ.ಎಂ. ಪಾಂಚೋಲಿ ಮತ್ತು ಎ.ಪಿ. ಠಾಕರ್ ಅವರಿದ್ದ ವಿಭಾಗೀಯ ಪೀಠ ಈ ಎಲ್ಲ ಅರ್ಜಿಗಳನ್ನು ವಿಚಾರಣೆಗೆ ಅಂಗೀಕರಿಸಿದ್ದು, ಅಪರಾಧಿಗಳ ಮರಣದಂಡನೆ ಶಿಕ್ಷೆ ಕಾಯಂಗೊಳಿಸುವಂತೆ ಕೋರಿ ಗುಜರಾತ್ ರಾಜ್ಯ ಸರ್ಕಾರ ಸಲ್ಲಿಸಿರುವ ಮನವಿ ಜತೆಗೆ ಈ ಅರ್ಜಿಗಳನ್ನು ವಿಚಾರಣೆ ನಡೆಸುವುದಾಗಿ ಹೇಳಿದೆ.

ಕಳೆದ ಫೆಬ್ರುವರಿಯಲ್ಲಿ ವಿಶೇಷ ನ್ಯಾಯಾಲಯ 38 ದೋಷಿಗಳಿಗೆ ಮರಣದಂಡನೆ ಶಿಕ್ಷೆ ವಿಧಿಸಿತ್ತು. ಉಳಿದ 11 ಮಂದಿಗೆ ಜೀವಾವಧಿ ಶಿಕ್ಷೆ ನೀಡಿತ್ತು. 2008ರಲ್ಲಿ ನಡೆದ ಸರಣಿ ಬಾಂಬ್ ಸ್ಫೋಟದಲ್ಲಿ 56 ಜನರು ಮೃತಪಟ್ಟು, 200 ಜನರು ಗಾಯಗೊಂಡಿದ್ದರು.

ಮಧ್ಯಪ್ರದೇಶದಲ್ಲಿ ನಡೆದ ಘಟನೆ • ಕೆಜಿಎಫ್ 2 ಚಿತ್ರದ ಪ್ರೇರಣೆ?

ನಾಲ್ವರನ್ನು ಕೊಂದ ಯುವಕ ಸೆರೆ

ಭೋಪಾಲ್ (ಪಿಟಿಐ): 'ಜನಪ್ರಿಯತೆ'ಗಾಗಿ ನಾಲ್ವರು ಸೆಕ್ಯುರಿಟಿ ಗಾರ್ಡ್‌ಗಳನ್ನು ಭೀಕರವಾಗಿ ಕೊಂದಿದ್ದ 19 ವರ್ಷದ ಯುವಕನನ್ನು ಮಧ್ಯಪ್ರದೇಶದ ಭೋಪಾಲ್ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಸಾಗರ್ ಜಿಲ್ಲೆಯ ಶಿವಪ್ರಸಾದ್ ಧುರ್ವೆ ಬಂಧಿತ ಆರೋಪಿ. ಕೊಲೆಯಾದ ಸೆಕ್ಯುರಿಟಿ ಗಾರ್ಡ್‌ಗಳಿಗೆ ಸಂಬಂಧಿಸಿದ ಎರಡು ಮೊಬೈಲ್ ಫೋನ್‌ಗಳು ಮತ್ತು ಒಂದು ಸೈಕಲ್ ಅನ್ನು ಆರೋಪಿಯಿಂದ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಮಲಗಿದ್ದ ಸೆಕ್ಯುರಿಟಿ ಗಾರ್ಡ್‌ಗಳನ್ನೇ ಗುರಿಯಾಗಿಸಿಕೊಂಡು ಸಾಗರ ಜಿಲ್ಲೆಯಲ್ಲಿ ಮೂವರು ಮತ್ತು ಭೋಪಾಲ್‌ನಲ್ಲಿ ಒಬ್ಬರನ್ನು ಆರೋಪಿ ಹತ್ಯೆ ಮಾಡಿದ್ದಾನೆ. ಕಳೆದ ವಾರ ಮೊದಲ ಮೂರು ಕೊಲೆಗಳನ್ನು ಕೇವಲ 72 ಗಂಟೆಗಳಲ್ಲಿ ಮಾಡಿದ್ದಾನೆ. ಭೋಪಾಲ್‌ನಲ್ಲಿ ನಾಲ್ಕನೇ ಕೊಲೆ ಮಾಡಿದ ಕೆಲವೇ ಗಂಟೆಗಳಲ್ಲಿ ಆರೋಪಿ ಪೊಲೀಸ್ ಬಲೆಗೆ ಬಿದ್ದಿದ್ದಾನೆ.

> **ಸಾಗರ್‌ನಲ್ಲಿ ಸೆಕ್ಯುರಿಟಿ ಗಾರ್ಡ್‌ವೊಬ್ಬರನ್ನು ಕೊಲೆ ಮಾಡಿದ ನಂತರ ಆತನ ಮೊಬೈಲ್ ಕೊಂಡೊಯ್ದಿದ್ದ ಆರೋಪಿ, ಆ ಮೊಬೈಲ್‌ನ ಟವರ್ ಲೊಕೇಶನ್ ಜಾಡು ಹಿಡಿದ ತನಿಖಾ ತಂಡಕ್ಕೆ ಸಿಕ್ಕಿಬಿದ್ದಿದ್ದಾನೆ**
> **ನರೋತ್ತಮ್ ಮಿಶ್ರಾ,** ಗೃಹ ಸಚಿವ

ಕೆಜಿಎಫ್ 2 ಚಿತ್ರದ ನಾಯಕ 'ರಾಕಿ ಭಾಯ್' ಮಾದರಿಯಲ್ಲಿ ಜನಪ್ರಿಯನಾಗಲು ಈ ಕೃತ್ಯ ಎಸಗಿರುವುದಾಗಿ ಆರೋಪಿ ಪೊಲೀಸರ ಪ್ರಾಥಮಿಕ ವಿಚಾರಣೆಯಲ್ಲಿ ತಪ್ಪೊಪ್ಪಿಕೊಂಡಿದ್ದಾನೆ. ಐದು ಜನರನ್ನು ಸರಣಿ ಕೊಲೆ ಮಾಡಿದ್ದಾನೆ ಎಂದು 'ಎನ್‌ಡಿಟಿವಿ' ವರದಿ ಮಾಡಿದೆ.

ಆರೋಪಿಯ ಮೇಲೆ 'ರಾಕಿ ಭಾಯ್' ಪ್ರಭಾವದ ಬಗ್ಗೆ ಕೇಳಿದಾಗ, 'ವಿಚಾರಣೆಯ ಸಮಯದಲ್ಲಿ ಅಂತಹ ಯಾವುದೇ ಅಂಶವನ್ನು ಆರೋಪಿ ಹೇಳಿಲ್ಲ' ಎಂದು ಐ.ಜಿ ಅನುರಾಗ್ ಸ್ಪಷ್ಟಪಡಿಸಿದರು.

'ಸಾಮಾಜಿಕ ಜಾಲತಾಣದಲ್ಲಿ ಹತ್ಯೆಯ ವಿಡಿಯೊ ತುಣುಕುಗಳನ್ನು ವೀಕ್ಷಿಸಿದ್ದಾನೆ. ಆರೋಪಿ ಸೈಕೋಪಾತ್‌ನಂತೆ ಕಾಣಿಸುತ್ತಿಲ್ಲ. ಆದರೆ, ನಕಾರಾತ್ಮಕ ಪ್ರಚಾರ ಪಡೆಯುವ ಮನಸ್ಥಿತಿ ಮತ್ತು ಹಣ ಗಳಿಸುವ ಹಪಾಹಪಿ ಹೊಂದಿರುವಂತೆ ಕಾಣಿಸುತ್ತಿದೆ' ಎಂದು ಸಾಗರ್ ವಲಯದ ಐಜಿ ಅನುರಾಗ್ ತಿಳಿಸಿದ್ದಾರೆ.

ಮೇ ತಿಂಗಳಲ್ಲಿ ನಡೆದಿರುವ ಮತ್ತೊಬ್ಬ ಭದ್ರತಾ ಸಿಬ್ಬಂದಿ ಹತ್ಯೆ ಪ್ರಕರಣದಲ್ಲಿ ಈತನ ಪಾತ್ರದ ಬಗ್ಗೆಯೂ ತನಿಖೆ ನಡೆಯುತ್ತಿದೆ. ಆರೋಪಿ ಮಹಾರಾಷ್ಟ್ರದ ಹಲವೆಡೆ ಕಾರ್ಮಿಕನಾಗಿ ಕೆಲಸ ಮಾಡಿದ್ದಾನೆ. ಕೊರೆಗಾಂವ್ ಪ್ರದೇಶದ ಹೋಟೆಲ್‌ನಲ್ಲಿ ವೇಟರ್ ಆಗಿ ಧುರ್ವೆ ಕೆಲಸ ಮಾಡುತ್ತಿದ್ದಾಗ ಪುಣೆಯ ವ್ಯಕ್ತಿ ಜತೆಗೆ ಜಗಳ ಮಾಡಿಕೊಂಡು, ಆ ವ್ಯಕ್ತಿಯ ಕೊಲೆಗೆ ಯತ್ನಿಸಿದ್ದ. ಆ ಪ್ರಕರಣದಲ್ಲಿ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಸುಳ್ಳು ಸುದ್ದಿ: ಆಜಾದ್ ವಿರುದ್ಧ ಜೈರಾಂ ಟೀಕೆ

ನವದೆಹಲಿ: ಇತ್ತೀಚೆಗಷ್ಟೇ ಕಾಂಗ್ರೆಸ್ ತೊರೆದಿರುವ ಹಿರಿಯ ನಾಯಕ ಗುಲಾಂ ನಬಿ ಆಜಾದ್ ಹಾಗೂ ಪಕ್ಷದ ಇತರ ಮುಖಂಡರ ನಡುವಿನ ವಾಕ್ಸಮರ ಮುಂದುವರಿದಿದೆ.

ಆಜಾದ್ ವಿರುದ್ಧ ವಾಗ್ದಾಳಿ ನಡೆಸಿರುವ ಕಾಂಗ್ರೆಸ್‌ನ ಹಿರಿಯ ಮುಖಂಡ ಜೈರಾಂ ರಮೇಶ್, 'ಮೋದಿ ಸರ್ಕಾರ ಒದಗಿಸಿರುವ ಬಂಗಲೆಯ ವಿಶಾಲ ಹಸಿರು ಹಾಸಿನ ಮೇಲೆ ಕುಳಿತು ಸುಳ್ಳು ಹಬ್ಬಿಸುತ್ತಿದ್ದಾರೆ' ಎಂದು ಟೀಕಿಸಿದ್ದಾರೆ.

ಜಮ್ಮು–ಕಾಶ್ಮೀರದ ಭಲೆಸ್ಸಾದಲ್ಲಿ ಪಕ್ಷದ ಕಾರ್ಯಕರ್ತರು ಸಾರ್ವಜನಿಕರ ಸಭೆ ನಡೆಸುತ್ತಿರುವ ವಿಡಿಯೊವೊಂದು ಜಾಲತಾಣದಲ್ಲಿ ಹಂಚಿಕೊಂಡಿದ್ದನ್ನು ಉಲ್ಲೇಖಿಸಿರುವ ಜೈರಾಂ ರಮೇಶ್, 'ಇದು ವಾಸ್ತವ. ದೆಹಲಿಯಲ್ಲಿ ಮೋದಿ ಸರ್ಕಾರ ನೀಡಿರುವ ಬಂಗ್ಲೆಯಲ್ಲಿ ಕುಳಿತವರು ಸೃಷ್ಟಿಸಿರುವ ಸುಳ್ಳು ಸುದ್ದಿಯಲ್ಲ' ಎಂದಿದ್ದಾರೆ.

ಆಜಾದ್ ಅವರ ತವರು ಭಲೆಸ್ಸಾದಲ್ಲಿ ನಡೆದ ಪಕ್ಷದ ಕಾರ್ಯಕರ್ತರ ಸಭೆಯ ವಿಡಿಯೊವೊಂದನ್ನು ಕಾಂಗ್ರೆಸ್‌ನ ಜಮ್ಮು–ಕಾಶ್ಮೀರದ ಮುಖಂಡರೊಬ್ಬರು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ. 'ಗಂದೋಹದಲ್ಲಿ ನಡೆದ ಮಾಸಿಕ ಸಭೆಯಲ್ಲಿ ಭಲೆಸ್ಸಾ ಉಪವಿಭಾಗದ ಎಲ್ಲ ಬ್ಲಾಕ್‌ಗಳ ಕಾರ್ಯಕರ್ತರು ಪಾಲ್ಗೊಂಡಿದ್ದಾರೆ. ಕಳೆದ 50 ವರ್ಷಗಳಿಂದ ಪ್ರತಿ ತಿಂಗಳ ಮೊದಲನೇ ದಿನ ಈ ಸಭೆಯನ್ನು ಆಯೋಜಿಸಲಾಗುತ್ತದೆ' ಎಂಬ ಸಾಲುಗಳು ವಿಡಿಯೊದೊಂದಿಗೆ ಇವೆ.

ಸಂಕ್ಷಿಪ್ತ ಸುದ್ದಿ

ಅರ್ಜಿಗಳ ತ್ವರಿತ ವಿಲೇವಾರಿಗೆ ಕ್ರಮ: ಸಿಜೆಐ ಲಲಿತ್

ನವದೆಹಲಿ: 'ಎಷ್ಟು ಸಾಧ್ಯವೋ ಅಷ್ಟು ಅರ್ಜಿಗಳ ತ್ವರಿತ ವಿಲೇವಾರಿಗೆ ಸುಪ್ರೀಂಕೋರ್ಟ್ ಪ್ರಯತ್ನಿಸುತ್ತದೆ. ಈ ವಿಷಯದಲ್ಲಿ ಜನರ ನಿರೀಕ್ಷೆಗೆ ತಕ್ಕಂತೆ ಕಾರ್ಯನಿರ್ವಹಿಸಲು ಶ್ರಮಿಸಲಾಗುವುದು' ಎಂದು ಮುಖ್ಯನ್ಯಾಯಮೂರ್ತಿ ಯು.ಯು.ಲಲಿತ್ ಶುಕ್ರವಾರ ಹೇಳಿದ್ದಾರೆ.

ಭಾರತೀಯ ವಕೀಲರ ಸಂಘದ (ಬಿಸಿಐ) ವತಿಯಿಂದ ಹಮ್ಮಿಕೊಂಡಿದ್ದ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು, 'ಅಧಿಕ ಸಂಖ್ಯೆಯ ಅರ್ಜಿಗಳನ್ನು ವಿಚಾರಣೆ ಪಟ್ಟಿಗೆ ಸೇರಿಸಲಾಗುತ್ತಿದೆ. ಕಳೆದ ನಾಲ್ಕು ದಿನಗಳಲ್ಲಿ 1,293 ಇತರ ಅರ್ಜಿಗಳನ್ನು ಹಾಗೂ 106 ಸಾಮಾನ್ಯ ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ' ಎಂದು ಹೇಳಿದರು.

ಬಿಸಿಐ ಅಧ್ಯಕ್ಷ ಮನನ್‌ಕುಮಾರ್ ಮಿಶ್ರಾ ಮಾತನಾಡಿ, 'ಅರ್ಜಿಗಳನ್ನು ವಿಚಾರಣಾ ಪಟ್ಟಿಗೆ ಸೇರಿಸುವ ಪ್ರಕ್ರಿಯೆ ಪಾರದರ್ಶಕವಾಗಿರುವುದನ್ನು ಹಾಗೂ ಆ ಮೂಲಕ ವಕೀಲರಿಗೆ ತೊಂದರೆ ಆಗುವುದನ್ನು ತಪ್ಪುವುದನ್ನು ಖಾತರಿಪಡಿಸುವುದಾಗಿ ಸಿಜೆಐ ಹೇಳಿದ್ದಾರೆ' ಎಂದರು. ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಇದ್ದರು.

ಸಂಸದ ಅಭಿಷೇಕ್ ಬ್ಯಾನರ್ಜಿ ಇ.ಡಿ ಎದುರು ಹಾಜರು

ಕೋಲ್ಕತ್ತ (ಪಿಟಿಐ): ಕಲ್ಲಿದ್ದಲು ಕಳ್ಳಸಾಗಣೆ ಪ್ರಕರಣದ ತನಿಖೆಗೆ ಸಂಬಂಧಿಸಿದಂತೆ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಸಂಸದ ಅಭಿಷೇಕ್ ಬ್ಯಾನರ್ಜಿ ಅವರು ಶುಕ್ರವಾರ ಜಾರಿ ನಿರ್ದೇಶನಾಲಯದ (ಇ.ಡಿ) ಮುಂದೆ ಹಾಜರಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಸೋದರಳಿಯ ಅಭಿಷೇಕ್ ಬ್ಯಾನರ್ಜಿ ಅವರು ಸಾಲ್ಟ್ ಲೇಕ್‌ನಲ್ಲಿರುವ ಸಿಜಿಒ ಕಾಂಪ್ಲೆಕ್ಸ್ ಕಚೇರಿಗೆ ಬೆಳಿಗ್ಗೆ 11 ಗಂಟೆ ಸುಮಾರಿಗೆ ಹಾಜರಾದರು.

ಟಿಎಂಸಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬ್ಯಾನರ್ಜಿ ಅವರನ್ನು ಪ್ರಶ್ನಿಸಲು ಐವರು ಅಧಿಕಾರಿಗಳ ತಂಡ ಗುರುವಾರ ರಾತ್ರಿ ಕೋಲ್ಕತ್ತ ತಲುಪಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹಿಂದೆಯೂ ಬ್ಯಾನರ್ಜಿ ಅವರನ್ನು ಇ.ಡಿ ವಿಚಾರಣೆಗೆ ಒಳಪಡಿಸಿತ್ತು.

ಎಂಎನ್‌ಎಸ್‌ನ ಮೂವರು ಕಾರ್ಯಕರ್ತರ ಸೆರೆ

ಮುಂಬೈ (ಪಿಟಿಐ): ಸಾರ್ವಜನಿಕವಾಗಿ ಮಹಿಳೆಗೆ ಥಳಿಸಿದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ಬೆನ್ನಲ್ಲೇ ಮಹಾರಾಷ್ಟ್ರ ನವನಿರ್ಮಾಣ ಸೇನಾದ ಮೂವರು ಕಾರ್ಯಕರ್ತರನ್ನು ಬಂಧಿಸಲಾಗಿದೆ ಎಂದು ಶುಕ್ರವಾರ ಪೊಲೀಸರು ತಿಳಿಸಿದ್ದಾರೆ.

ಆ. 28ರಂದು ನಡೆದ ಘಟನೆಗೆ ಸಂಬಂಧಿಸಿದಂತೆ ಮೂವರನ್ನು ಪೊಲೀಸರು ಒಂದು ದಿನ ಮೊದಲು ಬಂಧಿಸಿದ್ದರು. ಮಧ್ಯ ಮುಂಬೈನ ಕಾಮಾಠಿಪುರ ಪ್ರದೇಶದಲ್ಲಿ ತನ್ನ ಅಂಗಡಿ ಮುಂದೆ ಜಾಹೀರಾತು ಫಲಕ ಅಳವಡಿಸಲು ಸ್ಥಳೀಯ ಎಂಎನ್‌ಎಸ್ ಕಾರ್ಯಕರ್ತರು ಕಂಬ ಹಾಕುವುದಕ್ಕೆ ಮಹಿಳೆ ಆಕ್ಷೇಪಿಸಿದ್ದರು. ಇದು ಗಲಾಟೆಗೆ ಕಾರಣವಾಯಿತು ಎಂದು ಪೊಲೀಸರು ಹೇಳಿದ್ದಾರೆ.

ರಾಜ್ ಠಾಕ್ರೆ ನೇತೃತ್ವದ ಎಂಎನ್‌ಎಸ್‌ನ ಸ್ಥಳೀಯ ಪದಾಧಿಕಾರಿ ವಿನೋದ್ ಅರ್ಗಿಲೆ ಮತ್ತು ಇತರೆ ಇಬ್ಬರು ಪಕ್ಷದ ಕಾರ್ಯಕರ್ತರು ಮಹಿಳೆಗೆ ಕಪಾಳ ಮೋಕ್ಷ ಮಾಡಿ, ತಳ್ಳುವುದು ಮತ್ತು ನಿಂದನೆ ಮಾಡಿರುವ ದೃಶ್ಯ ವಿಡಿಯೊದಲ್ಲಿದೆ. ಈ ದೃಶ್ಯ ಜಾಲತಾಣಗಳಲ್ಲಿ ಹರಿದಾಡಿದ ಬಳಿಕ ಗುರುವಾರ ನಾಗ್‌ಪಾಡಾ ಪೊಲೀಸ್ ಠಾಣೆಯಲ್ಲಿ ಐಪಿಸಿ ಸೆಕ್ಷನ್ 323 (ಹಲ್ಲೆ), 506 (ಅಪರಾಧ ಬೆದರಿಕೆ) ಮತ್ತು 509 (ಮಹಿಳೆಯರನ್ನು ಕೆರಳಿಸುವ ಉದ್ದೇಶ) ಅಡಿ ಎಫ್‌ಐಆರ್ ದಾಖಲಿಸಲಾಗಿತ್ತು. ಆರೋಪಿಗಳನ್ನು ತಡರಾತ್ರಿ ಬಂಧಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸಿಬಿಐ ತನಿಖೆಯ ಆದೇಶ ಎತ್ತಿಹಿಡಿದ ಕಲ್ಕತ್ತಾ ಹೈಕೋರ್ಟ್

ಕೋಲ್ಕತ್ತ: ಪಶ್ಚಿಮ ಬಂಗಾಳದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಕುರಿತು ಸಿಬಿಐ ತನಿಖೆ ನಡೆಸುವಂತೆ ಏಕಸದಸ್ಯ ಪೀಠ ನೀಡಿದ್ದ ಆದೇಶವನ್ನು ಕಲ್ಕತ್ತಾ ಹೈಕೋರ್ಟ್‌ನ ವಿಭಾಗೀಯ ಪೀಠವು ಶುಕ್ರವಾರ ಎತ್ತಿಹಿಡಿದಿದೆ.

ನ್ಯಾಯಮೂರ್ತಿಗಳಾದ ಸುಬ್ರತಾ ತಾಲೂಕ್ದರ್ ಮತ್ತು ಲಪಿತಾ ಬ್ಯಾನರ್ಜಿ ಅವರನ್ನೊಳಗೊಂಡ ವಿಭಾಗೀಯ ಪೀಠವು ತನಿಖೆಯನ್ನು ಏಕಸದಸ್ಯ ಪೀಠವು ಮೇಲ್ವಿಚಾರಣೆ ನಡೆಸಲಿದೆ ಎಂದೂ ತಿಳಿಸಿದೆ.

ಶಿಕ್ಷಕರ ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಕುರಿತು ಸಿಬಿಐ ತನಿಖೆಗೆ ಸೂಚಿಸಿದ್ದ ನ್ಯಾಯಮೂರ್ತಿ ಅಭಿಜಿತ್ ಗಂಗೋಪಾಧ್ಯಾಯ ಅವರ ಆದೇಶವನ್ನು ಎತ್ತಿಹಿಡಿದ ಪೀಠವು, ಅಗತ್ಯಬಿದ್ದರೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹಣ ಅಕ್ರಮ ವರ್ಗಾವಣೆ ಕುರಿತಾಗಿ ತನಿಖೆ ನಡೆಸಲಾಗುವುದು ಎಂದೂ ತಿಳಿಸಿದೆ.

ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ಚುನಾವಣೆ: ಭುಟಿಯಾಗೆ ಸೋಲು

ಚೌಬೆ ಅಧ್ಯಕ್ಷ; ಹ್ಯಾರಿಸ್ ಉಪಾಧ್ಯಕ್ಷ

ನವದೆಹಲಿ (ಪಿಟಿಐ): ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಅಧ್ಯಕ್ಷರಾಗಿ ಕಲ್ಯಾಣ್ ಚೌಬೆ ಆಯ್ಕೆಯಾಗಿದ್ದಾರೆ. ಇದರೊಂದಿಗೆ 85 ವರ್ಷಗಳ ಇತಿಹಾಸದಲ್ಲಿ ಫೆಡರೇಷನ್‌ಗೆ ಇದೇ ಮೊದಲ ಬಾರಿಗೆ ಮಾಜಿ ಆಟಗಾರರೊಬ್ಬರು ಅಧ್ಯಕ್ಷರಾಗಿ ಚುನಾಯಿತರಾದರು. ಕರ್ನಾಟಕ ಫುಟ್‌ಬಾಲ್ ಸಂಸ್ಥೆಯ ಅಧ್ಯಕ್ಷ, ಕಾಂಗ್ರೆಸ್ ಶಾಸಕ ಎನ್.ಎ. ಹ್ಯಾರಿಸ್ ಉಪಾಧ್ಯಕ್ಷರಾಗಿ ಆಯ್ಕೆಯಾದರು.

ತೀವ್ರ ಕುತೂಹಲ ಕೆರಳಿಸಿದ್ದ ಚುನಾವಣೆಯು ಇಲ್ಲಿಯ ಫುಟ್‌ಬಾಲ್ ಹೌಸ್‌ನಲ್ಲಿ ಶುಕ್ರವಾರ ನಡೆಯಿತು. ಅಧ್ಯಕ್ಷ ಸ್ಥಾನಕ್ಕೆ ನಡೆದ ಪೈಪೋಟಿಯಲ್ಲಿ 45 ವರ್ಷದ ಕಲ್ಯಾಣ್ 33–1 ಮತಗಳಿಂದ ಭಾರತ ತಂಡದ ಮಾಜಿ ನಾಯಕ ಬೈಚುಂಗ್ ಭುಟಿಯಾ ಅವರನ್ನು ಸೋಲಿಸಿದರು. ವಿವಿಧ ರಾಜ್ಯ ಸಂಸ್ಥೆಗಳನ್ನು ಪ್ರತಿನಿಧಿಸಿದ 34 ಮಂದಿಗೆ ಮತಚಲಾಯಿಸುವ ಹಕ್ಕು ಇತ್ತು.

ಬಿಜೆಪಿಯ ಕಲ್ಯಾಣ್, ಲೋಕಸಭಾ ಚುನಾವಣೆಯಲ್ಲಿ ಪಶ್ಚಿಮ ಬಂಗಾಳದ ಕೃಷ್ಣಾನಗರ ಕ್ಷೇತ್ರದಿಂದ ಸ್ಪರ್ಧಿಸಿ ಸೋತಿದ್ದರು.

ರಾಷ್ಟ್ರೀಯ ಫುಟ್‌ಬಾಲ್ ತಂಡದಲ್ಲಿ ಸ್ಥಾನ ಪಡೆದಿದ್ದ ಕಲ್ಯಾಣ್ ಅವರಿಗೆ, ಒಂದೂ ಪಂದ್ಯದಲ್ಲಿ ಆಡುವ ಅವಕಾಶ ಲಭಿಸಿರಲಿಲ್ಲ. ವಯೋಮಿತಿ ಟೂರ್ನಿಗಳಲ್ಲಿ ಭಾರತ ತಂಡವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರತಿನಿಧಿಸಿದ್ದರು. ಗೋಲ್‌ಕೀಪರ್ ಆಗಿದ್ದ ಅವರು, ಮೋಹನ್ ಬಾಗನ್ ಮತ್ತು ಈಸ್ಟ್ ಬೆಂಗಾಲ್ ತಂಡಗಳಲ್ಲಿ ಆಡಿದ್ದರು.

ಭುಟಿಯಾ ಮತ್ತು ಕಲ್ಯಾಣ್ ಒಂದು ಕಾಲದಲ್ಲಿ ಈಸ್ಟ್ ಬೆಂಗಾಲ್ ತಂಡಕ್ಕೆ ಜೊತೆಯಾಗಿ ಆಡಿದ್ದರು.

ಕಲ್ಯಾಣ್ ಅವರಿಗಿಂತ ಮೊದಲು, ಪೂರ್ಣಪ್ರಮಾಣದ ರಾಜಕಾರಣಿಗಳಾದ ಪ್ರಿಯರಂಜನ್ ದಾಸ್ ಮುನ್ಶಿ ಮತ್ತು ಪ್ರಫುಲ್ ಪಟೇಲ್ ಎಐಎಫ್‌ಎಫ್ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು.

ಹ್ಯಾರಿಸ್ ಆಯ್ಕೆ: ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಹ್ಯಾರಿಸ್ 29–5ರಿಂದ ರಾಜಸ್ಥಾನದ ಮಾನವೇಂದ್ರ ಸಿಂಗ್ ಅವರನ್ನು ಸೋಲಿಸಿದರು. ಅರುಣಾಚಲ ಪ್ರದೇಶದ ಕಿಪಾ ಅಜಯ್ ಖಜಾಂಚಿಯಾಗಿ ಆಯ್ಕೆಯಾದರು. ಅವರು 32–1ರಿಂದ ಆಂಧ್ರಪ್ರದೇಶದ ಗೋಪಾಲಕೃಷ್ಣ ಕೋಸರಾಜು ಅವರನ್ನು ಮಣಿಸಿದರು. ಈ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಒಂದು ಮತ ಅಮಾನ್ಯವಾಯಿತು.

ಕಾರ್ಯಕಾರಿ ಸಮಿತಿಯ ಎಲ್ಲ 14 ಸದಸ್ಯ ಸ್ಥಾನಗಳಿಗೆ ಅವಿರೋಧ ಆಯ್ಕೆ ನಡೆಯಿತು.

ಭುಟಿಯಾ, ಐ.ಎಂ. ವಿಜಯನ್, ಶಬ್ಬೀರ್ ಅಲಿ ಮತ್ತು ಕ್ಲಿಮ್ಯಾಕ್ಸ್ ಲಾರೆನ್ಸ್ ಅವರು ಆಟಗಾರರ ಪ್ರತಿನಿಧಿಗಳಾಗಿ ಕಾರ್ಯಕಾರಿ ಸಮಿತಿಯಲ್ಲಿ ಕಾರ್ಯನಿರ್ವ ಹಿಸಲಿದ್ದಾರೆ.

ಪದಾಧಿಕಾರಿಗಳ ಚುನಾವಣೆಯೊಂದಿಗೆ ಎಐಎಫ್‌ಎಫ್ ಬಿಕ್ಕಟ್ಟು ಸದ್ಯಕ್ಕೆ ಕೊನೆಗೊಂಡಿದೆ. ಚುನಾವಣೆಗಳನ್ನು ನಡೆಸದ ಕಾರಣ 2020ರ ಡಿಸೆಂಬರ್‌ನಲ್ಲಿ ಪ್ರಫುಲ್ ಪಟೇಲ್ ಅವರನ್ನು ಅಧ್ಯಕ್ಷ ಸ್ಥಾನದಿಂದ ತೆಗೆದುಹಾಕಲಾಗಿತ್ತು. ಬಳಿಕ ಆಡಳಿತಾಧಿಕಾರಿ ಸಮಿತಿಯನ್ನು (ಸಿಒಎ) ನೇಮಿಸಲಾಗಿತ್ತು. ಸಂಸ್ಥೆಯ ಆಡಳಿತದಲ್ಲಿ 'ಮೂರನೇ ವ್ಯಕ್ತಿಗಳ ಹಸ್ತಕ್ಷೇಪ'ದ ಕಾರಣ ನೀಡಿ ಫಿಫಾ, ಎಐಎಫ್‌ಎಫ್‌ಅನ್ನು ಅಮಾನತು ಮಾಡಿತ್ತು. ನಂತರ ಸುಪ್ರೀಂ ಕೋರ್ಟ್ ಸಿಒಎ ರದ್ದುಗೊಳಿಸಿದ ಕಾರಣ ಅಮಾನತು ಹಿಂಪಡೆಯಲಾಗಿತ್ತು.

ರಿಜಿಜು ಪ್ರಭಾವ; ಮಾನವೇಂದ್ರ ಆರೋಪ: ಎಐಎಫ್‌ಎಫ್ ಚುನಾವಣೆಗಳ ಫಲಿತಾಂಶದಲ್ಲಿ ಕೇಂದ್ರ ಸಚಿವ ಕಿರಣ್ ರಿಜಿಜು 'ಪ್ರಭಾವ' ಬೀರಿದ್ದಾರೆ ಎಂದು ಮಾನವೇಂದ್ರ ಸಿಂಗ್ ಆರೋಪಿಸಿದ್ದಾರೆ.

'ಭುಟಿಯಾ ವಿರುದ್ಧ ಮತ ಹಾಕುವಂತೆ ರಾಜ್ಯ ಸಂಸ್ಥೆಯ ಪ್ರತಿನಿಧಿಗಳನ್ನು ರಿಜಿಜು ಉತ್ತೇಜಿಸಿದ್ದಾರೆ' ಎಂದು ಸಿಂಗ್ ಹೇಳಿದ್ದಾರೆ. ಆದರೆ ಈ ಆರೋಪವನ್ನು ಚೌಬೆ ಅವರು ಅಲ್ಲಗಳೆದಿದ್ದಾರೆ.



ಎಐಎಫ್‌ಎಫ್‌ಗೆ ಆಯ್ಕೆಯಾದ ಅಜಯ್ ಕಿಪಾ (ಖಜಾಂಚಿ), ಕಲ್ಯಾಣ್ ಚೌಬೆ (ಅಧ್ಯಕ್ಷ) ಮತ್ತು ಎನ್.ಎ. ಹ್ಯಾರಿಸ್ (ಉಪಾಧ್ಯಕ್ಷ).

'ತಳಮಟ್ಟದಿಂದ ಕ್ರೀಡೆಯ ಬೆಳವಣಿಗೆ'

'ತಳಮಟ್ಟದಿಂದ ಫುಟ್‌ಬಾಲ್ ಬೆಳವಣಿಗೆಗೆ ಶ್ರಮವಹಿಸಲಾಗುವುದು. ಎಲ್ಲ ಸಂಸ್ಥೆಗಳ ಸಮಸ್ಯೆಗಳಿಗೆ ಕಿವಿಯಾಗುತ್ತೇವೆ' ಎಂದು ನೂತನ ಉಪಾಧ್ಯಕ್ಷ ಎನ್.ಎ. ಹ್ಯಾರಿಸ್ ತಿಳಿಸಿದರು.

'ಪ್ರಜಾವಾಣಿ'ಯೊಂದಿಗೆ ಮಾತನಾಡಿದ ಅವರು 'ಮೂರ್ನಾಲ್ಕು ವರ್ಷಗಳಿಂದ ಕರ್ನಾಟಕ ರಾಜ್ಯದಲ್ಲಿ ಫುಟ್‌ಬಾಲ್ ಸಾಕಷ್ಟು ಅಭಿವೃದ್ಧಿಯಾಗಿದೆ. ವರ್ಷಕ್ಕೆ ಸುಮಾರು ಎರಡು ಸಾವಿರ ಪಂದ್ಯಗಳನ್ನು ಆಡಿಸುತ್ತೇವೆ. ಆಟಗಾರರು ವೃತ್ತಿಯಾಗಿಯೂ ಈ ಕ್ರೀಡೆಯನ್ನು ತೆಗೆದುಕೊಳ್ಳಬೇಕು. ಆ ರೀತಿಯ ವಾತಾವರಣ ಸೃಷ್ಟಿಸಲು ಪ್ರಯತ್ನಿಸುತ್ತೇವೆ' ಎಂದರು.

'ಕೋಲ್ಕತ್ತ ಮತ್ತು ಕೇರಳಗಳಲ್ಲಿ ಫುಟ್‌ಬಾಲ್‌ಗೆ ಹೆಚ್ಚಿನ ಪ್ರೋತ್ಸಾಹ ಇದೆ. ಅದೇ ರೀತಿಯ ಅವಕಾಶಗಳು ನಮ್ಮ ರಾಜ್ಯದ ಆಟಗಾರರಿಗೂ ಸಿಗಬೇಕು' ಎಂದರು.

'ಎಐಎಫ್‌ಎಫ್ ಬಿಕ್ಕಟ್ಟು ಈಗ ಬಗೆಹರಿದಿದೆ. 17 ವರ್ಷದೊಳಗಿನವರ ಮಹಿಳಾ ವಿಶ್ವಕಪ್ ಆಯೋಜಿಸುವುದು ಈಗ ನಮ್ಮ ಮುಂದಿರುವ ಪ್ರಮುಖ ಸವಾಲು. ಎಲ್ಲರೂ ಜೊತೆಗೂಡಿ ಟೂರ್ನಿಯನ್ನು ಯಶಸ್ವಿಯಾಗಿಸುತ್ತೇವೆ' ಎಂದು ಹ್ಯಾರಿಸ್ ನುಡಿದರು.

ನಡಾಲ್, ಸ್ವಟೆಕ್‌ಗೆ ಜಯ

ಅಮೆರಿಕ ಓಪನ್ ಟೆನಿಸ್: ವೀನಸ್–ಸೆರೆನಾಗೆ ಸೋಲು

ನ್ಯೂಯಾರ್ಕ್ (ರಾಯಿಟರ್ಸ್/ಎಎಫ್‌ಪಿ): ಆಟದ ವೇಳೆ ಆಕಸ್ಮಿಕವಾಗಿ ಗಾಯಗೊಂಡರೂ ಛಲ ಬಿಡದೆ ಹೋರಾಡಿದ ಸ್ಪೇನ್‌ನ ರಫೆಲ್ ನಡಾಲ್ ಅವರು ಅಮೆರಿಕ ಓಪನ್ ಗ್ರ್ಯಾನ್‌ಸ್ಲಾಮ್ ಟೆನಿಸ್ ಟೂರ್ನಿಯ ಮೂರನೇ ಸುತ್ತು ಪ್ರವೇಶಿಸಿದರು.

ಗುರುವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಎರಡನೇ ಸುತ್ತಿನ ಪಂದ್ಯದಲ್ಲಿ ಅವರು 2-6, 6-4, 6-2, 6-1 ರಲ್ಲಿ ಇಟಲಿಯ ಫ್ಯಾಬಿಯೊ ಫಾಗ್ನಿನಿ ವಿರುದ್ಧ ಗೆದ್ದರು.

ನಾಲ್ಕನೇ ಸೆಟ್‌ನಲ್ಲಿ 3–0 ರಲ್ಲಿ ಮುನ್ನಡೆಯಲ್ಲಿದ್ದಾಗ ಎದುರಾಳಿಗೆ ಚೆಂಡನ್ನು ರಿಟರ್ನ್ ಮಾಡುವ ಭರದಲ್ಲಿ ನಡಾಲ್ ಮೂಗಿಗೆ ಗಾಯಮಾಡಿಕೊಂಡರು. ನೆಲಕ್ಕೆ ಬಡಿದ ರ್‍ಯಾಕೆಟ್ ಅವರ ಮೂಗಿಗೆ ಅಪ್ಪಳಿಸಿದ್ದರಿಂದ ರಕ್ತ ಸುರಿಯಿತು.

ನೋವಿನಿಂದ ನರಳಿದ ಅವರು ಕೆಲಹೊತ್ತು ಅಂಗಳದಲ್ಲಿ ಮಲಗಿದರು. ಪ್ರಥಮ ಚಿಕಿತ್ಸೆ ಪಡೆದ ನಡಾಲ್ ಬಳಿಕ ಮೂಗಿಗೆ ಬ್ಯಾಂಡೇಜ್ ಹಾಕಿಕೊಂಡು ಆಟ ಮುಂದುವರಿಸಿ ಗೆದ್ದರು.

ಮೊದಲ ಸೆಟ್‌ಅನ್ನು 2–6 ರಲ್ಲಿ ಸೋತ ನಡಾಲ್, ಎರಡನೇ ಸೆಟ್‌ನಲ್ಲಿ 2–4 ರಿಂದ ಹಿನ್ನಡೆಯಲ್ಲಿದ್ದರು. ಅನಂತರ ಲಯ ಕಂಡುಕೊಂಡು ಶಿಸ್ತಿನ ಆಟವಾಡಿದರು.

ಪುರುಷರ ಸಿಂಗಲ್ಸ್ ವಿಭಾಗದ ಇತರ ಪಂದ್ಯಗಳಲ್ಲಿ ಕ್ರೊಯೇಷ್ಯದ ಮರಿನ್ ಸಿಲಿಚ್ 6–3, 7–6, 6–3 ರಲ್ಲಿ ಸ್ಪೇನ್‌ನ ಅಲ್ಬರ್ಟ್ ರಾಮೋಸ್ ವಿನೊಲಸ್ ವಿರುದ್ಧ; ಬ್ರಿಟನ್‌ನ ಕ್ಯಾಮರನ್ ನೋರಿ 6–4, 6–4, 7–6 ರಲ್ಲಿ ಪೋರ್ಚುಗಲ್‌ನ ಜಾವೊ ಸೋಸ ವಿರುದ್ಧ ಗೆದ್ದರು.

ವೀನಸ್– ಸೆರೆನಾಗೆ ಸೋಲು: ಮಹಿಳೆಯರ ಡಬಲ್ಸ್ ವಿಭಾಗದಲ್ಲಿ ಅಮೆರಿಕದ ಸೆರೆನಾ ವಿಲಿಯಮ್ಸ್ ಮತ್ತು ವೀನಸ್ ವಿಲಿಯಮ್ಸ್ ಜೋಡಿಗೆ ಸೋಲು ಎದುರಾಯಿತು. 2018ರ ಬಳಿಕ ಇದೇ ಮೊದಲ ಬಾರಿಗೆ ಜತೆಯಾಗಿ ಆಡಿದ ವಿಲಿಯಮ್ಸ್ ಸಹೋದರಿಯರು 6–7, 4–6 ರಲ್ಲಿ ಜೆಕ್ ಗಣರಾಜ್ಯದ ಲಿಂಡಾ ನೊಸ್ಕೊವಾ– ಲೂಸಿ ಹ್ರದೆಕಾ ಎದುರು ಪರಾಭವಗೊಂಡಿತು.

ಸ್ವಟೆಕ್ ಜಯಭೇರಿ: ಅಗ್ರಶ್ರೇಯಾಂಕದ ಆಟಗಾರ್ತಿ ಪೋಲೆಂಡ್‌ನ ಇಗಾ ಸ್ವಟೆಕ್ ಮಹಿಳೆಯರ ಸಿಂಗಲ್ಸ್ ವಿಭಾಗದ ಮೂರನೇ ಸುತ್ತು ಪ್ರವೇಶಿಸಿದರು. ಗುರುವಾರ ಅವರು 6–3, 6–2 ರಲ್ಲಿ ಅಮೆರಿಕದ ಸ್ಲೊವಾನೆ ಸ್ಟೀಫನ್ಸ್ ವಿರುದ್ಧ ಗೆದ್ದರು.



ಗಾಯಗೊಂಡ ನಡಾಲ್ ವಿಶ್ರಾಂತಿ ಪಡೆದರು –ಎಎಫ್‌ಪಿ ಚಿತ್ರ

ಬೋಪಣ್ಣ, ರಾಮನಾಥನ್‌ಗೆ ಸೋಲು

ಭಾರತದ ರೋಹನ್ ಬೋಪಣ್ಣ ಮತ್ತು ರಾಮಕುಮಾರ್ ರಾಮನಾಥನ್ ಅವರು ಡಬಲ್ಸ್ ವಿಭಾಗದಲ್ಲಿ ತಮ್ಮ ಪಂದ್ಯಗಳಲ್ಲಿ ಮೊದಲ ಸುತ್ತಿನಲ್ಲೇ ಸೋತರು.

ಬೋಪಣ್ಣ ಮತ್ತು ನೆದರ್ಲೆಂಡ್ಸ್‌ನ ಮಟ್ವೆ ಮಿಡ್ಲ್‌ಕೂಪ್ ಜೋಡಿ ಪುರುಷರ ಡಬಲ್ಸ್‌ನಲ್ಲಿ 6–7, 2–6 ರಲ್ಲಿ ಇಟಲಿಯ ಆಂಡ್ರೆ ವವಸೊರಿ– ಲೊರೆನ್ಜೊ ಸೊನೆಗೊ ಎದುರು ಪರಾಭವಗೊಂಡಿತು. ಮಿಶ್ರ ಡಬಲ್ಸ್‌ನಲ್ಲಿ ಬೋಪಣ್ಣ– ಚೀನಾದ ಯಾಂಗ್ ಜಾವೊಕ್ಸುವಾನ್ 5–7, 5–7 ರಲ್ಲಿ ಆಸ್ಟ್ರೇಲಿಯಾದ ಮ್ಯಾಕ್ಸ್ ಪರ್ಸೆಲ್– ಗ್ಯಾಬ್ರಿಯೆಲಾ ದಬ್ರೊವ್‌ಸ್ಕಿ ಎದುರು ಸೋತರು. ಪುರುಷರ ಡಬಲ್ಸ್‌ನಲ್ಲಿ ರಾಮಕುಮಾರ್ ಮತ್ತು ಸರ್ಬಿಯದ ನಿಕೊಲ್ ಕಾಸಿಚ್ 4–6, 4–6 ರಲ್ಲಿ ಇಟಲಿಯ ಸಿಮೊನ್ ಬೊಲೆಲಿ– ಫ್ಯಾಬಿಯೊ ಫಾಗ್ನಿನಿ ಎದುರು ಮುಗ್ಗರಿಸಿದರು.

ಸಂಕ್ಷಿಪ್ತ ಸುದ್ದಿ

ಚೋಪ್ರಾ ಜಾವೆಲಿನ್‌ಗೆ ₹1.5 ಕೋಟಿ ನೀಡಿದ್ದ ಬಿಸಿಸಿಐ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಸ್ಮರಣಿಕೆಗಳ ಇ-ಹರಾಜು ವೇಳೆ ನೀರಜ್ ಚೋಪ್ರಾ ಅವರ ಜಾವೆಲಿನ್‌ಅನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ₹ 1.5 ಕೋಟಿ ನೀಡಿ ಕೊಂಡುಕೊಂಡಿತ್ತು ಎಂಬ ವಿಷಯವನ್ನು ಮಂಡಳಿಯ ಅಧಿಕಾರಿಯೊಬ್ಬರು ಬಹಿರಂಗಪಡಿಸಿದ್ದಾರೆ.

ಪ್ರಧಾನಿ ಮೋದಿ ಅವರು ಗಂಗಾ ನದಿಯನ್ನು ಸ್ವಚ್ಛಗೊಳಿಸುವ 'ನಮಾಮಿ ಗಂಗೆ ಯೋಜನೆ'ಗೆ ನಿಧಿ ಸಂಗ್ರಹಿಸಲು ತಮ್ಮ ಸ್ಮರಣಿಕೆಗಳನ್ನು ಇ-ಹರಾಜು ಮಾಡಿದ್ದರು. ಸ್ಮರಣಿಕೆಗಳ ಪಟ್ಟಿಯಲ್ಲಿ ಚೋಪ್ರಾ ಅವರ ಜಾವೆಲಿನ್ ಕೂಡಾ ಇತ್ತು. 2021ರ ಸೆಪ್ಟೆಂಬರ್‌ನಿಂದ ಅಕ್ಟೋಬರ್‌ವರೆಗೆ ಇ-ಹರಾಜು ಪ್ರಕ್ರಿಯೆ ನಡೆದಿತ್ತು.

ಡ್ರಾ ಪಂದ್ಯದಲ್ಲಿ ಬಿಎಫ್‌ಸಿ

ಕೋಲ್ಕತ್ತ: ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಬೆಂಗಳೂರು ಎಫ್‌ಸಿ 1–1ರಿಂದ ಮೊಹಮ್ಮಡನ್ ಸ್ಪೋರ್ಟಿಂಗ್ ತಂಡದೊಂದಿಗೆ ಡ್ರಾ ಸಾಧಿಸಿತು. ಶುಕ್ರವಾರ ಇಲ್ಲಿ ನಡೆದ ಪಂದ್ಯದಲ್ಲಿ ಮೊಹಮ್ಮಡನ್ ಪರ ಪ್ರೀತಂ ಸಿಂಗ್ ಗೋಲು ಗಳಿಸಿದರೆ, ಬಿಎಫ್‌ಸಿ ತಂಡಕ್ಕಾಗಿ ಶಿವಶಕ್ತಿ ಸಮಬಲದ ಗೋಲು ದಾಖಲಿಸಿದರು. ಉಭಯ ತಂಡಗಳು ನಾಕೌಟ್ ಹಂತ ತಲುಪಿವೆ.

ಜಡೇಜಗೆ ಗಾಯ, ಅಕ್ಷರ್‌ಗೆ ಸ್ಥಾನ

ದುಬೈ (ಪಿಟಿಐ): ಭಾರತ ತಂಡದ ಆಲ್‌ರೌಂಡರ್ ರವೀಂದ್ರ ಜಡೇಜ ಗಾಯಗೊಂಡಿದ್ದಾರೆ. ಆದ್ದರಿಂದ ಅವರು ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯ ಸೂಪರ್ ಫೋರ್ ಹಂತದಿಂದ ಹೊರಬಿದ್ದಿದ್ದಾರೆ. ಅವರ ಬದಲಿಗೆ ಅಕ್ಷರ್ ಪಟೇಲ್ ಸೇರ್ಪಡೆಗೊಂಡಿದ್ದಾರೆ.

ಬಿಸಿಸಿಐ ಪ್ರಕಟಣೆಯಲ್ಲಿ ಈ ವಿಷಯ ತಿಳಿಸಲಾಗಿದೆ.

ಅವರ ಮೊಣಕಾಲಿಗೆ ಪೆಟ್ಟಾಗಿದ್ದು, ವೈದ್ಯರು ವಿಶ್ರಾಂತಿಗೆ ಸಲಹೆ ನೀಡಿದ್ದಾರೆ. ಈಚೆಗೆ ಪಾಕಿಸ್ತಾನ ಎದುರಿನ ಮೊದಲ ಪಂದ್ಯದಲ್ಲಿ ಭಾರತ ಜಯಿಸಲು ಅವರು ಮಹತ್ವದ ಕಾಣಿಕೆ ನೀಡಿದ್ದರು.

ಭಾರತ- ಪಾಕ್ ಮತ್ತೆ ಮುಖಾಮುಖಿ

ಶಾರ್ಜಾ (ಪಿಟಿಐ): ಅಗ್ರ ಕ್ರಮಾಂಕದ ಬ್ಯಾಟ್ಸ್‌ಮನ್‌ಗಳ ಜವಾಬ್ದಾರಿಯುತ ಆಟ ಹಾಗೂ ಪರಿಣಾಮಕಾರಿ ಬೌಲಿಂಗ್ ನೆರವಿನಿಂದ ಪಾಕಿಸ್ತಾನ ತಂಡ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಹಾಂಗ್‌ಕಾಂಗ್ ವಿರುದ್ಧ ದಾಖಲೆಯ ಜಯ ಗಳಿಸಿತು. ಶಾರ್ಜಾದಲ್ಲಿ ಶುಕ್ರವಾರ 155 ರನ್‌ಗಳಿಂದ ಗೆದ್ದು ಸೂಪರ್ 4 ಹಂತಕ್ಕೆ ಪ್ರವೇಶಿಸಿತು.

ಭಾನುವಾರ ನಡೆಯುವ ಸೂಪರ್ 4 ಹಂತದ ಪಂದ್ಯದಲ್ಲಿ ಭಾರತ ತಂಡವನ್ನು ಪಾಕಿಸ್ತಾನ ಎದುರಿಸಲಿದೆ. ಗುಂಪು ಹಂತದಲ್ಲಿ ಭಾರತ, ಪಾಕಿಸ್ತಾನವನ್ನು ಐದು ವಿಕೆಟ್‌ಗಳಿಂದ ಮಣಿಸಿತ್ತು.

ಮೊದಲು ಬ್ಯಾಟ್ ಮಾಡಿದ ಬಾಬರ್ ಅಜಂ ಬಳಗ 20 ಓವರ್‌ಗಳಲ್ಲಿ 2 ವಿಕೆಟ್‌ಗೆ 193 ರನ್ ಗಳಿಸಿತು. ಹಾಂಗ್‌ಕಾಂಗ್ 11ನೇ ಓವರ್‌ನಲ್ಲಿ ಕೇವಲ 38 ರನ್ ಗಳಿಸಿ ಎಲ್ಲ ವಿಕೆಟ್ ಒಪ್ಪಿಸಿತು. ತಂಡದ ಯಾರೊಬ್ಬರೂ ಎರಡಂಕಿ ಮೊತ್ತ ದಾಟಲಿಲ್ಲ.



ಮೊಹಮ್ಮದ್ ರಿಜ್ವಾನ್

ಪಾಕ್ ಪರ ಆರಂಭಿಕ ಬ್ಯಾಟರ್ ಮೊಹಮ್ಮದ್ ರಿಜ್ವಾನ್ (ಅಜೇಯ 78, 57 ಎ., 4X6, 6X1) ಮತ್ತು ಫಖ್ರ್ ಜಮಾನ್ (53 ರನ್, 41 ಎ., 4X3, 6X2) ಅವರು ಅರ್ಧಶತಕದ ಮೂಲಕ ತಂಡಕ್ಕೆ ಆಸರೆಯಾದರು. ಕೊನೆಯಲ್ಲಿ ಖುಷ್‌ದಿಲ್ ಶಾ (ಅಜೇಯ 35, 15 ಎ., 6X5) ಬೀಸಾಟವಾಡಿ ರನ್ ರೇಟ್ ಹೆಚ್ಚಿಸಿದರು.

ಟಿ20 ಮಾದರಿಯಲ್ಲಿ ಪಾಕಿಸ್ತಾನಕ್ಕೆ ಇದು ಗರಿಷ್ಠ ಅಂತರದ ಜಯ ಆಗಿದೆ.

ಸಂಕ್ಷಿಪ್ತ ಸ್ಕೋರ್: ಪಾಕಿಸ್ತಾನ 20 ಓವರ್‌ಗಳಲ್ಲಿ 2 ವಿಕೆಟ್‌ಗೆ 193 (ಮೊಹಮ್ಮದ್ ರಿಜ್ವಾನ್ ಅಜೇಯ 78, ಬಾಬರ್ ಅಜಂ 9, ಫಖ್ರ್ ಜಮಾನ್ 53, ಖುಷ್‌ದಿಲ್ ಶಾ ಅಜೇಯ 35, ಎಹ್ಸಾನ್ ಖಾನ್ 28ಕ್ಕೆ 2). ಹಾಂಗ್‌ಕಾಂಗ್: 10.4 ಓವರ್‌ಗಳಲ್ಲಿ 38 (ನಿಜಾಕತ್ ಖಾನ್ 8, ಕಿಂಚಿತ್ ಶಾ 6; ನಸೀಂ ಶಾ 7ಕ್ಕೆ 2, ಶಾದಾಬ್ ಖಾನ್ 8ಕ್ಕೆ 4, ಮೊಹಮ್ಮದ್ ನವಾಜ್ 5ಕ್ಕೆ 3). ಪಾಕಿಸ್ತಾನಕ್ಕೆ 155 ರನ್‌ಗಳ ಜಯ

ಇಂದಿನ ಪಂದ್ಯ: ಶ್ರೀಲಂಕಾ–ಅಫ್ಗಾನಿಸ್ತಾನ. ಆರಂಭ: ಸಂಜೆ 7.30

ಜೋ ಕಾರ್ಟರ್ ಬ್ಯಾಟಿಂಗ್ ಸೊಬಗು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶುಕ್ರವಾರ ಮಳೆ ಬರಲಿಲ್ಲ. ಆದರೆ, ನ್ಯೂಜಿಲೆಂಡ್ ಎ ತಂಡದ ಜೋ ಕಾರ್ಟರ್ ಹಾಗೂ ಭಾರತ ಎ ತಂಡದ ಅಭಿಮನ್ಯು ಈಶ್ವರನ್ ಅವರು ರನ್‌ಗಳ ಹೊಳೆ ಹರಿಸಿದರು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ 'ಟೆಸ್ಟ್' ಪಂದ್ಯದ ಎರಡನೇ ದಿನದಾಟದಲ್ಲಿ ಕಿವೀಸ್ ಬಳಗದ ಕಾರ್ಟರ್ (197; 305ಎ, 4X26, 6X3) ಮೂರು ರನ್‌ಗಳ ಅಂತರದಿಂದ ದ್ವಿಶತಕ ತಪ್ಪಿಸಿಕೊಂಡರು. ತಂಡವು 110.5 ಓವರ್‌ಗಳಲ್ಲಿ 400 ರನ್ ಗಳಿಸಿ ಆಲೌಟ್ ಆಯಿತು. ಗುರುವಾರ ಕಾರ್ಟರ್ 73 ರನ್ ಗಳಿಸಿ ಕ್ರೀಸ್‌ನಲ್ಲಿದ್ದರು. ಶುಕ್ರವಾರ ತಮ್ಮ ಮೊತ್ತಕ್ಕೆ ಮತ್ತೆ 124 ರನ್‌ಗಳನ್ನು ಸೇರಿಸಿದರು. 29 ವರ್ಷದ ಬಲಗೈ ಬ್ಯಾಟರ್ ಆತಿಥೇಯ ತಂಡದ ದಾಳಿಯನ್ನು ಆತ್ಮವಿಶ್ವಾಸದಿಂದ ಎದುರಿಸಿದರು. ಇನ್ನೊಂದು ಬದಿಯಲ್ಲಿ ಬ್ಯಾಟರ್‌ಗಳು ರನ್ ಗಳಿಸಲು ಪರದಾಡುತ್ತಿದ್ದರೆ ಕಾರ್ಟರ್ ಮಾತ್ರ ಲೀಲಾಜಾಲವಾಗಿ ಬ್ಯಾಟ್ ಬೀಸಿದರು.

ಮೊದಲ ದಿನ ಮೂರು ವಿಕೆಟ್ ಗಳಿಸಿದ್ದ ಮಧ್ಯಮವೇಗಿ ಮುಕೇಶ್ ಕುಮಾರ್ ಮತ್ತೆರಡು ವಿಕೆಟ್ ಕಬಳಿಸಿ ಐದರ ಗೊಂಚಲು ಗಳಿಸಿದರು.

ನಂತರ ಬ್ಯಾಟಿಂಗ್ ಮಾಡಿದ ಭಾರತ ತಂಡಕ್ಕೆ ನಾಯಕ ಪ್ರಿಯಾಂಕ್ ಪಾಂಚಾಲ್ (47; 83ಎ, 4X4) ಹಾಗೂ ಅಭಿಮನ್ಯು (ಬ್ಯಾಟಿಂಗ್ 87; 120ಎ, 4X10, 6X1) ಉತ್ತಮ ಆರಂಭ ನೀಡಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 123 ರನ್‌ಗಳನ್ನು ಸೇರಿಸಿದರು.

29ನೇ ಓವರ್‌ನಲ್ಲಿ ಪ್ರಿಯಾಂಕ್ ಔಟಾದ ನಂತರವೂ ಅಭಿಮನ್ಯು ಆಟ ಮುಂದುವರಿಯಿತು. ಅವರಿಗೆ ಋತುರಾಜ್ (ಬ್ಯಾಟಿಂಗ್ 20) ಜೊತೆ ನೀಡಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ನ್ಯೂಜಿಲೆಂಡ್ ಎ: 110.5 ಓವರ್‌ಗಳಲ್ಲಿ 400 (ಜೋ ಕಾರ್ಟರ್ 197, ಜೋ ವಾಕರ್ 22, ಜೇಕಪ್ ಡಫಿ ಔಟಾಗದೆ 17, ಮುಕೇಶ್ ಕುಮಾರ್ 86ಕ್ಕೆ5, ಸರ್ಫರಾಜ್ ಖಾನ್ 32ಕ್ಕೆ2) ಭಾರತ ಎ: 37 ಓವರ್‌ಗಳಲ್ಲಿ 1 ವಿಕೆಟ್‌ಗೆ 156 (ಪ್ರಿಯಾಂಕ್ ಪಾಂಚಾಲ್ 47, ಅಭಿಮನ್ಯು ಈಶ್ವರನ್ ಬ್ಯಾಟಿಂಗ್ 87, ಋತುರಾಜ್ ಗಾಯಕವಾಡ್ ಬ್ಯಾಟಿಂಗ್ 20, ರಚಿನ್ ರವೀಂದ್ರ 22ಕ್ಕೆ1)



ನ್ಯೂಜಿಲೆಂಡ್ ಎ ತಂಡದ ಜೋ ಕಾರ್ಟರ್ ಬ್ಯಾಟಿಂಗ್ ಸೊಬಗು –ಪ್ರಜಾವಾಣಿ ಚಿತ್ರ/ವಿ. ಪುಷ್ಕರ್

5ರಿಂದ ಫಿಬಾ ಏಷ್ಯಾ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್

ಪ್ರಶಸ್ತಿಗೆ 16 ತಂಡಗಳ ಪೈಪೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 18 ವರ್ಷದೊಳಗಿನ ಮಹಿಳಾ ಫಿಬಾ ಏಷ್ಯನ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್ ಇದೇ 5 ರಿಂದ 11ರ ವರೆಗೆ ಬೆಂಗಳೂರಿನಲ್ಲಿ ನಡೆಯಲಿದ್ದು, ಆತಿಥೇಯ ಭಾರತ ಒಳಗೊಂಡಂತೆ 16 ತಂಡಗಳು ಪೈಪೋಟಿ ನಡೆಸಲಿವೆ.

'ಕಂಠೀರವ ಮತ್ತು ಕೋರಮಂಗಲ ಒಳಾಂಗಣ ಕ್ರೀಡಾಂಗಣಗಳಲ್ಲಿ ಟೂರ್ನಿಯ ಪಂದ್ಯಗಳು ನಡೆಯಲಿದ್ದು, ಎಲ್ಲ ಸಿದ್ಧತೆ ಪೂರ್ಣಗೊಂಡಿದೆ. 16 ದೇಶಗಳ 192 ಕ್ರೀಡಾಪಟುಗಳು, 96 ತಾಂತ್ರಿಕ ಅಧಿಕಾರಿಗಳು ಭಾಗವಹಿಸಲಿದ್ದಾರೆ' ಎಂದು ಕ್ರೀಡಾ ಸಚಿವ ಕೆ.ಸಿ ನಾರಾಯಣಗೌಡ ಅವರು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

₹ 1.60 ಕೋಟಿ ಬಿಡುಗಡೆ: ಈ ಚಾಂಪಿಯನ್‌ಷಿಪ್ ಆಯೋಜಿಸಲು ರಾಜ್ಯ ಸರ್ಕಾರ ₹ 1.60 ಕೋಟಿ ಬಿಡುಗಡೆ ಮಾಡಿದೆ. ಕಂಠೀರವ ಕ್ರೀಡಾಂಗಣವನ್ನು ₹ 77 ಲಕ್ಷ ಹಾಗೂ ಕೋರಮಂಗಲ ಒಳಾಂಗಣ ಕ್ರೀಡಾಂಗಣವನ್ನು ₹ 8.96 ಕೋಟಿ ವೆಚ್ಚದಲ್ಲಿ ನವೀಕರಣ ಮಾಡಲಾಗಿದೆ ಎಂದು ಸಚಿವರು ಮಾಹಿತಿ ನೀಡಿದರು.

'ಬೆಂಗಳೂರಿನ ಯಲಹಂಕ ಬಳಿ 100 ಎಕರೆ ಪ್ರದೇಶದಲ್ಲಿ ಅತ್ಯಾಧುನಿಕ ಕ್ರೀಡಾ ಸಂಕೀರ್ಣ ನಿರ್ಮಿಸುವ ಯೋಜನೆಯನ್ನು ರಾಜ್ಯ ಸರ್ಕಾರ ಹಾಕಿಕೊಂಡಿದೆ. 65 ಎಕರೆ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿದೆ' ಎಂದರು.

ಭಾರತ ಬ್ಯಾಸ್ಕೆಟ್‌ಬಾಲ್ ಫೆಡರೇಷನ್ ಅಧ್ಯಕ್ಷ ಕೆ.ಗೋವಿಂದರಾಜು, ಕ್ರೀಡಾ ಇಲಾಖೆಯ ಆಯುಕ್ತ ಡಾ.ಎಚ್.ಎನ್ ಗೋಪಾಲಕೃಷ್ಣ ಹಾಜರಿದ್ದರು.

ಸತ್ಯಾ ಕೃಷ್ಣಮೂರ್ತಿ ನೇತೃತ್ವ



ಸತ್ಯಾ

ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳುವ ಭಾರತ ತಂಡವನ್ನು ತಮಿಳುನಾಡಿನ ಸತ್ಯಾ ಕೃಷ್ಣಮೂರ್ತಿ ಮುನ್ನಡೆಸಲಿದ್ದಾರೆ. ತಂಡದಲ್ಲಿ ಕರ್ನಾಟಕದ ನಿಹಾರಿಕಾ ರೆಡ್ಡಿ ಮತ್ತು ಮೇಖಲಾ ಗೌಡ ಇದ್ದಾರೆ. ಭಾರತ ತನ್ನ ಮೊದಲ ಪಂದ್ಯದಲ್ಲಿ ಸೆ.5 ರಂದು ಆಸ್ಟ್ರೇಲಿಯಾವನ್ನು ಎದುರಿಸಲಿದೆ.

ತಂಡ ಹೀಗಿದೆ: ಸತ್ಯಾ ಕೃಷ್ಣಮೂರ್ತಿ (ನಾಯಕಿ), ನಿಕಿತಾ ಅಮುದನ್, ದೀಪ್ತಿ ರಾಜಾ, ಹರಿಮಾ ಸುಂದರಿ, ನಿಹಾರಿಕಾ ರೆಡ್ಡಿ, ಮೇಖಲಾ ಗೌಡ, ಕರಣ್‌ವೀರ್ ಕೌರ್, ಮನ್‌ಮೀತ್ ಕೌರ್, ಯಶ್‌ನೀತ್ ಕೌರ್, ಕೀರ್ತಿ ದೇಪ್ಲಿ, ಐರಿನಾ ಎಲ್ಸಾ ಜಾನ್, ಭೂಮಿಕಾ ಸಿಂಗ್. ಅರ್ಣಿಕಾ ಪಾಟೀಲ್ (ಮುಖ್ಯ ಕೋಚ್), ಅನಿತಾ ಪೌಲ್ ದುರೈ (ಕೋಚ್), ಪಿ.ಎಸ್.ಜರಿನ್ (ಮ್ಯಾನೇಜರ್), ಅಹಾನಾ ಪುರಾಣಿಕ್ (ಫಿಸಿಯೊ)

ಬ್ಯಾಡ್ಮಿಂಟನ್: ಪ್ರಣಯ್‌ಗೆ ಸೋಲು

ಒಸಾಕ (ಪಿಟಿಐ): ಜಪಾನ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಎಚ್.ಎಸ್. ಪ್ರಣಯ್ ಅವರ ಸವಾಲು ಕೊನೆಗೊಂಡಿದೆ.

ಶುಕ್ರವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಪ್ರಣಯ್ 17–21, 21–15, 20–22ರಿಂದ ಚೀನಾ ತೈಪೆಯ ಚೊ ಟಿಯೆನ್ ಚೆನ್ ವಿರುದ್ಧ ಪರಾಭವಗೊಂಡರು.

ಕೊಕ್ಕೊ: ತೆಲುಗು ಯೋಧಾಸ್‌ಗೆ ಜಯ

ಪುಣೆ (ಪಿಟಿಐ): ನಾಯಕ ಪ್ರತೀಕ್ ವೈಕರ್ ಅವರ ಉತ್ತಮ ಆಟದ ನೆರವಿನಿಂದ ತೆಲುಗು ಯೋಧಾಸ್ ತಂಡವು ಅಲ್ಟಿಮೇಟ್ ಕೊಕ್ಕೊ ಲೀಗ್‌ನ ಎಲಿಮಿನೇಟರ್ ಪಂದ್ಯದಲ್ಲಿ ಜಯ ಗಳಿಸಿತು. ಶುಕ್ರವಾರ ನಡೆದ ಪಂದ್ಯದಲ್ಲಿ 61–43ರಿಂದ ಚೆನ್ನೈ ಕ್ವಿಕ್ ಗನ್ಸ್ ಎದುರು ಗೆದ್ದಿತು.

ಪ್ರತೀಕ್ ಒಟ್ಟು 6.43 ನಿಮಿಷ ಔಟಾಗಲಿಲ್ಲ.

ಕನ್ನಡಿಗ ಅಂಪೈರ್ ವಿ.ಎನ್. ಕುಲಕರ್ಣಿ ಸಾಧನೆ: ಸತತ ಮೂರನೇ ಆವೃತ್ತಿಗೆ ಮನ್ನಣೆ

ಎಂಸಿಸಿ ವೆಬ್‌ಸೈಟ್‌ನಲ್ಲಿ ಕನ್ನಡದ ಕಂಪು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆರಿಲ್‌ಬೋನ್ ಕ್ರಿಕೆಟ್ ಕ್ಲಬ್ ವೆಬ್‌ಸೈಟ್‌ನಲ್ಲಿ 'ಕ್ರಿಕೆಟ್ ನಿಯಮಗಳು' ಕನ್ನಡ ಅವತರಣಿಕೆಯ ಮೂರನೇ ಆವೃತ್ತಿ ಪ್ರಕಟವಾಗಿದೆ.

ಬೆಂಗಳೂರಿನಲ್ಲಿರುವ ಮಾಜಿ ಅಂತರರಾಷ್ಟ್ರೀಯ ಅಂಪೈರ್ ವಿನಾಯಕ ನಾರಾಯಣರಾವ ಕುಲಕರ್ಣಿ ಅವರು ಸತತ ಮೂರನೇ ಬಾರಿ ಕನ್ನಡಕ್ಕೆ ಕ್ರಿಕೆಟ್ ನಿಯಮಗಳನ್ನು ಅನುವಾದಿಸಿ ಮತ್ತು ಪರಿಷ್ಕರಿಸಿ ಕೊಟ್ಟಿದ್ದಾರೆ. 123 ಪುಟಗಳ ಪುಸ್ತಕ ಈಗ ಎಂ.ಸಿ.ಸಿಯ ಅಧಿಕೃತ ವೆಬ್‌ಸೈಟ್ (https://www.lords.org/mcc/about-the-laws-of--cricket) ನಲ್ಲಿ ಲಭ್ಯವಿದೆ.

ಈ ವೆಬ್‌ಸೈಟ್‌ನಲ್ಲಿ 2017ರಲ್ಲಿ ಮೊದಲ ಬಾರಿಗೆ ಕುಲಕರ್ಣಿಯವರು ಅನುವಾದಿಸಿದ ನಿಯಮದ ಪುಸ್ತಕ ಪ್ರಕಟವಾಗಿತ್ತು. ನಂತರ 2019ರಲ್ಲಿ ಪರಿಷ್ಕೃತ ನಿಯಮಗಳನ್ನು ಕೂಡ ವೆಬ್‌ನಲ್ಲಿ ಪ್ರಕಟಿಸಲಾಗಿತ್ತು. ಇದೀಗ ಮತ್ತೊಮ್ಮೆ ಬದಲಾದ ನಿಯಮಗಳನ್ನು ಸೇರ್ಪಡೆ ಮಾಡಿರುವ ಕೃತಿಯನ್ನು ಎಂಸಿಸಿ ಪ್ರಕಟಿಸಿದೆ.



'ಈ ಬಾರಿ ಸುಮಾರು ಮೂರು ಪ್ರಮುಖ ನಿಯಮಗಳ ಪರಿಷ್ಕರಣೆಗಳನ್ನು ಸೇರ್ಪಡೆ ಮಾಡಲಾಗಿದೆ. ಸುಮಾರು 20 ಕಡೆ ಪದಗಳ ಬದಲಾವಣೆ ಸೇರಿದಂತೆ ಕೆಲವು ಸಣ್ಣಪುಟ್ಟ ಪರಿಷ್ಕರಣೆಗಳನ್ನು ಮಾಡಲಾಗಿದೆ. ಬದಲೀ ಆಟಗಾರ ಅಥವಾ ಆಟಗಾರ್ತಿಗೆ ಅನ್ವಯಿಸುವ ನಿಯಮವೂ ಪರಿಷ್ಕೃತಗೊಂಡಿದೆ. ಈ ಕೃತಿಯಲ್ಲಿರುವ ಕೆಂಪುಗುರುತಿನ ಪ್ಯಾರಾ ಮತ್ತು ಸಾಲುಗಳು ಈ ಬಾರಿ ಪರಿಷ್ಕರಣೆಗೊಂಡಂತಹ ಅಂಶಗಳು' ಎಂದು ಅಂಪೈರ್‌ಗಳ ಅಕಾಡೆಮಿಯ ಕೋಚ್ ಕೂಡ ಆಗಿರುವ ಕುಲಕರ್ಣಿ 'ಪ್ರಜಾವಾಣಿ'ಗೆ ತಿಳಿಸಿದರು.



ವಿನಾಯಕ ಕುಲಕರ್ಣಿ

ಭಾರತದಲ್ಲಿ ಅಂಪೈರ್‌ಗಳ ಕಾರ್ಯಕ್ಷಮತೆಯನ್ನು ಉತ್ತಮಗೊಳಿಸುವುದಕ್ಕಾಗಿ ಕೆಲವು ವರ್ಷಗಳ ಹಿಂದೆ ಬಿಸಿಸಿಐ ನಾಗಪುರದಲ್ಲಿ ಅಂಪೈರ್‌ಗಳ ಅಕಾಡೆಮಿ ಆರಂಭಿಸಿತ್ತು. ಈ ಅಕಾಡೆಮಿಯ ಮೊದಲ ಕೋಚ್ ಕೂಡ ಆಗಿದ್ದ ಕುಲಕರ್ಣಿಯವರು ನಿಯಮಪುಸ್ತಕವನ್ನು ಕನ್ನಡದಲ್ಲಿ ಅನುವಾದಿಸಿದ್ದರು.

ರಾಜ್ಯದ ಅಂಪೈರ್‌ಗಳಿಗೆ ಮಾತೃಭಾಷೆಯಲ್ಲಿಯೇ ಸರಳವಾಗಿ ನಿಯಮಗಳನ್ನು ಮನವರಿಕೆ ಮಾಡಿಕೊಡುವ ಉದ್ದೇಶ ಅವರದ್ದು. ಪಂದ್ಯದ ವೇಳೆ ಅಂಪೈರ್‌ಗಳು ಹೇಗೆ ನಡೆದುಕೊಳ್ಳಬೇಕು, ಆಟಗಾರರ ಜವಾಬ್ದಾರಿಗಳೇನು, ನಿಯಮಕ್ಕೆ ಅನುಗುಣವಾಗಿ ಪಂದ್ಯಗಳನ್ನು ಹೇಗೆ ನಡೆಸಬೇಕು ಎನ್ನುವ ವಿವರವಿದೆ.

'ಎಂಸಿಸಿಯು ಸುಲಭವಾಗಿ ಪರಿಷ್ಕರಣೆಗಳನ್ನು ಒಪ್ಪಿಕೊಳ್ಳುವುದಿಲ್ಲ. ಬಹಳಷ್ಟು ಪೂರ್ವಸಿದ್ಧತೆ ಹಾಗೂ ಪೂರಕವಾದ ಅಂಶಗಳೊಂದಿಗೆ ಮನವರಿಕೆ ಮಾಡಿಕೊಡಬೇಕು. ಈ ನಿಟ್ಟಿನಲ್ಲಿ ಯಶಸ್ವಿಯಾದ ತೃಪ್ತಿ ಇದೆ. ಎಂಸಿಸಿಯು ಮೂರನೇ ಬಾರಿ ಪ್ರಕಟಿಸಿರುವುದು ದೊಡ್ಡ ಗೌರವ. ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಸಹಕಾರವೂ ಇದೆ' ಎಂದು 67 ವರ್ಷದ ಕುಲಕರ್ಣಿ ಸಂತಸ ವ್ಯಕ್ತಪಡಿಸಿದರು.

ಈಚೆಗೆ ಮಂಕಡಿಂಗ್ ನಿಯಮವನ್ನು ರನೌಟ್ ನಿಯಮಕ್ಕೆ ವಿಲೀನ ಮಾಡಿರುವುದು ಕೂಡ ಹೊಸ ಸೇರ್ಪಡೆಯಾಗಿದೆ.

2017ರಲ್ಲಿ ಫ್ರೆಂಚ್ ಹಾಗೂ ಕನ್ನಡದಲ್ಲಿ ಅನುವಾದಗೊಂಡ ನಿಯಮಗಳ ಕೃತಿ ಪ್ರಕಟಿಸಿತ್ತು. ಅದಕ್ಕೂ ಮುನ್ನ ಗುಜರಾತಿ ಹಾಗೂ ಉರ್ದು ಭಾಷೆಯಲ್ಲಿಯೂ ಇತ್ತು.

2019ರಲ್ಲಿ ಎಂಸಿಸಿಯು ಕನ್ನಡ, ಮರಾಠಿ, ಹಿಂದಿ ಹಾಗೂ ಫ್ರೆಂಚ್ ಭಾಷೆಗಳಲ್ಲಿ ಪ್ರಕಟವಾಗಿತ್ತು. ಈ ಬಾರಿ ಕನ್ನಡವೇ ಮೊದಲಿಗೆ ಪರಿಷ್ಕೃತಗೊಂಡು ಪ್ರಕಟವಾಗಿದೆ. ಇನ್ನುಳಿದಿರುವ ಭಾಷೆಗಳಲ್ಲಿ ತೃತೀಯ ಪರಿಷ್ಕರಣೆಗಳು ಪ್ರಕಟವಾಗುವ ನಿರೀಕ್ಷೆಯಿದೆ.

ವಿನಾಯಕ ಅವರು 60 ರಣಜಿ, ಎರಡು ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಅಂಪೈರ್ ಆಗಿ ಕಾರ್ಯನಿರ್ವಹಿಸಿದ್ದರು.

ಎಲ್ಲೆಡೆ ಧೋ ಎಂದು ಮಳೆ ಸುರಿಯುತ್ತಿದೆ. ಶೀತ –ಕೆಮ್ಮು, ವೈರಲ್ ಜ್ವರ ಸಾಮಾನ್ಯ ಎನ್ನುವಂತಾಗಿದೆ. ಆದರೂ ಕೋವಿಡ್ ನಿಂದ ಆದ ಅನುಭವ ವೈರಲ್ ಜ್ವರವನ್ನು ನಿರ್ಲಕ್ಷ್ಯ ಮಾಡದಂತೆ ಎಚ್ಚರಿಸುತ್ತಿದೆ. ವೈರಾಣುಗಳ ವಿರುದ್ಧ ಹೋರಾಡಲು ಬೇಕಿರುವ ವಿಟಮಿನ್‌ಯುಕ್ತ ತರಕಾರಿಗಳ ಬಗ್ಗೆ ಮಾಹಿತಿ ಇಲ್ಲಿದೆ...



ಮಳೆಗಾಲದ ತರಕಾರಿಗಳು

ತಪಶ್ಚರಣ

ಕಾಳಜಿ

ಮಳೆಗಾಲದಲ್ಲಿ ಶೀತ, ಕೆಮ್ಮು, ವೈರಲ್ ಜ್ವರದ ಬಾಧೆ ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಆಹಾರ ಪದ್ಧತಿಯೂ ಮಳೆಗಾಲಕ್ಕೆ ಪೂರಕವಾಗಿದ್ದರೆ, ಆದಷ್ಟು ಇಂಥ ಬಾಧೆಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಿದೆ. ನಾವು ನಿತ್ಯ ಸೇವಿಸುವ ತರಕಾರಿಗಳಲ್ಲಿ ವೈರಾಣುಗಳನ್ನು ನಿಗ್ರಹಿಸುವ ಶಕ್ತಿ ಇದೆ. ಇವುಗಳ ಬಳಕೆ ಹೆಚ್ಚಾದರೆ ವೈರಾಣುಗಳ ದಾಳಿಗೆ ತುತ್ತಾಗುವ ಸಾಧ್ಯತೆಯನ್ನು ಕಡಿಮೆ ಮಾಡಬಹುದು. ಅಂಥ ಕೆಲವು ತರಕಾರಿಗಳ ಬಗ್ಗೆ ಮಾಹಿತಿ ಇಲ್ಲಿದೆ.

ಯಾವುದೇ ತರಕಾರಿ ಇರಲಿ; ಅದನ್ನು ಬಳಸುವ ಮುನ್ನ ಚೆನ್ನಾಗಿ ತೊಳೆಯುವುದು ಅಗತ್ಯ. ಎಷ್ಟೋ ಬಾರಿ ಬಳಸುವ ತರಕಾರಿ, ಹಣ್ಣಿನ ಮೂಲಕವೂ ವೈರಾಣುಗಳು ದಾಳಿ ಮಾಡಬಹುದು.

ಬೆಂಡೆಕಾಯಿ: ವಿಟಮಿನ್ ಎ ಮತ್ತು ಸಿ, ಕಬ್ಬಿಣ ಹಾಗೂ ಕ್ಯಾಲ್ಸಿಯಂ, ಮ್ಯಾಗ್ನಿಷಿಯಂ ಅಂಶ ಹೇರಳವಾಗಿರುವ ಬೆಂಡೆಕಾಯಿ ವೈರಾಣುವನ್ನು ಹತ್ತಿಕ್ಕುವಲ್ಲಿ ಸಹಕರಿಸುತ್ತದೆ. ಜತೆಗೆ ಇದನ್ನು ನಿಯಮಿತವಾಗಿ ಸೇವಿಸಿದರೆ ದೇಹದಲ್ಲಿ ರೋಗನಿರೋಧಕ ಶಕ್ತಿಯೂ ಹೆಚ್ಚಾಗುತ್ತದೆ. ಹಾಗಾಗಿ ತಾಜಾ ಬೆಂಡೆಕಾಯಿಯಿಂದ ಗೊಜ್ಜು, ಪಲ್ಯ ಮಾಡಿ ಸವಿಯಬಹುದು.

ಆಲೂಗೆಡ್ಡೆ: ಎಲ್ಲ ಕಡೆಗಳಲ್ಲಿ ಹೇರಳವಾಗಿ ಲಭ್ಯವಿರುವ ತರಕಾರಿ ಇದು. ಭೂಮಿ ಅಡಿಯಲ್ಲಿ ಬೆಳೆಯುವುದರಿಂದ ಇದು ಹೆಚ್ಚು ಸುರಕ್ಷಿತ ಮತ್ತು ಬ್ಯಾಕ್ಟೀರಿಯಾ ಮುಕ್ತವಾಗಿರುತ್ತದೆ. ಇದನ್ನು ಯಾವುದೇ ತರಕಾರಿ ಜತೆ ಬೆರೆಸಿ ಸಾಂಬಾರ್ ಮಾಡಿ ಸವಿಯಬಹುದು.

ಹಾಗಲಕಾಯಿ: ಹಾಗಲ ಹೆಸರು ಕೇಳಿದಾಕ್ಷಣ ಮುಖ ಸಿಂಡರಿಸಿಕೊಳ್ಳಬೇಡಿ. ಬ್ಯಾಕ್ಟೀರಿಯಾ ಹಾಗೂ ವೈರಾಣುಗಳ ಜತೆ ಹೋರಾಡಲು ದೇಹಕ್ಕೆ ಅತ್ಯುತ್ತಮ ರೀತಿಯಲ್ಲಿ ಶಕ್ತಿ ಒದಗಿಸುವ ತರಕಾರಿ ಇದು. ಇದರಲ್ಲಿ ಜಿಂಕ್, ಕಬ್ಬಿಣ, ಪೊಟ್ಯಾಶಿಯಂ ಹಾಗೂ ವಿಟಮಿನ್ ಸಿ ಅಂಶ ಹೇರಳವಾಗಿದೆ. ದೇಹದಲ್ಲಿ ವಿಟಮಿನ್ ಸಿ ಪ್ರಮಾಣದ ಸರಿಯಾಗಿದ್ದರೆ ರೋಗದಿಂದ ದೂರ ಉಳಿಯಬಹುದು. ಹಾಗಲಕಾಯಿಯ ಜ್ಯೂಸ್ ಆಗಲಿ, ಪಲ್ಯವಾಗಲಿ ರುಚಿಕಟ್ಟಾಗಿ ಮಾಡಿ, ಇದರ ಪ್ರಯೋಜನ ಪಡೆಯಬಹುದು.



ಮೂಲಂಗಿ: ಮೂಲಂಗಿಯ ವಾಸನೆ ಕಂಡರೆ ಹಲವರಿಗೆ ಆಗದು. ಆದರೆ, ಇದರಲ್ಲಿರುವ ಔಷಧೀಯ ಗುಣ ಮಳೆಗಾಲದಲ್ಲಿ ಬರಬಹುದಾದ ಬೇನೆಯನ್ನು ಕಡಿಮೆ ಮಾಡಬಲ್ಲದು. ಮೂಲಂಗಿಯನ್ನು ಮೊಸರು ಜೊತೆ, ಕ್ಯಾರೆಟ್‌ನಂತಹ ತರಕಾರಿ ತುರಿಯೊಂದಿಗೆ ಬೆರೆಸಿ, ಸಲಾಡ್ ಮಾಡಿಕೊಂಡು ಸೇವಿಸಬಹುದು. ಇದು ದೇಹದಲ್ಲಿರುವ ವಿಷಕಾರಿ ಅಂಶಗಳನ್ನು ಹೊರ ಹಾಕುತ್ತದೆ. ಬ್ಯಾಕ್ಟೀರಿಯಾಗಳಿಂದ ಉಂಟಾಗುವ ಹೊಟ್ಟೆನೋವಿಗೆ ಉತ್ತಮ ಮದ್ದು ಇದರಲ್ಲಿದೆ. ವಿಟಮಿನ್ ಸಿ ಅಧಿಕವಾಗಿರುವ ತರಕಾರಿ ಇದು. ಮಲಬದ್ಧತೆ, ಮೂಲವ್ಯಾಧಿಯಿಂದ ಬಳಲುತ್ತಿರುವವರಿಗೆ ಇದು ಉತ್ತಮ ತರಕಾರಿ.

ಪಡವಲಕಾಯಿ: ಇದು ನಿಮ್ಮ ಆಹಾರ ಪಟ್ಟಿಯಲ್ಲಿ ಇರಬೇಕಾದ ಮಳೆಗಾಲಕ್ಕೆ ಹೇಳಿ ಮಾಡಿಸಿದ ತರಕಾರಿ. ಹೊಟ್ಟೆ ಕೆಡುವುದು, ಜೀರ್ಣಕ್ರಿಯೆ ಸರಿಯಾಗಿ ಆಗದೇ ಇರುವುದು ಮಳೆಗಾಲದಲ್ಲಿ ಸಾಮಾನ್ಯ. ಇದರಲ್ಲಿ ಅತ್ಯಧಿಕ ನಾರಿನಾಂಶ ಇರುವುದರಿಂದ ಹೊಟ್ಟೆಯ ಕಾರ್ಯವನ್ನು ಸಮಸ್ಥಿತಿಯಲ್ಲಿಡುತ್ತದೆ.

ಸೌತೆಕಾಯಿ: ಸೌತೆಕಾಯಿ ಯಕೃತ್ತಿನ ಆರೋಗ್ಯ ಕಾಪಾಡುವ ತರಕಾರಿ. ಶೀತ, ಕೆಮ್ಮುವಿನಿಂದ ಬಳಲುತ್ತಿದ್ದರೆ ಬಿಸಿ ಬಿಸಿ ಅನ್ನಕ್ಕೆ ಸೌತೆಕಾಯಿ ಹುಳಿ ಬೆರೆಸಿ ತಿನ್ನಿ. ಉರಿಶೀತದಿಂದಾಗುವ ತೊಂದರೆಗಳಿಗೂ ಇದು ಉತ್ತಮ ಪರಿಹಾರ ನೀಡಬಲ್ಲದು.

ಇದರ ಜತೆಗೆ ಶುಂಠಿ, ಬೆಳ್ಳುಳ್ಳಿ, ಪುದೀನಾ ಸೊಪ್ಪು, ಸಂಬಾರು, ಬೇಳೆ ಸೊಪ್ಪು, ಅಮೃತಬಳ್ಳಿಯ ಕಷಾಯ ಸೇವನೆ ಹೆಚ್ಚಿರಲಿ. ಇದು ಶೀತ ಬಾಧೆಯನ್ನು ಉಪಶಮನ ಮಾಡುತ್ತದೆ. ❖



ಫಾಸ್ಟ್ ಫ್ಯೂಷನ್ ಸೀರೆ

‘ಫ್ಯೂಷನ್’ ಉಡುವವರ ಗಮನಕ್ಕೆ

- 9 ಗಜದ ಸೀರೆ ಸಹವಾಸ ಬೇಡ ಎನ್ನುವವರು ಫ್ಯೂಷನ್ ಸೀರೆಯನ್ನು ಆಯ್ಕೆ ಮಾಡಿಕೊಳ್ಳಬಹುದು.
- ಫ್ಯೂಷನ್ ಸೀರೆಗಳು ಸಾಮಾನ್ಯವಾಗಿ ಇತರೆ ಸೀರೆಗಳಿಗಿಂತ ಕಡಿಮೆ ಉದ್ದ– ಅಗಲವಿರುತ್ತದೆ. ಜಾರ್ಜೆಟ್, ಶಿಫಾನ್ ಬಟ್ಟೆಯು ಈ ವಿನ್ಯಾಸಕ್ಕೆ ಹೆಚ್ಚು ಸೂಕ್ತವಾಗಿರುತ್ತದೆ.
- 5 ಅಥವಾ 6ಕ್ಕಿಂತ ಕಡಿಮೆ ನೆರಿಗೆ ಇದ್ದರೆ ಒಪ್ಪವಾಗಿ ಕಾಣುತ್ತದೆ.
- ಯಾವುದೇ ಪ್ಯಾಂಟ್ ಮೇಲೂ ಸೀರೆಯ ನೆರಿಗೆ ಸರಿಯಾಗಿ ಕಾಣುವಂತೆ ಉಟ್ಟರಷ್ಟೆ ಸೀರೆಯ ವಿನ್ಯಾಸ ಎದ್ದು ಕಾಣುತ್ತದೆ.
- ಎತ್ತರ ನಿಲುವು, ನೀಳ ಮೈಕಟ್ಟು ಇರುವವರಿಗೆ ಈ ಸೀರೆ ಹೆಚ್ಚು ಒಪ್ಪುತ್ತದೆ.

ರೂಪದರ್ಶಿ: ಸಹನಾ ಮಲ್ಲಿಕಾರ್ಜುನ

ರೂಪಾ ಕೆ.ಎಂ.

ಟ್ರೆಂಡ್

ಶ್ರಾವಣ – ಭಾದ್ರಪದ ಮಾಸದಿಂದ ಹಬ್ಬಗಳ ಸಾಲು ಆರಂಭವಾಗುತ್ತದೆ. ಹಬ್ಬ ಎಂದ ಕೂಡಲೇ ಸೀರೆಯತ್ತ ಕಣ್ಣು ಹೊರಳುವುದು ಸಹಜ. ಸಾಂಪ್ರದಾಯಿಕವಾಗಿ ಸೀರೆ ಉಟ್ಟು, ಓಡಾಡುವುದೇ ಒಂದು ಸಂಭ್ರಮ.

ಅಂದ ಹಾಗೆ, ಸೀರೆ ಉಡುವುದರಲ್ಲೂ ಹಲವು ವಿಧಗಳಿವೆ. ಸಾಂಪ್ರದಾಯಿಕವಾಗಿ ಸೀರೆಯುಡುವ ಫ್ಯಾಷನ್ ಚಾಲ್ತಿಯಲ್ಲಿರುವುದು ಗೊತ್ತಿದೆ. ಈಗ ಪ್ಯಾಂಟ್ ಮೇಲೆ ತರಹೇವಾರಿ ಸೀರೆಯುಟ್ಟು ‘ಫ್ಯೂಷನ್’ ಕ್ರಿಯೇಟ್ ಮಾಡುವ ಫ್ಯಾಷನ್ ಕೂಡ ಟ್ರೆಂಡಿಯಾಗಿದೆ. ಸಂಪ್ರದಾಯ ಪಾಲಿಸುತ್ತಲೇ ಟ್ರೆಂಡಿಯಾಗಿ ಕಾಣಬೇಕು ಎನ್ನುವ ಯುವತಿಯರಿಗೆ ‘ಫ್ಯೂಷನ್’ ಸೀರೆ ಅಚ್ಚುಮೆಚ್ಚು. ಸ್ವಲ್ಪ ಸೃಜನಾತ್ಮಕವಾಗಿದ್ದರೆ ಎಲ್ಲದರ ಜತೆ ಪರ್ಫೆಕ್ಟ್ ಕಾಂಬಿನೇಷನ್ ಅನಿಸಿಕೊಳ್ಳುತ್ತೆ ಈ ಸೀರೆ.

ಡೆನಿಮ್ ಜೀನ್ಸ್ ಸೀರೆ: ಇದು ಜೀನ್ಸ್ ಮೇಲೆ ತೊಡುವ ಸೀರೆ. ಇಂಡೊ– ವೆಸ್ಟರ್ನ್ ಫ್ಯಾಷನ್‌ಗೆ ಹೇಳಿ ಮಾಡಿಸಿದ ಕಾಂಬಿನೇಷನ್ ಇದು. ಗಾಢ ನೀಲಿ, ಆಕಾಶ ನೀಲಿ, ಬಿಳಿ, ಕಪ್ಪು ಹೀಗೆ ತರಹೇವಾರಿ ಜೀನ್ಸ್ ಪ್ಯಾಂಟ್ ಮೇಲೆ ಅದಕ್ಕೊಪ್ಪುವ ಸೀರೆ ಉಡಲಾಗುತ್ತದೆ. ಗಾಢ ನೀಲಿ ಬಣ್ಣದ ಜೀನ್ಸ್ ಆಗಿದ್ದರೆ ಸೀರೆ ತಿಳಿ ಗುಲಾಬಿ ಅಥವಾ ಬಿಳಿ ಬಣ್ಣದಲ್ಲಿರುತ್ತದೆ. ಬಿಳಿ ಜೀನ್ಸ್ ಆಗಿದ್ದರೆ, ಸೀರೆ ಗಾಢ ನೀಲಿ ಬಣ್ಣದಾಗಿರಬೇಕು. ಇನ್ನು ಇದರಲ್ಲಿ ಡೆನಿಮ್ ರವಿಕೆಯ ಸೀರೆಯೂ ಇದೆ. ರವಿಕೆ ಜೀನ್ಸ್ ಬಟ್ಟೆಯಾಗಿದ್ದು, ವೆಸ್ಟರ್ನ್ ಶೈಲಿಯಲ್ಲಿರುತ್ತದೆ. ಇದು ಕೂಡ ಟ್ರೆಂಡಿಯಾಗಿ ಕಾಣುತ್ತದೆ.

ಪ್ಲಾಜೊ, ಲೆಗ್ಗಿನ್ ಜತೆ ಸೀರೆ: ತಿಳಿ ಬಣ್ಣದ ಪ್ಲಾಜೊ ಮತ್ತು ಅದಕ್ಕೆ ಹೊಂದುವ ಕ್ರಾಪ್ ಟಾಪ್ ಮೇಲೆ ಉಡುವ ಸೀರೆ ಇದು. ಪ್ಲಾಜೊ ಮತ್ತು ಟಾಪ್ ಸಾಮಾನ್ಯವಾಗಿ ಸಾದಾ ಆಗಿರುತ್ತದೆ. ಅದರ ಮೇಲೆ ಉಡುವ ಸೀರೆ ಫ್ಲೋರಲ್ ವಿನ್ಯಾಸವನ್ನು ಹೊಂದಿರುತ್ತದೆ. ಕ್ರೇಪ್ ಬಟ್ಟೆಯ ಸೀರೆ ಇದಕ್ಕೆ ಹೆಚ್ಚು ಹೊಂದಿಕೊಳ್ಳುತ್ತದೆ. ಕಾಕ್‌ಟೇಲ್ ಪಾರ್ಟಿಗಳಿಗೆ ಹೇಳಿ ಮಾಡಿಸಿದಂಥ ಸೀರೆಯಿದು.

ಕಾಕ್‌ಟೇಲ್ ಸೀರೆ: ಒಂಬತ್ತು ಗಜ ಸೀರೆ ಇಷ್ಟಪಡದ ಆದರೂ ಸಾಂಪ್ರದಾಯಿಕವಾಗಿ ಕಾಣಿಸಿಕೊಳ್ಳಬೇಕೆಂದು ಇಷ್ಟಪಡುವವರ ನೆಚ್ಚಿನ ಸೀರೆಯಿದು. ಸೀರೆಯ ಅಂಚು ಸಾಮಾನ್ಯವಾಗಿ ಹೆಚ್ಚು ಪ್ಲೀಟೆಡ್ ಅನ್ನು ಹೊಂದಿರುತ್ತದೆ. ಉದ್ದನೆಯ ಸ್ಕರ್ಟ್ ಮೇಲೆ ಇದನ್ನು ತೊಡಲಾಗುತ್ತದೆ. ರವಿಕೆ ಗಾಢ ಹೊಳಪನ್ನು ಹೊಂದಿದ್ದರೆ, ಸೀರೆ ಮಾತ್ರ ಸಾದಾ ರೀತಿಯಲ್ಲಿ ಇರುತ್ತದೆ.

ಧೋತಿ ಸೀರೆ: ಧೋತಿ ಸೀರೆಯು ಸಾಂಪ್ರದಾಯಿಕ ಸಮಾರಂಭಗಳಿಗೆ ಹೇಳಿ ಮಾಡಿಸಿದ್ದು. ಧೋತಿ ಶೈಲಿಯ ನೆರಿಗೆ ಜತೆಗೆ ಸೀರೆಯ ನೆರಿಗೆಯೂ ಸೇರಿ ವಿಭಿನ್ನ ಲುಕ್ ನೀಡುತ್ತದೆ. ಬಹಳ ಆರಾಮದಾಯಕ ಎನಿಸುವ ಸೀರೆಗಳಿವು. ಧೋತಿ ಸೀರೆಗೆ ಸಾಮಾನ್ಯವಾಗಿ ಜೇಬಿರುತ್ತದೆ. ಗಾಢ ಹಸಿರಿಗೆ, ಬೂದು ಬಣ್ಣದ ಟಾಪ್, ನೇರಳೆ ಬಣ್ಣದ , ಲೆಮನ್ ಗ್ರೀನ್ ಬಣ್ಣದ ಧೋತಿ ಸೀರೆಗಳು ಮಾರುಕಟ್ಟೆಯಲ್ಲಿ ಹೆಚ್ಚು ಪ್ರಚಲಿತದಲ್ಲಿವೆ. ಈ ಸೀರೆಗೆ ಸೊಂಟಕ್ಕೆ ಬೆಲ್ಟ್ ಹಾಕಿಕೊಂಡು ಇನ್ನಷ್ಟು ಮೆರುಗು ಕೊಡಬಹುದು.

ಕ್ರಾಪ್ ಟಾಪ್ ಕಾಂಬಿನೇಷನ್: ಸಾಂಪ್ರದಾಯಿಕ ರವಿಕೆಯ ಬದಲು ಕ್ರಾಪ್ ಟಾಪ್, ಟೀಶರ್ಟ್‌ಗಳು ಧರಿಸಬಹುದು. ಇದು ಕಾಟನ್ ಸೀರೆಗೆ ಹೆಚ್ಚು ಸೂಕ್ತವಾಗಿರುತ್ತದೆ. ಅದರಲ್ಲೂ ಕೈಮಗ್ಗ ಸೀರೆಗಳ ಜತೆ ಕ್ರಾಪ್ ಟಾಪ್, ಟೀಶರ್ಟ್ ಹಾಕಿಕೊಂಡರೆ ಟ್ರೆಂಡಿಯಾಗಿ ಕಾಣಬಹುದು. ಫುಲ್ ಓವರ್‌ಗಳ ಮೇಲೂ ಇದನ್ನು ತೊಡಬಹುದು. ಉದ್ದ ತೋಳಿನ ಟಿ–ಶರ್ಟ್‌ಗಳು, ಫಂಕಿ ಎನಿಸುವ ಟಿ–ಶರ್ಟ್ ಮೇಲೆ ಸಾದಾ ಸೀರೆ ಉಡಬಹುದು.

ಶರ್ಟ್ ಜತೆ ಸೀರೆ: ಫಾರ್ಮಲ್ ಎನಿಸುವ, ಕಾಲರ್ ಹಾಗೂ ಬಟನ್ ಶರ್ಟ್‌ಗಳ ಮೇಲೂ ಕಾಟನ್ ಅಥವಾ ಶಿಫಾನ್ ಸೀರೆ ಉಡಬಹುದು. ಮಿಕ್ಸ್ ಆ್ಯಂಡ್ ಮ್ಯಾಚ್ ಪರಿಕಲ್ಪನೆಯಡಿ ಶರ್ಟ್‌ಗೆ ಸೂಕ್ತವೆನಿಸುವ ಬಣ್ಣದ ಸೀರೆಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಕೇಶವಿನ್ಯಾಸ, ಹಾಕಿಕೊಳ್ಳುವ ಜುವೆಲರಿಯಿಂದಲೂ ಶರ್ಟ್ ಜತೆ ಸೀರೆ ಉಟ್ಟು ಅಂದ ಹೆಚ್ಚಿಸಿಕೊಳ್ಳಬಹುದು. ❖

ಮಲೆನಾಡಿನ ರಸಗವಳ

• ಭಾಗ್ಯಲಕ್ಷ್ಮಿ ನಂದಿಹೊಂಡ

ಆಹಾರ ವೈವಿಧ್ಯ

ನಿಂಬು ಚಟ್ನಿ



ಬೇಕಾಗುವ ಸಾಮಗ್ರಿಗಳು- ನಿಂಬೆ ಹಣ್ಣು- 4 ಹಸಿಮೆಣಸಿನಕಾಯಿ- 4, ಇಂಗು- 1 ಚಿಟಿಕೆ , ಸಾಸಿವೆ- 1/4 ಚಮಚ ಉಪ್ಪು- ರುಚಿಗೆ ತಕ್ಕಷ್ಟು, ಕರಿಬೇವು- 1 ಎಸಳು.
ತೆಂಗಿನ ತುರಿ- 1 ಕಪ್ಎ ಣ್ಣೆ- 2 ಚಮಚ

ತಯಾರಿಸುವ ವಿಧಾನ- ತೆಂಗಿನಕಾಯಿ ತುರಿ, ಉಪ್ಪು, ಹಸಿಮೆಣಸಿನಕಾಯಿಯ ಚೂರುಗಳನ್ನು ನಿಂಬೆರಸ ಹಾಕಿ ಮಿಕ್ಸಿಯಲ್ಲಿ ರುಬ್ಬಿಕೊಳ್ಳಿ. (5 ನಿಮಿಷ ಕಲಸಿಟ್ಟು ನಂತರ ರುಬ್ಬಿದರೆ ಮಿಶ್ರಣವು ಚೆನ್ನಾಗಿ ನೀರು ಬಿಟ್ಟುಕೊಳ್ಳುತ್ತದೆ.) ಬೇರೆ ನೀರು ಹಾಕ ಕೂಡದು. ಅನಂತರ ಸಾಸಿವೆ, ಕರಿಬೇವಿನ ಒಗ್ಗರಣೆ ಹಾಕಿ ಚೆನ್ನಾಗಿ ಬೆರೆಸಿದರೆ ಹುಳಿಖಾರದ ಚಟ್ನಿ ನಿಂಬೆಹಣ್ಣಿನ ಪರಿಮಳದೊಂದಿಗೆ ಬಾಯಲ್ಲಿ ನೀರೂರಿಸುತ್ತದೆ.

ಆಲೂಗಡ್ಡೆ ಜಂಪು

ಬೇಕಾಗುವ ಸಾಮಗ್ರಿಗಳು: ಆಲೂಗಡ್ಡೆ- 3 ರಿಂದ 4 (ಮದ್ಯಮ ಗಾತ್ರದ್ದು) ಸಾಸಿವೆ- ಕಾಲು ಚಮಚ, ಜೀರಿಗೆ- ಕಾಲು ಚಮಚ, ಬೆಳ್ಳುಳ್ಳಿ- 10 ಎಸಳು, ಹುಣಸೆಹಣ್ಣು- ಅಡಿಕೆ ಗಾತ್ರ, ಎಣ್ಣೆ_ 1 ಕಪ್ (150 ಎಮ್. ಎಲ್.), ಸಕ್ಕರೆ- ಅರ್ಧ ಚಮಚ, ಒಣಮೆಣಸಿನ ಕಾಯಿ- 10, ಉಪ್ಪು- ರುಚಿಗೆ ತಕ್ಕಷ್ಟು

ತಯಾರಿಸುವ ವಿಧಾನ: ಆಲೂಗಡ್ಡೆಗಳನ್ನು ಹೋಳು ಮಾಡಿ ಕೊಳ್ಳಿ. ಹೋಳುಗಳಿಗೆ ಉಪ್ಪು, ಸಕ್ಕರೆ, ಸಾಸಿವೆ ಜೀರಿಗೆಗಳನ್ನು ಹಾಕಿ ಹೋಳುಗಳು ಮುಳುವಷ್ಟು ನೀರು ಹಾಕಿ ಬೇಯಿಸಿ. ಬಾಣಲೆಗೆ ಸ್ವಲ್ಪ ಎಣ್ಣೆ ಹಾಕಿ ಒಣಮೆಣಸಿನಕಾಯಿ, ಸಾಸಿವೆ, ಬೆಳ್ಳುಳ್ಳಿ ಹುರಿದುಕೊಳ್ಳಿ. ಹುರಿದ ಮಸಾಲೆಗೆ ಹುಣಸೆಹಣ್ಣು ಹಾಕಿ ನುಣ್ಣಗೆ ರುಬ್ಬಿ. ಬೇಯಿಸಿದ ಆಲೂ ಹೋಳುಗಳಿಗೆ ಬೆರೆಸಿ ಕುದಿಸಿ. ಗ್ರೇವಿ ಸಾಂಬಾರಿಗಿಂತ ಸ್ವಲ್ಪ ದಪ್ಪವಿರಲಿ. ಇದು ಅನ್ನ, ರೊಟ್ಟಿ, ದೋಸೆಗಳಿಗೆ ಒಳ್ಳೆಯ ಕಾಂಬಿನೇಷನ್.



ಟೊಮೆಟೊ ಅಪ್ಪೆಹುಳಿ



ಬೇಕಾಗುವ ಸಾಮಗ್ರಿಗಳು-
ಟೊಮೆಟೊ- 4 ಬೆಳ್ಳುಳ್ಳಿ- 5 ಹಿಲಕು
ಜೀರಿಗೆ- 1/4 ಚಮಚ
ಸಾಸಿವೆ- 1/4 ಚಮಚ ಹಸಿಮೆಣಸಿನಕಾಯಿ- 4
ತೆಂಗಿನ ತುರಿ- 2 ಚಮಚ ಬೆಲ್ಲ ಅಥವಾ ಸಕ್ಕರೆ- 1 ಚಮಚ
ಎಣ್ಣೆ- 2 ಚಮಚ
ನಿಂಬೆರಸ- 2 ಚಮಚ

ತಯಾರಿಸುವ ವಿಧಾನ- ಟೊಮೆಟೊಗಳನ್ನು ಕತ್ತರಿಸಿ ಹೋಳು ಮಾಡಿ ಒಂದು ಪಾತ್ರೆಗೆ ಹಾಕಿಕೊಳ್ಳಿ. ಅದರ ಜೊತೆಗೆ ಹಸಿಮೆಣಸಿನ ಕಾಯಿ ಕಾಯಿತುರಿಯನ್ನು ಹಾಕಿ ಒಟ್ಟಿಗೆ ಬೇಯಿಸಿಕೊಳ್ಳಿ. ನಂತರ ಮಿಕ್ಸಿಗೆ ಹಾಕಿ ರುಬ್ಬಿಕೊಳ್ಳಿ. ರುಚಿಗೆ ತಕ್ಕಷ್ಟು ಉಪ್ಪು ಬೆಲ್ಲ ನಿಂಬೆರಸ ಹಾಕಿ. ಬಾಣಲೆಗೆ ಎಣ್ಣೆ ಹಾಕಿ ಸಾಸಿವೆ ಜೀರಿಗೆ ಬೆಳ್ಳುಳ್ಳಿ ಒಗ್ಗರಣೆ ಮಾಡಿದರೆ ವಿಭಿನ್ನ ರುಚಿಯ ಟೊಮೆಟೊ ಅಪ್ಪೇಹುಳಿ ಅನ್ನದ ಜೊತೆ ಸವಿಯಲು ಸಿದ್ಧ.

ಬಾಳೆಕಾಯಿ ಚಕ್ಕೆ ಪಳದ್ಯ

ಬೇಕಾಗುವ ಸಾಮಗ್ರಿಗಳು:
ಬಾಳೆಕಾಯಿ- 2, ಹಸಿಮೆಣಸು- 4 ಒಣಮೆಣಸು- 2, ತೆಂಗಿನ ತುರಿ- 2 ಚಮಚ ಬೆಳ್ಳುಳ್ಳಿ- 4 ಎಸಳು, ನಿಂಬೆಹಣ್ಣು- 1 ಜೀರಿಗೆ- 1/4 ಚಮಚ ಸಾಸಿವೆ- 1/4 ಚಮಚ, ಕಾಳುಮೆಣಸು 1/4 ಚಮಚ



ತಯಾರಿಸುವ ವಿಧಾನ- ಪಾತ್ರೆಗೆ ಬಾಳೆಕಾಯಿ ಹೋಳುಗಳು, ಹಸಿಮೆಣಸಿನಕಾಯಿ, ಉಪ್ಪು ಹಾಕಿ ಹೋಳುಗಳು ಮುಳುಗುವಷ್ಟು ನೀರು ಹಾಕಿ ಬೇಯಿಸಿಕೊಳ್ಳಿ. ಮಿಕ್ಸಿ ಜಾರಿಗೆ ತೆಂಗಿನ ತುರಿ, ಕಾಳುಮೆಣಸು, ಜೀರಿಗೆ ಮತ್ತು ನಾಲ್ಕು ಬೇಯಿಸಿದ ಬಾಳೆಕಾಯಿ ಹೋಳುಗಳನ್ನು ಹಾಕಿ ನುಣ್ಣಗೆ ರುಬ್ಬಿ ಮಸಾಲೆ ತಯಾರಿಸಿ ಬೇಯಿಸಿದ ಬಾಳೆಕಾಯಿ ಮಿಶ್ರಣಕ್ಕೆ ಸೇರಿಸಿ ಕುದಿಸಿ. ನಂತರ ಬಾಣಲೆಯಲ್ಲಿ ಎಣ್ಣೆ ಬಿಸಿ ಮಾಡಿ ಬೆಳ್ಳುಳ್ಳಿ, ಜೀರಿಗೆ, ಸಾಸಿವೆ, ಒಣಮೆಣಸಿನ ಚೂರುಗಳನ್ನು ಒಗ್ಗರಣೆ ಹಾಕಿದರೆ ಬಾಳೆಕಾಯಿ ಚಕ್ಕೆ ಪಳದ್ಯ ಸಿದ್ಧ. ಬಡಿಸುವಾಗ ನಿಂಬೆರಸ ಸೇರಿಸಿ. ಇದು ಬಿಸಿ ಬಿಸಿಯಾಗಿ ಅನ್ನದ ಜೊತೆಗೆ ಊಟಕ್ಕೆ ಚೆನ್ನಾಗಿರುತ್ತದೆ.

ಹಾಗಲಕಾಯಿ ಮುದ್ದೆ ಸಾಸಿವೆ

ಬೇಕಾಗುವ ಸಾಮಗ್ರಿಗಳು:
ಹಾಗಲಕಾಯಿ ಚೂರುಗಳು- 5 ಚಮಚ, ಈರುಳ್ಳಿ- 3 ಚಮಚ, ಒಣ ಮೆಣಸು- 5 ಎಳ್ಳು- ಅರ್ಧ ಚಮಚ, ಜೀರಿಗೆ- ಕಾಲು ಚಮಚ ಸಾಸಿವೆ- ಅರ್ಧ ಚಮಚ, ಕಾಯಿ ತುರಿ- 4 ಚಮಚ ಹುಣಸೆಹಣ್ಣು- ಗೋಲಿ ಗಾತ್ರ, ಉಪ್ಪು- ರುಚಿಗೆ ತಕ್ಕಷ್ಟು, ಎಣ್ಣೆ- 2 ಚಮಚ ಬೆಲ್ಲ- 1 ಚಮಚ

ತಯಾರಿಸುವ ವಿಧಾನ: ಹಾಗಲಕಾಯಿಗಳನ್ನು ಸಣ್ಣಗೆ ಹೆಚ್ಚಿ ಉಪ್ಪು ಬೆರೆಸಿ ಇಡಿ. ಮಿಕ್ಸಿ ಜಾರಿಗೆ ತೆಂಗಿನಕಾಯಿ ತುರಿ, ಒಣಮೆಣಸಿನಕಾಯಿ, ಎಳ್ಳು ಜೀರಿಗೆ, ಈರುಳ್ಳಿಗಳನ್ನು ಹಸಿಯಾಗಿ ಹಾಕಿ ರುಬ್ಬಿ ಮಸಾಲೆ ತಯಾರಿಸಿ. ಬಾಣಲೆಗೆ ಎಣ್ಣೆ ಹಾಕಿ ಸಾಸಿವೆ ಹಾಕಿ ಚಟಪಟಾಯಿಸಿ ಹಾಗಲಕಾಯಿಯ ಚೂರುಗಳನ್ನು ಗಟ್ಟಿಯಾಗಿ ಹಿಂಡಿ ಹಾಕಿ ತುಸು ಉಪ್ಪು ಹಾಕಿ ಸಣ್ಣ ಉರಿಯಲ್ಲಿ ಹುರಿಯಿರಿ. ನಂತರ ರುಬ್ಬಿದ ಮಸಾಲೆ ಮತ್ತು ಬೆಲ್ಲ ಹುಣಸೇರಸ ಹಾಕಿ ಚೆನ್ನಾಗಿ ಕುದಿಸಿದರೆ ಹಾಗಲ ಕಾಯಿಯ ಮುದ್ದೆ ಸಾಸಿವೆ ಸವಿಯಲು ಸಿದ್ಧ.



ಕ–ನಾದ: ಭಾರತೀಯ ಭಾಷೆಗಳ ಏಕರೂಪದ ಕೀಲಿಮಣೆ ಸಿದ್ಧ

ತಂತ್ರಜ್ಞಾನ

ಕರಾವಳಿಯ ಎಂಜಿನಿಯರ್‌ಗಳ ತಂಡದ ಪ್ರಯತ್ನ ಫಲ ಕಂಡಿದೆ. ಕನ್ನಡ ಮತ್ತು ತುಳು ಸೇರಿದಂತೆ ಭಾರತೀಯ ಭಾಷೆಗಳನ್ನು ಒಂದೇ ಕಡೆ ಟೈಪಿಸಲು ಸಾಧ್ಯವಾಗುವ ಕೀಲಿಮಣೆ ಸಿದ್ಧವಾಗಿದೆ. ಬೆಂಗಳೂರು ಮತ್ತು ಅಮೆರಿಕದ ‘ಭಾಷಾ ಪ್ರಯೋಗಾಲಯ’ಗಳಲ್ಲಿ ಅಧ್ಯಯನ ನಡೆಸಿ ಕ–ನಾದ ಫಾನೆಟಿಕ್ಸ್ ತಂಡ ತಯಾರು ಮಾಡಿರುವ ಕೀಲಿಮಣೆ ಇ–ಮಾರುಕಟ್ಟೆಗೆ ಬಿಡುಗಡೆಯಾಗಿದೆ.

ಸಾಂಪ್ರದಾಯಿಕ ಕೀಲಿಮಣೆಯು ಭಾರತೀಯ ಭಾಷೆಗಳನ್ನು ಕೊಲ್ಲುತ್ತಿದೆ ಎಂಬ ಆತಂಕವೇ ಈ ಪ್ರಯೋಗಕ್ಕೆ ಕಾರಣ. ಎಂಜಿನಿಯರ್‌ಗಳಾದ ಗುರುಪ್ರಸಾದ್ ಮತ್ತು ಸತೀಶ್ ಅಗ್ಗಾಲ ನೇತೃತ್ವದಲ್ಲಿ ತಯಾರಾಗಿರುವ ಕೀಲಿಮಣೆಯಲ್ಲಿ 10 ಭಾಷೆಗಳ ವರ್ಣಾಕ್ಷರಗಳ ಸಂಯೋಜನೆ ಇದೆ. ವಿಂಡೋಸ್, ಲಿನಕ್ಸ್, ಆ್ಯಪಲ್



ಐಮ್ಯಾಕ್, ಆ್ಯಂಡ್ರಾಯ್ಡ್ ಆಪರೇಟಿಂಗ್ ಸಿಸ್ಟಮ್‌ಗಳಲ್ಲೂ ಕಂಪ್ಯೂಟರ್, ಲ್ಯಾಪ್‌ಟಾಪ್, ಮೊಬೈಲ್ ಫೋನ್, ಟ್ಯಾಬ್‌ಗಳಲ್ಲೂ ಬಳಕೆ ಮಾಡಲು ಸಾಧ್ಯವಾಗುವಂತೆ ವಿನ್ಯಾಸಗೊಳಿಸಲಾಗಿದೆ.

‘ಈಗ ಬಳಕೆಯಲ್ಲಿರುವ ಕೀಲಿಮಣೆ ಸಂಪೂರ್ಣ ಯಾಂತ್ರಿಕ. ಅದರಲ್ಲಿ ಭಾರತೀಯ ಭಾಷೆಗಳನ್ನು ಟೈಪಿಸಲು ಪ್ರಯಾಸವಾಗುತ್ತದೆ. ಬ್ರಾಹ್ಮಿ ಲಿಪಿಮೂಲದ ಸ್ಥಳೀಯ ಭಾಷೆಗಳನ್ನು ಯೋಚಿಸಿದಂತೆ ಬರೆಯಲು ಇದರಲ್ಲಿ ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಭಾಷಾವಿಜ್ಞಾನವನ್ನು ನಿಕಷಕ್ಕೆ ಒಡ್ಡಿ ಈ ಕೀಲಿಮಣೆ ಸಿದ್ಧಪಡಿಸಲಾಗಿದೆ. ಬ್ರಾಹ್ಮಿ ಲಿಪಿಗೆ ಅನುಗುಣವಾದ ಸ್ವರ–ವ್ಯಂಜನಗಳ ಸಂಕಲನದ ಮೂಲಕ ಇಲ್ಲಿ ವರ್ಣಾಕ್ಷಗಳನ್ನು ವಿನ್ಯಾಸೊಳಿಸಲಾಗಿದೆ’ ಎಂದು ‘ಪ್ರಜಾವಾಣಿ’ಗೆ ಗುರುಪ್ರಸಾದ್ ತಿಳಿಸಿದರು.

‘ಮಾತೃಭಾಷೆಯಲ್ಲಿ ಯೋಚಿಸಿ ಇತರ ಭಾಷೆಯನ್ನು ಟೈಪ್ ಮಾಡಲು ಸಾಧ್ಯವಾಗುವುದು ಈ ಕೀಲಿಮಣೆಯ ವೈಶಿಷ್ಟ್ಯ. ಬ್ರಾಹ್ಮಿ ಲಿಪಿಯ ಆಧಾರದಲ್ಲಿ ಸಿದ್ಧಪಡಿಸಿರುವುದೇ ಇದಕ್ಕೆ ಕಾರಣ. ಬೇರೆ ಭಾಷೆಯ ಲಿಪಿ ತಿಳಿಯದೇ ಇದ್ದರೂ ನಮ್ಮದೇ ಭಾಷೆಯಲ್ಲಿ ಟೈಪಿಸಬಹುದಾದ ಕಾರಣ ಭಾರತೀಯ ಭಾಷೆಗಳನ್ನು ಕಲಿಯುವುದಕ್ಕೂ ಇದು ನೆರವಾಗಲಿದೆ’ ಎಂದು ಅವರು ವಿವರಿಸಿದರು.

ಭಾಷೆಯಿಂದ ಭಾಷೆಗೆ ‘ಸ್ವಿಚ್’ ಆಗಲು ಸುಲಭ ವಿಧಾನವಿದೆ. ಭಾರತೀಯ ಭಾಷೆಗಳಲ್ಲಿ ಪದಗಳ ಮಧ್ಯೆ ಅರ್ಧಾಕ್ಷರಗಳ ಬಳಕೆ (ಜೀರೊ ವಿಡ್ತ್ ನಾನ್ ಜಾಯ್ನರ್) ಪದಗಳ ಬಳಕೆ ಹೆಚ್ಚು. ಉದಾ: ತುಳು ಪದಗಳಾದ ಬಾಕಿಲ್‌ಡ್ (ಹೊಸ್ತಿಲಿನಲ್ಲಿ), ವಣಸ್‌ಗ್ (ಊಟಕ್ಕೆ). ಸಾಂಪ್ರದಾಯಿಕ ಕೀಲಿಮಣೆಯಲ್ಲಿ ಇದು ತೊಡಕುಂಟುಮಾಡುತ್ತದೆ. ಇದರಿಂದ ಭಾಷೆಯ ಸೊಗಡು ನಾಶವಾಗುತ್ತದೆ. ಹೊಸ ಕೀಲಿಮಣೆಯಲ್ಲಿ ಈ ಸಮಸ್ಯೆ ಇಲ್ಲ. ❖

ಅಪೆಂಡಿಸಿಯಲ್ ಕ್ಯಾನ್ಸರ್ ಮುನ್ನೆಚ್ಚರಿಕೆ ಅಗತ್ಯ



ಆರೋಗ್ಯ

ಅಪೆಂಡಿಸಿಯಲ್ ಕ್ಯಾನ್ಸರ್ ಕುರಿತು **ಫೊರ್ಟಿಸ್ ಆಸ್ಪತ್ರೆಯ ಅಂಕಾಲಾಜಿ ಸರ್ಜಿಕಲ್ ಕನ್ಸಲ್ಟೆಂಟ್ ಡಾ. ಜಿ.ಭರತ್** ಒಂದಿಷ್ಟು ಮಾಹಿತಿಯನ್ನು ಇಲ್ಲಿ ಹಂಚಿಕೊಂಡಿದ್ದಾರೆ.

ಅಪೆಂಡಿಕ್ಸ್ ಕುರಿತು ಬಹುತೇಕರಿಗೆ ತಿಳಿದಿದೆ. ಆದರೆ, ಅಪೆಂಡಿಸಿಯಲ್ ಕ್ಯಾನ್ಸರ್ ಬಗ್ಗೆ ತಿಳಿದಿರುವವರು ಬಹಳ ವಿರಳ. ಇದು ಸದ್ದಿಲ್ಲದೇ ದೇಹ ಪ್ರವೇಶಿಸುವ ಕ್ಯಾನ್ಸರ್‌ಗಳಲ್ಲೊಂದು.

ಅಂಪೆಂಡೈಸ್ ಎನ್ನುವುದು ಮನುಷ್ಯನ ದೇಹದ ಒಂದು ಅಂಗ. ಹೊಟ್ಟೆಯ ಕೆಳಗೆ ಬಲ ಭಾಗದಲ್ಲಿ ಕರುಳಿನಿಂದ ಬೆರಳಿನ ಆಕಾರದಲ್ಲಿ ಹೊರ ಬಂದಿರುವುದನ್ನು ಅಪೆಂಡಿಕ್ಸ್ ಎನ್ನುತ್ತಾರೆ. ಕೆಲವೊಮ್ಮೆ ಅಪೆಂಡಿಕ್ಸ್‌ನಲ್ಲಿ ದ್ರವದ ಹರಿವಿನ ಕೊರತೆ ಉಂಟಾಗಿ, ಅದರೊಳಗಿದ್ದ ಜೀವಕೋಶಗಳ ಮೇಲೆ ಪರಿಣಾಮ ಬೀರಿ, ಆ ಕೋಶಗಳು ಅನಿಯಂತ್ರಿತವಾಗಿ ಬೆಳೆದು, ಗಡ್ಡೆ ರೂಪಕ್ಕೆ ಪರಿವರ್ತನೆಯಾಗುತ್ತದೆ. ಇದನ್ನೇ ಅಪೆಂಡಿಸಿಯಲ್ ಕ್ಯಾನ್ಸರ್ (Appendiceal Cancer) ಎನ್ನುವುದು. ಈ ಗಡ್ಡೆ ಬೆಳೆಯುತ್ತಾ, ದೇಹದ ಇತರ ಭಾಗಗಳಿಗೆ ಹರಡುತ್ತದೆ. ಇದೊಂದು ಅಪರೂಪದ ಕ್ಯಾನ್ಸರ್ ಗಡ್ಡೆಯಾಗಿದ್ದು, 10 ಲಕ್ಷ ಜನರಲ್ಲಿ ಒಬ್ಬರು ಅಥವಾ ಇಬ್ಬರಲ್ಲಿ ಕಾಣಿಸಿ ಕೊಳ್ಳುತ್ತದೆ. 50 ರಿಂದ 55 ವರ್ಷ ವಯೋಮಾನದವರಲ್ಲಿ ಇದು ಹೆಚ್ಚಾಗಿ ಕಾಣಿಸಕೊಳ್ಳುತ್ತದೆ.

ಕ್ಯಾನ್ಸರ್ ವಿಧಗಳು

ಅಪೆಂಡಿಸಿಯಲ್ ಕ್ಯಾನ್ಸರ್‌ನಲ್ಲಿ ಮೂರು ವಿಧಗಳಿವೆ. ಅವುಗಳೆಂದರೆ, ಅಡೆನೊಕಾರ್ಸಿನೋಮ, ನ್ಯೂರೋಎಂಡೋಕ್ರೈನ್ ಗೆಡ್ಡೆಗಳು ಮತ್ತು ಮ್ಯೂಕೋಸೆಲೆ. ಅಡೆನೊಕಾರ್ಸಿನೋಮಾ ಕ್ಯಾನ್ಸರ್ ಸಾಮಾನ್ಯ ಸ್ಕ್ಯಾನ್ ಪ್ರಕ್ರಿಯೆ ಮೂಲಕ ಪತ್ತೆಯಾಗುವುದಿಲ್ಲ. ಅದನ್ನು ಪತ್ತೆ ಮಾಡಲು ಸಿಟಿ ಸ್ಕ್ಯಾನ್ ಅಥವಾ ಪೆಟ್ ಸ್ಕ್ಯಾನ್ ಮಾಡಿಸಬೇಕು. ಇದು ಅನ್ನನಾಳದ ಮೂಲಕ ಹಾದುಹೋಗುವ ನಾಳಗಳಲ್ಲಿ ಕಂಡು ಬರುವ ಕ್ಯಾನ್ಸರ್‌ನ ಒಂದು ವಿಧ.

ಈ ಕ್ಯಾನ್ಸರ್‌ಗೆ ಕಾರಣವೇನು?

ಈ ಅಪೆಂಡಿಸಿಯಲ್ ಕ್ಯಾನ್ಸರ್ ಬರುವುದಕ್ಕೆ ಯಾವುದೇ ನಿಖರ ಕಾರಣಗಳಿಲ್ಲ. ಇದು ಅನುವಂಶಿಯವಾಗಿಯೂ ಬರುವ ಕ್ಯಾನ್ಸರ್ ಅಲ್ಲ. ಆದರೆ, ಅತಿ ಕಡಿಮೆ ನೀರು ಕುಡಿಯುವುದು, ಕಳಪೆ ಆಹಾರ ಸೇವಿಸುವುದು, ಮದ್ಯಪಾನ ಹಾಗೂ ಧೂಮಪಾನದ ವ್ಯಸನಿಗಳಲ್ಲಿ ಹೆಚ್ಚು ಕಂಡು ಬಂದಿರುವುದಾಗಿ ವರದಿಯಾಗಿದೆ.

ಅಪೆಂಡಿಸೈಟಿಸ್ ಆದಾಗ, ಕೆಳಗಿನ ಹೊಟ್ಟೆ ಅಥವಾ ಕಿಬ್ಬೊಟ್ಟೆಯಲ್ಲಿ ವಿಪರೀತ ನೋವು ಕಾಣಿಸಿಕೊಳ್ಳುತ್ತದೆ. ಕೆಲವೊಂದು ಪ್ರಕರಣಗಳಲ್ಲಿ ಹೊಟ್ಟೆ ನೋವು ಹೊಕ್ಕಳಿನ ಭಾಗದಿಂದ ಪ್ರಾರಂಭವಾಗಿ ನಿಧಾನವಾಗಿ ಕೆಳ ಭಾಗಕ್ಕೆ ವಿಸ್ತರಿಸುತ್ತದೆ. ಉರಿಯೂತ ಹೆಚ್ಚಾದಷ್ಟು ಹೊಟ್ಟೆ ನೋವು ಹೆಚ್ಚಾಗುತ್ತದೆ. ಇದನ್ನು ನಿರ್ಲಕ್ಷ್ಯಿಸಿದರೂ ಅದು ಕ್ಯಾನ್ಸರ್‌ಗೆ ತಿರುಗುವ ಸಾಧ್ಯತೆ ಇದೆ.

ಪ್ರಮುಖ ಲಕ್ಷಣಗಳು:

ಇದ್ದಕ್ಕಿದ್ದಂತೆ ಹೊಟ್ಟೆಯ ಕೆಳಭಾಗದಲ್ಲಿ ಅಥವಾ ಕಿಬ್ಬೊಟ್ಟೆಯಲ್ಲಿ ನೋವು ಕಾಣಿಸಿಕೊಳ್ಳುವುದು. ಕೆಲವೊಮ್ಮೆ ಹೊಕ್ಕಳಿನ ಭಾಗದಲ್ಲಿ ನೋವು ಪ್ರಾರಂಭವಾಗಿ ನಿಧಾನವಾಗಿ ಹೊಟ್ಟೆಯ ಬಲ ಭಾಗದಲ್ಲಿ ಕೆಳ ಭಾಗಕ್ಕೆ ನೋವು ವಿಸ್ತರಿಸುವುದು. ಸೀನಿದಾಗ, ನಡೆದಾಗ, ಓಡಿದಾಗ, ಬಾಗಿದಾಗ, ಭಾರ ಎತ್ತಿದಾಗ ನೋವು ವಿಪರೀತವಾಗುವುದು. ವಾಕರಿಕೆ ಮತ್ತು ವಾಂತಿಯ ಲಕ್ಷಣಗಳು ಕಾಣಿಸಿಕೊಳ್ಳುವುದು. ಹಸಿವಾಗದಿರುವುದು, ಮಲಬದ್ಧತೆ ಅಥವಾ ವಿಪರೀತ ಭೇದಿ– ಇವೆಲ್ಲ ಅಪೆಂಡಿಯಸಿಸ್ ಕ್ಯಾನ್ಸರ್‌ನ ಲಕ್ಷಣಗಳು

ಮುನ್ನೆಚ್ಚರಿಕೆ ಏನು ?

ಅಪೆಂಡಿಸಿಯಲ್ ಕ್ಯಾನ್ಸರ್ ಬರದಂತೆ ತಡೆಯಲು ಜೀವನ ಶೈಲಿ ಉತ್ತಮವಾಗಿಟ್ಟುಕೊಳ್ಳಬೇಕು. ಉತ್ತಮ ಆಹಾರ, ಸಾಕಷ್ಟು ನೀರು ಕುಡಿಯಬೇಕು. ಹೊಟ್ಟೆ ನೋವಿನಂತಹ ಸಮಸ್ಯೆಯಾದಾಗ ನಿರ್ಲಕ್ಷ್ಯ ಮಾಡಬಾರದು. ಎಲ್ಲದಕ್ಕಿಂತ ಮುಖ್ಯವಾಗಿ, ಮೇಲೆ ತಿಳಿಸಿದ ಅಪೆಂಡಿಕ್ಸ್‌ನ ರೋಗ ಲಕ್ಷಣಗಳು ಕಂಡುಬಂದ ಕೂಡಲೇ ವೈದ್ಯರನ್ನು ಸಂಪರ್ಕಿಸಿ, ಚಿಕಿತ್ಸೆಪಡೆಯಬೇಕು.

ಚಿಕಿತ್ಸೆಯ ಆಯ್ಕೆಗಳು

ಯಾವ ವಿಧದ ಅಪೆಂಡಿಯಸಿಸ್ ಕ್ಯಾನ್ಸರ್ ತಗುಲಿದೆ ಎಂಬುದರ ಮೇಲೆ ಚಿಕಿತ್ಸೆಯನ್ನು ಶಿಫಾರಸು ಮಾಡಲಾಗುತ್ತದೆ. ಪ್ರಮುಖವಾಗಿ ಇದಕ್ಕೆ ಶಸ್ತ್ರಚಿಕಿತ್ಸೆ, ಕೀಮೊಥೆರಪಿ ಅಥವಾ ಪೆಪ್ಟೈಡ್ ರಿಸೆಪ್ಟರ್ ರೇಡಿಯೊನ್ಯೂಕ್ಲೈಡ್ ಥೆರಪಿ (PRRT) ಚಿಕಿತ್ಸೆಯ ಅಗತ್ಯವಿರುತ್ತದೆ.

ನ್ಯೂರೋಎಂಡೋಕ್ರೈನ್ ಟ್ಯೂಮರ್‌ಗಳಿಗೆ (NET) ಚಿಕಿತ್ಸೆ ನೀಡಲು ಪಿಆರ್‌ಆರ್‌ಟಿ (PRRT) ಚಿಕಿತ್ಸೆ ವಿಧಾನವನ್ನು ಬಳಸಲಾಗುತ್ತದೆ. ಇದರಲ್ಲಿ ಹೆಚ್ಚಿನ ಪ್ರಮಾಣದ ವಿಕಿರಣ ನೀಡುವುದರಿಂದ ಕ್ಯಾನ್ಸರ್ ಗೆಡ್ಡೆಯನ್ನು ನಾಶಪಡಿಸಿ, ಅದರ ಬೆಳವಣಿಗೆಯನ್ನು ನಿಧಾನಗೊಳಿಸುತ್ತದೆ. ಶಸ್ತ್ರಚಿಕಿತ್ಸೆಯು ಕೆಲವೊಮ್ಮೆ ಹೈಪರ್‌ಥರ್ಮಿಕ್ ಇಂಟ್ರಾಪೆರಿಟೋನಿಯಲ್ ಕಿಮೊಥೆರಪಿ (HIPEC) ಅಥವಾ ಒತ್ತಡದ ಇಂಟ್ರಾ ಪೆರಿಟೋನಿಯಲ್ ಏರೋಸೋಲೈಸ್ಡ್ ಕಿಮೊಥೆರಪಿ (PIPAC) ಚಿಕಿತ್ಸೆಯೂ ಬೇಕಾಗಬಹುದು. ❖

ಡೂಝಿ- ರೋಗಿಗಳ ಸುರಕ್ಷತೆಗೆ ಸ್ವದೇಶಿ ನಿರ್ಮಿತ, ಎಐ-ಚಾಲಿತ ರಿಮೋಟ್ ಪೇಷಂಟ್ ಮಾನಿಟರಿಂಗ್ ತಂತ್ರಜ್ಞಾನ

ಭಾರತದ ಮೊದಲ AI ಚಾಲಿತ ರಿಮೋಟ್ ಪೇಷಂಟ್ ಮಾನಿಟರಿಂಗ್ (RPM) ಮತ್ತು ಅರ್ಲಿ ವಾರ್ನಿಂಗ್ ಸಿಸ್ಟಮ್ (EWS) ಆಗಿರುವ ಡೂಝಿ ಈವರೆಗೆ ದೇಶದಲ್ಲಿ ಒಂದು ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯ ರೋಗಿಗಳ ನಿಯತಗಳ ಮೇಲ್ವಿಚಾರಣೆ ಮಾಡಿದ್ದು, ಎರಡು ಮಿಲಿಯನ್ ಶುಶ್ರೂಷಾ ಗಂಟೆಗಳನ್ನು ಉಳಿಸಿದೆ. ಇದರಿಂದಾಗಿ ಈಗಾಗಲೇ ತೀವ್ರ ಒತ್ತಡದಲ್ಲಿರುವ ಭಾರತೀಯ ಆರೋಗ್ಯ ಸೇವಾದಾರರ ಹೊರೆಯನ್ನು ತಕ್ಕ ಮಟ್ಟಿಗೆ ಇಳಿಸಿದೆ.



ಕಾರ್ಯಕ್ರಮದಲ್ಲಿ ಡೂಝಿ ಪ್ರಾತ್ಯಕ್ಷಿಕೆ

ದಿವ್ಯಾಶ್ರೀ

ಭಾರತೀಯ ಆರೋಗ್ಯ ವ್ಯವಸ್ಥೆಯು ಎರಡು ರೀತಿಯಿಂದಾಗಿ ತೊಡಕು ಅನುಭವಿಸುತ್ತಿದೆ. ಈ ತೊಡಕುಗಳಿಂದಾಗಿ ಕೋಟ್ಯಾಂತರ ಜನರಿಗೆ ಗುಣಮಟ್ಟದ ಆರೋಗ್ಯ ಸೇವೆಯನ್ನು ಒದಗಿಸಲು ಅಡಚಣೆಯಾಗಿದೆ. ಮೊದಲನೆಯದು, ಆಸ್ಪತ್ರೆಯ ಐಸಿಯು ಹಾಸಿಗೆಗಳ ಮೇಲಿನ ಒತ್ತಡ ಹಾಗೂ ಆರೈಕೆ ಸಿಬ್ಬಂದಿಯ ಬೃಹತ್ ಕೊರತೆ. ಉದಾಹರಣೆಗೆ ಭಾರತದ 1.5 ಶತಕೋಟಿ ಜನಸಂಖ್ಯೆಗೆ ಕೇವಲ 1.25 ಲಕ್ಷ ICU ಹಾಸಿಗೆಗಳಿದ್ದು, 4.3 ಮಿಲಿಯನ್ ದಾದಿಯರ ಕೊರತೆ ಎದುರಿಸುತ್ತಿದೆ.

ಎರಡನೆಯದು ವೈದ್ಯಕೀಯ ಸಾಧನ ತಂತ್ರಜ್ಞಾನ ಆಮದಿನ ಮೇಲೆ ಅತಿಯಾದ ಅವಲಂಬನೆ. ಭಾರತವು ಇಂದು ತನ್ನ ವೈದ್ಯಕೀಯ ಸಾಧನಗಳಲ್ಲಿ ಶೇ. 80ರಷ್ಟನ್ನು ಆಮದು ಮಾಡಿಕೊಳ್ಳುತ್ತದೆ ಮತ್ತು ಸಹಜವಾಗಿಯೇ ಇದು ಚಿಕಿತ್ಸಾ ವೆಚ್ಚವನ್ನು ಹೆಚ್ಚಿಸುವುದಲ್ಲದೆ ಇಲ್ಲಿನ ಅಗತ್ಯಗಳಿಗೆ ತಕ್ಕಂತಹ ಸಾಧನಗಳ ಆವಿಷ್ಕಾರಕ್ಕೆ ತಡೆ ಒಡ್ಡುತ್ತದೆ.

ರೋಗಿಗಳ ಸುರಕ್ಷತೆಯನ್ನು ಸುಧಾರಿಸಲು ಮತ್ತು ಸಮಯೋಚಿತ ಎಚ್ಚರಿಕೆ ಸಂದೇಶಗಳನ್ನು ನೀಡುವ ಮೂಲಕ ಅಮೂಲ್ಯ ಜೀವಗಳನ್ನು ಉಳಿಸುವ ದೃಷ್ಟಿಯಿಂದ ಡೂಝಿ ಅನ್ನು ಅಭಿವೃದ್ಧಿಪಡಿಸಲಾಗಿದೆ ಮತ್ತು ಅದು ಈಗಾಗಲೇ ಭಾರತೀಯ ಆರೋಗ್ಯ ರಕ್ಷಣೆ ಕ್ಷೇತ್ರದ ಮೇಲಿನ ಹೊರೆ ಇಳಿಸುವಲ್ಲಿ ಯಶಸ್ವಿಯಾಗಿದೆ. ಈ ದೂರಸ್ಥ ಅನುಕ್ಷಣದ ಮೇಲ್ವಿಚಾರಣಾ ಸಾಧನಗಳು ಎಐ (ಕೃತಕ ಬುದ್ಧಿಮತ್ತೆ) ಶಕ್ತಿಯನ್ನು ಬಳಸಿಕೊಳ್ಳುತ್ತವೆ. ಅಲ್ಲದೇ ಆಸ್ಪತ್ರೆಯ ಆರೋಗ್ಯ ವ್ಯವಸ್ಥೆಯನ್ನು ಸಂಪೂರ್ಣವಾಗಿ ಡಿಜಿಟಲೀಕರಣ ಮಾಡುವುದರ ಜೊತೆಗೆ ರೋಗಿಯ ಮೇಲ್ವಿಚಾರಣೆ ಪ್ರಕ್ರಿಯೆಯನ್ನು ಸ್ವಯಂಚಾಲಿತಗೊಳಿಸುತ್ತದೆ.

ಈ ರೀತಿಯ ತಂತ್ರಜ್ಞಾನವು ಸಂಪೂರ್ಣವಾಗಿ ತನ್ನ ಗುರಿ ಈಡೇರಿಸಿಕೊಳ್ಳುವಂತಾಗಲು ಆರೋಗ್ಯ ವ್ಯವಸ್ಥೆಯ ಇಡಿಯಾದ ಪಾಲ್ಗೊಳ್ಳುವಿಕೆಯ ಜೊತೆಗೆ ಖಾಸಗಿ ಮತ್ತು ಸಾರ್ವಜನಿಕ ವಲಯದ ತಜ್ಞರ ಪಾಲುದಾರಿಕೆ ಅತ್ಯಂತ ಅವಶ್ಯಕವಾಗಿದೆ. ಎಡಬ್ಲ್ಯೂಎಸ್ ಸಹಭಾಗಿತ್ವದಲ್ಲಿ ಡಿಎಚ್ ಬ್ರಾಂಡ್‌ಸ್ಪಾಟ್ ಬೆಂಗಳೂರಿನಲ್ಲಿ ನಡೆಸಿಕೊಟ್ಟ ಕೇರ್‌ಟೆಕ್ (CARETECH) ಕಾರ್ಯಕ್ರಮವು ರೋಗಿಗಳ ನಿರಂತರ ಮೇಲ್ವಿಚಾರಣೆಯ ಪ್ರಯೋಜನಗಳನ್ನು ಅನ್ವೇಷಿಸಲು ಸಂಬಂಧಪಟ್ಟ ಎಲ್ಲರ ಒಗ್ಗೂಡುವಿಕೆಗೆ ಅರ್ಥಪೂರ್ಣ ವೇದಿಕೆ ಕಲ್ಪಿಸಿತು.

ಈ ತಂತ್ರಜ್ಞಾನದ ಮಹತ್ವ ಮತ್ತು ಅದು ಮೂಡಿಸಿರುವ ಭರವಸೆಯನ್ನು ಎತ್ತಿ ತೋರಿಸುವಲ್ಲಿ ಡೂಝಿ ಕೇರ್‌ಟೆಕ್ 2022 ಕಾರ್ಯಕ್ರಮವು ಯಶಸ್ವಿಯಾಯಿತು. ಕಾರ್ಯಕ್ರಮದ ಅಂಗವಾಗಿ ನಡೆದ ತಜ್ಞರ ನಡುವಿನ ಎರಡು ಸಂವಾದಗಳು ಈ ತಂತ್ರಜ್ಞಾನದ ದಕ್ಷತೆ ಮತ್ತು ಪರಿಣಾಮವನ್ನು ಸ್ಪಷ್ಟವಾಗಿ ಪ್ರಸ್ತುಪಡಿಸಿದವು. ಇದೇ ಸಂದರ್ಭದಲ್ಲಿ ಡೂಝಿ ವತಿಯಿಂದ ಅತ್ಯುತ್ತಮ ಸೇವಾಪರತೆಗಾಗಿ 38 ದಾದಿಯರನ್ನು ಗುರುತಿಸಿ ಗೌರವಿಸಲಾಯಿತು. ಇದಲ್ಲದೇ ಕಾರ್ಯಕ್ರಮದಲ್ಲಿ ಡೂಝಿ ಸಾಧನದ ನೇರ ಪ್ರಾತ್ಯಕ್ಷಿಕೆಯನ್ನು ಸಹ ನೀಡಲಾಯಿತು.

ಡೂಝಿಯ ನಿರಂತರ ರಿಮೋಟ್ ಮಾನಿಟರಿಂಗ್ ಸಿಸ್ಟಮ್‌ನಂತಹ ತಂತ್ರಜ್ಞಾನದಲ್ಲಿನ ಬೆಳವಣಿಗೆಗಳು ಆರೋಗ್ಯ ರಕ್ಷಣೆ ಉದ್ಯಮವು ಕ್ರಮೇಣ ಸ್ವಯಂಚಾಲನಾ ತಂತ್ರಜ್ಞಾನದ ಪ್ರಪಂಚಕ್ಕೆ ಕಾಲಿಡುತ್ತಿರುವುದಕ್ಕೆ ಉದಾಹರಣೆಯಾಗಿದೆ.

ಆರೋಗ್ಯ ಸಂರಕ್ಷಣೆಯಲ್ಲಿ ಎಐನ ಮಹತ್ವ

ಬೆಂಗಳೂರಿನಲ್ಲಿ ಕಳೆದ ವಾರಾಂತ್ಯದಲ್ಲಿ ನಡೆದ ಡೂಝಿ ಕೇರ್‌ಟೆಕ್ 2022 ಕಾರ್ಯಕ್ರಮದಲ್ಲಿ ಮಾತನಾಡಿದ ಹೆಲ್ತ್‌ಕೇರ್ ಗ್ಲೋಬಲ್ ಎಂಟಪ್ರೈಸಸ್ ಲಿಮಿಟೆಡ್‌ನ ಕಾರ್ಯನಿರ್ವಾಹಕ ಅಧ್ಯಕ್ಷ ಡಾ.ಅಜಯ್ ಕುಮಾರ್ ಅವರು, "ಡಿಜಿಟಲ್ ತಂತ್ರಜ್ಞಾನದ ಆಗಮನವು ಆರೋಗ್ಯ ಸಂರಕ್ಷಣೆ ಕಡೆಗೆ ನಮ್ಮ ಆಲೋಚನಾ ವಿಧಾನವನ್ನೇ ಬದಲಾಯಿಸುತ್ತದೆ ಎಂದು ನಾನು ನಂಬುತ್ತೇನೆ" ಎಂದು ಹೇಳಿದರು. ಅಲ್ಲದೇ ಡಿಜಿಟಲ್ ತಂತ್ರಜ್ಞಾನವು ಭಾರತಕ್ಕೆ ಬದಲಾವಣೆ ತರುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದೂ ಹೇಳಿದರು. ಕೃತಕ ಬುದ್ಧಿಮತ್ತೆಯು (ಎಐ) ರೋಗದ ತಡೆಗಟ್ಟುವಿಕೆ ಮತ್ತು ಆರಂಭಿಕ ಪತ್ತೆಯಲ್ಲಿ ದೊಡ್ಡ ವ್ಯತ್ಯಾಸವನ್ನೇ ಮಾಡುತ್ತದೆ ಎಂದು ಅವರು ತಿಳಿಸಿದರು.

ಬೆಂಗಳೂರಿನ ಆಸ್ಟರ್ ಸಿಎಂಐ ಆಸ್ಪತ್ರೆಯ ನ್ಯೂರೋಅನೆಸ್ತೇಷಿಯಾ ಪ್ರಮುಖ ಸಮಾಲೋಚಕರಾದ ಡಾ ರಾಘವೇಂದ್ರ ಪೈ ಮಾತನಾಡಿ, ಒಮ್ಮೆ ರೋಗಿಯು ತೀವ್ರ ನಿಗಾ ಘಟಕದಿಂದ ಹೊರಬಂದ ನಂತರ ರಕ್ತ ಪರಿಚಲನೆ, ಉಸಿರಾಟ ಮತ್ತು ಚಯಾಪಚಯ ಒರಕ್ರಿಯೆಗಳಲ್ಲಿ ಅನೇಕ ಸಮಸ್ಯೆಗಳು ಎದುರಾಗುತ್ತವೆ. ಇಂತಹ ರೋಗಿಗಳ ಮೇಲ್ವಿಚಾರಣೆಗೆ ಡೂಝಿ ತರಹದ ತಂತ್ರಜ್ಞಾನದ ಅವಶ್ಯಕತೆ ಇದೆ ಎಂದರು.


ಡೂಝಿ ಈವರೆಗೆ ದೇಶದಲ್ಲಿ 1,00,000 ಹೆಚ್ಚಿನ ಸಂಖ್ಯೆಯ ರೋಗಿಗಳನ್ನು ಪತ್ತೆಹಚ್ಚಿದ್ದು, ಎರಡು ಮಿಲಿಯನ್ ಶುಶ್ರೂಷಾ ಗಂಟೆಗಳನ್ನು ಉಳಿಸಿದೆ.

ಸತ್ತ್ವ ಕನ್ಸಲ್ಟಿಂಗ್‌ನ ಸಹ-ಸಂಸ್ಥಾಪಕ ಮತ್ತು ಸಿಇಒ ಶ್ರೀಕೃಷ್ಣ ಶ್ರೀಧರ್ ಮೂರ್ತಿ ಅವರು ಮಾತನಾಡಿ "ಡೂಝಿ ಮೇಲ್ವಿಚಾರಣಾ ವ್ಯವಸ್ಥೆಯು ಆರೋಗ್ಯ ಕ್ಷೇತ್ರದಲ್ಲಿ ದೊಡ್ಡ ಬದಲಾವಣೆಯನ್ನು ತರಲಿದೆ" ಎಂದು ಹೇಳಿದರು.

ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಯುಕ್ತರಾದ ಡಿ ರಣದೀಪ್ ಅವರು ಡೂಝಿ ಅಭಿವೃದ್ಧಿಪಡಿಸಿದ ತಂತ್ರಜ್ಞಾನವನ್ನು ಶ್ಲಾಘಿಸಿದರು. "ಜಯನಗರದ ಜನರಲ್ ಆಸ್ಪತ್ರೆಯಲ್ಲಿ ಇದು ಅತ್ಯುತ್ತಮ ಫಲಿತಾಂಶಗಳನ್ನು ನೀಡುತ್ತಿದೆ" ಎಂದು ಅವರು ಹೇಳಿದರು.

ಡೂಝಿ ಕೇರ್‌ಟೆಕ್ 2022 ಕಾರ್ಯಕ್ರಮದವು ಆರೋಗ್ಯ ಸಂರಕ್ಷಣೆ ವ್ಯವಸ್ಥೆಯಲ್ಲಿ ತಂತ್ರಜ್ಞಾನವು ತರಬಹುದಾದ ದೊಡ್ಡ ವ್ಯತ್ಯಾಸವನ್ನು ಒತ್ತಿ ಹೇಳಿತು.


ಮುದಿತ್ ದಂಡಾವತೆ ಸಿಇಒ ಮತ್ತು ಸಹ-ಸಂಸ್ಥಾಪಕ, ಡೂಝಿ


ಡಾ ಅಜಯ್ ಕುಮಾರ್, ಕಾರ್ಯಾಧ್ಯಕ್ಷರು, ಹೆಲ್ತ್‌ಕೇರ್ ಗ್ಲೋಬಲ್ ಎಂಟರ್‌ಪ್ರೈಸಸ್ ಲಿ


ಡಾ ರಾಘವೇಂದ್ರ ಪೈ, ಪ್ರಮುಖ ಸಮಾಲೋಚಕರು ನ್ಯೂರೋಅನೆಸ್ತೇಷಿಯಾ, ಆಸ್ಟರ್ ಸಿಎಂಐ ಆಸ್ಪತ್ರೆ


ಡಿ ರಣ್‌ದೀಪ್, ಆಯುಕ್ತರು, ಆರೋಗ್ಯಮತ್ತು ಕುಟುಂಬ ಕಲ್ಯಾಣ, ಕರ್ನಾಟಕ ಸರ್ಕಾರ

ನಿಸ್ಪೃಹ ಸೇವೆಗಾಗಿ ಸನ್ಮಾನಿತರಾದ ಶುಶ್ರೂಷಕಿಯರು

- **ಅಂಬಿಕಾ ವಿ,** ಸ್ಪರ್ಶ್ ಆಸ್ಪತ್ರೆ, ಯಶವಂತಪುರ
- **ಏಂಜಲ್ ಸರೋಜಾ,** ಮಣಿಪಾಲ್ ಆಸ್ಪತ್ರೆ, ಹಳೆ ಏರ್‌ಪೋರ್ಟ್ ರಸ್ತೆ
- **ಅನಿತಾ ಕುಮಾರಿ ಡಿ,** ಎಂ.ಎಸ್. ರಾಮಯ್ಯ ಸ್ಮಾರಕ ಆಸ್ಪತ್ರೆ
- **ಅರುಳ್ ಬ್ಯೂಲಾ ಜಾಸ್ಮಿನ್,** ಮಣಿಪಾಲ್ ಆಸ್ಪತ್ರೆ, ಸರ್ಜಾಪುರ
- **ಭಾಗ್ಯ ವಿ,** ಬಿಜಿಎಸ್ ಗ್ಲೆನೀಗಲ್ಸ್ ಗ್ಲೋಬಲ್ ಆಸ್ಪತ್ರೆ
- **ಭಾರ್ಗವಿ ವಿ.ಎ,** ಎನ್‌ಯು ಆಸ್ಪತ್ರೆ
- **ಬಿಜಿ ಜಾರ್ಜ್,** ಆಸ್ಟರ್ ಸಿ ಎಮ್‌ಐ ಆಸ್ಪತ್ರೆ
- **ಕರ್ನಲ್ ಸುಮಾ ಕೆ.** ಸುಬ್ಬರಾವ್, ಮಣಿಪಾಲ್ ಆಸ್ಪತ್ರೆ, ಯಶವಂತಪುರ
- **ಎಲಿಜಬೆತ್ ಜಾರ್ಜ್,** ಸೇಂಟ್ ಜಾನ್ಸ್ ಆಸ್ಪತ್ರೆ
- **ಜಯಶ್ರೀ,** ಕಾವೇರಿ ಆಸ್ಪತ್ರೆ
- **ಜರ್ಮಿನ್ ರೋಷಿನಿ,** ಫೋರ್ಟಿಸ್ ಆಸ್ಪತ್ರೆ, ಕನ್ನಿಂಗ್‌ಹ್ಯಾಮ್ ರಸ್ತೆ
- **ಜೆಸಿನಾ ಪ್ರಸನ್ನ ಕುಮಾರ್,** ಪೀಪಲ್ ಟ್ರೀ ಆಸ್ಪತ್ರೆ, ಯಶವಂತಪುರ
- **ಜೊಮಿನ್ ಕೆ. ಚಾಕೊ,** ಎನ್‌ಯು ಆಸ್ಪತ್ರೆ
- **ಕೆ. ವಿಶಾಲಲಕ್ಷ್ಮಿ,** ವಿಕ್ಟೋರಿಯಾ ಆಸ್ಪತ್ರೆ
- **ಕಮಿಲಾಸ್ ಮೇರಿ ಪ್ರಶಾಂತ್,** ಮಣಿಪಾಲ್ ವಿಕ್ರಮ್ ಆಸ್ಪತ್ರೆ, ಮಿಲ್ಲರ್ಸ್ ರಸ್ತೆ
- **ಲಕ್ಷ್ಮಿ ಎ,** ಎಚ್‌ಸಿಜಿ ಕ್ಯಾನ್ಸರ್ ಆಸ್ಪತ್ರೆ
- **ಲಕ್ಷ್ಮಿ ಎಂ,** ಸಕ್ರ ವರ್ಲ್ಡ್ ಹಾಸ್ಪಿಟಲ್
- **ಲತಾ ನೋನಿಸ್,** ಫೋರ್ಟಿಸ್ ಆಸ್ಪತ್ರೆ, ಬನ್ನೇರುಘಟ್ಟ ರಸ್ತೆ
- **ಮಾಲಾ ಟಿ,** ಸಾಗರ್ ಆಸ್ಪತ್ರೆ, ಬನಶಂಕರಿ
- **ಎನ್. ಕವಿತಾ,** ವಿಕ್ಟೋರಿಯಾ ಆಸ್ಪತ್ರೆ
- **ಪ್ಯಾಟ್ರಿಸಿಯಾ ಮೇರಿ,** ಎಂ.ಎಸ್. ರಾಮಯ್ಯ ಸ್ಮಾರಕ ಆಸ್ಪತ್ರೆ
- **ಪುನೀತಾ ಸಿಂಗ್,** ಎಚ್‌ಸಿಜಿ ಕ್ಯಾನ್ಸರ್ ಆಸ್ಪತ್ರೆ
- **ರಚಿತಾ ಜಿ,** ಸ್ಪರ್ಶ್ ಆಸ್ಪತ್ರೆ, ಆರ್‌ಆರ್. ನಗರ
- **ರೀನಾ ಶಾಬು,** ಸಿಎಂಎಚ್ ಆಸ್ಪತ್ರೆ
- **ನಿವೃತ್ತ ಲೆಫ್ಟಿನೆಂಟ್ ಕರ್ನಲ್ ದರ್ಶನ ರಾಣಿ,** ಸಿಎಂಎಚ್ ಆಸ್ಪತ್ರೆ
- **ರಾಬಿನ್ಸ್ ಎಂ.ವಿ,** ಸಕ್ರ ವರ್ಲ್ಡ್ ಹಾಸ್ಪಿಟಲ್
- **ರೋಸಿಲಿ ವರ್ಗೀಸ್,** ಸಾಗರ್ ಆಸ್ಪತ್ರೆ, ಜಯನಗರ
- **ಸಲೀನಮ್ಮ ಸೆಬಾಸ್ಟಿಯನ್,** ಭಗವಾನ್ ಮಹಾವೀರ್ ಜೈನ್ ಆಸ್ಪತ್ರೆ
- **ಶಾಂತಿ ರಾಣಿ,** ಆಸ್ಟರ್ ಆರ್.ವಿ. ಆಸ್ಪತ್ರೆ
- **ಶಶಿಕಲಾ ಬಿ.ಎಸ್,** ಕಿದ್ವಾಯಿ ಸ್ಮಾರಕ ಆಸ್ಪತ್ರೆ
- **ಶೀಜಾ ಜೋಸೆಫ್,** ಅಪೋಲೊ ಆಸ್ಪತ್ರೆ, ಜಯನಗರ
- **ಶೈನಿ ವರ್ಗೀಸ್,** ಮಣಿಪಾಲ್ ಆಸ್ಪತ್ರೆ, ವೈಟ್‌ಫೀಲ್ಡ್
- **ಸ್ಟೆಲ್ಲಾ ಟಿ.ಜೆ,** ಸ್ಪರ್ಶ್ ಆಸ್ಪತ್ರೆ, ಇನ್‌ಫೆಂಟ್ರಿ ರಸ್ತೆ
- **ಸುಗಂಧಿ ಡಿಸೋಜಾ,** ಸೇಂಟ್ ಜಾನ್ಸ್ ಆಸ್ಪತ್ರೆ
- **ಸುನಿತಾ ಮಿಚೆಲ್ ಡೊಮಿಂಗೊ,** ಅಪೋಲೊ ಆಸ್ಪತ್ರೆ, ಬನ್ನೇರುಘಟ್ಟ
- **ವಾಣಿ ಕೆ.ಎ,** ಕಿದ್ವಾಯಿ ಸ್ಮಾರಕ ಆಸ್ಪತ್ರೆ
- **ವೀಣಾ ಎಸ್.ಪಿ,** ಬೌರಿಂಗ್ ಆಸ್ಪತ್ರೆ
- **ವಿಶಾಲಾಕ್ಷಿ,** ಕಾವೇರಿ ಆಸ್ಪತ್ರೆ

ಅಮೂಲ್ಯ ಜೀವಗಳನ್ನು ಉಳಿಸಲು ನೆರವಾಗು ಎಐ ಆಧರಿತ ಮುನ್ನೆಚ್ಚರಿಕಾ ವ್ಯವಸ್ಥೆ

ಈ ಎಐ-ಚಾಲಿತ ವ್ಯವಸ್ಥೆಯು ರೋಗಿಗಳನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡುವುದಲ್ಲದೇ, ಸಂಭವನೀಯ ಪ್ರತಿಕೂಲ ಘಟನೆಗಳ ಬಗ್ಗೆ ವೈದ್ಯರಿಗೆ ಮೊದಲೇ ಸೂಚನೆ ನೀಡುತ್ತದೆ, ಇದು ರೋಗಿಗಳ ಪ್ರಾಣ ಉಳಿಸಲು ನೆರವಾಗುತ್ತದೆ.

ದಿವ್ಯಾಶ್ರೀ

ಭಾರತದ ಮೊದಲ ರಿಮೋಟ್ ಮಾನಿಟರಿಂಗ್ ತಂತ್ರಜ್ಞಾನವನ್ನು ಡೂಝಿ ಅಭಿವೃದ್ಧಿಪಡಿಸಿದೆ, ಆಸ್ಪತ್ರೆಗಳು ಐಸಿಯು ಹೊರಗೆ ದೂರದಿಂದಲೇ ರೋಗಿಗಳ ಆರೋಗ್ಯದಲ್ಲಿನ ಏರಿಳಿತಗಳನ್ನು ಮೇಲ್ವಿಚಾರಣೆ ಮಾಡಲು ಅನುವು ಮಾಡಿಕೊಡುತ್ತದೆ. ರೋಗಿಗಳ ಎಲ್ಲಾ ಪ್ರಮುಖ ನಿಯತಾಂಕಗಳನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡಲು ಈ ಸಂಪರ್ಕರಹಿತ ತಂತ್ರಜ್ಞಾನವು ಸಹಾಯ ಮಾಡುತ್ತದೆ.

ಕೃತಕ ಬುದ್ಧಿಮತ್ತೆ (ಎಐ) ನೆರವಿನೊಂದಿಗೆ ಈ ಸಾಧನವು ರೋಗಿಗಳ ನಿಯತಾಂಕಗಳಲ್ಲಿನ ಏರಿಳಿತಗಳನ್ನು ಆಧರಿಸಿ ಸಂಭಾವ್ಯ ಅಪಾಯಗಳ ಬಗೆಗ ಮುನ್ನೆಚ್ಚರಿಕೆ ನೀಡುವ ಮೂಲಕ ಅವರನ್ನು ಪ್ರಾಣಾಪಾಯದಿಂದ ಪಾರು ಮಾಡುತ್ತದೆ. ಒಂದರ್ಥದಲ್ಲಿ ಈ ವ್ಯವಸ್ಥೆಯು ಆಸ್ಪತ್ರೆಯ ಪ್ರತಿ ಹಾಸಿಗೆಯನ್ನು ತಳಮಟ್ಟದ ಐಸಿಯು (ತೀವ್ರ ನಿಗಾ ಘಟಕ) ಆಗಿ ಪರಿವರ್ತಿಸುತ್ತದೆ, ವ್ಯವಸ್ಥೆಯು ಹೃದಯ ಬಡಿತ, ಉಸಿರಾಟದ ಪ್ರಮಾಣ, ಆಮ್ಲಜನಕದ ಶುದ್ಧತ್ವ, ನಿದ್ರಾ ಹಂತಗಳು, ಒತ್ತಡ-ಚೇತರಿಕೆ ಮತ್ತು ಇತರ ಪ್ರಮುಖ ನಿಯತಗಳ ಮೇಲ್ವಿಚಾರಣೆ ಮಾಡುತ್ತದೆ.

ಆರೋಗ್ಯ ಸುರಕ್ಷೆಯ ಮತ್ತೊಂದು ಮಜಲು: ಭಾರತ ದಲ್ಲಿ ರೋಗಿಗಳ ಸುರಕ್ಷತೆಯನ್ನು ಹೆಚ್ಚಿಸುವ ಗುರಿಯನ್ನು ಡೂಝಿ ಹೊಂದಿದೆ ಎಂದು ಸಿಇಒ ಹಾಗೂ ಸಹ ಸಂಸ್ಥಾಪಕ ಮುದಿತ್ ದಂಡಾವತೆ ಹೇಳುತ್ತಾರೆ. ಡೂಝಿ ಪ್ರಾರಂಭಿಸುವ ಮೊದಲು, ದಂಡಾವತೆ ಅವರು ಜಾಗತಿಕ ತಂತ್ರಜ್ಞಾನ ವ್ಯಾಪಾರ ಸಂಸ್ಥೆಯಲ್ಲಿ ವಾಹನ ಡೈನಾಮಿಕ್ಸ್ ತಜ್ಞರಾಗಿ ಕೆಲಸ ಮಾಡುತ್ತಿದ್ದರು. ಓರ್ವ ಇಂಜಿನಿಯರ್ ಆಗಿ ಕಾರುಗಳ ಆರೋಗ್ಯವನ್ನು ಮೇಲ್ವಿಚಾರಣೆ ಮಾಡುತ್ತಿದ್ದಾಗ, ಇದೇ ರೀತಿ ತಂತ್ರಜ್ಞಾನದ ಆಧಾರದ ಮೇಲೆ ಜನರ ಆರೋಗ್ಯವನ್ನು ಪತ್ತೆ ಹಚ್ಚುವ ಕಲ್ಪನೆ ಅವರಲ್ಲಿ ಮೊಳಕೆ ಒಡೆಯಿತು.

ಆರೋಗ್ಯದ ಅಪಾಯದಲ್ಲಿರುವ ಕನಿಷ್ಠ 500 ಮಿಲಿಯನ್ ಭಾರತೀಯರನ್ನು ಮೇಲ್ವಿಚಾರಣೆ ಮಾಡುವ ಗುರಿಯೊಂದಿಗೆ ಡೂಝಿ ಅನ್ನು ಪ್ರಾರಂಭಿಸಲಾಗಿದೆ. "ಸುರಕ್ಷತೆಯನ್ನು ಹೆಚ್ಚಿಸಲು ರಕ್ತದೊತ್ತಡದಂತಹ ಎಲ್ಲಾ ಪ್ರಮುಖ ನಿಯತಾಂಕಗಳನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡಲು ಇದರಿಂದ ಸಾಧ್ಯವಿದೆ" ಎಂದು ಅವರು ವಿವರಿಸುತ್ತಾರೆ.

ಆಸ್ಪತ್ರೆಯಲ್ಲಿ ಯಾವುದೇ ಹಾಸಿಗೆಯನ್ನು ಪೂರ್ಣ ಪ್ರಮಾಣದ ಆರೋಗ್ಯ-ಮೇಲ್ವಿಚಾರಣಾ ಕೇಂದ್ರವನ್ನಾಗಿ ಪರಿವರ್ತಿಸುವ ಮೂಲಕ ಡೂಝಿ ತಂತ್ರಜ್ಞಾನವು ಆರೋಗ್ಯ ಸೇವೆಯನ್ನು ಹೆಚ್ಚು ಸುರಕ್ಷಿತಗೊಳಿಸುತ್ತದೆ. ಬಳಿಕದಲ್ಲಿ ಇದು ರೋಗಿಯ ಆರೋಗ್ಯವನ್ನು ಸಕಾಲಿಕವಾಗಿ ಮೇಲ್ವಿಚಾರಣೆ ಮತ್ತು ವಿಶ್ಲೇಷಣೆ ಮಾಡುತ್ತದೆ. ಜೊತೆಗೆ ಸಂಭಾವ್ಯ ಅಪಾಯದ ಸೂಚನೆಗಳನ್ನು ರವಾನಿಸುವ ಮೂಲಕ ರೋಗಿಗಳ ಪ್ರಾಣ ಉಳಿಸಲು ನೆರವಾಗುತ್ತದೆ.

ಹೃದಯ ಬಡಿತ, ಉಸಿರಾಟ, ಆಮ್ಲಜನಕದ ಶುದ್ಧತ್ವ, ನಿದ್ರೆಯ ಹಂತಗಳು, ಒತ್ತಡ-ಚೇತರಿಕೆ ಮತ್ತು ಇನ್ನಿತರ ಪ್ರಮುಖ ಅಂಶಗಳನ್ನು ಡೂಝಿ ಮೇಲ್ವಿಚಾರಣೆ ಮಾಡುವುದರಿಂದ ರೋಗಿಗಳು ಸಂಭಾವ್ಯ ಅಪಾಯಗಳಿಂದ ತಪ್ಪಿಸಿಕೊಳ್ಳಲು ಸಹಾಯ ಮಾಡುತ್ತದೆ.

ಡೂಝಿ ಪ್ರಯೋಜನ: ಸಂಪರ್ಕ ರಹಿತ ಸಂವೇದಕವನ್ನು ಹಾಸಿಗೆಯ ಕೆಳಗೆ ಇರಿಸಲಾಗುತ್ತದೆ. ಈ ಸಂವೇದಕವು ಯಾವುದೇ ಬಾಹ್ಯ ಸಂಪರ್ಕಗಳ ಅಗತ್ಯವಿಲ್ಲದೇ ಅಥವಾ ರೋಗಿಗಳ ಚರ್ಮವನ್ನು ಚುಚ್ಚದಯೇ ಅನುಕ್ಷಣದ ಮಾಪನ ಮಾಡುತ್ತದೆ. ರೋಗಿಯ ಪ್ರಮುಖ ನಿಯತಾಂಕಗಳನ್ನು ಮೇಲ್ವಿಚಾರಣೆಗೆ ದಾದಿಯರು ಪ್ರತಿದಿನ ಸುಮಾರು ೩೦-೪೫ ನಿಮಿಷ, ಕಳೆಯುತ್ತಾರೆ, ಡೂಝಿ ಬಳಸಿಕೊಂಡು ಈ ಸಮಯವನ್ನು ಉಳಿಸಬಹುದಲ್ಲದೇ ಇಡೀ ಪ್ರಕ್ರಿಯೆಯನ್ನು ಸ್ವಯಂ ಚಾಲಿತಗೊಳಿಸಬಹುದಾಗಿದೆ.

ಈ ಸಾಧನವು ಆಸ್ಪತ್ರೆಯ ಒಳರೋಗಿಯ ಸಂಪೂರ್ಣ ಆರೋಗ್ಯ ಮಾಹಿತಿಯನ್ನು ಮಾಪನ ಮಾಡಬಹುದಾಗಿದ್ದು, ಇದರಿಂದ ವೈದ್ಯರು ಸುಲಭವಾಗಿ ಮೇಲ್ವಿಚಾರಣೆ ಮಾಡಬಹುದು. ಕೋವಿಡ್-19 ಸಾಂಕ್ರಾಮಿಕದ ಉತ್ತುಂಗದಲ್ಲಿ ವೈದ್ಯರು ಅಪಾಯವನ್ನು ಮೈಮೇಲೆಳೆದುಕೊಂಡು ಕೆಲಸ ಮಾಡುವಂತಾಗಿ ಆಸ್ಪತ್ರೆಗಳು ಪೂರ್ಣ ಸಾಮರ್ಥ್ಯದಲ್ಲಿ ಕರ್ತವ್ಯ ನಿರ್ವಹಿಸಬೇಕಾಗಿ ಬಂದ ಸಮಯದಲ್ಲಿ ಡೂಝಿ ಜೀವರಕ್ಷಕ ಸಾಧನವಾಗಿ ಹೊರಹೊಮ್ಮಿತು.

ಡೂಝಿಯ ಸಂಪರ್ಕರಹಿತ ಮತ್ತು ದೂರಸ್ಥ ಮಾನಿಟರಿಂಗ್ ಪರಿಕಲ್ಪನೆಯು ಆಸ್ಪತ್ರೆಗಳು ಮತ್ತು ಚಿಕಿತ್ಸಕರಿಗೆ ರೋಗಿಯ ನಿಯತಗಳ ತ್ವರಿತ ಮತ್ತು ಹೆಚ್ಚು ಪರಿಣಾಮಕಾರಿಯಾಗಿ ಮಾಪನ ಮತ್ತು ಸ್ವಯಂಚಾಲಿತ ಪ್ರಕ್ರಿಯೆಗೆ ಒಳಪಡಿಸಲು ನೆರವಾಗಿದೆ. ಡೂಝಿ ತಂತ್ರಜ್ಞಾನವನ್ನು ಬಳಸುವ ಹೆಚ್ಚಿನ ರೋಗಿಗಳು 80 ವರ್ಷಕ್ಕಿಂತ ಮೇಲ್ಪಟ್ಟವರೇ ಆಗಿದ್ದಾರೆ.

ಡೂಝಿಯ ಮುನ್ನಚ್ಚರಿಕಾ ವ್ಯವಸ್ಥೆಯು ರೋಗಿಯ ದೇಹದಲ್ಲಿನ ಸಂಭವನೀಯ ಅಪಾಯಗಳ ಬಗ್ಗೆ ವೈದ್ಯರಿಗೆ ಮೊದಲೇ ಎಚ್ಚರಿಕೆ ಸಂದೇಶ ರವಾನಿಸುತ್ತದೆ. ಈ ಸಾಧನವು ಹಿಂದೆ ರೋಗಿಗಳ ನಿಯತಗಳ ಮಾಪನಕ್ಕೆ ವಾರ್ಡಿನಿಂದ ವಾರ್ಡ್‌ಗೆ ಸಾಧನಗಳನ್ನು ಒಯ್ಯುವ ಉಪಟಳವನ್ನು ತಪ್ಪಿಸಿದೆ.

ತಮ್ಮ ಮತ್ತು ಕುಟುಂಬದವರ ಆರೋಗ್ಯವನ್ನು ಮೇಲ್ವಿಚಾರಣೆ ಮಾಡಲು 4,500 ಕ್ಕೂ ಹೆಚ್ಚು ಜನರು ಮನೆಯಲ್ಲಿ ಡೂಝಿಯನ್ನು ಬಳಸುತ್ತಿದ್ದಾರೆ. ಇಲ್ಲಿಯವರೆಗೆ, ಈ ಸಾಧನವು ಹೃದಯ ವೈಫಲ್ಯ, ಟಿಬಿ, ನ್ಯುಮೋನಿಯಾದಂತಹ ಮಾರಣಾಂತಿಕ ಅಪಾಯಗಳ ಬಗ್ಗೆ ಮೊದಲೇ ಎಚ್ಚರಿಕೆ ನೀಡುವ ಮೂಲಕ 70ಕ್ಕೂ ಹೆಚ್ಚು ಜನರ ಜೀವ ಉಳಿಸಿದೆ.

ರೋಗಿಗಳ ಪ್ರಾಣ ಉಳಿಸಲು ವೈದ್ಯರ ಜೊತೆ ಕೈಜೋಡಿಸಿದ ಡೂಝಿ

ತಂತ್ರಜ್ಞಾನ ಆಧಾರಿತ ಪ್ರಕ್ರಿಯೆಗಳು ಜೀವನವನ್ನು ಸುಲಭ ಮತ್ತು ಹೆಚ್ಚು ಅನುಕೂಲಕರವಾಗಿಸಿರುವ ಈ ಸಮಯದಲ್ಲಿ ಡೂಝಿಯ ರಿಮೋಟ್ ಮಾನಿಟರಿಂಗ್ ಸಿಸ್ಟಮ್ ಜೀವಗಳನ್ನು ಉಳಿಸುವ ಕೆಲಸ ಮಾಡುತ್ತಿದೆ. ಡೂಝಿ ಕೇರ್‌ಟೆಕ್ 2022ನಲ್ಲಿ ರೋಗಿಗಳ ನಿರಂತರ ಮೇಲ್ವಿಚಾರಣೆಯಲ್ಲಿ ಎಐ ಬೆಂಬಲಿತ ತಂತ್ರಜ್ಞಾನದ ವೈಶಿಷ್ಟ್ಯವನ್ನು ಹೇಳಿದ ಎರಡು ಪ್ಯಾನೆಲ್ ಚರ್ಚೆಗಳು ಈ ವ್ಯವಸ್ಥೆಯ ಅಗಾಧವಾದ ಸಾಮರ್ಥ್ಯವನ್ನು ಮತ್ತು ಈಗ ಅದರ ಪ್ರಸ್ತುತತೆಯನ್ನು ಹೊರಗಡೆವಿತು.



ಎಚ್ಚರಿಕೆ ವ್ಯವಸ್ಥೆಯ ಪ್ರಾಮುಖ್ಯತೆಯನ್ನು ಒತ್ತಿ ಹೇಳಿದ ಸಂವಾದದಲ್ಲಿ ಯಶವಂತಪುರದ ಮಣಿಪಾಲ್ ಆಸ್ಪತ್ರೆಯ ಸಮಾಲೋಚಕರು ಮತ್ತು ಉಸ್ತುವಾರಿ ಕ್ರಿಟಿಕಲ್ ಕೇರ್ ಮೆಡಿಸಿನ್; ಡಾ ಪ್ರದೀಪ್ ರಂಗಪ್ಪ ಸಂವಾದವನ್ನು ನಿರ್ವಹಿಸಿದರು. ಡಾ ಮುರಳಿ ಚಕ್ರವರ್ತಿ, ನಿರ್ದೇಶಕರು ಅರಿವಳಿಕೆ, ಫೋರ್ಟಿಸ್ ಆಸ್ಪತ್ರೆ; ಡಾ ಜಗದೀಶ ಚಂದ್ರ, ವಿಪಿ ವೈದ್ಯಕೀಯ ಸೇವೆಗಳು, ಸಾಗರ್ ಆಸ್ಪತ್ರೆ, ಮತ್ತು ಡಾ ಉಲ್ಲಾಸ್ ಗೋಪಾಲಕೃಷ್ಣ, ಸ್ಪರ್ಶ್ ಆಸ್ಪತ್ರೆಯ ಕ್ರಿಟಿಕಲ್ ಕೇರ್ ಮತ್ತು ಎಮರ್ಜೆನ್ಸಿ ಮೆಡಿಸಿನ್ ಮುಖ್ಯಸ್ಥರು ಪಾಲ್ಗೊಂಡಿದ್ದರು.



ಎಐ ಮತ್ತು ಹೆಲ್ತ್‌ಕೇರ್ ಒಟ್ಟಿಗೆ ಕೆಲಸ ಮಾಡುವ ಅವಶ್ಯಕತೆಯನ್ನು ಪ್ರತಿಪಾದಿಸಿದ ಸಂವಾದದಲ್ಲಿ (ಎಡದಿಂದ ಬಲಕ್ಕೆ) ಡಾ ಅಲೆಕ್ಸಾಂಡರ್ ಥಾಮಸ್; ಅಧ್ಯಕ್ಷರು, ಆರೋಗ್ಯ ಪೂರೈಕೆದಾರರ ಸಂಘ; ಮನಿಶಾ ಕುಮಾರ್; ಸಿಒಒ ಬೆಂಗಳೂರು ಕ್ಲಸ್ಟರ್; ಎಚ್‌ಸಿಜಿ ಕ್ಯಾನ್ಸರ್ ಆಸ್ಪತ್ರೆ, ಅಕ್ಷಯ್ ಓಲೆಟಿ, ವಿಪಿ ಮತ್ತು ಬಿಸಿನೆಸ್ ಹೆಡ್; ಫೋರ್ಟಿಸ್ ಆಸ್ಪತ್ರೆ, ಡಾ ಕೆ ಸಿ ಗುರುದೇವ್; ಅಧ್ಯಕ್ಷರು, ಎಂ ಎಸ್ ರಾಮಯ್ಯ ಸ್ಮಾರಕ ಆಸ್ಪತ್ರೆ.

ದಿವ್ಯಾಶ್ರೀ

ಫೋರ್ಟಿಸ್ ಹಾಸ್ಪಿಟಲ್ಸ್‌ನ ವಿಪಿ ಮತ್ತು ಬಿಸಿನೆಸ್ ಹೆಡ್ ಅಕ್ಷಯ್ ಒಲೆಟಿ ನಡೆಸಿಕೊಟ್ಟ ಚರ್ಚೆಯಲ್ಲಿ ಕೃತಕ ಬುದ್ಧಿಮತ್ತೆ (AI) ಮತ್ತು ರಿಮೋಟ್ ಮಾನಿಟರಿಂಗ್ ತಂತ್ರಜ್ಞಾನದ ಯಶಸ್ಸು ಪ್ರತಿಧ್ವನಿಸಿತು. ಎಂಎಸ್ ರಾಮಯ್ಯ ಸ್ಮಾರಕ ಆಸ್ಪತ್ರೆಯ ಅಧ್ಯಕ್ಷರಾದ ಡಾ ಕೆ ಸಿ ಗುರುದೇವ್ ಅವರನ್ನು ಒಳಗೊಂಡಂತೆ ಮನಿಶಾ ಕುಮಾರ್, ಸಿಒಒ - ಬೆಂಗಳೂರು ಕ್ಲಸ್ಟರ್, ಎಚ್‌ಸಿಜಿ ಕ್ಯಾನ್ಸರ್ ಆಸ್ಪತ್ರೆ, ಮತ್ತು ಡಾ ಅಲೆಕ್ಸಾಂಡರ್ ಥಾಮಸ್, ಅಧ್ಯಕ್ಷರು, ಅಸೋಸಿಯೇಷನ್ ಆಫ್ ಹೆಲ್ತ್‌ಕೇರ್ ಪ್ರೊವೈಡರ್ಸ್, ಇವರುಗಳು ಚರ್ಚೆಯಲ್ಲಿ ಭಾಗವಹಿಸಿದರು. ಇಲ್ಲಿ ರೋಗಿಗಳ ಸುರಕ್ಷತೆಯನ್ನು ಹೆಚ್ಚಿಸುವಲ್ಲಿ ಡೂಝಿ ತಂತ್ರಜ್ಞಾನದ ಪಾತ್ರ ಮಹತ್ವದ್ದು ಎಂಬುದು ವೇದ್ಯವಾಯಿತು.

ಎಲೆಕ್ಟ್ರೋಕಾರ್ಡಿಯೋಗ್ರಾಮ್ ಹೇಗೆ ಹೃದಯಾಘಾತದ ಮುನ್ಸೂಚನೆ ನೀಡುವ ಮೊದಲ ಸಾಧನವಾಗಿತ್ತು ಎಂಬುದನ್ನು ಡಾ ಗುರುದೇವ್ ವಿವರಿಸಿದರು. "ಇಂದು, ತಂತ್ರಜ್ಞಾನವು ವಿಕಸನಗೊಂಡಿದೆ ಮತ್ತು ಹೆಚ್ಚು ನಿಖರವಾದ ವಿಶ್ಲೇಷಣೆ ಸಾಧ್ಯವಾಗಿದೆ" ಎಂದು ಅವರು ಹೇಳಿದರು.

ಕೋವಿಡ್ -19 ಸಾಂಕ್ರಾಮಿಕ ಸಮಯದಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಲಭ್ಯವಿರುವ ತಂತ್ರಜ್ಞಾನವನ್ನು ಆರೋಗ್ಯ ಉದ್ಯಮವು ಹೇಗೆ ಬಳಸಿಕೊಂಡಿತು ಎಂಬುದನ್ನು ಮನೀಶಾ ವಿವರಿಸಿದರು. “ನಾವು ಆಸ್ಪತ್ರೆಯ ನಾಲ್ಕು ಪಟ್ಟು ಹೆಚ್ಚು ಸಾಮರ್ಥ್ಯದೊಂದಿಗೆ ಮಲ್ಟಿ-ಸ್ಪೆಷಾಲಿಟಿ ಸೌಲಭ್ಯಗಳನ್ನು ನಿರ್ವಹಿಸುತ್ತಿದ್ದೆವು. ಈ ಸಂದರ್ಭದಲ್ಲಿ ನಾವು ಇ-ಐಸಿಯು ಮತ್ತು ಟೆಲಿ-ಐಸಿಯು ಅನ್ನು ಪರಿಣಾಮಕಾರಿಯಾಗಿ ಬಳಸಿದ್ದೇವೆ. ಹೆಲ್ತ್‌ಕೇರ್ ಉದ್ಯಮದಲ್ಲಿ ತಂತ್ರಜ್ಞಾನದ ಅಭಿವೃದ್ಧಿಯ ನಿಟ್ಟಿನಲ್ಲಿ ಇದು ನಿರ್ಣಾಯಕ ತಿರುವಾಗಿದೆ” ಎಂದು ಅವರು ಹೇಳಿದರು.

ಸಾಂಕ್ರಾಮಿಕ ರೋಗ ಆವರಿಸಿಕೊಳ್ಳುವ ತನಕ ಟೆಲಿಮೆಡಿಸಿನ್‌ಗೆ ಸರಕಾರಗಳ ಅನುಮತಿ ಸಿಕ್ಕಿರಲಿಲ್ಲ. ಆದರೆ ಕೋವಿಡ್ ಕೃಪೆಯಿಂದಾಗಿ ಇಂದು ಆರೋಗ್ಯ ಕ್ಷೇತ್ರವು ತಂತ್ರಜ್ಞಾನದ ಬಳಕೆ ವಿಚಾರದಲ್ಲಿ ಬೃಹತೆ ಹೆಜ್ಜೆ ಇಡುವಂತಾಗಿದೆ ಎಂದು ಡಾ ಥಾಮಸ್ ವಿವರಿಸಿದರು. ಅಲ್ಲದೇ ಹೇಗೆ ಇಂದು, ಟೆಲಿಮೆಡಿಸಿನ್ ಆರೋಗ್ಯದ ಒಂದು ಭಾಗವಾಗಿದೆ ಎಂಬುದನ್ನು ವಿವರಿಸಿ ಹೇಳಿದರು.

ಯಾವುದೇ ಹೊಸ ಉತ್ಪನ್ನವನ್ನು ಅಭಿವೃದ್ಧಿಪಡಿಸುವಾಗ ತಂತ್ರಜ್ಞಾನ ಕಂಪನಿಗಳು ಗಮನಿಸಬೇಕಾದ ಅಂಶಗಳ ಬಗೆಗೂ ಈ ಚರ್ಚೆ ಬೆಳಕು ಚೆಲ್ಲಿತು. ಎಲ್ಲಾ ಆವಿಷ್ಕಾರಗಳೂ ಬದಲಾವಣೆಯನ್ನು ಸುಲಭ, ಸಮರ್ಥ ಮತ್ತು ಆರ್ಥಿಕವಾಗಿ ಕಾರ್ಯಸಾಧ್ಯವಾಗುವಂತೆ ಮಾಡಬೇಕು ಎಂದು ಮನೀಶಾ ಅಭಿಪ್ರಾಯಪಟ್ಟರು. ಆಸ್ಪತ್ರೆಗಳ ಉನ್ನತ ದರ್ಜೆಯ ಐಟಿ ಮೂಲಸೌಕರ್ಯಗಳನ್ನು ಹೊಂದಿರುವುದಿಲ್ಲ. ಇದನ್ನು ಮನಗಂಡು ಹೆಚ್ಚಿನ ಹೊರೆ ಬೀಳದಂತೆ ತಂತ್ರಜ್ಞಾನದ ಅಔಈಃÐಖಖುಫಲೂ ನಡೆಯಬೇಕು ಎಂದು ಅವರು ಹೇಳಿದರು.

ಎಐ- ಬೆಂಬಲಿತ ತಂತ್ರಜ್ಞಾನವೂ ಸದಾ ರೋಗಿ ಕೇದ್ರಿತವಾಗಿರಬೇಕು. ಅದರ ಕ್ರಮಾವಳಿಗಳು ಸಮಾಜದ ಎಲ್ಲ ವಯೋಮಾನದ ಜನರನ್ನು ಮುಟ್ಟುವಂತಿರಬೇಕು. ಅಲ್ಲದೇ ಅವು ಸುಸ್ಥಿರ ಕಡಿಮೆ ವೆಚ್ಚದ್ದಾಗಿರಬೇಕು. ಇದರ ಬಳಕೆಯಿಂದ ರೋಗಿಯ ಮುಖದಲ್ಲಿ ಸಂತೃಪ್ತಿಯ ನಗೆ ಸೂಸುವಂತಾಗಬೇಕು ಎಂದು ಡಾ. ಥಾಮಸ್ ಹೇಳಿದರು.

“ವೈದ್ಯ ವೃತ್ತಿಯಲ್ಲಿ ಇರುವವರಿಗೆ ಎಐ ಸಹಾಯಕವಾಗುತ್ತದೆ ಹಾಗಾಗಿ ಅದನ್ನು ಹೇಗೆ ಬಳಸಬೇಕೆಂದು ಅವರಿಗೆ ಕಲಿಸಬೇಕು" ಎಂದು ಡಾ ಗುರುದೇವ್ ಹೇಳಿದರು,

ರೋಗಿಗಳ ನಿರಂತರ ಮೇಲ್ವಿಚಾರಣೆಗೆ ಡೂಝಿ ತರಹದ ಹೊಸ ವ್ಯವಸ್ಥೆಗಳ ವಿನ್ಯಾಸ ಮತ್ತು ಅಭಿವೃದ್ಧಿ ಹೆಚ್ಚು ಅರ್ಥಪೂರ್ಣವಾಗಲು ಆರೋಗ್ಯ ತಜ್ಞರೊಂದಿಗೆ ಸಮಾಲೋಚನೆ ನಡೆಸಿ ಅವರ ಅಭಿಪ್ರಾಯಗಳಿಗೆ ಕಿವಿ ಕೊಡುವಂತಾಗಬೇಕು ಎಂದು ಒಲೆಟಿ ಅಭಿಪ್ರಾಯ ಪಟ್ಟರು.

ಮತ್ತೊಂದು ಪ್ಯಾನೆಲ್ ಚರ್ಚೆಯಲ್ಲಿ, ಐಸಿಯು ರಹಿತ ಪರಿಸರದಲ್ಲಿ ರೋಗಿಗಳ ಸುರಕ್ಷತೆಯನ್ನು ಹೆಚ್ಚಿಸಲು ಈ ಮುನ್ನೆಚ್ಚರಿಕೆ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಬೇಕಾದ ಅಗತ್ಯತೆಯ ಬಗ್ಗೆ ಒತ್ತಿ ಹೇಳಲಾಯಿತು.

ಯಶವಂತಪುರದಲ್ಲಿರುವ ಮಣಿಪಾಲ್ ಆಸ್ಪತ್ರೆಯ ಸಮಾಲೋಚಕ ಹಾಗೂ ಕ್ರಿಟಿಕಲ್ ಕೇರ್ ಮೆಡಿಸಿನ್ ಉಸ್ತುವಾರಿ ಡಾ ಪ್ರದೀಪ್ ರಂಗಪ್ಪ ಅವರು ನಡೆಸಿಕೊಟ್ಟ ಮತ್ತು ಡಾ ಮುರಳಿ ಚಕ್ರವರ್ತಿ, ನಿರ್ದೇಶಕರು - ಅರಿವಳಿಕೆ ಶಾಸ್ತ್ರ, ಫೋರ್ಟಿಸ್ ಆಸ್ಪತ್ರೆ; ಡಾ ಜಗದೀಶ ಚಂದ್ರ, ವಿಪಿ - ವೈದ್ಯಕೀಯ ಸೇವೆಗಳು, ಸಾಗರ್ ಆಸ್ಪತ್ರೆಗಳು; ಮತ್ತು ಡಾ ಉಲ್ಲಾಸ್ ಗೋಪಾಲಕೃಷ್ಣ, ಸ್ಪರ್ಶ್ ಆಸ್ಪತ್ರೆಯ ಕ್ರಿಟಿಕಲ್ ಕೇರ್ ಮತ್ತು ಎಮರ್ಜೆನ್ಸಿ ಮೆಡಿಸಿನ್ ಮುಖ್ಯಸ್ಥರು ಭಾಗವಹಿಸಿದ್ದ ಈ ಚರ್ಚೆಯಲ್ಲಿ ಜೀವಗಳನ್ನು ಉಳಿಸುವಲ್ಲಿ ಈ ವ್ಯವಸ್ಥೆಯು ಹೊಂದಿರುವ ಅಪಾರ ಸಾಮರ್ಥ್ಯವನ್ನು ಎತ್ತಿ ತೋರಿಸಲಾಯಿತು.

ಎಲ್ಲ 28 ಜಿಲ್ಲೆಗಳಲ್ಲಿ ಟೆಲಿ-ಐಸಿಯು ಅಳವಡಿಸಿದ ಮೊದಲ ರಾಜ್ಯ ಕರ್ನಾಟಕ ಎಂದು ಡಾ ರಂಗಪ್ಪ ಹೆಮ್ಮೆಯಿಂದ ಹೇಳಿದರು. “ಆಸ್ಪತ್ರೆಗಳು ಒದಗಿಸುವ ನಿರಂತರ ಆರೈಕೆಯ ಕಾರಣ ಇತರ ನಗರಗಳಿಗೆ ಹೋಲಿಸಿದರೆ ಬೆಂಗಳೂರಿನಲ್ಲಿ ಸಾವಿನ ಪ್ರಮಾಣ ಕಡಿಮೆ ದಾಖಲಿಸಿದೆ. ತಂತ್ರಜ್ಞಾನದ ಸಹಾಯದಿಂದ ಆರೋಗ್ಯ ರಕ್ಷಣೆಗೆ ಸಮಾನ ಮನಸ್ಕ ವ್ಯಕ್ತಿಗಳ ಗುಂಪು ಎಂತಹ ಕೊಡುಗೆ ನೀಡಬಲ್ಲದು ಎಂಬುದು ಗಮನಾರ್ಹವಾಗಿದೆ" ಎಂದು ಅವರು ಹೇಳಿದರು.

ಲಭ್ಯವಿರುವ ಸುಧಾರಿತ ತಂತ್ರಜ್ಞಾನದೊಂದಿಗೆ, ಆಸ್ಪತ್ರೆಗಳು ಆರೋಗ್ಯ ಸೇವೆಯನ್ನು ಏಕರೂಪಗೊಳಿಸಬಹುದು ಮತ್ತು ಗ್ರಾಮೀಣ ಭಾಗಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ತಲುಪಿಸಬಹುದು. ಈ ನಿಟ್ಟಿನಲ್ಲಿ ಟೆಲಿ-ಐಸಿಯುಗಳು ಹೇಗೆ ಜೀವಗಳನ್ನು ಉಳಿಸಬಹುದು ಎಂಬುದನ್ನು ನಾವು ನೋಡಿದ್ದೇವೆ ಎಂದು ಅವರು ಹೇಳಿದರು.

“ನನ್ನ ಎಲ್ಲಾ ರೋಗಿಗಳೂ ನಿರಂತರವಾಗಿ ಮೇಲ್ವಿಚಾರಣೆಗೆ ಒಳಗಾಗಬೇಕು ಎಂದು ನಾನು ಬಯಸುತ್ತೇನೆ. ವೈದ್ಯರು ಪ್ರತಿಕೂಲ ಘಟನೆಗಳನ್ನು ಎದುರಿಸಬೇಕಾಗುತ್ತದೆ ಮತ್ತು ಅಪಾಯವನ್ನು ಕಡಿಮೆ ಮಾಡಲು ಎಐ ಸೂಕ್ತ ಮಾರ್ಗವಾಗಿದೆ. ಮತ್ತೊಂದು ಉತ್ತೇಜಕ ಅಂಶವೆಂದರೇ ಹೊಸ ಸವಾಲುಗಳನ್ನು ಎದುರಿಸಲು ಎಐ ವೈದ್ಯರಿಗೆ ನೆರವಾಗುತ್ತದೆ ಎಂದು ಡಾ ಚಕ್ರವರ್ತಿ ಅವರು ತಮ್ಮ ಅಭಿಪ್ರಾಯವನ್ನು ಮಂಡಿಸಿದರು.

“ರೋಗಿಯ ಮೇಲ್ವಿಚಾರಣೆ ಐಸಿಯುನಲ್ಲಿ ಕೊನೆಗೊಳ್ಳುವುದಿಲ್ಲ. ನಮ್ಮ ಕೆಲಸವನ್ನು ಡೂಝಿ ಸುಲಭಗೊಳಿಸಿದೆ. ನಮ್ಮೆಲ್ಲರ ಸಹಕಾರದಿಂದ ರೋಗಿಯು ಆದಷ್ಟು ಬೇಗ ಆಸ್ಪತ್ರೆಯಿಂದ ಹೊರಬರುವಂತಾಗುತ್ತದೆ ಎಂದು ಐಸಿಯು ನಂತರದಲ್ಲಿ ರೋಗಿಯ ಮೇಲ್ವಿಚಾರಣೆ ಬಗೆಗೆ ಬೆಳಕು ಚೆಲ್ಲುತ್ತಾ ಡಾ. ಚಂದ್ರ ಹೇಳಿದರು.

“ವೈದ್ಯರು ತಂತ್ರಜ್ಞಾನಕ್ಕೆ ವಿರುದ್ಧವೆಂದು ಜನರು ಭಾವಿಸುತ್ತಾರೆ. ಆದರೆ ಅದು ನಿಜವಲ್ಲ. ರೋಗಿಗಳಿಗೆ ಸಹಾಯ ಆಗುತ್ತದೆ ಎಂದಾದರೆ ಯಾವುದೇ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ನಾವು ಸಿದ್ಧರಿದ್ದೇವೆ ಎಂದು ಹೇಳುವ ಮೂಲಕ ಡಾ ಗೋಪಾಲಕೃಷ್ಣ ಅವರು ಚರ್ಚೆಯನ್ನು ಮುಕ್ತಾಯಗೊಳಿಸಿದರು,